ಸಂವಾದ

ಪೇಜಾವರರರಿಗೆ ಒಂದು ಪತ್ರ

ಒಬಾಮ ಮುಂದಿರುವ ಸವಾಲುಗಳು

ಚಿಟಿಕೆ ಚಪ್ಪರದಲ್ಲಿ

ಚೆಡ್ಡಿ ಬಜೆಟ್!

ಸಂವಾದ

ಮಾಸ ಪತ್ರಿಕೆ

ಸಂಪುಟ ೭ ಸಂಚಿಕೆ ೫
ಮಾರ್ಚ್ ೨೦೦೯

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ|| ನಟರಾಜ್ ಹುಳಿಯಾರ್
ಪ್ರೊ|| ರಹಮತ್ ತರೀಕೆರೆ
ಡಾ|| ಕೆ. ಪುಟ್ಟಸ್ವಾಮಿ
ಡಾ|| ಡಿ. ಡೊಮಿನಿಕ್
ಡಾ|| ಬಿ.ಯು. ಸುಮಾ
ಡಾ|| ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು–೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 080-23480278,
9945264687
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೦೩
❑ ಹೊಸ ಪುಸ್ತಕ ೦೪
❑ ಅಂತರಂಗ ೦೫
❑ ಪೇಜಾವರ ಶ್ರೀಗಳಿಗೆ ಬಹಿರಂಗ ಪತ್ರ
○ ಸೂರನಹಳ್ಳಿ ಶ್ರೀನಿವಾಸ ೦೬
❑ ಮಲೆಗಾಂವ್ ಘಟನೆ:
ಭಾಜಪದ ಶೀರ್ಷಾಸನ
○ ನಾಡಿ ಬಂಗಾರಪೇಟೆ ೦೮
❑ ಒಮ್ಮೆ ಹೊರಳಿ ನೋಡೋಣವೇ?
○ ಅಲ್ಲಮಪ್ರಭು ಬೆಟ್ಟದೂರು ೧೧
❑ ಪೂನಾ ಒಪ್ಪಂದ: ಒಂದು ತಾತ್ವಿಕ ನೋಟ
○ ಡಾ. ಕಾ. ವೆಂ. ಶ್ರೀನಿವಾಸ ಮೂರ್ತಿ ೧೨
❑ ಬಲಪಂಥೀಯ ಸಂಘಟನೆಗಳ ವರ್ಧನೆ ಮತ್ತು
ವರ್ತಮಾನದ ಬಿಕ್ಕಟ್ಟುಗಳು
○ ಬಿ. ಹೆಚ್. ಸತ್ಯನಾರಾಯಣ ೧೬



❑ ಮತಾಂತರ ಯಾಕೆ?
○ ಎನ್. ಎಸ್. ಶಂಕರ್ ೧೮
❑ ಒಬಾಮಾ ಮುಂದಿರುವ ಸವಾಲುಗಳು
○ ನಾ. ದಿವಾಕರ ೨೨
❑ ತಾಯ್ನುಡಿ ದಿನಾಚರಣೆ: ಏನಿದರ ಹೆಚ್ಚಳ?
○ ಮೇಟಿ ಮಲ್ಲಿಕಾರ್ಜುನ್ ೨೪
❑ ಮಹಿಳಾ ಶಿಕ್ಷಣ ಮತ್ತು ಸಬಲೀಕರಣ
○ ಡಾ. ಬಿ. ಎಂ. ಪುಟ್ಟಯ್ಯ ೨೬
❑ ಯಡ್ಡಿ ಬಜೆಟ್ ೨೦೦೯–೧೦
ಚಿಟಿಕೆ ಚಪ್ಪರದಲ್ಲಿ ಚೆಡ್ಡಿ ಬಜೆಟ್!
○ ಶಿವಸುಂದರ್ ೩೦
❑ ಶನಿದೇವರು: ಒಂದು ಚಿಂತನೆ...
○ ಕಂಪ್ಲಪ್ಪ ಚನ್ನಸಾಗರ ೩೪
❑ ಬೌದ್ಧ ಸೌಂದರ್ಯ ಮೀಮಾಂಸೆ – ೭
ಕಾಲ–ದೇಶ ನಿರಾಕರಣೆ
○ ಡಾ. ಎಸ್. ನಟರಾಜ್ ಬೂದಾಳು ೩೮
❑ ಧರೆ ಹತ್ತಿ ಉರಿದರೆ... ೮
ಅಭಿವೃದ್ಧಿಯ ಮುನ್ನೋಟ–೨೦೨೦
○ ಡಾ. ಟಿ. ಆರ್ ಚಂದ್ರಶೇಖರ್ ೪೨
❑ ದಲಿತ್ ಡೈರಿ
○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬
❑ ಬುದ್ಧಾಯಣ ೫೦
○ ಸಿ.ಎಚ್ ರಾಜಶೇಖರ್

ಕವನಗಳು : ❑ ರಾಮಕೃಷ್ಣರಿಗೂ ಗತಿಯಿಲ್ಲ ೧೫
❑ ಕಪ್ಪು ಮುಖದ ಕಪ್ಪು ಕಲ್ಲುಗಳು ೪೧

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಸಂಪಾದಕರ ಬಂಧನ: ಕಾಡದೇ ಹೋಗಿರುವ ಸಂಗತಿಗಳು

ಮಾನ್ಯ ಸಂಪಾದಕರೇ,

ರಾಜ್ಯದ ಕರಾವಳಿ ಪ್ರದೇಶದ ಅತ್ಯಧಿಕ ಪ್ರಸಾರದ ದೈನಿಕ 'ಕರಾವಳಿ ಅಲೆ' ಸಂಪಾದಕ ಬಿ.ವಿ.ಸೀತಾರಾಂರನ್ನು ಸರ್ಕಾರ ಬಂಧಿಸಿರುವುದರ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆಗಳು ನಡೆದಿವೆ. ಹಾಗೆ ನೋಡಿದಾಗ ಸೀತಾರಾಂ ಹಾಗೂ ರೋಹಿಣಿಯವರನ್ನು ಈ ಹಿಂದಿನ ಜೆ.ಡಿ.ಎಸ್. ಬಿ.ಜೆ.ಪಿ. ಸಮಿಶ್ರ ಸರ್ಕಾರದ ಕಾಲದಲ್ಲೂ ಜೈನ ಮುನಿ ತರುಣ್ ಸಾಗರ್ ಬಗ್ಗೆ ಬರೆದಿದ್ದನ್ನು ನೆಪಮಾಡಿ ಬಂಧಿಸಲಾಗಿತ್ತು. ಆಗಲೂ ಕೈಗೆ ಕೋಳ ತೊಡಿಸಲಾಗಿತ್ತು. ಆಗ ಈಗಿನ ಮಟ್ಟದಲ್ಲಿ ಪ್ರತಿಭಟನೆಗಳು ನಡೆದಿರಲಿಲ್ಲ. ಈ ಬಾರಿ ಕೋಳ ಹಾಕಿ ನ್ಯಾಯಾಲಯಕ್ಕೂ ಹಾಜರುಪಡಿಸಿದರು. ರಾಜ್ಯಾದ್ಯಂತ ಪ್ರತಿಭಟನೆ ನಡೆದ ಮೇಲೆ ಬಡಪಾಯಿ ಪೇದೆಗಳನ್ನು ಮಾತ್ರ ಅಮಾನತ್ತು ಮಾಡಿ ಬಲಿಪಶುಗಳನ್ನಾಗಿ ಮಾಡಲಾಗಿವೆ. ಆದೇಶ ನೀಡಿದ ಒತ್ತಡ ಹಾಕಿದ ಅಧಿಕಾರಿಗಳನ್ನು ಹಾಗೂ ಹಿಂದಿರುವ ಸ್ಥಾಪಿತ ಹಿತಾಸಕ್ತಿಯ ಕೈಗಳನ್ನು ರಕ್ಷಿಸಲಾಗುತ್ತಿದೆ.

ಕರಾವಳಿ ಅಲೆ ಪತ್ರಿಕೆ ಕೋಮುವಾದ ಹಾಗೂ ಮೂಲಭೂತವಾದಗಳ ವಿರುದ್ಧವಾಗಿದೆ. ಕರಾವಳಿಯ ಬಹುತೇಕ ಪತ್ರಿಕೆಗಳು ಕೋಮುವಾದ ಹಾಗೂ ಅಪರಾಧಗಳನ್ನು ವೈಭವೀಕರಿಸುತ್ತಾ ಪತ್ರಿಕಾ ಧರ್ಮವನ್ನು ಗಾಳಿಗೆ ತೂರಿರುವಾಗ ಅಲೆ ಮಾತ್ರ ಜನಪರ ವಿಶ್ಲೇಷಣೆ ಮಾಡುತ್ತಿದೆ. ಬಿ.ವಿ.ಸೀತಾರಾಂರ ನಿಷ್ಠುರ ನಿಲುವು, ಸುದ್ಧಿಗಳನ್ನು ಒಮ್ಮೆ ಮಾತ್ರ ಸುದ್ಧಿಗಾಗಿ ಮಾತ್ರ ಮಾಡಿ ನಂತರ ಅದರ ಉಸಾಬರಿಗೆ ಹೋಗದೆ ಇರುವ ಪತ್ರಕರ್ತರೆನಿಸಿಕೊಂಡವರ ಸಾಮಾನ್ಯ ಪರಿಪಾಟಗಳಿಗೆ ಬದಲಾಗಿ ಸುದ್ಧಿಗಳನ್ನು ಬೆನ್ನತ್ತುವ ಅಪರೂಪದ ಶೈಲಿಗಳಿಂದಾಗಿ ಕರಾವಳಿಯ ಕೋಮುವಾದಿ ನಾಯಕರಿಗೆ ಹಾಗೂ ಇತರ ಪಟ್ಟಭದ್ರರಿಗೆ ಸಹಿಸಿಕೊಳ್ಳಲಾಗುತ್ತಿಲ್ಲ. ಆಳುವ ಬಿ.ಜೆ.ಪಿ. ಸರ್ಕಾರಕ್ಕೂ ಸಹ್ಯವಾಗದೆ ಮಾನನಷ್ಟ ಮೊಕದ್ದಮೆಗಳ ನೆಪ ಬಳಸಿ ಸಂಪಾದಕರನ್ನು ತನ್ನ ಹದ್ದುಬಸ್ತಿನಲ್ಲಿಡಲು ಪ್ರಯತ್ನ ನಡೆಸುತ್ತಿದೆ. ಅಲೆ ಪತ್ರಿಕೆಯನ್ನು ಮುಗಿಸಿ ಬಿಡಲು ಭಜರಂಗ ದಳ ವಿಶ್ವಹಿಂದೂ ಪರಿಷತ್ ನಂತಹ ಹಿಂದೂ ಸಂಘಟನೆಗಳು ನಿರಂತರ ಪ್ರಯತ್ನ ನಡೆಸುತ್ತಿವೆ. ಹಲವಾರು ಬಾರಿ ಪತ್ರಿಕಾ ಕಾರ್ಯಾಲಯದ ಮೇಲೆ ದಾಳಿ ಮಾಡುತ್ತಾ ಬರಲಾಗಿದೆ. ನಷ್ಟಗಳನ್ನುಂಟು ಮಾಡಿದ್ದಾರೆ. ಈಗ 'ಅಲೆ' ಮಾರಾಟದ ಏಜೆಂಟರನ್ನು ಬೆದರಿಸಿ ಮಾರಾಟ ಹಾಗೂ ಪ್ರಸಾರಕ್ಕೆ ತಡೆಯನ್ನುಂಟು ಮಾಡುತ್ತಿದ್ದಾರೆ. ಆಶ್ಚರ್ಯವೆಂದರೆ ಪ್ರಜಾಪ್ರಭುತ್ವ ಎಂದು ಕರೆದುಕೊಂಡಿರುವ ವ್ಯವಸ್ಥೆಯಲ್ಲಿ ಇವೆಲ್ಲಾ ರಾಜಾರೋಷವಾಗಿ ಸಲೀಸಾಗಿ ನಡೆಯುತ್ತಿರುವುದು. ಒಟ್ಟಿನಲ್ಲಿ ಪತ್ರಿಕೆಯನ್ನು ಮುಗಿಸಿಬಿಡುವ ಪ್ರಯತ್ನ ಇದು.

ವ್ಯವಸ್ಥೆಯ ದುರಂತವೆಂದರೆ ತಮ್ಮ ಪತ್ರಿಕಾಲಯದ ಮೇಲೆ ನಡೆಸಿರುವ ದಾಳಿಗಳ ವಿರುದ್ಧ ಸೀತಾರಾಂ ಸಾಕಷ್ಟು ಬಾರಿ ದೂರುಗಳನ್ನು ನೀಡಿದ್ದರೂ, ರಕ್ಷಣೆ ಕೋರಿ ರಾಜ್ಯದ ಉನ್ನತ ಮಟ್ಟದಲ್ಲಿ ಪತ್ರ ಬರೆದರೂ ಸರ್ಕಾರ ಮತ್ತು ಪೋಲಿಸ್ ಇಲಾಖೆ ಪ್ರಜಾಪ್ರಭುತ್ವದ ನಾಲ್ಕನೇ ಅಂಗವೆನಿಸಿಕೊಂಡಿರುವ ಪತ್ರಿಕಾ ರಂಗದ ರಕ್ಷಣೆಗಾಗಿ ಏನೂ ಮಾಡದೆ ಹೋಗಿರುವುದು. ಪತ್ರಿಕಾರಂಗದಲ್ಲಿ ಕೆಲಸ ಮಾಡುತ್ತಿರುವವರು ಕೂಡ ಈ ರೀತಿಯ ಮೂಗು ಬಾಯಿ ಒತ್ತಿ ಹಿಡಿಯುವ, ಕೈಕಾಲು ಕಟ್ಟಿ ಮಣಿಸುವ ಸ್ಥಾಪಿತ ಹಿತಾಸಕ್ತಿಗಳ ಹುನ್ನಾರಗಳನ್ನು ಅರ್ಥ ಮಾಡಿಕೊಂಡು ಬಲವಾಗಿ ಪ್ರತಿಭಟಿಸದೆ ಕೇವಲ ಕೈಗೆ ಕೋಳ ಹಾಕಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದನ್ನು ಮಾತ್ರ ಒತ್ತು ನೀಡಿ ವಿರೋಧಿಸುತ್ತಿರುವುದು ಸರಿಯಾದುದಲ್ಲ.

ಅಲೆ ಪತ್ರಿಕೆ ಮೇಲಿನ ದಾಳಿ ಸಂಪಾದಕರ ಬಂಧನ ಕೈಕೋಳ ತೊಡಿಸುವಿಕೆಗಳಲ್ಲಿ ಪತ್ರಿಕಾ ಸ್ವಾತಂತ್ರ್ಯದ ಹರಣ, ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ, ಸಂವಿಧಾನದತ್ತ ಹಕ್ಕುಗಳ ನಿರಾಕರಣೆ, ಕಾನೂನುಗಳ ದುರ್ಬಳಕೆ, ಪ್ರಜಾಪ್ರಭುತ್ವ ಮೌಲ್ಯಗಳ ಉಲ್ಲಂಘನೆಯಂತಹ ಗಂಭೀರ ಪ್ರಶ್ನೆಗಳು ಅಡಗಿವೆ. ಈ ಹಿನ್ನಲೆಯಲ್ಲಿ ಬಿ.ವಿ. ಸೀತಾರಾಮ್‌ರ ಬಂಧನ, ಅಲೆ ಪತ್ರಿಕಾಲಯದ ಮೇಲಿನ ದಾಳಿ, ಬೆದರಿಕೆಯ ಘಟನೆಗಳನ್ನು ಪ್ರತಿಭಟಿಸಬೇಕಾದ ಅಗತ್ಯ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ.

ಭರತ್ ರಾಜ್, ಮಂಗಳೂರು

ಸತ್ಯಕ್ಕೆ ದೂರ

ಮಾನ್ಯ ಸಂಪಾದಕರೇ,

ಕುರುಡು ಮತಾಂಧತೆಯಿಂದ ಮಾನವೀಯತೆಯನ್ನು ಮರೆತವರು ಮತಾಂತರವನ್ನು ಹೇಗೆ ಒಂದು ರಾಷ್ಟ್ರೀಯ ದುರಂತವನ್ನಾಗಿ ಕಾಣುತ್ತಿದ್ದಾರೆ, ಎಂಬ ಅಂಶವನ್ನು ಸಾರಾ ಅಬೂಬಕ್ಕರ್ ರವರು ಸುದೀರ್ಘವಾಗಿ ಬರೆದಿದ್ದಾರೆ. ಇದು ಎಲ್ಲರೂ ಒಪ್ಪುವಂತಹ ಮಾತೇ. ಆದರೆ ಗುಜರಾತ್ ಹತ್ಯಾಕಾಂಡದ ಬಗ್ಗೆ ಬರೆಯುತ್ತಾ, ಈ ದೌರ್ಜನ್ಯ ಕುರಿತು ಕರ್ನಾಟಕದ ಒಂದೇ ಒಂದು ಮಹಿಳಾ ಸಂಘಟನೆಯೂ ಖಂಡಿಸುವಂತಹ ಒಂದೇ ಒಂದು ಹೇಳಿಕೆ ನೀಡಿದ್ದೂ ನನ್ನ ಗಮನಕ್ಕೆ ಬಂದಿಲ್ಲ. ಎಂದು ಬರೆದಿದ್ದಾರೆ. ಇದು ಸತ್ಯಕ್ಕೆ ದೂರವಾದ ಮಾತು.

ಗುಜರಾತ್ ಹತ್ಯಾಕಾಂಡದ ನಂತರ ಬೆಂಗಳೂರಿನಲ್ಲೇ ಟೌನ್ ಹಾಲ್ ಮುಂದೆ, ಕಬ್ಬನ್ ಪಾರ್ಕ್ ಹತ್ತಿರ, ಮಲ್ಲೇಶ್ವರದ ಮೈದಾನದಲ್ಲಿ ಮತ್ತು ಕಾರ್ಪೋರೇಷನ್ ವೃತ್ತದ ಬಳಿ ಈ ದೌರ್ಜನ್ಯ ಪ್ರತಿಭಟಿಸಿ ಪ್ರದರ್ಶನಾ ಕಾರ್ಯಕ್ರಮಗಳು ವಿವಿಧ ಮಹಿಳಾ ಸಂಘಟನೆಗಳ ನೇತೃತ್ವದಲ್ಲಿ ನಡೆದಿವೆ. ಈ ಕಾರ್ಯಕ್ರಮಗಳು ನಾನು ಒಬ್ಬ ಸಂಘಟಕಳಾಗಿ ಭಾಗವಹಿಸಿದ ಒಂದು ಸಣ್ಣ ಉದಾಹರಣೆಯಷ್ಟೇ. ಇವಲ್ಲದೇ ಇನ್ನು ಹಲವಾರು ಕಾರ್ಯಕ್ರಮಗಳು ನಗರದಲ್ಲೂ, ರಾಜ್ಯದ ಹಲವಾರು ಭಾಗಗಳಲ್ಲೂ ನಡೆದಿದ್ದು ಪತ್ರಿಕೆಗಳಲ್ಲಿ ವರದಿಯಾಗಿದ್ದು ನನಗೆ ನೆನಪಿದೆ. ಹೀಗಿರುವಾಗ ಸಾರಾ ಏಕೆ ಹಾಗೆ ಬರೆಯುತ್ತಾರೆ? ತಮ್ಮ ಸುತ್ತಲು ನಡೆಯುವ ವಿದ್ಯಮಾನಗಳನ್ನು ಇನ್ನಾದರೂ ಸಾರಾ ಅವರು ಗಮನಿಸುವುದು ಒಳಿತು.

ಎನ್.ಗಾಯತ್ರಿ, ಬೆಂಗಳೂರು

ಪತ್ರಾಗಾರ



ಚಂದಾ ಮಾಡಿಸುವ ಕರ್ತವ್ಯ

ಮಾನ್ಯ ಸಂಪಾದಕರಿಗೆ,

'ಸಂವಾದ' ಪತ್ರಿಕೆ ಎಲ್ಲಾ ಮಜಲುಗಳನ್ನು ಗಮನಿಸಿ ಜನ ಸಮುದಾಯದವರ ಕಣ್ಣು ತೆರೆಸಿ ಪ್ರಜ್ಞಾವಂತರನ್ನಾಗಿ ತಯಾರು ಮಾಡುತ್ತಿದೆ. ಶತಶತಮಾನಗಳಿಂದ ಅರಿವಿಲ್ಲದವರಿಗೆ ಅರಿವು ಮೂಡಿಸುತ್ತಿದೆ. ದಲಿತರ ಪಾಲಿಗೆ ಸಂಜೀವಿನಿಯಾಗಿದೆ.

ಈ ಪತ್ರಿಕೆ ಓದುವ ಓದುಗರಲ್ಲಿ ನನ್ನದೊಂದು ವಿನಂತಿ. ಏನೆಂದರೆ ನೀವು ಓದುವುದರ ಜೊತೆಗೆ ಕನಿಷ್ಟ 50 ಜನರನ್ನು ಚಂದಾದಾರರನ್ನಾಗಿ ಮಾಡಿಸುವ ಮೂಲಕ ಈ 'ಸಂವಾದ' ಪತ್ರಿಕೆ ಓದುವಂತೆ ಮಾಡುವುದು ತಮ್ಮ ಕರ್ತವ್ಯವೆಂದು ಬಾವಿಸುತ್ತೇನೆ. ಈ ಪತ್ರಿಕೆಯಿಂದ ಲಕ್ಷಾಂತರ ಶೋಷಿತರ ಕಣ್ಣು ತೆರೆಸಿ ವಿಕಾಸಗೊಳಿಸಬಹುದಾಗಿದೆ. 'ಸಂವಾದ'ವನ್ನು ಓದುವ ಪ್ರತಿಯೊಬ್ಬ ವ್ಯಕ್ತಿಯೂ ಅದರಿಂದ ಪ್ರೇರಿತನಾಗಿ ಇಡೀ ಸಮಾಜದ ಒಳಿತಿಗಾಗಿ ಹೋರಾಡುವ ಪ್ರಜ್ಞಾವಂತನಾಗುವುದರಿಂದ ಈ ಕೆಲಸ ಅತ್ಯಂತ ಪ್ರಮುಖವಾದುದಾಗಿದೆ.

ತಾವುಗಳು ಈ ಪ್ರಯತ್ನ ಮಾಡುತ್ತಿರೆಂದು ನಂಬಿರುತ್ತೇನೆ.

ತಮ್ಮ ನಂಬುಗೆಯ,
-ಎ.ಸಿ. ಚಿಕ್ಕಣ್ಣ, ಬೆಂಗಳೂರು

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೪೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಒ./ಡಿ.ಡಿ. ಮಾತ್ರ ಕಳುಹಿಸಬೇಕು.

ಹೂವಿನೊಡನೆ ಮಾತು ಕತೆ
ಲೇ: ಆರ್.ವಿ.ಭಂಡಾರಿ
ಬೆಲೆ: ರೂ.20/-

ಮಕ್ಕಳ ಸಾಹಿತ್ಯದ ಬಗ್ಗೆ ಅಪಾರ ಕಾಳಜಿ ಹೊಂದಿದ್ದು ಲೇಖಕ ಆರ್.ವಿ. ಭಂಡಾರಿ ಅವರ ಹನ್ನೊಂದು ಕಥೆಗಳು ಈ ಸಂಕಲನದಲ್ಲಿವೆ. ಮಕ್ಕಳ ಮನಸ್ಸನ್ನು ತುಂಬಿಕೊಳ್ಳುವ ಈ ಕಥೆಗಳು ಅವರ ಭಾವನೆ, ಕಲ್ಪನೆ, ವಿಚಾರಗಳಿಗೆ ಚೈತನ್ಯ ನೀಡುವ ಅಂಶಗಳಿಂದ ಹುಟ್ಟಿಗೊಂಡಿದೆ. ಮೃದು ವಿಚಾರಗಳ ಕೋಮಲ ಆಕರ್ಷಣೆ ಇಲ್ಲಿನ ಕಥೆಗಳಿಗೆ ಮೆರಗು ತಂದಿದೆ. ಕೇವಲ ಮನರಂಜನೆ ಮಾತ್ರವಲ್ಲದೆ, ಎಳೆಯರಿಗೆ ಬದುಕಿನ ನೈಜ ದರ್ಶನ ಮಾಡಿಸುವುದು ಈ ಕಥೆಗಳ ಹೆಗ್ಗಳಿಕೆ.

ಪ್ರಕಾಶಕರು: ಬಂಡಾಯ ಪ್ರಕಾಶನ, ಅರೇ ಅಂಗಡಿ, ಹೊನ್ನಾವರ-581430

ರೈತ ಭಾರತ: ಅವಸಾನದ ಅಂಚಿನಲ್ಲಿ
ಲೇ: ಡಿ.ಎಸ್. ನಾಗಭೂಷಣ
ಬೆಲೆ: 20/-

ಕೃಷಿ ಪ್ರಧಾನ ಭಾರತದಲ್ಲಿ ರೈತ ಎದುರಿಸುತ್ತಿರುವ ಹತ್ತು ಹಲವು ಸಮಸ್ಯೆ ಮಾತ್ರ ಪರಿಹಾರಗಳ ವಿಶ್ಲೇಷಣೆ ಈ ಕೃತಿಯ ವಿಶೇಷ, ಜನರ ದಾಹವನ್ನು ಹೆಚ್ಚಿಸುವ ಗ್ರಾಹಕ ಸಂಸ್ಕೃತಿ ಮೂಲಕ ಭಾರತದ ಲೋಕ ಸಂಗ್ರಹ ದೃಷ್ಟಿಯನ್ನು ರೂಪಿಸುವ 'ರೈತ ಸಂಸ್ಕೃತಿ'ಯನ್ನು ಬುಡಮೇಲುಗೊಳಿಸುವ ನವವಸಾಹತು ಷಾಹಿಯ ಹುನ್ನಾರಗಳನ್ನು ಈ ಕೃತಿಯಲ್ಲಿ ಚರ್ಚಿಸಲಾಗಿದೆ. ದೇಶ ಪ್ರಗತಿಯಲ್ಲಿದೆ ಎನ್ನುವ ಭಂಡರಿಗೆ ತಕ್ಕ ಉತ್ತರ ಈ ಕೃತಿಯಲ್ಲಿದೆ.

ಪ್ರಕಾಶಕರು: ಲೋಹಿಯಾ ಪ್ರಕಾಶನ ಕಪ್ಪಗಲ್ಲು ರೋಡ್ ಗಾಂಧಿ ನಗರ, ಬಳ್ಳಾರಿ-583103

ಅಂಬೇಡ್ಕರ್ ಸಾಂಸ್ಕೃತಿಕ ಸಂಘರ್ಷ
ಸರಿ: ಡಾ॥ ಜಗನ್ನಾಥ ಸಿಂಧೆ
ಬೆಲೆ:100/-

ದಲಿತ ಚಳವಳಿಯನ್ನು ಕುರಿತು ಸಮಾಜ ಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನ ಮಾಡಿರುವ ಲೇಖಕ ಸಿಂಧೆ ವಿವಿಧ ಲೇಖಕರ ಸುಮಾರು ಹದಿನಾರು ಲೇಖನಗಳನ್ನು ಇಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ. ಆಧುನಿಕ ಭಾರತವನ್ನು ಕಟ್ಟಿ ಬೆಳಸಿದವರಲ್ಲೊಬ್ಬರಾದ ಡಾ॥ ಬಿ.ಆರ್. ಅಂಬೇಡ್ಕರ್ ಅವರ ವೈಚಾರಿಕ ನೆಲೆಗಟ್ಟನ್ನು ಪರಿಚಯಿಸುವ ಹಾಗೂ ಸಮಾಕಾಲೀನ ಸಂದರ್ಭದಲ್ಲಿಟ್ಟು ವಿಶ್ಲೇಷಿಸುವ ಲೇಖನಗಳು ಈ ಕೃತಿಯಲ್ಲಿವೆ. ಅಂಬೇಡ್ಕರ್ ಅವರ ಶ್ರಮ, ಸಾಧನೆಗಳ ಹೋರಾಟಗಳ ವಿವಿಧ ಮಗ್ಗುಲುಗಳನ್ನು ಪರಿಚಯಿಸುವ ಪ್ರಯತ್ನ ಇಲ್ಲಿರುವುದರಿಂದ ಅಂಬೇಡ್ಕರ್ ಕುರಿತಂತೆ ಸ್ಪಷ್ಟ ಚಿತ್ರ ಬಯಸುವವರಿಗೆ ಇದೊಂದು ಆಕರ ಗ್ರಂಥವಾಗಬಲ್ಲದು.

ಪ್ರಕಾಶಕರು: ಪಲ್ಲವಿ ಪ್ರಕಾಶನ ವಿ.ವಿ.ಆವರಣ, ಗುಲ್ಬರ್ಗ



ಹೊಸ ಪುಸ್ತಕ

ಪಾದದಡಿಯ ಸ್ವರ್ಗ
ಲೇ. ಅಬ್ದುಲ್ ಹಮೀದ್ ಪಕ್ಕಲಡ್ಕ
ಬೆಲೆ. 40/-

ಸರ್ಕಾರಿ ಸೇವೆಯಲ್ಲಿದ್ದು ನಿವೃತ್ತರಾದ ಮೇಲೆ ಲೇಖಕರು ಬರೆದಿರುವ ಕಥೆಗಳ ಪ್ರಥಮ ಸಂಕಲನ ಇದಾದ್ದರಿಂದ ಕುತೂಹಲ ಹುಟ್ಟಿಸುವ ಕೃತಿ ಇದು. ನಿವೃತ್ತಿ ಆದ ಮೇಲೆ ಎಲ್ಲವೂ ಮುಗಿದೇ ಹೋಯಿತು ಎಂದು ಭಾವಿಸುವವರೇ ಹೆಚ್ಚಾಗಿರುವ ಈ ಸಂದರ್ಭದಲ್ಲಿ ಸಾಹಿತ್ಯ ಕೃಷಿಗೆ ಕೊಡುವುದು ವಿಶೇಷ. ಆದರೆ ಕೃತಿಯಲ್ಲಿ ಲೇಖಕರ ವಯಸ್ಸಿನ ಹದ ಕಾಣಿಸುವುದಿಲ್ಲ. ಲೇಖಕರಿಗೆ ಬರೆಯುವ ಹುಮ್ಮಸ್ಸು ಅಪಾರವಾಗಿರುವುದರಿಂದ ಕಥೆಯ ಹಂದರ ಮತ್ತು ವಸ್ತುವಿನ ಆಯ್ಕೆಗೆ ಹೆಚ್ಚುಗಮನ ಹರಿಸುವುದು ಅಗತ್ಯ.

ಪ್ರಕಾಶಕರು: ಝುಹ ಪ್ರಕಾಶನ ಮಿಜಾರು, ದ. ಕ. ಜಿಲ್ಲೆ-574225



ಮುತ್ತಾಗದ ಮಳೆ ಹನಿ
ಲೇ: ವೈ.ಗ.ಜಗದೀಶ್
ಬೆಲೆ: ರೂ.60/-

ಪತ್ರಕರ್ತ ವೈ.ಗ.ಜಗದೀಶ್ ಅವರ ಮೊದಲ ಕಥಾ ಸಂಕಲನ ಇದು ಮಲೆನಾಡಿನ ದಟ್ಟ ಕಾನನ, ನೈಸರ್ಗಿಕ ಸಂಪತ್ತು, ಸದಾ ಸುರಿವ ಮಳೆಯಿಂದ ಒದ್ದೆಯಾದ ಮಲೆಸೀಮೆ ಜನದ ಸಹಜ ಬದುಕು, ಜಮೀನ್ದಾರರ ದಬ್ಬಾಳಿಕೆ ಎಡಪಂಥೀಯ ಚಳವಳಿ ಹೀಗೆ ಮಲೆನಾಡಿನ ಬದುಕನ್ನು ಹತ್ತಿರದಿಂದ ಕಂಡು ಅನುಭವಿಸಿದ ಜೀವನ ವಿಧಾನಗಳು ಇಲ್ಲಿನ ಕಥೆಗಳಲ್ಲಿ ರೂಪ ಪಡೆದುಕೊಂಡಿವೆ. ಮಲೆನಾಡಿನ ಬದುಕಿನ ಚಿತ್ರಣದ ವಿಶಿಷ್ಟ ನಿರೂಪಣಾ ಶೈಲಿಯೂ ಇಲ್ಲಿನ ಕಥೆಗಳ ಪ್ರಾಮುಖ್ಯತೆಯನ್ನು ಹೆಚ್ಚಿಸಿದೆ.

ಪ್ರಕಾಶಕರು: ಅನು ಪ್ರಕಾಶನ ಬಸವೇಶ್ವರ ನಗರ, ಬೆಂಗಳೂರು-560 079.

ಆ ಗಣರಾಜ್ಯ-ಈ ಕರ್ನಾಟಕದ
ಲೇ: ಡಿ.ಎಸ್. ನಾಗಭೂಷಣ
ಬೆಲೆ: ರೂ.60/-

ವಿವಿಧ ಕ್ಷೇತ್ರಗಳಲ್ಲಿ ಪರಿಣತರಾದ ಹತ್ತು ಜನ ಲೇಖಕರು ಮತ್ತು ಈ ಕೃತಿಯ ಸಂಗ್ರಹಕಾರರ ವಿವಿಧ ಲೇಖನಗಳನ್ನೊಳಗೊಂಡ ಸಂಗ್ರಹ ಯೋಗ್ಯ ಕೃತಿ ಇದು. ಕಥೆ, ಕಾವ್ಯ, ಕಾದಂಬರಿ, ವಿಮರ್ಶೆ, ನಾಟಕ, ಚಲನಚಿತ್ರ, ರಾಜಕಾರಣ ಮೊದಲಾದ ನಾಡಿನ ವಿವಿಧ ಕ್ಷೇತ್ರಗಳ ಹತ್ತು ಆಯ್ಕೆಗಳನ್ನು ಕುರಿತ ವೈವಿಧ್ಯಮಯ ಸಂಗ್ರಹ ಇದಾಗಿದೆ. ನಾಡನ್ನು ಕಟ್ಟಿ ಬೆಳೆಸಿದವರ ಪರಿಚಯದೊಂದಿಗೆ ಉತ್ತಮ ವಿಮರ್ಶಾತ್ಮಕ ದೃಷ್ಟಿಕೋನ ಸಾಲ್ಲಿನ ಬರಹಗಳಲ್ಲಿ ಇದೆ.

ಪ್ರಕಾಶಕರು: ಲೋಹಿಯ ಪ್ರಕಾಶನ, ಗಾಂಧಿನಗರ, ಬಳ್ಳಾರಿ-583103

ಸಂಪಾದಕೀಯ

ಅಂತರಂಗ

ಸ್ವಾಭಿಮಾನದ ಪ್ರತೀಕ ಬಸವರಾಜು

'ಸಾಹಿತ್ಯಕ್ಕೂ ಸರ್ಕಾರಕ್ಕೂ ಯಾವ ಸಂಬಂಧಗಳೂ ಇಲ್ಲ. ಸರ್ಕಾರದ ಹಂಗಿನಲ್ಲಿ ಸಾಹಿತ್ಯ ಬೆಳೆಯಬೇಕಾಗಿಲ್ಲ. ಹಿಂದೆ ರಾಜ ಮಹಾರಾಜರುಗಳನ್ನು ಆಶ್ರಯಿಸಿದ್ದ ಸಾಹಿತ್ಯ ಏನೇನೂ ಉದ್ಧಾರವಾಗಿಲ್ಲ'

–ಡಾ॥ ಎಲ್. ಬಸವರಾಜು

'ಸಾಹಿತ್ಯ ಹಿಂದೆಲ್ಲಾ ರಾಜಾಶ್ರಯದಲ್ಲಿ ಬೆಳೆದಿದೆ. ಈಗಲೂ ಅದು ಹಾಗೇ ಇರಬೇಕು. ಸರ್ಕಾರದ ನೆರವಿನೊಂದಿಗೇ ಸಾಹಿತ್ಯ-ಸಂಸ್ಕೃತಿಗಳು ಬೆಳೆಯಬೇಕಾಗಿದೆ!

–ಪ್ರೊ॥ ಜಿ.ವೆಂಕಟಸುಬ್ಬಯ್ಯ

ಈ ಎರಡು ಹೇಳಿಕೆಗಳು ಕನ್ನಡ ಸಾಹಿತ್ಯದ ಇಬ್ಬರು ಹಿರಿಯ ವಿದ್ವಾಂಸರುಗಳಿಂದ ಬಂದಿವೆ. ಒಂದರಲ್ಲಿ ಸ್ವಾಭಿಮಾನ ಸಂಸ್ಕೃತಿಯ ಬೇರುಗಳಿದ್ದರೆ, ಮತ್ತೊಂದರಲ್ಲಿ ಸನಾತನ ವೈದಿಕ ಸಂಸ್ಕೃತಿಯ ಕೀಳರಿಮೆ ಇದೆ. ಒಬ್ಬರು ಜನಪರವಾಗಿ ಮಾತಾಡುತ್ತಿದ್ದರೆ ಮತ್ತೊಬ್ಬರು ಗುಲಾಮಗಿರಿಯ ಪರವಾಗಿ ವಕಾಲತ್ತು ವಹಿಸುತ್ತಿದ್ದಾರೆ.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ಡಾ॥ ಬಸವರಾಜು ಅವರನ್ನು ಆಯ್ಕೆ ಮಾಡಿದಾಗಲೇ ಸಾಹಿತ್ಯ ಪರಿಷತ್ತು ಮೊದಲ ಬಾರಿಗೆ ಒಳ್ಳೆಯ ಅಧ್ಯಕ್ಷರನ್ನು ಆಯ್ಕೆ ಮಾಡಿತು ಎಂಬ ಹೆಮ್ಮೆ ನಾಡಿನ ಸ್ವಾಭಿಮಾನಿಗಳಲ್ಲಿ ಮೂಡಿತ್ತು. ಬಸವರಾಜು ಉತ್ತಮ ವಿದ್ವಾಂಸರು ಮಾತ್ರವಲ್ಲ. ಸಮಾಜದ ಎಲ್ಲ ಡೋಂಗಿಗಳನ್ನು ಹರಾಜು ಹಾಕುವ ಕೆಲಸವನ್ನು ನಿರ್ದಾಕ್ಷಿಣ್ಯವಾಗಿ ಮಾಡುತ್ತಾರೆಂಬುದು ಎಲ್ಲರಿಗೂ ಗೊತ್ತಿತ್ತು.

ಸಾಹಿತ್ಯ ಸಮ್ಮೇಳನದಲ್ಲಿ ಅವರಾಡಿದ ಒಂದೊಂದು ಮಾತೂ ಸಮಾಜದ ಅಧೋಗತಿಗೆ ಹಿಡಿದ ಕನ್ನಡಿಯಂತಿತ್ತು. ನಾಡು, ನುಡಿ, ಭಾಷೆ, ನೆಲ, ಜಲ ಎಂದೆಲ್ಲ ಬುರುಡೆ ಬಿಡುವ ಬದಲಿಗೆ, ಅವರು ಸಾಹಿತಿಯೊಬ್ಬನಿಗೆ ಇರಬೇಕಾದ ಸಾಮಾಜಿಕ ಕಾಳಜಿ ಮತ್ತು ಜವಬ್ದಾರಿಗಳನ್ನು ಅತ್ಯಂತ ಸಮರ್ಥವಾಗಿ ವ್ಯಕ್ತಪಡಿಸಿದರು. ಬಹುಷಃ ಸಾಹಿತ್ಯ ಪರಿಷತ್ತಿನ ಜೋಭದ್ರಗೇಡಿತನಕ್ಕೆ ನೀಡಿದ ಒಳ್ಳೆಯ ಷಾಕ್ ಟ್ರೀಟ್ಮೆಂಟ್ ಅದಾಗಿತ್ತು!

ಬಸವರಾಜು ಘೋಷಿತ ಬಂಡಾಯಗಾರರಲ್ಲ. ಬಂಡಾಯದ ಬಡಾಯಿಕೊಚ್ಚಿ ವ್ಯವಸ್ಥೆಯೊಂದಿಗೆ ರಾಜಿಗಾಗಿ ನೆಪಹುಡುಕುವ ಆಷಾಡಭೂತಿಯೂ ಅಲ್ಲ. ಅಸಮಾನ ವ್ಯವಸ್ಥೆ ವಿರುದ್ಧದ ಸಹಜ ಸಿಟ್ಟು ಅವರದು. ಎಂದೂ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಂಡವರಲ್ಲ. ವಿಶ್ವವಿದ್ಯಾಲಯದೊಳಗೆ ಬಹುತೇಕ ಅಧ್ಯಾಪಕರೆಲ್ಲ ರಾಜಕೀಯ ಕೆಸರೆರಚಾಟದಲ್ಲಿ ಮುಳುಗಿದ್ದರೆ, ಬಸವರಾಜು ಸಂಶೋಧನೆಗಳಲ್ಲಿ ತಲ್ಲೀನರಾಗಿದ್ದವರು. ವಿಶ್ವವಿದ್ಯಾಲಯದಲ್ಲಿನ ಕ್ಯಾಂಪಸ್ ರಾಜಕೀಯ, ಜಾತಿ, ಸ್ವಜನಪಕ್ಷಪಾತ ಯಾವುದರಲ್ಲಿಯೂ ತಲೆಹಾಕದ ನಿಷ್ಠುರ ಪಾಂಡಿತ್ಯ ಅವರದು.

ಆಶ್ಚರ್ಯ ಎಂದರೆ, ಬಸವರಾಜು ಅವರು ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆಗೆ ಆಯ್ಕೆಯಾದದ್ದು. ಚಿದಾನಂದ ಮೂರ್ತಿ ಅವರಂಥ ಕರ್ಮಠರನ್ನು ಹಿಂದಿಕ್ಕಿ ಬಸವರಾಜು ಅವರ ಹೆಸರು ಅಧ್ಯಕ್ಷತೆಗೆ ಸೂಚಿತವಾದದ್ದೂ ವಿಶೇಷವೇ ಆಗಿತ್ತು. ಯಾಕಂದರೆ ಸಾಹಿತ್ಯ ಪರಿಷತ್ತು ಎಂದೂ ಜನಪರ ವಿಚಾರಗಳ ಪರವಾಗಿ ನಿಂತದ್ದೇ ಇಲ್ಲ. ನಾಡುನುಡಿ ಭಾಷೆ ಅಂತೆಲ್ಲ ಭಾವನಾತ್ಮಕ ವಿಷಯಗಳು ಬಂದಾಗ ಮಾತ್ರ ಆವೇಶದ ಒಂದೆರಡು ಹೇಳಿಕೆಗಳನ್ನು ಕೊಡುವುದನ್ನು ಬಿಟ್ಟರೆ, ಇಡೀ ಕನ್ನಡನಾಡಿನ ಬದುಕನ್ನು ಕಟ್ಟಿಕೊಡುವ ಪ್ರಯತ್ನಕ್ಕೆಂದೂ ಅದು ಕೈಹಾಕಿಲ್ಲ ಅದರ 'ಆವರಣ'ವೇ ಅಂಥಾದ್ದು.

ಸಾಹಿತ್ಯ ಜನಪರವಾಗಿರಬೇಕೋ ಅಥವಾ ಉಳ್ಳವರ ಒಡ್ಡೋಲಗದಲ್ಲಿ ಬಾಜಾಭಜಂತ್ರಿ ಬಾರಿಸಬೇಕೋ ಎಂಬ ಚರ್ಚೆ ಬಹಳ ಕಾಲದಿಂದಲೂ ಇದೆ. 1979ರ 'ಬಂಡಾಯ ಸಾಹಿತ್ಯ ಸಂಘಟನೆ', ಅದಕ್ಕೂ ಮೊದಲಿನ 'ಪ್ರಗತಿ ಸಂಘ' ಮೊದಲಾದ ಸಾಹಿತ್ಯಕ ಚಳವಳಿಗಳಲ್ಲಿ ಇಂಥ ಚರ್ಚೆಯನ್ನು ತುಂಬ ಗಂಭೀರವಾಗಿಯೇ ಹುಟ್ಟಿಹಾಕಿದ್ದವು. ಆದರೆ ಆ ಯಾವ ಚರ್ಚೆಗಳೂ ಮೂರ್ತ ರೂಪ ಪಡೆಯಲೇ ಇಲ್ಲ. ದಿನಕಳೆದಂತೆ ಚರ್ಚೆಯ ಕಾವು ಕಡಿಮೆಯಾಗಿದ್ದು ಮಾತ್ರವಲ್ಲ ಚರ್ಚೆ ಹುಟ್ಟಿಹಾಕಿದ್ದವರೇ ಪಕ್ಷಾಂತರಮಾಡಿ, ಉಳ್ಳವವರ ಒಡ್ಡೋಲಗದಲ್ಲಿ ಭಾಜಾ ಭಜಂತ್ರಿ ಬಾರಿಸತೊಡಗಿದರು.

ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲಂತೂ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ. ಒಂದು ಕಡೆ ಜನಪರ ಸಾಮಾಜಿಕ ಚಳವಳಿಗಳು ತಮ್ಮ ಅಂತಃಸತ್ವ ಕಳೆದುಕೊಂಡು ನಿತ್ರಾಣವಾಗಿದ್ದರೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದ ದಿಗ್ಗಜರೆಲ್ಲ ಅಕಾಡೆಮಿ-ಪ್ರಾಧಿಕಾರಗಳ ಬೆನ್ನು ಹತ್ತಿದ್ದಾರೆ. ಬಿಜೆಪಿ ಮತ್ತು ಸಂಘಪರಿವಾರದಲ್ಲಿರಬಹುದಾದ ಜನಪರ ಗುಣಗಳ ಹುಡುಕಾಟದಲ್ಲಿ ತೊಡಗಿದ್ದಾರೆ. ಕೆಲವರಂತೂ 'ಸರ್ಕಾರ ಸರ್ಕಾರವೇ, ಬಿಜೆಪಿಯವರು ನಡೆಸಿದರೇನು?' ಎಂಬ ಅನುಕೂಲ ಸಿಂಧು ಸಿದ್ಧಾಂತಕ್ಕೆ ಜೋತು ಬಿದ್ದು, ತಮ್ಮನ್ನು ತಾವೇ ರಕ್ಷಿಸಿಕೊಳ್ಳುತ್ತಿದ್ದಾರೆ!

ಇತ್ತೀಚಿನ ಕೆಲವು ಘಟನೆಗಳನ್ನೇ ನೋಡಿ; ನಾಡಿನ ಸಂಸ್ಕೃತಿಯನ್ನು ರಕ್ಷಿಸುವ ನೆಪದಲ್ಲಿ ಸಂಘಪರಿವಾರ ಬೇರೆ ಬೇರೆ ಅವತಾರಗಳಲ್ಲಿ ದಾಳಿಗಳನ್ನು ನಡೆಸುತ್ತಿದೆ. ವಿದ್ಯಾರ್ಥಿಗಳು ಮತ್ತು ಶಿಕ್ಷಕ ಸಮುದಾಯದ ಮೇಲೆ ಭಾರೀ ಒತ್ತಡ ತಂದು ತನ್ನ ಏಕಸಂಸ್ಕೃತಿ ಹೇರಿಕೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಮಾಡುತ್ತಿದೆ. ಜನಪರ ಆಶಯಗಳನ್ನು ಹೊಂದಿರುವ ಅಧ್ಯಾಪಕರೆಲ್ಲ ಉಸಿರು ಕಟ್ಟಿಸುವ ವಾತಾವರಣದಲ್ಲಿ ದಿನ ನೂಕುವಂತಾಗಿದೆ. ಅನ್ಯಧರ್ಮದ ಜನರನ್ನು ಪ್ರತ್ಯೇಕಗೊಳಿಸುವ ಪ್ರಯತ್ನ ಅವ್ಯಾಹತವಾಗಿ ನಡೆಯುತ್ತಿದೆ. ಸಾವಿರಾರು ವರ್ಷಗಳ ವೈದಿಕ ಸಂಸ್ಕೃತಿಯ ಬರ್ಬರ ಹಿಂಸಾಚಾರ ಮರುಕಳಿಸಲು ಆರಂಭಿಸಿದೆ. ಮಧ್ಯಯುಗೀನ ಹಿಂಸಾ ಸಂಸ್ಕೃತಿಗೆ ಸಮಾಜವನ್ನು ಕೊಂಡೊಯ್ಯುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ.

ಆದರೆ ನಮ್ಮ ಸಾಂಸ್ಕೃತಿಕ ಲೋಕದ ದಿಗ್ಗಜರೆಲ್ಲ ಆರಾಮ ಕುರ್ಚಿಯ ಕ್ರಾಂತಿಕಾರಿಗಳಂತೆ ಅಲ್ಲೊಂದು ಇಲ್ಲೊಂದು ಹೇಳಿಕೆ ನೀಡಿ ಕೈತೊಳೆದುಕೊಂಡಿದ್ದಾರೆ. ಏನಾದರೂ ಮಾಡಿದರೆ ಅಥವಾ ಹೋರಾಟಕ್ಕೆ ನಿಂತರೆ ನಾಳೆ ಸರ್ಕಾರದ ಅವಕೃಪೆಗೆ ಗುರಿಯಾಗಬೇಕಾದೀತೆಂಬ ಜಾಣಮೌನವನ್ನು ತೋರುತ್ತಿದ್ದಾರೆ. ಪ್ರಜಾಸತ್ತೆಯ ಊರುಗೋಲಾದ ಮಾಧ್ಯಮಗಳ ಕಥೆಯನ್ನಂತೂ ಹೇಳುವಂತೆಯೇ ಇಲ್ಲ. ಮುದ್ರಣ ಮಾಧ್ಯಮಗಳಿಗಾಗಲಿ, ದೃಶ್ಯಮಾಧ್ಯಮಗಳಿಗಾಗಲಿ ಲಾಭದ ದಂಧೆಯ ಗೀಳು ಅಂಟಿದ ಮೇಲಂತೂ ಅವು ಆಳುವವರ ಭಟ್ಟಂಗಿಗಳಾಗಿವೆಯೇ ಹೊರತು ಸಮಾಜಮುಖಿಯಾಗಿ ಆಲೋಚಿಸುತ್ತಲೇ ಇಲ್ಲ.

ಅದಕ್ಕಾಗೇ ಬಸವರಾಜು ಅವರು ಇಂದು ಆಪತ್ ಬಾಂಧವರಂತೆ ಕಾಣುತ್ತಿದ್ದಾರೆ. ಎಂದೂ ಬಹಿರಂಗ ಹೋರಾಟಕ್ಕೆ ಬಾರದಿದ್ದರೂ ಅಕ್ಷರಷಃ ಹೋರಾಟದ ಬದುಕನ್ನು ಸಾಗಿಸುತ್ತಿರುವ ಬಸವರಾಜು ಅವರಂಥವರ ಸಂತತಿ ಬೆಳೆಬೇಕೆಂದು 'ಸಂವಾದ' ಬಯಸುತ್ತದೆ.

○ ಇಂದೂಧರ ಹೊನ್ನಾಪುರ

ಪೇಜಾವರ ಶ್ರೀ ಅವರಿಗೊಂದು ಬಹಿರಂಗ ಪತ್ರ:

ಸಮಾನತೆಯ ದೀಪ ಹಚ್ಚಿ

ಕರ್ನಾಟಕದಲ್ಲಿ ಬಸವಣ್ಣನವರ ತತ್ವಸಿದ್ಧಾಂತದಡಿಯಲ್ಲಿ ಮಠಗಳು ಕಾರ್ಯನಿರ್ವಹಿಸುತ್ತಿವೆ ಎಂದು ಹೇಳಬಹುದಷ್ಟೆ! ಆದರೆ ಮಠಗಳ ಒಳಗಡೆ ಮಠಾಧೀಶರ ಅಪ್ಪಟ ಜಾತಿವಾದಿತನ ಶೋಚನೀಯವಾದದ್ದು, ಇಷ್ಟು ದಿನ ರಾಜಕಾರಣಿಗಳೇ ಪೊಳ್ಳು ಭರವಸೆಗಳನ್ನು ಕೊಟ್ಟು ದಲಿತರ ಮತಗಳನ್ನು ಗಟ್ಟಿಗೊಳಿಸುತ್ತಿದ್ದರು. ಆದರೆ ಇತ್ತೀಚ್ಚಿಗೆ ಗೋಮುಖ ವ್ಯಾಘ್ರಗಳಂತೆ ವರ್ತಿಸುವ ಕೆಲವು ಹಿಂದೂ ಮಠಾಧಿಪತಿಗಳು ದಲಿತರ ಕಾಳಜಿ ಬಗ್ಗೆ ಎರಡು ಬಣ್ಣದ ಮಾತನಾಡುತ್ತಾ ಬಿಟ್ಟಿ ಪ್ರಚಾರ ಪಡೆದು ಕೊಳ್ಳುತ್ತಿರುವುದು ಯಾವ ಪುರುಷಾರ್ಥಕ್ಕಾಗಿ. ಪೇಜಾವರ ಶ್ರೀರವರೇ ದಲಿತರ ಹೀನ ಬದುಕು ನಿಮಗೆ ಗೊತ್ತಿದ್ದರೆ ನಿಜಕ್ಕೂ ನೀವು "ದಲಿತರೇ ಮತಾಂತರವಾಗಬೇಡಿ" ಎಂದು ಹೇಳುತ್ತಿರಲಿಲ್ಲ. ವಾಸ್ತವವಾಗಿ ಇಂದಿಗೂ ಅಸ್ಪೃಶ್ಯತೆ ರಾಜ್ಯದ ೯೦ ಭಾಗದಷ್ಟು ಹಳ್ಳಿಗಳಲ್ಲಿ ರಾಜಾರೋಷವಾಗಿ ನಡೆಯುತ್ತಿದೆ.

ಸೂರನಹಳ್ಳಿ ಶ್ರೀನಿವಾಸ

ಇತ್ತೀಚಿನ ಪತ್ರಿಕೆಗಳಲ್ಲಿ ಪೇಜಾವರ ಶ್ರೀರವರು ದಲಿತರ ಬಗ್ಗೆ ವಿಶೇಷ ಕಾಳಜಿ ವಹಿಸಿರುವ ಹೇಳಿಕೆ ಸ್ವಾಗತರ್ಹ.

ಪೇಜಾವರ ಶ್ರೀರವರೇ ನಿಜವಾಗಲು ನಿಮಗೆ ದಲಿತರ ಮೇಲೆ ಕಾಳಜಿ ಇದ್ದರೆ ಬಡ ದಲಿತರ ಮನೆಗಳಿಗೆ ಹೋಗಿ ಒಂದು ದಿನ ವಾಸಮಾಡಿ, ಅವರು ಅನುಭವಿಸುತ್ತಿರುವ ಅಸ್ಪೃಶ್ಯತೆಯ ನೋವನ್ನು ಆಲಿಸಿ. ಅವರು ಕೊಟ್ಟಂತಹ ಸಸ್ಯಾಹಾರಿ ಪದಾರ್ಥಗಳನ್ನು ಸೇವನೆ ಮಾಡಿ "ದಲಿತರೇ ನಿಮ್ಮ ಜೊತೆ-(ಮಠಾಧಿಪತಿಗಳು)ನಾವಿದ್ದೇವೆ" ಎಂಬ ಪತ್ರಿಕಾ ಹೇಳಿಕೆಯನ್ನು ಸಾಬಿತುಪಡಿಸಿ.

ಕೆಲವು ಪ್ರಶ್ನೆಗಳು: ಭಾರತೀಯ ಬಂಧುಗಳೇ "ನಾವೆಲ್ಲಾ ಹಿಂದೂ ನಾವೆಲ್ಲಾ ಒಂದು". ಎಂದು ಹೇಳುವ ನೀವು ಅಂತರ್ಜಾತಿ ವಿವಾಹವನ್ನು ನಿಮ್ಮ ಮಠಗಳಲ್ಲಿ ಏಕೆ ಮಾಡಬಾರದು? ಹಾಗೂ ನಿಮ್ಮ ಉತ್ತರಾಧಿಕಾರಿಯನ್ನಾಗಿ ದಲಿತನೊಬ್ಬರನ್ನು ಏಕೆ ನೇಮಕ ಮಾಡಿಕೊಳ್ಳಲಿಲ್ಲ.? ದಲಿತರಿಗೆ ಮಲ ಮೂತ್ರ ತಿನ್ನಿಸಿ, ಕುಡಿಸಿ, ದಲಿತರನ್ನು ಜೀವಂತವಾಗಿ ಸುಟ್ಟರೂ ಸಹ ಮಾತನಾಡದ ನೀವು ಈಗ ಏಕೆ ದಲಿತರ ಬಗ್ಗೆ ಕಾಳಜಿ ನಿಮಗೆ? ಉತ್ತರಿಸುವಿರಾ?

ಕರ್ನಾಟಕದಲ್ಲಿ ಬಸವಣ್ಣನವರ ತತ್ವಸಿದ್ಧಾಂತದಡಿಯಲ್ಲಿ ಮಠಗಳು ಕಾರ್ಯನಿರ್ವಹಿಸುತ್ತಿವೆ ಎಂದೇಳಬಹುದಷ್ಟೆ! ಆದರೆ ಮಠಗಳೊಳಗಡೆ ಮಠಾಧೀಶರ ಅಪ್ಪಟ ಜಾತಿವಾದಿತನ ಶೋಚನೀಯವಾದದ್ದು,

ಇಷ್ಟು ದಿನ ರಾಜಕಾರಣಿಗಳೇ ಪೊಳ್ಳು ಭರವಸೆಗಳನ್ನು ಕೊಟ್ಟು ದಲಿತರ ಮತಗಳನ್ನು ಗಟ್ಟಿಗೊಳಿಸುತ್ತಿದ್ದರು. ಆದರೆ ಇತ್ತೀಚೆಗೆ ಗೋಮುಖ ವ್ಯಾಘ್ರಗಳಂತೆ ವರ್ತಿಸುವ ಕೆಲವು ಹಿಂದೂ ಮಠಾಧಿಪತಿಗಳು ದಲಿತರ ಕಾಳಜಿ ಬಗ್ಗೆ ಎರಡು ಬಣ್ಣದ ಮಾತನಾಡುತ್ತಾ ಬಿಟ್ಟಿ ಪ್ರಚಾರ ಪಡೆದುಕೊಳ್ಳುತ್ತಿರುವುದು ಯಾವ ಪುರುಷಾರ್ಥಕ್ಕಾಗಿ.

ಹಿಂದೂ ಧರ್ಮದ ಶ್ರೀಕೃಷ್ಣ ಮಠದ ಪೇಜಾವರ ಶ್ರೀರವರೇ ದಲಿತರ ಹೀನ ಬದುಕು ನಿಮಗೆ ಗೊತ್ತಿದ್ದರೆ ನಿಜಕ್ಕೂ ನೀವು "ದಲಿತರೇ ಮತಾಂತರವಾಗಬೇಡಿ" ಎಂದು ಹೇಳುತ್ತಿರಲಿಲ್ಲ. ಆದರೂ ವಾಸ್ತವವಾಗಿ ಇಂದಿಗೂ ಅಸ್ಪೃಶ್ಯತೆ ರಾಜ್ಯದ 90 ಭಾಗದಷ್ಟು ಹಳ್ಳಿಗಳಲ್ಲಿ ರಾಜಾರೋಷವಾಗಿ ನಡೆಯುತ್ತಿದೆ. ಒಂದು ಹಳ್ಳಿಯ ಘಟನೆಗಳನ್ನು ಉದಾಹರಣೆ ಮೂಲಕ ಹೇಳುತ್ತೇನೆ.

ಈ ಹಳ್ಳಿಯ ಹೆಸರು ಸೂರನಹಳ್ಳಿ, ಚಳ್ಳಕೆರೆ, ತಾ॥ ಚಿತ್ರದುರ್ಗ ಇಲ್ಲಿಯ ದಲಿತರಿಗೆ ಇಂದಿಗೂ ಸಹ ಕ್ಷೌರ ಮಾಡುವುದಿಲ್ಲ ಕ್ಷೌರಿಕರ ಹತ್ತಿರ ದಲಿತರು ಹೋಗಿ ನಮಗೂ ಕೂದಲು ಕತ್ತರಿಸಿ ಎಂದು ಕೇಳಿದರೆ, ನಾನು ನಿಮಗೆ ಕ್ಷೌರ ಮಾಡಿದರೆ ಊರಿನ ಮೇಲ್ಜಾತಿಯವರು ನನ್ನ ಹತ್ತಿರ ಕ್ಷೌರ ಮಾಡಿಸಿಕೊಳ್ಳಲು ಬರುವುದಿಲ್ಲ ಹಾಗೂ ನನಗೆ ಕೊಡುತ್ತಿದ್ದ ಕಾಳುಕಡ್ಡಿಯನ್ನು ಸಹ ಕೊಡುವುದಿಲ್ಲ ಎಂದು ಹೇಳಿದ್ದಾರೆ, ಎಂಬ ಉತ್ತರ ಕ್ಷೌರಿಕರದ್ದು.

ಆಂಜನೇಯ ಸ್ವಾಮಿ ದೇವಸ್ಥಾನವಿದೆ, ಈ ದೇವಸ್ಥಾನಕ್ಕೆ ಹಳ್ಳಿಯ ಎಲ್ಲಾ ಜಾತಿಗಳು ಪೂಜೆ ಮಾಡುತ್ತಾರೆ. ಆದರೆ ಮಾದಿಗರು ದೇವಸ್ಥಾನದಿಂದ 10 ಅಡಿ ದೂರ ದಲ್ಲಿನಿಂತು ಪೂಜೆಮಾಡಿಸಿಕೊಳ್ಳಬೇಕು. ಆಕಸ್ಮಾತ್ ಒಳಗಡೆ ಹೋದರೆ ದಂಡವಿಧಿಸಿ. ಭಯವನ್ನು ಹುಟ್ಟಿಸುವುದು ಹಿಂದೂ ಧರ್ಮದ ಜಾತಿವಾದಿಗಳ ಚಾಳಿಯಗಿದೆ.

ಹಿಂದೂಳಿದ ವರ್ಗಕ್ಕೆ ಸೇರಿದ ಗೊಲ್ಲ(ಯಾದವ) ಜನಾಂಗದವರು ಒಂದು ಕಡೆ ಮನೆಗಳನ್ನು ಕಟ್ಟಿಕೊಂಡು ಹಟ್ಟಿ ಮಾಡಿಕೊಂಡಿ

ಜಾತಿವಾದಿ ಹಿಂದೂ ಮಠಾಧಿಪತಿಗಳಿಗೆ ಹೇಳುವುದೇನೆಂದರೆ ರಾಜಕೀಯ ಸಮಾವೇಶದಲ್ಲಿ ಬಿಟ್ಟಿ ಪ್ರಚಾರ ಮಾಡಿಸಿಕೊಳ್ಳುವುದು ಮತ್ತು ಕೋಮುವಾದ ರಾಜಕೀಯ ಮಾಡುವುದು ಬಿಡಿ. ಹಳ್ಳಿಗಳಿಗೆ ಹೋಗಿ ದಲಿತರ ಸ್ಥಿತಿಗತಿ ಏನು? ದಲಿತರು ಹಿಂದೂ ಧರ್ಮವನ್ನು ಏಕೆ ತ್ಯಜಿಸುತ್ತಾರೆ. ಎಂಬುದರ ಬಗ್ಗೆ ಉತ್ತರ ಕಂಡುಕೊಳ್ಳಿ. ಅದು ಬಿಟ್ಟು ಪತ್ರಿಕೆ ಹೇಳಿಕೆಗಳಲ್ಲಿ ದಲಿತರೇ ನಿಮ್ಮ ಜೊತೆ ನಾವಿದ್ದೇವೆ ಮತಾಂತರ ಆಗಬೇಡಿ ಎಂದು ಮೊಸಳೆ ಕಣ್ಣೀರೊರೆಸುವ ಪೇಜಾವರ ಶ್ರೀ ಹೇಳುತ್ತಿರುವುದು ಅವಿವೇಕದಿಂದ ಕೂಡಿದ್ದು. ದಲಿತರನ್ನು ದಾರಿ ತಪ್ಪಿಸುವ ವಿಧಾನವಾಗಿದೆ. ಪೇಜಾವರ ಶ್ರೀರವರೇ ದಲಿತರ ಬಗ್ಗೆ ನಿಮಗೆ ಕಿಂಚಿತ್ತಾದರೂ ಕಾಳಜಿ ಹಾಗೂ ಸಮಾನತೆಯ ಬಗ್ಗೆ ನಿಮಗೆ ಗೌರವವಿದ್ದರೆ ಜಾತಿವಾದಿಗಳಿಗೆ ಹೇಳಿ, ಭಾರತೀಯ ಬಂಧುಗಳೇ "ನಾವೆಲ್ಲಾ ಹಿಂದೂ, ನಾವೆಲ್ಲಾ ಒಂದು" ಎಂಬ ಸಮಾನತೆಯ ದೀಪ ಹಚ್ಚಿ. ಇಲ್ಲವಾದಲ್ಲಿ ನಿಮ್ಮ ಜಾತಿವಾದ, ಕೋಮುವಾದ, ಮಠಗಳಲ್ಲಿ ನಿಮ್ಮ ಕೆಲಸ ನೋಡಿಕೊಳ್ಳಿ....

ದ್ದಾರೆ. ಈ ಹಟ್ಟಿ ಒಳಗಡೆ ಮಾದಿಗರು ಹೋಗಬಾರದಷ್ಟೆಯಲ್ಲ, ಮಾದಿಗರ ದನ ಕರುಗಳು ಸಹ ಹೋಗಬಾರದು ಹೋದರೆ ಜುಲ್ಮನೆ ವಿಧಿಸಿ, ಶಿಕ್ಷೆ ಕೊಡುವುದು ವಾಡಿಕೆಯಾಗಿದೆ.

ಅಸ್ಪೃಶ್ಯರೇ ಆದಂತಹ ಬೋವಿ ಜನಾಂಗದವರೂ ಸಹ ಮಾದಿಗರನ್ನು ಹಟ್ಟಿ ಒಳಗಡೆ ಬಿಟ್ಟುಕೊಳ್ಳುವುದಿಲ್ಲ ಅಪ್ಪಿತಪ್ಪಿ ಒಳಗಡೆ ಹೋದರೆ, ಅವರ ಕುಲದೇವರು ತಿಮ್ಮಪ್ಪನ ಗಂಗೆ ಪೂಜೆ ಮಾಡಿ ಒಂದು ದಿನ ಮನೆ ಬಿಟ್ಟು ಅಡವಿ ಸೇರಿಕೊಂಡು ಅಲ್ಲಿಯೇ ಪೂಜೆ ಮಾಡಿ ಪಾಪ ಮುಕ್ತವಾಯಿತ್ತೆಂದು ಮನೆಗೆ ಮರಳುತ್ತಾರೆ. ಮತ್ತೆ ಮಾದಿಗರು ಒಳಗಡೆ ಬಾರದಂತೆ ಹಟ್ಟಿ ಸುತ್ತಾ ಮುಳ್ಳಿನ ಬೇಲಿಯನ್ನು ಹಾಕಿ ಮುನ್ನೆಚ್ಚರಿಕೆ ವಹಿಸುತ್ತಿರುವ ಹಿಂದೂ ಧರ್ಮದ ಅಸ್ಪೃಶ್ಯರಲ್ಲಿಯೇ ಅಸ್ಪೃಶ್ಯತೆ ಸಾಬಿತಾಗುತ್ತದೆ.

ಲಿಂಗಾಯಿತರ ಗದ್ದೆಯಲ್ಲಿ ಪುಡಿಗಾಸಿಗೆ ಕೂಲಿ ಜೀವನ ಮಾಡುತ್ತಿರುವ ಮಾದಿಗರು. ಲಿಂಗಾಯಿತರ ಮನೆ ಮುಂದಿನ ರಸ್ತೆಯಲ್ಲಿ ಅವರು ಕೊಟ್ಟಂತಹ ತಂಗಳು (ಬೆಳ್ಳಗ್ಗೆಯದೋ? ರಾತ್ರಿಯೊದೋ?) ತಿಂದುಕೊಂಡು. ಇವರಿಗೆ ವಿಶೇಷವಾದ ಗೌರವಕೊಡಬೇಕು, ಲಿಂಗಾಯಿತರು ಹಿರಿಯರೇ/ಕಿರಿಯರೇ ಆಗಲಿ ಎಲ್ಲರಿಗೂ. "ಸ್ವಾಮಿ", ಗೌಡ್ರೆ", "ಗೊಂಚಿ ಕಾರ", "ಧಣಿ", "ತಂದೆ" ದೇವ್ರು" ಮರ್ಯಾದೆಯಿಂದ ತಲೆತಗ್ಗಿಸಿ ಮಾದಿಗರು ಮಾತನಾಡಿಸಬೇಕು. ಮಾತನಾಡಿಸದಿದ್ದರೆ, ಮಾನಸಿಕವಾಗಿ ಹಿಂಸಿಸುವುದು ಇವರಿಗೆ ಆನುವಂಶೀಯ ಗುಣಗಳು.

ಲಿಂಗಾಯಿತರು ಇಂದಿಗೂ ಸಹ ಮಾದಿಗರಿಗೆ, ಹಾಲು, ಮೊಸರು, ಮಜ್ಜಿಗೆ, ತುಪ್ಪ, ಏನ್ನನು ಕೊಡುವುದಿಲ್ಲ. ವಿಪರ್ಯಾಸವೆಂದರೆ ಇವರ ಹಸು, ಎಮ್ಮೆಗಳನ್ನು ಮಾದಿಗರೇ ಮೆಯಿಸುವುದು, ಬೆಳ್ಳಗ್ಗೆಯೇ ಎದ್ದು ಹಾಲನ್ನು ಸಹ ಕರೆದುಕೊಡುತ್ತಾರೆ. ಆದರೆ ಈ ಹಾಲು ಲಿಂಗಾಯಿತರ ಮನೆ ಸೇರಿದರೆ ಸಾಕು. ಅದಕ್ಕೂ ಹಿಂದೂ ಧರ್ಮದ ಜಾತಿ ದಾರಿದ್ರ್ಯ ಹಂಟಿಕೊಳ್ಳುವುದಲ್ಲದೆ. ಹಾಲನ್ನು ಮಾದಿಗರಿಗೆ ಕುಡಿಯುವುದಕ್ಕೆ ಕೊಟ್ಟರೆ ಹಸು ಹಾಲು ಕೊಡುವುದಿಲ್ಲ ಎಂಬ ಮೂಡನಂಬಿಕೆ ಅವರದ್ದು, ಇದು ಯಾವ ನ್ಯಾಯ? ಹಿಂದೂ ಜಾತಿವಾದಿಗಳೇ ಇದು ನಿಮಗೆ ಸರಿಯೇ?

ಅಸ್ಪೃಶ್ಯತೆ, ಮೇಲು ಕೀಳುಗಳ ಮಧ್ಯೆಯೇ ಲಿಂಗಾಯಿತರ ಗದ್ದೆಯಲ್ಲಿ ಮಾದಿಗರ ಕಪ್ಪು ದೇಹಗಳು ಆನೆಗಳಂತೆ ಹಗಲು ರಾತ್ರಿ ದುಡಿದು ಲಿಂಗಾಯಿತರ ಅಭಿವೃದ್ಧಿಗೆ ಶ್ರಮಿಸುತ್ತಿರುವ ಮಾದಿಗರ "ನಿಸ್ವಾರ್ಥತೆ", "ಉಧಾರತಾ ಮನೋಭಾವ" ಹಾಗೂ ಹಸಿದ ಹೊಟ್ಟೆಯಲ್ಲಿಯೇ ತುಂಡು ಬೀಡಿ ಸೇದಿ, ಮುಖದ ಮೇಲೆ ಸದಾ ನಗು ಬೀರುವ ಮಾದಿಗರ ಶಾಂತಿಯುತವಾದ ಬದುಕು, ಜಾತಿ ದಾರಿದ್ರ್ಯ ಹಿಂದೂ ಧರ್ಮದ ಮೂರ್ಖ ಜಾತಿವಾದಿಗಳಿಗೇಕೆ ಅರ್ಥವಾಗುತ್ತಿಲ್ಲ?

ಈ ಹಳ್ಳಿಯಲ್ಲಿ ಅಸ್ಪೃಶ್ಯತೆ ಮೇಲುಕೀಳು ಎಂಬ ಭಾವನೆಯಿಂದ ನೊಂದು ಬೆಂದು ಹಿಂದೂ ಧರ್ಮದ ಜಾತಿವಾದಿಗಳ ಮಧ್ಯೆ ಮಾದಿಗರು ನಿಜವಾಗಿಯು ಪ್ರಾಣಿಗಳಿಗಿಂತಲೂ ಕೀಳಾಗಿ ಬಾಳುತ್ತಿರುವುದು ಮಾನವೀಯ ಮೌಲ್ಯಗಳೇ ನಾಚಿ ತಲೆತಗ್ಗಿಸುವಂತಹ ಹಿಂದೂಧರ್ಮದ ಅನಿಷ್ಟ ಪದ್ಧತಿಯಿದು. ಗುಲಾಮಗಿರಿ ಪದ್ಧತಿ ಸೂರನ ಹಳ್ಳಿಯಲ್ಲಿ ಮಾತ್ರ ಅಲ್ಲ ರಾಜ್ಯದ 90 ಭಾಗದಷ್ಟು ಹಳ್ಳಿಗಳಲ್ಲಿ ದಲಿತರು ಇದೇ ಜೀವನ ನಡೆಸುತ್ತಿರುವುದು ಹಿಂದೂ ಧರ್ಮದ ಮಠಾಧಿಪತಿಗಳಾದ ನಿಮಗೆ ತಿಳಿದಿಲ್ಲವೆ?

ಜಾತಿವಾದಿ ಹಿಂದೂ ಮಠಾಧಿಪತಿಗಳಿಗೆ ಹೇಳುವುದೇನೆಂದರೆ ರಾಜಕೀಯ ಸಮಾವೇಶದಲ್ಲಿ ಬಿಟ್ಟಿ ಪ್ರಚಾರ ಮಾಡಿಸಿಕೊಳ್ಳುವುದು ಮತ್ತು ಕೋಮುವಾದ ರಾಜಕೀಯ ಮಾಡುವುದು ಬಿಡಿ. ಹಳ್ಳಿಗಳಿಗೆ ಹೋಗಿ ದಲಿತರ ಸ್ಥಿತಿಗತಿ ಏನು? ದಲಿತರು ಹಿಂದೂ ಧರ್ಮವನ್ನು ಏಕೆ ತ್ಯಜಿಸುತ್ತಾರೆ. ಎಂಬುದರ ಬಗ್ಗೆ ಉತ್ತರ ಕಂಡುಕೊಳ್ಳಿ. ಅದು ಬಿಟ್ಟು ಪತ್ರಿಕೆ ಹೇಳಿಕೆಗಳಲ್ಲಿ ದಲಿತರೇ ನಿಮ್ಮ ಜೊತೆ ನಾವಿದ್ದೇವೆ ಮತಾಂತರ ಆಗಬೇಡಿ ಎಂದು ಮೊಸಳೆ ಕಣ್ಣಿರೊರೆಸುವ ಪೇಜಾವರ ಶ್ರೀ ಹೇಳುತ್ತಿರುವುದು ಅವಿವೇಕದಿಂದ ಕೂಡಿದ್ದು. ದಲಿತರನ್ನು ದಾರಿ ತಪ್ಪಿಸುವ ವಿಧಾನವಾಗಿದೆ.

ಪೇಜಾವರ ಶ್ರೀರವರೇ ದಲಿತರ ಬಗ್ಗೆ ನಿಮಗೆ ಕಿಂಚಿತ್ತಾದರೂ ಕಾಳಜಿ ಹಾಗೂ ಸಮಾನತೆಯ ಬಗ್ಗೆ ನಿಮಗೆ ಗೌರವವಿದ್ದರೆ ಈ ಹಳ್ಳಿಗೆ ಒಮ್ಮೆ ಬೇಟಿ ಮಾಡಿ ಜಾತಿವಾದಿಗಳಿಗೆ ಹೇಳಿ, ಭಾರತೀಯ ಬಂಧುಗಳೇ "ನಾವೆಲ್ಲಾ ಹಿಂದೂ, ನಾವೆಲ್ಲಾ ಒಂದು" ಎಂಬ ಸಮಾನತೆಯ ದೀಪ ಹಚ್ಚಿ. ಇಲ್ಲವಾದಲ್ಲಿ ನಿಮ್ಮ ಜಾತಿವಾದ, ಕೋಮುವಾದ, ಮಠಗಳಲ್ಲಿ ನಿಮ್ಮ ಕೆಲಸ ನೋಡಿಕೊಳ್ಳಿ.......

□



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ಮಲೆಗಾಂವ್ ಘಟನೆ:

‘ಭಾಜಪ’ದ ಶೀರ್ಷಾಸನ

ಮಲೆಗಾಂವ್ ಘಟನೆಯ ತನಿಖೆ ನಿರ್ಣಾಯಕ ಹಂತ ತಲುಪುತ್ತಿದ್ದ ಸಮಯದಲ್ಲಿ ತನಿಖೆಯ ನೇತೃತ್ವ ವಹಿಸಿದ್ದ ಪೋಲೀಸ್ ಅಧಿಕಾರಿ ಹೇಮಂತ್ ಕರ್ಕರೆ ಭಯೋತ್ಪಾದಕರ ಗುಂಡೇಟಿಗೆ ಬಲಿಯಾಗಿರುವುದು ವಿಷಾದನೀಯ. ತಮ್ಮ ನಿಷ್ಪಕ್ಷಪಾತ ಧೋರಣೆ ಮತ್ತು ನಿಷ್ಠಾವಂತ ಸೇವೆಗೆ ಹೆಸರಾಗಿದ್ದ ಕರ್ಕರೆಯ ಅಂತ್ಯವನ್ನು ಕೆಲವು ಸಂಘಪರಿವಾರದ ನಾಯಕರು ಪಾಪಕ್ಕೆ ಪ್ರಾಯಶ್ಚಿತ್ತವೆಂದು ಬಣ್ಣಿಸಿರುವುದು ಸಂಘಪರಿವಾರದ ಆಂತರ್ಯವನ್ನು ಬಯಲು ಮಾಡಿದೆಯಷ್ಟೆ. ಆದರೂ ಚುನಾವಣಾ ಕಣದಿಂದ ಹೊರಬಂದ ನಂತರ ಭಾಜಪದ ನಾಯಕತ್ವ ಕೇಂದ್ರ ಸರ್ಕಾರದೊಡನೆ ಸಹಮತದಿಂದ ವರ್ತಿಸಿರುವುದು, ಮುಂಬೈ ದಾಳಿಯ ಹಿನ್ನೆಲೆಯಲ್ಲಿ ಸ್ವಾಗತಾರ್ಹವಾಗಿದೆ. ದೇಶದ ಪ್ರಜಾತಾಂತ್ರಿಕ ವ್ಯವಸ್ಥೆಯ ಮೇಲೆ ದಾಳಿ ನಡೆಸಿದ ಕೃತ್ಯವನ್ನು ಖಂಡಿಸುವಲ್ಲಿ ಸಂಸತ್ತಿನಲ್ಲಿ ಕಂಡು ಬಂದ ಒಗ್ಗಟ್ಟು ಅಪೂರ್ವವಾದದ್ದು.

ನಾಡಿ ಬಂಗಾರಪೇಟೆ

2008ರ ಅಕ್ಟೋಬರ್ 4ರಂದು ದೆಹಲಿಯ ಪತ್ರಿಕಾ ಗೋಷ್ಟಿಯಲ್ಲಿ ಪಾಲ್ಗೊಂಡಿದ್ದ, ಭಾವಿ ಪ್ರಧಾನಿ ಎಂದೇ ಬಿಂಬಿಸಲಾಗುತ್ತಿರುವ, ಎಲ್.ಕೆ.ಅದ್ವಾನಿಯವರು “ಭಾಜಪದ ಮಟ್ಟಿಗೆ ಹೇಳುವುದಾದರೆ ಭಯೋತ್ಪಾದನೆಯನ್ನು ನಿಗ್ರಹಿಸುವಲ್ಲಿ ಮತ್ತು ನಿಯಂತ್ರಿಸುವಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವ ಸಾಧ್ಯತೆಗಳಿಲ್ಲ. ನಮ್ಮ ಪಕ್ಷವು ದೂರ ದೃಷ್ಟಿಯಿಲ್ಲದೆ ವರ್ತಿಸಿ ಇತಿಹಾಸದ ಅವಗಣನೆಗೆ ಪಾತ್ರವಾಗುವುದಿಲ್ಲ. ಸರಿಯಾದ ಸಮಯಕ್ಕೆ ತಕ್ಕ ರೀತಿಯಲ್ಲಿ ಕ್ರಮ ಕೈಗೊಳ್ಳುವ ಮೂಲಕ ಕಾರ್ಯಪ್ರವೃತ್ತರಾಗುತ್ತೇವೆ. ನಮ್ಮ ಪಕ್ಷ ಮುಂಬರುವ ಚುನಾವಣೆಗಳಲ್ಲಿ ಗೆಲ್ಲುವುದು ಅಥವಾ ಸೋಲುವುದು ನಮಗೆ ಮುಖ್ಯವಲ್ಲ, ಇನ್ನು ಮುಂದಿನ 100 ವರ್ಷಗಳಲ್ಲಿ ಭಾರತ ಯಾವ ಹಾದಿಯಲ್ಲಿ ಕ್ರಮಿಸಲಿದೆ ಎಂಬುದೇ ನಮ್ಮ ಮುಖ್ಯಧ್ಯೇಯ” ಎಂದು ಹೇಳಿದ್ದರು. ಇತ್ತೀಚೆಗೆ ದೇಶಾದ್ಯಂತ ಹೆಚ್ಚಾಗುತ್ತಿರುವ ಭಯೋತ್ಪಾದಕ ಕೃತ್ಯಗಳನ್ನು ನಿಗ್ರಹಿಸುವಲ್ಲಿ ಕೇಂದ್ರ ಸರ್ಕಾರ ಮೃದು ನೀತಿ ಅನುಸರಿಸುತ್ತಿದೆ, ಪೋಟಾದಂತಹ ಕಾಯ್ದೆಗಳನ್ನು ಸಮರ್ಥವಾಗಿ ಬಳಸಿದಲ್ಲಿ ಉಗ್ರವಾದಿಗಳನ್ನು ಮಟ್ಟಹಾಕಬಹುದು ಎಂಬ ಸೂಚ್ಯಾರ್ಥವನ್ನು ಈ ಹೇಳಿಕೆಯಲ್ಲಿ ಕಾಣಬಹುದು.

ಮುಂಬೈ ಘಟನೆಯ ನಂತರದಲ್ಲಿ ಇದೇ ವಿಚಾರಧಾರೆಯನ್ನು ರಾಜಕೀಯ ಅಸ್ತ್ರವಾಗಿ ಬಳಸಿಕೊಳ್ಳಲು ಯತ್ನಿಸಿದ ಭಾಜಪ ದೆಹಲಿ ಮತ್ತು ರಾಜಸ್ಥಾನದಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಸೋಲನು ಭವಿಸಿದೆ. ಮಲೆಗಾಂವ್ ಘಟನೆಯ ತನಿಖೆ ನಿರ್ಣಾಯಕ ಹಂತ ತಲುಪುತ್ತಿದ್ದ ಸಮಯದಲ್ಲಿ ಈ ತನಿಖೆಯ ನೇತೃತ್ವ ವಹಿಸಿದ್ದ ಧೀಮಂತ ಪೋಲೀಸ್ ಅಧಿಕಾರಿ ಹೇಮಂತ್ ಕರ್ಕರೆ ಭಯೋತ್ಪಾದಕರ ಗುಂಡೇಟಿಗೆ ಬಲಿಯಾಗಿರುವುದು ವಿಷಾದನೀಯ: ತಮ್ಮ ನಿಷ್ಪಕ್ಷಪಾತ ಧೋರಣೆ ಮತ್ತು ನಿಷ್ಠಾವಂತ ಸೇವೆಗೆ ಹೆಸರಾಗಿದ್ದ ಕರ್ಕರೆಯ ದಾರುಣ ಅಂತ್ಯವನ್ನು ಕೆಲವು ಸಂಘಪರಿವಾರದ ನಾಯಕರು ಪಾಪಕ್ಕೆ ಪ್ರಾಯಶ್ಚಿತ್ತವೆಂದು ಬಣ್ಣಿಸಿರುವುದು ಸಂಘಪರಿವಾರದ ಆಂತರ್ಯವನ್ನು ಬಯಲು ಮಾಡಿದೆಯಷ್ಟೆ. ಆದರೂ ಚುನಾವಣಾ ಕಣದಿಂದ ಹೊರಬಂದ ನಂತರ ಭಾಜಪದ ನಾಯಕತ್ವ ಕೇಂದ್ರ ಸರ್ಕಾರದೊಡನೆ ಸಹಮತದಿಂದ ವರ್ತಿಸಿರುವುದು, ಮುಂಬೈ ದಾಳಿಯ ಹಿನ್ನೆಲೆಯಲ್ಲಿ ಸ್ವಾಗತಾರ್ಹವಾಗಿದೆ. ದೇಶದ ಪ್ರಜಾತಾಂತ್ರಿಕ ವ್ಯವಸ್ಥೆಯ ಮೇಲೆ ದಾಳಿ ನಡೆಸಿದ ಭಯೋತ್ಪಾದಕರ ಕೃತ್ಯವನ್ನು ಖಂಡಿಸುವಲ್ಲಿ ಸಂಸತ್ತಿನಲ್ಲಿ ಕಂಡು ಬಂದ ಒಗ್ಗಟ್ಟು ಅಪೂರ್ವವಾದದ್ದು.

ಆದರೆ ಭಯೋತ್ಪಾದನೆಯನ್ನು ಹತ್ತಿಕ್ಕುವಲ್ಲಿ ಕರಾಳ ಶಾಸನಗಳನ್ನೇ ಅವಲಂಬಿಸುವ ಭಾಜಪದ ತಂತ್ರವನ್ನೇ ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಸರ್ಕಾರ ಅನುಸರಿಸುತ್ತಿರುವುದು ವಿಷಾದನೀಯ. ಪೋಟಾ ಕಾಯ್ದೆಯನ್ನು ಪುನಃ ಮತ್ತೊಂದು ರೀತಿಯಲ್ಲಿ ಜಾರಿಗೊಳಿಸುವ ಮೂಲಕ ಸರ್ಕಾರ ಪುನಃ ಹಳೆಯ ಜಾಡಿನಲ್ಲೇ ಕ್ರಮಿಸುತ್ತಿದೆ. ಮುಂಬರುವ ಲೋಕಸಭಾ ಚುನಾವಣೆಗಳಲ್ಲಿ ಮತದಾರರ ಮುಂದೆ “ಭಾಜಪ ಆರೋಪಿಸುವಂತೆ ನಮ್ಮ ಸರ್ಕಾರ ಭಯೋತ್ಪಾ ದಕರ ವಿರುದ್ಧ ಮೃದು ಧೋರಣೆ ತಾಳುವುದಿಲ್ಲ” ಎಂದು ಪ್ರಚುರ ಪಡಿಸುವ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷ ವರ್ತಿಸುತ್ತಿದೆ. ಆದರೆ ಭಾಜಪ ಮತ್ತು ಸಂಘಪರಿವಾರ ಆರೋಪಿಸುವ ಮೃದು ಧೋರಣೆ ಕೇವಲ ಮುಸ್ಲಿಂ ಆರೋಪಿಗಳಿಗಷ್ಟೇ ಸೀಮಿತವಾಗಿರುವುದು ಮಲೆಗಾಂವ್ ಸ್ಫೋಟ ಪ್ರಕರಣದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

ಭಯೋತ್ಪಾದಕತೆಯನ್ನು ಹತ್ತಿಕ್ಕುವುದರಲ್ಲಿ ಸೌಮ್ಯ ವಾದತರವಲ್ಲ, ಪೋಟಾದಂತಹ ಕರಾಳ ಶಾಸನವನ್ನು ಪ್ರಯೋಗಿಸುವುದರ ಮೂಲಕ ಅಪರಾಧಿಗಳಿಗೆ ಉಗ್ರ ಶಿಕ್ಷೆ ವಿಧಿಸಬೇಕು ಎಂದು ಬಲವಾಗಿ ವಾದಿಸುತ್ತಿದ್ದ ಭಾಜಪ ನಾಯಕರು, ಪ್ರತಿಯೊಬ್ಬ ಶಂಕಿತ ಮುಸ್ಲಿಂ ಭಯೋತ್ಪಾದಕನನ್ನೂ ಸಂಶಯದಿಂದಲೇ ನೋಡುತ್ತಿದ್ದರು. ಈಗ ಹಿಂದೂ ಧಾರ್ಮಿಕ ನಾಯಕರು ಆರೋಪಿಗಳ ಸ್ಥಾನದಲ್ಲಿರುವಾಗ ತನಿಖಾ ಅಧಿಕಾರಿಗಳಿಗೆ ಸ್ವಾಯತ್ತತೆ ನೀಡಬೇಕೆಂದೂ, ಆರೋಪ ಸಾಬೀತಾಗುವರೆಗೂ ಆರೋಪಿಗಳನ್ನು ಭಯೋತ್ಪಾದಕರೆಂದು ಗುರುತಿಸಬಾರದೆಂದೂ ಆಗ್ರಹಿಸುತ್ತಿದ್ದಾರೆ. ಮಲೆಗಾಂವ್ ಪ್ರಕರಣದ ತನಿಖೆಯಲ್ಲಿ ಪ್ರಾರಂಭಿಕ ಸುಳಿವುಗಳು ದೊರೆತ ಸಂದರ್ಭದಲ್ಲಿ ಕಾನೂನಿನ ಪ್ರಕಾರ ತನಿಖೆ ನಡೆಯಲಿ, ಆರೋಪ ಸಾಬೀತಾದಲ್ಲಿ ಶಿಕ್ಷೆಯಾಗಲಿ ಎಂದು ಹೇಳುತ್ತಿದ್ದ ಭಾಜಪ ನಾಯಕರು, ಹೆಚ್ಚು ಸೂಕ್ಷ್ಮ ಸುಳಿವು ದೊರೆತಂತೆಲ್ಲಾ, ಇಡೀ ತನಿಖೆಯನ್ನೇ ಸರ್ಕಾರದ ಸೇಡಿನ ಕ್ರಮ ಎಂದು ಆರೋಪಿಸಲು ತೊಡಗಿದ್ದು ಭಾಜಪದ ದ್ವಂದ್ವ ನೀತಿಗೆ ಸಾಕ್ಷಿ.

ಸಾಧ್ವಿ ಪ್ರಗ್ಯಾ ಮತ್ತು ಸ್ವಾಮಿ ದಯಾನಂದ್ ಪುರೋಹಿತ್ ಅವರ ಬಂಧನದ ನಂತರ ಹೊರಬರುತ್ತಿರುವ ಸುದ್ದಿಗಳು ಭಾಜಪ ಮತ್ತು ಸಂಘಪರಿವಾರವನ್ನು ಕಂಗೆಡಿಸಿರುವುದು ಸ್ಪಷ್ಟವಾಗಿದೆ. ಮಲೆಗಾಂವ್ ದುರಂತದ ಹಿನ್ನೆಲೆಯಲ್ಲಿ ಮಹಾರಾಷ್ಟ್ರದ ಭಯೋತ್ಪಾದನಾ

ಮೇಜರ್ ರಮೇಶ್ ಉಪಧ್ಯಾಯ್ (ನಿ), ರಾಕೇಶ್ ಧಾವಡೆ, ಸಾಧ್ವಿ ಪ್ರಗ್ಯಾ ಸಿಂಗ್ ಠಾಕೂರ್, ಲೆ.ಕ॥ ಎಸ್.ಕೆ. ಪುರೋಹಿತ್, ಮತ್ತು ಸುಧಾಕರ್ ದ್ವಿವೇದಿ(ದಯಾನಂದ ಪಾಂಡೆ).

ನಿಗ್ರಹದಳ ಹಲವಾರು ಶಂಕಿತ ಹಿಂದೂ ಭಯೋತ್ಪಾದಕರನ್ನು ಬಂಧಿಸಿರುವುದು ಹಿಂದುತ್ವ ಪಾಳಯದಲ್ಲಿ ತೀವ್ರ ತಳಮಳ ಉಂಟು ಮಾಡಿದೆ. ಭಾಜಪ ಪ್ರಥಮ ಬಾರಿಗೆ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಹಲವಾರು ನಿವೃತ್ತ ಸೇನಾಧಿಕಾರಿಗಳು ಪಕ್ಷಕ್ಕೆ ಸೇರ್ಪಡೆಯಾಗಿದ್ದುಂಟು. ಸ್ವದೇಶ ಪ್ರೇಮ ಮತ್ತು ಭಾರತೀಯ ಸಾಂಸ್ಕೃತಿಕ ಪರಂಪರೆಯ ರಕ್ಷಣೆಯ ಪ್ರತೀಕವಾಗಿ ಸೇನಾಧಿಕಾರಿಗಳು ಭಾಜಪವನ್ನು ಸೇರುತ್ತಿದ್ದಾರೆ ಎಂದು ಭಾಜಪ ಬೀಗುತ್ತಿತ್ತು. ಆದರೆ ಮಲೆಗಾಂವ್ ಪ್ರಕರಣದಲ್ಲಿ ಸೇನಾಧಿಕಾರಿಯೇ ಆರೋಪಿಯಾಗಿರುವುದು ಪಕ್ಷಕ್ಕೆ ಭಾರಿ ಹೊಡೆತವಾಗಿದೆ. ಆದರೆ ರಾಜಕೀಯ ದ್ವಂದ್ವ ನೀತಿಯಲ್ಲಿ ಪಳಗಿರುವ ಭಾಜಪ ನಾಯಕರಿಗೆ ಈ ಸನ್ನಿವೇಶವೇನೂ ಹೊಸತಲ್ಲ.

ಪ್ರಾರಂಭದಲ್ಲಿ ತಮ್ಮ ಪಕ್ಷಕ್ಕೂ ಶಂಕಿತ ಭಯೋತ್ಪಾದಕರಿಗೂ ಸಂಬಂಧವೇ ಇಲ್ಲ ಎಂದು ಹೇಳುತ್ತಿದ್ದ ಭಾಜಪ ಅಧ್ಯಕ್ಷ ರಾಜನಾಥ ಸಿಂಗ್, ಸಾಧ್ವಿ ಪ್ರಗ್ಯಾ ಅವರೊಂದಿಗೆ ಕುಳಿತಿರುವ ಫೋಟೋ ಪತ್ರಿಕೆಗಳಲ್ಲಿ ಕಾಣಿಸಿಕೊಂಡಾಗ, ತೀವ್ರ ಮುಜಗರ ವ್ಯಕ್ತಪಡಿಸಿದ್ದುಂಟು. ಈ ಹಂತದಲ್ಲಿ ಸಂಘ ಪರಿವಾರವೂ ಸಹ ಇದೇ ನಿಲುವು ವ್ಯಕ್ತಪಡಿಸಿತ್ತು. ಆದರೆ ಆರ್.ಎಸ್.ಎಸ್ ಮತ್ತಿತರ ಸಂಘ ಪರಿವಾರದ ಸಂಘಟನೆಗಳು ಪ್ರಗ್ಯಾ ಮತ್ತು ಪುರೋಹಿತ್ ಅವರನ್ನು ಬೆಂಬಲಿಸಿದ ಹಿನ್ನೆಲೆಯಲ್ಲಿ ಭಾಜಪ ನಾಯಕರು ಭಿನ್ನ ರಾಗ ಹಾಡಲಾರಂಭಿಸಿದ್ದಾರೆ. "ಒಬ್ಬ ಸಾಧ್ವಿಯನ್ನು ಭಯೋತ್ಪಾದಕಳೆಂದು ಬಂಧಿಸಿರುವುದು ಅಕ್ಷಮ್ಯ ಅಪರಾಧವಾಗಿದ್ದು ಇದು ಯು.ಪಿ.ಎ ಸರ್ಕಾರದ ಪಿತೂರಿಯಾಗಿದೆ. ರಾಜಕೀಯವಾಗಿ ಕೇಂದ್ರ ಸರ್ಕಾರ ಪ್ರತಿರೋಧ ಎದುರಿಸುತ್ತದೆ" ಎಂದು ಪ್ರವೀಣ್ ತೊಗಾಡಿಯಾ ಗುಡುಗುತ್ತಿದ್ದಂತೆಯೇ, ಭಾಜಪ ಅಧ್ಯಕ್ಷ ರಾಜನಾಥ್ ಸಿಂಗ್ ಅವರು "ನಾವು ಸಾಧ್ವಿಯ ವಿರುದ್ಧ ತನಿಖೆಯನ್ನು ನಡೆಸಲು ಅವಕಾಶ ನೀಡುವುದಿಲ್ಲ" ಎಂದು ಹೇಳಿರುವುದು ಅಪಾಯಕಾರಿ ಸೂಚನೆಯಾಗಿದೆ. ಒಂದು ವೇಳೆ ಇದೇ ಪರಿ ಭಾಷೆಯನ್ನು ಮುಸ್ಲಿಂ ಧಾರ್ಮಿಕ ನಾಯಕರ ಪರವಾಗಿ ಬಳಸಿದ್ದರೆ ಭಾಜಪ ರಾಜಕೀಯ ಬಿರುಗಾಳಿಯನ್ನೇ ಎಬ್ಬಿಸುತ್ತಿತ್ತು.

ಯಾವುದೇ ಬಾಂಬ್ ದಾಳಿ ಸಂಭವಿಸಿದ ಕೂಡಲೇ ಮುಸ್ಲಿಂ ಯುವಕರನ್ನು, ಧಾರ್ಮಿಕ ಮುಖಂಡರನ್ನು ಬಂಧಿಸುತ್ತಿದ್ದ ಸರ್ಕಾರದ ಕ್ರಮವನ್ನು ಸಮರ್ಥಿಸುತ್ತ, ಭಯೋತ್ಪಾದಕರನ್ನು ಬಂಧಿಸಿ ವಿಚಾರಣೆ ಗೊಳಪಡಿಸಲು ಸ್ಪಷ್ಟ ಸಾಕ್ಷಿಗಳ ಅವಶ್ಯಕತೆಯಿಲ್ಲ ಎಂದೇ ವಾದಿಸುತ್ತಿದ್ದ ಭಾಜಪ ನಾಯಕರು, ಈಗ "ಭಯೋತ್ಪಾದಕ ಕೃತ್ಯಗಳ ತನಿಖೆಯಲ್ಲಿ ಸ್ಪಷ್ಟ ಸಾಕ್ಷಿ ಮತ್ತು ಪುರಾವೆಗಳು ಅವಶ್ಯವಾಗಿರುತ್ತದೆ" ಎಂದು ಹೇಳುತ್ತಿದ್ದಾರೆ. ಇಲ್ಲಿ ಪಕ್ಷಗಳ ಸಿದ್ಧಾಂತ ಮತ್ತು ರಾಜಕೀಯ ಕಾರಣಗಳಿಗಿಂತಲೂ ಭಯೋತ್ಪಾದನೆಯನ್ನು ನಿಯಂತ್ರಿಸುವುದು ಮುಖ್ಯವಾಗುತ್ತದೆ ಎಂಬ ಅಂಶವನ್ನು ಭಾಜಪ ನಾಯಕರು ಗ್ರಹಿಸಬೇಕಾಗಿದೆ. ಆರೋಪಿಗಳು ಮುಸ್ಲಿಮರಾದರೆ ಯಾವುದೇ ಪುರಾವೆ ಇಲ್ಲದೆ ಬಂಧಿಸಿ, ಹಿಂದುಗಳಾದಲ್ಲಿ ಎಚ್ಚರಿಕೆ ಹೆಜ್ಜೆ ಇಡಿ ಎಂಬ ದ್ವಂದ್ವ ನೀತಿ ಠಕ್ಕುತನದ ಪರಾಕಾಷ್ಠೆಯಾಗುತ್ತದೆ.

ದೆಹಲಿಯ ಜಮಿಯಾ ನಗರದಲ್ಲಿ ನಡೆದ ಮುಖಾಮುಖಿ ದಾಳಿಯಲ್ಲಿ ಇಬ್ಬರು ಮುಸ್ಲಿಂ ಯುವಕರು ಸಾವನ್ನಪ್ಪಿದ ಪ್ರಕರಣ ಇಡೀ ದೇಶದಲ್ಲಿ ವ್ಯಾಪಕವಾದ ಚರ್ಚೆಗೆ ಗುರಿಯಾಗಿತ್ತು. ಈ ಪ್ರಕರಣದಲ್ಲಿ ಪೊಲೀಸರ ಕಾರ್ಯವೈಖರಿಯನ್ನು ಪ್ರಶ್ನಿಸಿದ ಮಾನವ ಹಕ್ಕು ಪ್ರತಿಪಾದಕರನ್ನು, ಪ್ರಗತಿಪರರನ್ನು ಮತ್ತು ಮಾಧ್ಯಮಗಳನ್ನು ದೇಶದ್ರೋಹಿಗಳೆಂದು ಜರೆದ ಭಾಜಪ ನಾಯಕರು, ಪ್ರಕರಣದಲ್ಲಿ ಬಂಧಿತರಾದವರಿಗೆ ವಕಾಲತ್ತು ವಹಿಸಿದ ಜಮಿಯ ಮಿಲಿಯ ವಿಶ್ವವಿದ್ಯಾಲಯದ ಮುಷಿರುಲ್ ಹುಸೇನ್ ಅವರನ್ನೂ ತೀವ್ರವಾಗಿ ಖಂಡಿಸಿತ್ತು. ಇಂತಹ ಅನೇಕ ಪ್ರಕರಣಗಳಲ್ಲಿ ಆರೋಪಿಗಳ ಪರ ವಕಾಲತ್ತು ವಹಿಸಿದ ವಕೀಲರಿಗೆ ದಿಗ್ಬಂಧನವನ್ನೂ ಹಾಕಲಾಗಿತ್ತು. ಆದರೆ ಈಗ ಆರೋಪಿ ಸ್ಥಾನದಲ್ಲಿ ನಿಂತಿರುವ ಸಾಧ್ವಿ ಪ್ರಗ್ಯಾ ಮತ್ತು ಪುರೋಹಿತ್ ಅವರ ಪರವಾಗಿ ವಕಾಲತ್ತು ವಹಿಸಲು ದೇಶದ ಅತ್ಯುತ್ತಮ ನ್ಯಾಯವಾದಿಗಳನ್ನು ನೇಮಿಸಲಾಗುವುದೆಂದು ಭಾಜಪ ಘೋಷಿಸಿದೆ.

ಕಳೆದ ಒಂದು ದಶಕದಿಂದಲೂ ಇಸ್ಲಾಮಿಕ್ ಭಯೋತ್ಪಾದನೆ ಎಂಬ ಘೋಷಣೆಯನ್ನು ತನ್ನ ರಾಜಕೀಯ ಅಸ್ತ್ರವನ್ನಾಗಿ ಮಾಡಿಕೊಂಡಿದ್ದ ಭಾಜಪ ಮಲೆಗಾಂವ್ ತನಿಖೆಯ ಹಿನ್ನೆಲೆಯಲ್ಲಿ ಭಯೋತ್ಪಾದಕತೆಯನ್ನು ಧರ್ಮದೊಂದಿಗೆ ತಳುಕು ಹಾಕಬೇಡಿ ಎಂದು ಹೇಳುತ್ತಿರುವುದು ಸೈದ್ಧಾಂತಿಕ ಶೀರ್ಷಾಸನಕ್ಕೆ ಸ್ಪಷ್ಟ ಉದಾಹರಣೆಯಾಗಿದೆ. ಮುಸ್ಲಿಮರಲ್ಲಿ ಉದಾರವಾದಿಗಳೇ ಇಲ್ಲ, ಮುಸ್ಲಿಮರು ಭಯೋತ್ಪಾದನೆಯನ್ನು ಖಂಡಿಸುವುದಿಲ್ಲ, ಎಲ್ಲ ಮದರಸಾಗಳೂ ಭಯೋತ್ಪಾದನೆಯನ್ನು ಸೃಷ್ಟಿಸುವ ತಾಣಗಳು ಎಂದೆಲ್ಲಾ ಟೀಕಿಸಲಾಗುತ್ತಿತ್ತು. ಆದರೆ ಇತ್ತೀಚೆಗೆ ದೇಶದ ಆರು ಸಾವಿರಕ್ಕೂ ಹೆಚ್ಚು ಮೌಲ್ವಿಗಳು ನವಂಬರ್ 8 2008ರಂದು ಭಯೋತ್ಪಾದನೆಯನ್ನು ಖಂಡಿಸಿ, ಭಯೋತ್ಪಾದಕ ಕೃತ್ಯಗಳ ವಿರುದ್ಧ ಫತ್ವಾ ಹೊರಡಿಸಿರುವುದು, ಮುಂಬೈ ಘಟನೆಯ ನಂತರದಲ್ಲಿ ದೇಶದಾದ್ಯಂತ ಮುಸ್ಲಿಂ ಮೌಲ್ವಿಗಳು ತಮ್ಮ ಭಯೋತ್ಪಾದನೆಯನ್ನು ಖಂಡಿಸಿರುವುದೇ ಅಲ್ಲದೆ ಬಕ್ರಿದ್ ಹಬ್ಬವನ್ನೂ ಸಂಭ್ರಮದಿಂದ ಆಚರಿಸದಿರಲು ನಿರ್ಧರಿಸಿದ್ದು ಭಾಜಪ ಮತ್ತು ಸಂಘಪರಿವಾರದ ಆರೋಪಗಳಿಗೆ ತಕ್ಕ ಉತ್ತರವಾಗಿದೆ. ಆದರೆ ಇದೇ ಸಂದರ್ಭದಲ್ಲಿ ಕರ್ಕರೆಯ ಸಾವನ್ನು ಆತ ಸಾಧ್ವಿ ಪ್ರಗ್ಯಾರನ್ನು ಬಂಧಿಸಿದ್ದಕ್ಕೆ ತೆತ್ತ ದಂಡ ಎಂದು ಹೇಳುವ ತೊಗಾಡಿಯಾ ಮತ್ತು ಸಂಘ ಪರಿವಾರ ವಕ್ತಾರರು ಸಂಘಪರಿವಾರದ ಭಯೋತ್ಪಾದಕ ಕೃತ್ಯಗಳನ್ನು ನೇರವಾಗಿಯೇ ಸಮರ್ಥಿಸಿಕೊಳ್ಳುತ್ತಿರುವುದು ಭಾಜಪಕ್ಕೆ ನುಂಗಲಾರದ ತುತ್ತಾಗಿದೆ.

ಮಲೆಗಾಂವ್ ಪ್ರಕರಣದ ತನಿಖೆಯ ಸಂದರ್ಭದಲ್ಲಿ ಹೇಮಂತ್ ಕರ್ಕರೆ ಅವರನ್ನು ಸಂಘಪರಿವಾರ ಮತ್ತು ಶಿವಸೇನೆಯ ನಾಯಕರು ದೇಶದ್ರೋಹಿ ಎಂದು ಜರೆದಿದ್ದನ್ನು ಜನತೆ ಮರೆಯುವುದಿಲ್ಲ. ದೇಶದಾದ್ಯಂತ ಕರ್ಕರೆಯವರ ವಿರುದ್ಧ ಪ್ರಚಾರಾಂದೋಲನವನ್ನೂ ಹಮ್ಮಿಕೊಳ್ಳಲಾಗಿತ್ತು. ಆದರೆ ಮುಂಬೈನಲ್ಲಿ ಭಯೋತ್ಪಾದಕರ ದಾಳಿಗೆ ತುತ್ತಾದ ಕೂಡಲೇ, ಸಂಘಪರಿವಾರದ ದೃಷ್ಟಿಯಲ್ಲಿ ಕರ್ಕರೆ ಹುತಾತ್ಮರಾಗಿರುವುದು ರಾಜಕೀಯ ಮತ್ತು ಸೈದ್ಧಾಂತಿಕ ಇಬ್ಬಂದಿತನವನ್ನು ತೋರುತ್ತದೆ. ಕರ್ಕರೆಯವರನ್ನು ಕಾಂಗ್ರೆಸ್ ಪಕ್ಷದ ಏಜೆಂಟ್ ಎಂದು ಬಣ್ಣಿಸಿದ್ದ ಗುಜರಾತ್ ಮುಖ್ಯಮಂತ್ರಿಗಳು ದಾಳಿಯ ಸಂದರ್ಭದಲ್ಲೇ ಮುಂಬೈಗೆ ಬಂದು, ಕರ್ಕರೆಯವರ ಪತ್ನಿಗೆ ಸಾಂತ್ವನ ತೋರಲು ಹೋಗಿ ಮುಖಭಂಗ ಅನುಭವಿಸಿದ್ದು ರಾಜಕೀಯ ಅವಕಾಶವಾದದ ಪರಾಕಾಷ್ಠೆ ಎಂದು ಹೇಳಬಹುದು.

ಭಯೋತ್ಪಾದಕ ಕೃತ್ಯಗಳ ತನಿಖೆಯಲ್ಲಿ ಹಲವಾರು ತಪ್ಪುಗಳು ಸಂಭವಿಸಿವೆ. ನೂರಾರು ಅಮಾಯಕರನ್ನು

ಹೈದರಾಬಾದ್ ಮಸೀದಿಯ ಬಳಿ ನಡೆದ ಬಾಂಬ್ ಸ್ಫೋಟದ ಹಿನ್ನೆಲೆಯಲ್ಲಿ ವಿನಾ ಕಾರಣ ಬಂಧನಕ್ಕೊಳಗಾದ 15 ಮುಸ್ಲಿಂ ಯುವಕರನ್ನು ನಿರಪರಾಧಿಗಳೆಂದು ಬಿಡುಗಡೆ ಮಾಡಿ ಅವರಿಗೆ ಪರಿಹಾರ ಘೋಷಿಸಿರುವುದು ತನಿಖಾ ಪ್ರಕ್ರಿಯೆಯ ಲೋಪಗಳಿಗೆ ನಿದರ್ಶನವಾಗಿದೆ. ಇದೇ ರೀತಿಯ ಲೋಪಗಳು ಹಿಂದೂ ಭಯೋತ್ಪಾದಕತೆಯ ಸಂದರ್ಭದಲ್ಲೂ ಸಂಭವಿಸುವ ಸಾಧ್ಯತೆಗಳಿರಬಹುದು. ಸಾಧ್ವಿ ಪ್ರಗ್ಯಾ ಆಗಲೀ, ಪುರೋಹಿತ್ ಆಗಲೀ ಮಲೆಗಾಂವ್ ಸ್ಫೋಟದಲ್ಲಿ ಅಪರಾಧಿಗಳೆಂದು ಅಂತಿಮ ತೀರ್ಪು ನೀಡಲಾಗುವುದಿಲ್ಲ. ಆದರೆ ಪೊಲೀಸ್ ಇಲಾಖೆಯ ದೃಷ್ಟಿಯಲ್ಲಿ ಶಂಕಿತರಾಗಿರುವ ಈ ವ್ಯಕ್ತಿ ಮತ್ತು ಸಂಘಟನೆಗಳು ಹಿಂದೂಗಳೆಂಬ ಒಂದೇ ಕಾರಣಕ್ಕೆ ಸಂಭವಿಸಿರುವ ಅವಘಡವನ್ನೇ ನಿರಾಕರಿಸುವುದು ಪಲಾಯನವಾದವಾಗುತ್ತದೆ. ಹಿಂದೂ ಸಂಘಟನೆಗಳು ರಾಷ್ಟ್ರೀಯತಾ ಭಾವನೆಯಿಂದ ಹೋರಾಟದಲ್ಲಿ ತೊಡಗಿವೆ, ಹಾಗಾಗಿ ಹಿಂದೂಗಳು ಎಂದಿಗೂ ಭಯೋತ್ಪಾದಕರಾಗಲು ಸಾಧ್ಯವಿಲ್ಲ ಎಂಬ ಸಂಘ ಪರಿವಾರ–ಭಾಜಪದ ವಾದ ಹುರುಳಿಲ್ಲದ್ದು.

ಕೇವಲ ಸಂಶಯದ ಮೇಲೆ ಬಂಧಿಸಿ, ಚಿತ್ರಹಿಂಸೆಗೊಳಪಡಿಸಿ ನಂತರ ನಿರಪರಾಧಿಗಳೆಂದು ಬಿಡುಗಡೆ ಮಾಡಲಾಗಿದೆ. ಹೈದರಾಬಾದ್ ಮಸೀದಿಯ ಬಳಿ ನಡೆದ ಬಾಂಬ್ ಸ್ಫೋಟದ ಹಿನ್ನೆಲೆಯಲ್ಲಿ ವಿನಾಕಾರಣ ಬಂಧನಕ್ಕೊಳಗಾದ 15 ಮುಸ್ಲಿಂ ಯುವಕರನ್ನು ನಿರಪರಾಧಿಗಳೆಂದು ಬಿಡುಗಡೆ ಮಾಡಿ ಅವರಿಗೆ ಪರಿಹಾರ ಘೋಷಿಸಿರುವುದು ತನಿಖಾ ಪ್ರಕ್ರಿಯೆಯ ಲೋಪಗಳಿಗೆ ನಿದರ್ಶನವಾಗಿದೆ. ಇದೇ ರೀತಿಯ ಲೋಪಗಳು ಹಿಂದೂ ಭಯೋತ್ಪಾದಕತೆಯ ಸಂದರ್ಭದಲ್ಲೂ ಸಂಭವಿಸುವ ಸಾಧ್ಯತೆಗಳಿರಬಹುದು. ಸಾಧ್ವಿ ಪ್ರಗ್ಯಾ ಆಗಲೀ, ಪುರೋಹಿತ್ ಆಗಲೀ ಮಲೆಗಾಂವ್ ಸ್ಫೋಟದಲ್ಲಿ ಅಪರಾಧಿಗಳೆಂದು ಅಂತಿಮ ತೀರ್ಪು ನೀಡಲಾಗುವುದಿಲ್ಲ. ಆದರೆ ಪೊಲೀಸ್ ಇಲಾಖೆಯ ದೃಷ್ಟಿಯಲ್ಲಿ ಶಂಕಿತರಾಗಿರುವ ಈ ವ್ಯಕ್ತಿ ಮತ್ತು ಸಂಘಟನೆಗಳು ಹಿಂದೂಗಳೆಂಬ ಒಂದೇ ಕಾರಣಕ್ಕೆ ಸಂಭವಿಸಿರುವ ಅವಘಡವನ್ನೇ ನಿರಾಕರಿಸುವುದು ಪಲಾಯನವಾದವಾಗುತ್ತದೆ. ಹಿಂದೂ ಸಂಘಟನೆಗಳು ರಾಷ್ಟ್ರೀಯತಾ ಭಾವನೆಯಿಂದ ಹೋರಾಟದಲ್ಲಿ ತೊಡಗಿವೆ, ಹಾಗಾಗಿ ಹಿಂದೂಗಳು ಎಂದಿಗೂ ಭಯೋತ್ಪಾದಕರಾಗಲು ಸಾಧ್ಯವಿಲ್ಲ ಎಂಬ ಸಂಘ ಪರಿವಾರ-ಭಾಜಪದ ವಾದ ಹುರುಳಿಲ್ಲದ್ದು. ಜಗತ್ತಿನ ಅತ್ಯಂತ ಅಪಾಯಕಾರಿ ಭಯೋತ್ಪಾದಕ ಸಂಘಟನೆ, ಎಲ್.ಟಿ.ಟಿ.ಇ, ಮತ್ತು ಇತ್ತೀಚಿನ ಅಸ್ಸಾಂ ಸರಣಿಸ್ಫೋಟಗಳಿಗೆ ಕಾರಣವಾದ ಬೋಡೋ ಸಂಘಟನೆ, ಧಾರ್ಮಿಕ ದೃಷ್ಟಿಯಿಂದ ಹಿಂದೂ ಸಂಘಟನೆಗಳಲ್ಲದೆ ಹೋದರೂ, ಹಿಂದೂಗಳ ನೇತೃತ್ವದಲ್ಲೇ ಮುನ್ನಡೆಯುತ್ತಿವೆ. ಜಾಗತಿಕ ಇತಿಹಾಸದಲ್ಲಿ ಯಾವುದೇ ಧರ್ಮವೂ ಈ ಅಪವಾದದಿಂದ ಹೊರತಾಗಿಲ್ಲ. ಈ ಅಂಶಗಳನ್ನು ಭಾಜಪ ಗಮನಿಸಬೇಕಾಗಿದೆ.

ಭಯೋತ್ಪಾದಕ ಕೃತ್ಯಗಳಿಗೆ ಧಾರ್ಮಿಕ ದೃಷ್ಟಿಕೋನವಿರುವಂತೆಯೇ, ಸೈದ್ಧಾಂತಿಕ ಸ್ಪಷ್ಟತೆಯೂ ಇರುತ್ತದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ದೈತ್ಯಾಕಾರವಾಗಿ ಬೆಳೆದು ನಿಂತಿರುವ ಈ ಪಿಡುಗಿಗೆ ಕೆಲವು ಮುಸ್ಲಿಂ ಯುವಕರಂತೆ, ಹಿಂದೂ ಯುವಕರೂ ಬಲಿಯಾಗಿದ್ದರೆ ಅಚ್ಚರಿ ಪಡಬೇಕಿಲ್ಲ. 1980 ರಿಂದೀಚೆಗೆ ಭಾರತದಲ್ಲಿ ನಡೆದಿರುವ ರಾಜಕೀಯ ಬೆಳವಣಿಗೆಗಳು ದೇಶವನ್ನು ಹೆಚ್ಚು ಹಿಂಸಾತ್ಮಕ ಮಾರ್ಗಕ್ಕೆ ಕೊಂಡೊಯ್ದಿರುವುದು ಅಲ್ಲಗಳೆಯಲಾಗದ ಸತ್ಯ. ಖಲಿಸ್ಥಾನ್ ಚಳುವಳಿ, ಕಾಶ್ಮೀರದಲ್ಲಿನ ಉಗ್ರವಾದ, ಅಯೋಧ್ಯಾ ಗಲಭೆ, ಮುಂಬೈ ಸ್ಫೋಟ, ಗೋದ್ರಾ, ಗುಜರಾತ್ ಹತ್ಯಾಕಾಂಡ ಇವೆಲ್ಲವೂ ಭಾರತದ ಇತಿಹಾಸದಲ್ಲಿ ಕಪ್ಪುಚುಕ್ಕೆಗಳು. ಹಿಂಸಾತ್ಮಕ ಸಮಾಜದ ನಿರ್ಮಾಣದಲ್ಲಿ ಈ ಘಟನೆಗಳು ಮೈಲಿಗಲ್ಲುಗಳು. ಈ ಮೈಲಿಗಲ್ಲುಗಳನ್ನು ಗಟ್ಟಿಯಾಗಿ ನೆಡುವ ಪ್ರಕ್ರಿಯೆಯಲ್ಲಿ ಪ್ರಮುಖ ರಾಜಕೀಯ ಪಕ್ಷಗಳು ಮತ್ತು ಧಾರ್ಮಿಕ ಸಂಘಟನೆಗಳು ತಮ್ಮದೇ ಆದ ಪಾತ್ರ ವಹಿಸಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಹಿಂದೂಗಳು ಅಹಿಂಸಾವಾದಿಗಳು ಹಾಗಾಗಿ ಭಯೋತ್ಪಾದಕರಾಗುವುದು ಸಾಧ್ಯವಿಲ್ಲ ಎಂಬ ಹುರುಳಿಲ್ಲದ ಪ್ರತಿಪಾದನೆಗಳು ಸತ್ಯಾಂಶವನ್ನು ಮರೆಮಾಚಲಾರದು. ಧರ್ಮಗಳು ಅಹಿಂಸೆಯನ್ನು ಬೋಧಿಸಿದರೂ ಧಾರ್ಮಿಕ ನಂಬಿಕೆಗಳು ಮತ್ತು ಅದರಿಂದ ಉದ್ಭವಿಸುವ ಧರ್ಮೋನ್ಮಾದಗಳು ಹಿಂಸಾತ್ಮಕ ಮಾರ್ಗವನ್ನೇ ಕ್ರಮಿಸುವಂತೆ ಮಾಡುತ್ತವೆ. ಧರ್ಮದ ಉಳಿವಿಗಾಗಿಯೇ ಯುದ್ಧವನ್ನು ಒಂದು ಮಾರ್ಗವನ್ನಾಗಿ ಬಳಸಿರುವುದನ್ನು ನಮ್ಮ ಪೌರಾಣಿಕ ಕಥೆಗಳಲ್ಲಿ ಕಾಣಬಹುದು.



ಗುಜರಾತ್‌ನ ಮುಖ್ಯಮಂತ್ರಿ ನರೇಂದ್ರ ಮೋದಿ

ಭಯೋತ್ಪಾದಕ ಕೃತ್ಯಗಳಿಗೆ ಧಾರ್ಮಿಕ ದೃಷ್ಟಿಕೋನವಿರುವಂತೆಯೇ, ಸೈದ್ಧಾಂತಿಕ ಸ್ಪಷ್ಟತೆಯೂ ಇರುತ್ತದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ದೈತ್ಯಾಕಾರವಾಗಿ ಬೆಳೆದು ನಿಂತಿರುವ ಈ ಪಿಡುಗಿಗೆ ಕೆಲವು ಮುಸ್ಲಿಂ ಯುವಕರಂತೆ, ಹಿಂದೂ ಯುವಕರೂ ಬಲಿಯಾಗಿದ್ದರೆ ಅಚ್ಚರಿ ಪಡಬೇಕಿಲ್ಲ. 1980ರಿಂದೀಚೆಗೆ ಭಾರತದಲ್ಲಿ ನಡೆದಿರುವ ರಾಜಕೀಯ ಬೆಳವಣಿಗೆಗಳು ದೇಶವನ್ನು ಹೆಚ್ಚು ಹಿಂಸಾತ್ಮಕ ಮಾರ್ಗಕ್ಕೆ ಕೊಂಡೊಯ್ದಿರುವುದು ಸತ್ಯ. ಕಾಶ್ಮೀರದಲ್ಲಿನ ಉಗ್ರವಾದ, ಅಯೋಧ್ಯಾ ಗಲಭೆ, ಮುಂಬೈ ಸ್ಫೋಟ, ಗುಜರಾತ್ ಹತ್ಯಾಕಾಂಡ ಇವೆಲ್ಲವೂ ಭಾರತದ ಇತಿಹಾಸದಲ್ಲಿ ಕಪ್ಪುಚುಕ್ಕೆಗಳು. ಹಿಂಸಾತ್ಮಕ ಸಮಾಜದ ನಿರ್ಮಾಣದಲ್ಲಿ ಈ ಘಟನೆಗಳು ಮೈಲಿಗಲ್ಲುಗಳು. ಈ ಮೈಲಿಗಲ್ಲುಗಳನ್ನು ಗಟ್ಟಿಯಾಗಿ ನೆಡುವ ಪ್ರಕ್ರಿಯೆಯಲ್ಲಿ ಪ್ರಮುಖ ರಾಜಕೀಯ ಪಕ್ಷಗಳು ಮತ್ತು ಧಾರ್ಮಿಕ ಸಂಘಟನೆಗಳು ತಮ್ಮದೇ ಆದ ಪಾತ್ರ ವಹಿಸಿರುವುದನ್ನು ಅಲ್ಲಗಳೆಯಲಾಗುವುದಿಲ್ಲ.

ಹಿಂಸೆಯನ್ನು ನಾವು ಯಾವ ಅರ್ಥದಲ್ಲಿ ವ್ಯಾಖ್ಯಾನಿಸುತ್ತೇವೆ ಎಂಬುದರ ಮೇಲೆ ಈ ಪ್ರತಿಪಾದನೆಗಳು ನಿರ್ಧರಿಸಲ್ಪಡುತ್ತದೆ. ಇಸ್ಲಾಂ ಧರ್ಮದಲ್ಲಿ ಹಿಂಸೆಯನ್ನು ಬೋಧಿಸದಿದ್ದರೂ, ವಿಶ್ವದಾದ್ಯಂತ ವಿವಿಧ ದೇಶಗಳಲ್ಲಿ ಮುಸ್ಲಿಂ ಯುವಕ-ಯುವತಿಯರು ಭಯೋತ್ಪಾದಕರ ದಂಡನ್ನು ತಂಡೋಪತಂಡವಾಗಿ ಸೇರಿಕೊಳ್ಳುತ್ತಿರುವುದು ಅಲ್ಲಗಳೆಯಲಾಗದ ಸತ್ಯ. ಇಡೀ ಸಮುದಾಯವನ್ನು ಸಂಶಯಾಸ್ಪದ ದೃಷ್ಟಿಯಿಂದ ನೋಡುವುದರ ಬದಲು, ಸಮುದಾಯದ ಆಂತರಿಕ ಗೊಂದಲ ಮತ್ತು ಸಂಘರ್ಷಗಳನ್ನು ಗ್ರಹಿಸಿ, ಅಹಿಂಸಾ ಮಾರ್ಗವನ್ನು ಅನುಸರಿಸುತ್ತಿರುವ ಯುವಜನತೆಯನ್ನು ಸರಿದಾರಿಗೆ ತರುವುದು ಇಸ್ಲಾಂ ಧಾರ್ಮಿಕ ನಾಯಕರ ನೈತಿಕ ಹೊಣೆಗಾರಿಕೆಯಾಗಿದೆ. ಹಾಗೆಯೇ ಸಾಂಸ್ಕೃತಿಕ ರಾಷ್ಟ್ರೀಯತೆ, ಭಾರತೀಯತೆ, ಹಿಂದುತ್ವ ಮುಂತಾದ ಉನ್ಮಾದಕರ ಘೋಷಣೆಗಳ ಮೂಲಕ ಹಿಂದೂ ಯುವಕರನ್ನು ಹಿಂಸಾತ್ಮಕ ಮಾರ್ಗಕ್ಕೆ ಕೊಂಡೊಯ್ಯುವ ಹಿಂದೂ ಧಾರ್ಮಿಕ ಸಂಘಟನೆಗಳೂ ಎಚ್ಚೆತ್ತುಕೊಳ್ಳುವುದು ಅವಶ್ಯವಾಗಿದೆ. ಬಂದೂಕು ಹಿಡಿದ ಕೈಗಳು ಮನಸ್ಸಿನ ನಿಗ್ರಹದಲ್ಲಿರುವುದಿಲ್ಲ ಎಂಬ ಸೂಕ್ಷ್ಮ ಅಂಶವನ್ನು ಈ ಸಂಘಟನೆಗಳು ಗ್ರಹಿಸಬೇಕಿದೆ. ಹಂತಕನಿಗೆ ಹತ್ಯೆಯೇ ಧ್ಯೇಯವಾಗುವುದೇ ಹೊರತು, ಹತ್ಯೆಯಾದ ವ್ಯಕ್ತಿಯ ಅಸ್ಮಿತೆಗಳಲ್ಲ. ಮುಂಬೈ ದಾಳಿ ಮತ್ತು ಮಲೆಗಾಂವ್ ಸ್ಫೋಟಗಳು ಈ ಅಂಶವನ್ನು ಸ್ಪಷ್ಟವಾಗಿ ನಿರೂಪಿಸಿವೆ.

ಭಯೋತ್ಪಾದಕರ ಬಾಂಬುಗಳ ದಾಳಿಯಿಂದ ಚಿಮ್ಮಿದ ಮನುಕುಲದ ನೆತ್ತರು ರಾಜಕೀಯ ಚದುರಂಗದ ಚೌಕಗಳನ್ನು ಅಲಂಕರಿಸುವುದು ನಾಗರಿಕತೆಯ ಲಕ್ಷಣವಲ್ಲ. ಭಯೋತ್ಪಾದನೆಯನ್ನು ಹತ್ತಿಕ್ಕುವಲ್ಲಿ ಸಾಮಾನ್ಯ ಜನತೆಯನ್ನೂ ಒಳಗೊಂಡ ಕಾರ್ಯತಂತ್ರವನ್ನು ರೂಪಿಸುವತ್ತ ಮುಖ್ಯಧಾರೆಯ ರಾಜಕೀಯ ಪಕ್ಷಗಳು ಮುಂದಾಗುವುದು ಇಂದಿನ ಅಗತ್ಯತೆಯಾಗಿದೆ. ಈ ನಿಟ್ಟಿನಲ್ಲಿ ಕಂಟಕವಾಗಿ ಎದುರಾಗುವ ಮೂಲಭೂತವಾದಿ ಸಂಘಟನೆಗಳನ್ನು ಬದಿಗೊತ್ತಿ ಭಾರತದ ಪ್ರಜಾತಂತ್ರವನ್ನು ಉಳಿಸುವುದು ಕಾಂಗ್ರೆಸ್ ಮತ್ತು ಭಾಜಪದಂತಹ ಪಕ್ಷಗಳ ಹೊಣೆಗಾರಿಕೆಯೂ ಆಗಿದೆ. ತಮ್ಮ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ನಡುವೆಯೂ ಐಕ್ಯತೆಯನ್ನು ಸಾಧಿಸಿ ದೇಶದ ದುಡಿಯುವ ವರ್ಗಗಳ ಏಳಿಗೆಗಾಗಿ ಶ್ರಮಿಸುವ ನಿಟ್ಟಿನಲ್ಲಿ ರಾಜಕೀಯ ಪಕ್ಷಗಳು ಕಾರ್ಯತತ್ಪರರಾಗಬೇಕಿದೆ. □

ಬೆಳಗು

ಚಿಲಿಪಿಲಿಯುಲಿಗೆ
ಮೈಮುರಿದೆದ್ದು
ಕಣ್ಣಿಟ್ಟ ಆತ
ಎಳೆಕಿರಣಗಳ ಬೆರಳು
ಸಿಕ್ಕಿದ್ದೆಲ್ಲದ ಸವರಿ
ಬೆಳಗಾಗಿದೆ ಈಗ.

○ ದಯಾನಂದ

ಭಾರತ-ಪಾಕಿಸ್ತಾನ ವಿಭಜನೆಯಾದ ಮೇಲೆ ಪಾಕಿಸ್ತಾನಕ್ಕೆ ೫೦ಕೋಟಿ ರೂಪಾಯಿ ನೆರವಿನ ಹಣ ನೀಡಲು ಗಾಂಧೀಜಿ ಒತ್ತಾಯಿಸಿದ್ದರಿಂದ, ಹಿಂದೂ-ಮುಸ್ಲಿಂ ಮತ್ತಿತರರು ಒಂದುಗೂಡಿ ಹೋಗಬೇಕೆಂಬ ಗಾಂಧಿ ಕರೆಯನ್ನು ತಪ್ಪಾಗಿ ಗ್ರಹಿಸಿದ ಹಿಂದೂವಾದಿಗಳು ಗಾಂಧೀಜಿಯ ಕೊಲೆಗೆ ಸಂಚು ರೂಪಿಸಿದರು. ಗೋಡ್ಸೆ ಮತ್ತವನ ಗೆಳೆಯರು ಅದನ್ನು ಜಾರಿಗೆ ತಂದರು. ಇದೇ ನಮ್ಮ ಉಪಖಂಡದ ಉಗ್ರವಾದದ ಮೊದಲ ಘಟನೆ. ಪ್ರಜಾಪ್ರಭುತ್ವದಲ್ಲಿ ಭಿನ್ನ ವಿಚಾರಗಳನ್ನು ಅಹಿಂಸಾತ್ಮಕವಾಗಿ ಎದುರಿಸಬೇಕೆ ಹೊರತು ಹಿಂಸೆಯಿಂದ ಅಲ್ಲ. ಹಿಂಸೆ ಪ್ರತಿ ಹಿಂಸೆಯನ್ನು ಸೃಷ್ಟಿಸುತ್ತದೆ. ಕಟ್ಟರ್ ಹಿಂದೂವಾದ ಬೆಳೆಸಿದರೆ ಕಟ್ಟರ್ ಮುಸ್ಲಿಂವಾದ ಬೆಳೆಯುತ್ತದೆ. ಪ್ರತಿ ಧರ್ಮೀಯರೂ ಉದಾರವಾದದ ಕಡೆ ಸಾಗಿದರೆ ಭಾರತ ಉಳಿಯುತ್ತದೆ, ಇಲ್ಲದಿದ್ದರೆ ಅನ್ಯಾಕ್ರಮಣಕ್ಕೆ ಒಳಗಾಗುತ್ತದೆ.

ಒಮ್ಮೆ ಹೊರಳಿ ನೋಡೋಣವೇ?

ಪ್ರತಿ ಘಟನೆಯ ಹಿಂದೆ ಚರಿತ್ರೆಯಿರುತ್ತದೆ. ಆ ಚರಿತ್ರೆಯಿಂದ ನಾವು ಪಾಠ ಕಲಿಯಬೇಕು. ಭಾರತ ವಿಭಜನೆಯಾಗುವ ಪೂರ್ವದಲ್ಲಿ ಸ್ವಾತಂತ್ರ್ಯಕ್ಕಾಗಿ ಎಲ್ಲ ಜನವರ್ಗದ ಭಾರತೀಯರೂ ಕೂಡಿ ಹೋರಾಡಿದ್ದರು. ಬ್ರಿಟಿಷರ ಒಡೆದಾಳುವ ನೀತಿಯಿಂದ ನಾವು ನಾವೇ ಗುದ್ದಾಡಿಕೊಂಡು ಒಂದಿದ್ದವರು ಎರಡಾದೆವು. ಎರಡಿದ್ದವರು ಮೂರಾದೆವು. ಭಾರತ-ಪಾಕಿಸ್ತಾನ ವಿಭಜನೆ ಪೂರ್ವದಲ್ಲಿ ಮತ್ತು ನಂತರ 10 ಲಕ್ಷದಷ್ಟು ಜನ ಕೋಮುಗಲಭೆಗೆ ತುತ್ತಾದರು. ಧರ್ಮದ ಹೆಸರಿನಲ್ಲಿಯೂ ದೇಶ ಒಂದಾಗಿ ಉಳಿಯದೆಂಬುದಕ್ಕೆ ಪಾಕಿಸ್ತಾನವೇ ಉದಾಹರಣೆ. ಬಹುಭಾಷೆ, ಬಹು ಸಂಸ್ಕೃತಿಯ ಜನ ಸೌಹಾರ್ದದಿಂದ ಬಾಳಿ ಬದುಕಿದಾಗಲೇ ದೇಶಗಳು ಒಂದಾಗಿ ಉಳಿಯಲು ಸಾಧ್ಯ.

ಆಯಾ ರಾಜ್ಯದ ಭಾಷೆ, ಸಂಸ್ಕೃತಿ, ಪಕ್ಷಗಳನ್ನು ಒಪ್ಪಿಕೊಳ್ಳಬೇಕು. ಪಂಜಾಬಿನ ಜನ ಶಾಂತಿಪ್ರಿಯರು. ಅವರ ಅಕಾಲಿದಳವನ್ನು ಸರಿಯಾಗಿ ಆಡಳಿತ ಮಾಡಲು ಬಿಡದೇ ಇಂದಿರಾಗಾಂಧಿ ಭಿಂದ್ರನ್‌ವಾಲೆ ಎಂಬ ಉಗ್ರನನ್ನು ಬೆಳೆಸಿದಳು. ಆತ ಮತ್ತು ಆತನ ಸಹಚರರು ಪಂಜಾಬಿನ ಸ್ವರ್ಣಮಂದಿರದಲ್ಲಿ ಅಡಗಿದರು. ಅವರನ್ನು ಹೊಡೆದೋಡಿಸಲು ಬ್ಲೂಸ್ಟಾರ್ ಕಾರ್ಯಾಚರಣೆ ನಡೆಸಲಾಯ್ತು. ಇದರಿಂದ ರೊಚ್ಚಿಗೆದ್ದ ಸಿಖ್ಖರು ಸೈನ್ಯದಿಂದ ಹೊರ ಬಂದರು. ಅನೇಕರು ಉಗ್ರವಾದಿಗಳಾಗಿ ಖಾಲಿಸ್ತಾನ ಬೇಡಿಕೆಯಿಟ್ಟರು. ಇಂದಿರಾಗಾಂಧಿಯನ್ನು ಕಾವಲು ಪಡೆಯವರೇ ಕೊಂದರು. ನಂತರ ಸಿಖ್ಖರ ಮಾರಣ ಹೋಮ ನಡೆಯಿತು. ನಂತರ ಬಂದ ರಾಜೀವ್ ಗಾಂಧಿಯವರು ಬಾಬ್ರಿ ಮಸೀದಿಯ ಬಾಗಿಲು ತೆಗೆಸಿದರು. ಯಥಾಸ್ಥಿತಿಯನ್ನು ಕಾಪಾಡಿಕೊಂಡಿದ್ದರೆ ತೊಂದರೆಯಿರಲಿಲ್ಲ.

ಸಂಘಪರಿವಾರದವರು ಪರಿಸ್ಥಿತಿಯ ಲಾಭಪಡೆದು ಮುಂದೇನಾಗುವದೆಂಬುದನ್ನು ಸರಿಯಾಗಿ ಆಲೋಚಿಸದೆ ಬಾಬ್ರಿ ಮಸೀದಿಯನ್ನು ಕೆಡವಿದರು. ಅದಕ್ಕೆ ಪ್ರತಿಕ್ರಿಯೆಯಾಗಿ ಪಾಕಿಸ್ತಾನದಲ್ಲಿ ಗುಡಿ ಗುಂಡಾರ ನಾಶ, ಹಿಂದೂಗಳ ಮೇಲೆ ದೌರ್ಜನ್ಯ ನಡೆಯಿತು. ಸ್ವರ್ಣಮಂದಿರದಲ್ಲಿ ಸೇನೆ ಪ್ರವೇಶ ಮಾಡಿದ್ದರಿಂದ ಸಿಖ್ಖರು ಉಗ್ರ ಗಾಮಿಗಳಾದಂತೆ ಬಾಬ್ರಿ ಮಸೀದಿ ಕೆಡವಿದ್ದರಿಂದ ಮುಸ್ಲಿಮರಲ್ಲಿ ಕೆಲವರು ಉಗ್ರಗಾಮಿಗಳಾದರು. ಮುಂಬೈ ಘಟನೆಗೆ ಇದೇ ಮೂಲ ಕಾರಣ. ಅಲ್ಲದೆ ಅಮೇರಿಕ ಬೇರೆ ರಾಷ್ಟ್ರಗಳ ಸಾರ್ವಭೌಮತೆ ಮನ್ನಿಸದೆ ದಾಳಿ ಮಾಡಿದ್ದು. ವಿಯಟ್ನಾಂ, ಅಫಘಾನಿಸ್ತಾನ, ಇರಾಕ್, ಮುಂತಾದ ದೇಶಗಳ ಮೇಲೆ ಅಮೇರಿಕ ಮಾಡಿದ ದಾಳಿಯೂ ಉಗ್ರವಾದಕ್ಕೆ ನೀರೆರೆದಂತಾಯ್ತು.

ಭಾರತ-ಪಾಕಿಸ್ತಾನ ವಿಭಜನೆಯಾದ ಮೇಲೆ ಪಾಕಿಸ್ತಾನಕ್ಕೆ 50 ಕೋಟಿ ರೂಪಾಯಿ ನೆರವಿನ ಹಣ ನೀಡಲು ಗಾಂಧೀಜಿ ಒತ್ತಾಯಿಸಿದ್ದರಿಂದ, ಹಿಂದೂ-ಮುಸ್ಲಿಂ ಮತ್ತಿತರರು ಒಂದುಗೂಡಿ ಹೋಗಬೇಕೆಂಬ ಗಾಂಧಿ ಕರೆಯನ್ನು ತಪ್ಪಾಗಿ ಗ್ರಹಿಸಿದ ಹಿಂದೂವಾದಿಗಳು ಗಾಂಧೀಜಿಯ ಕೊಲೆಗೆ ಸಂಚು ರೂಪಿಸಿದರು. ಗೋಡ್ಸೆ ಮತ್ತವನ ಗೆಳೆಯರು ಅದನ್ನು ಜಾರಿಗೆ ತಂದರು. ಇದೇ ನಮ್ಮ ಉಪಖಂಡದ ಉಗ್ರವಾದದ ಮೊದಲ ಘಟನೆ. ಪ್ರಜಾಪ್ರಭುತ್ವದಲ್ಲಿ ಭಿನ್ನ ವಿಚಾರಗಳನ್ನು ಅಹಿಂಸಾತ್ಮಕವಾಗಿ ಎದುರಿಸಬೇಕೆ ಹೊರತು ಹಿಂಸೆಯಿಂದಲ್ಲ. ಹಿಂಸೆ ಪ್ರತಿ ಹಿಂಸೆಯನ್ನು ಸೃಷ್ಟಿಸುತ್ತದೆ. ಕಟ್ಟರ್ ಹಿಂದೂ ವಾದ ಬೆಳೆಸಿದರೆ ಕಟ್ಟರ್ ಮುಸ್ಲಿಂವಾದ ಬೆಳೆಯುತ್ತದೆ. ಪ್ರತಿ ಧರ್ಮೀಯರೂ ಉದಾರವಾದದ ಕಡೆ ಸಾಗಿದರೆ ಭಾರತ ಉಳಿಯುತ್ತದೆ, ಇಲ್ಲದಿದ್ದರೆ ಅನ್ಯಾಕ್ರಮಣಕ್ಕೆ ಒಳಗಾಗುತ್ತದೆ.

ಈಗ ರಾಷ್ಟ್ರಕ್ಕೆ ಅಗತ್ಯವಾಗಿರುವುದು ಅನೇಕತೆಯನ್ನು ಒಪ್ಪುವ ಏಕತೆ. ಹೊರಗಿನವರು ದಾಳಿ ಮಾಡಿದಾಗ ಭಾರತ ಯಾವಾಗಲೂ ಒಂದಾಗುತ್ತದೆ. ಪಾಕಿಸ್ತಾನ ಸಾವಿರ ವರ್ಷ ಯುದ್ಧ ಮಾಡಿದರೂ ಭಾರತವನ್ನು ಗೆಲ್ಲಲು ಸಾಧ್ಯವಿಲ್ಲ. ಅದು ತನ್ನ ಮಿತಿಯನ್ನು ಅರಿಯಬೇಕು. ಭಾರತ-ಪಾಕಿಸ್ತಾನಗಳಲ್ಲಿ ಕೋಟಿಕೋಟಿ ಬಡವರಿದ್ದಾರೆ. ಅವರಿಗೆ ಉದ್ಯೋಗ ಸೃಷ್ಟಿಗಾಗಿ ಹೆಣಗಬೇಕಾಗಿದೆ. ಅದರ ಬದಲು ಯುದ್ಧ ಸೃಷ್ಟಿಗಾಗಿ ಪಾಕಿಸ್ತಾನ ಹೆಣಗುತ್ತಿರುವುದು ಶೋಚನೀಯ.

ಭಾರತ-ಪಾಕಿಸ್ತಾನಗಳು ಎರಡೂ ಪ್ರಜಾ ಪ್ರಭುತ್ವವುಳ್ಳ ರಾಷ್ಟ್ರಗಳು. ತಮ್ಮ ಸಾರ್ವಭೌಮತೆ ಕಾಪಾಡಿಕೊಳ್ಳಬೇಕು. ಸೇನೆಯನ್ನು ಹೊರತುಪಡಿಸಿ ಅನ್ಯಶಕ್ತಿ ಉದಯಿಸದಂತೆ ನೋಡಿಕೊಳ್ಳಬೇಕು. ಸ್ನೇಹ -ಸೌಹಾರ್ದತೆಯಿಂದ ಬಾಳಿ ಪ್ರಗತಿಯ ಕಡೆಸಾಗೋಣ. ಸೋದರರಾಗಿದ್ದ ನಾವು ಸೋದರರಾಗಿಯೇ ಮುಂದುವರಿಯೋಣ. ಕೋಮುವಾದ ಉಗ್ರವಾದದ ವಿರುದ್ಧ ಜನರನ್ನು ಎತ್ತಿಕಟ್ಟೋಣ.

❍ **ಅಲ್ಲಮ ಪ್ರಭು ಬೆಟ್ಟದೂರು**

ಪೂನಾ ಒಪ್ಪಂದ: ಒಂದು ತಾತ್ವಿಕ ನೋಟ

ಡಾ. ಕಾ. ವೆಂ. ಶ್ರೀನಿವಾಸಮೂರ್ತಿ

ಪೂನಾ ಒಪ್ಪಂದವು ಮಹಾತ್ಮ ಗಾಂಧಿಯವರ ಪ್ರತಿನಿಧಿ ಮದನಮೋಹನ ಮಾಳವೀಯ ಮತ್ತು ಅಂಬೇಡ್ಕರ್‌ರವರ ನಡುವಿನ ಒಪ್ಪಂದವಾಗಿದೆ. ವಾಸ್ತವವಾಗಿ ಹಿಂದೂ ಸವರ್ಣೀಯರು ಹಾಗೂ ದಲಿತ ಪ್ರತಿನಿಧಿಗಳ ನಡುವಿನ ಒಪ್ಪಂದವಾಗಿದೆ. ಇದು ಆದದ್ದು ೧೯೩೨ ರಂದು; ಪೂನಾದ ಯರವಾಡ ಸೆರೆಮನೆಯಲ್ಲಿ. ಭಾರತಕ್ಕೆ ಸ್ವಾತಂತ್ರ್ಯವನ್ನು ನಿಡಬೇಕೆಂದು ಚಿಂತಿಸಿದ ಬ್ರಿಟನ್ ಸರಕಾರವು ಭಾರತೀಯ ಪ್ರತಿನಿಧಿಗಳನ್ನು ಲಂಡನ್ನಿನ ದುಂಡು ಮೇಜಿನ ಸಭೆಗೆ ಆಹ್ವಾನಿಸಿತು. ಇದರಲ್ಲಿ ಗಾಂಧಿ, ಅಂಬೇಡ್ಕರ್, ನೆಹರೂ, ಮದನ ಮೋಹನ ಮಾಳವೀಯ, ರಾಜಗೋಪಾಲಚಾರಿ ಮುಂತಾದವರು ಇದ್ದರು. ಈ ಸಭೆಯಲ್ಲಿ ದಲಿತ ವರ್ಗವನ್ನು ನಿಜಕ್ಕೂ ಪ್ರತಿನಿಧಿಸುತ್ತಿದ್ದವರು ಅಂಬೇಡ್ಕರ್ ಮಾತ್ರ ಆಗಿದ್ದರು. ಈ ಹಿನ್ನೆಲೆಯಲ್ಲಿ ಸಹಜವಾಗಿಯೇ ಅಂಬೇಡ್ಕರ್ ಮತ್ತು ಇತರರ ನಡುವೆ ತಾತ್ವಿಕ ಸಂಘರ್ಷ ಏರ್ಪಟ್ಟಿತ್ತು.

ಪೂನಾ ಒಪ್ಪಂದವು ಮಹಾತ್ಮ ಗಾಂಧೀಯವರ ಪ್ರತಿನಿಧಿ ಮದನ ಮೋಹನ ಮಾಳವೀಯ ಮತ್ತು ಅಂಬೇಡ್ಕರ್‌ರವರ ನಡುವಿನ ಒಪ್ಪಂದವಾಗಿದೆ. ಇದು ವಾಸ್ತವವಾಗಿ ಹಿಂದೂ ಸವರ್ಣೀಯರು ಹಾಗೂ ದಲಿತ ಪ್ರತಿನಿಧಿಗಳ ನಡುವಿನ ಒಪ್ಪಂದವಾಗಿದೆ. ಇದು ಆದದ್ದು ಸೆಪ್ಟೆಂಬರ್ ೨೪, ೧೯೩೨ ರಂದು; ಪೂನಾದ ಯರವಾಡ ಸೆರೆಮನೆಯಲ್ಲಿ.

ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡಬೇಕೆಂದು ಚಿಂತಿಸಿದ ಬ್ರಿಟನ್ ಸರಕಾರವು ಭಾರತೀಯ ವಿವಿಧ ವರ್ಗಗಳ ಪ್ರತಿನಿಧಿಗಳನ್ನು ಲಂಡನ್ನಿನ ದುಂಡು ಮೇಜಿನ ಸಭೆಗೆ ಆಹ್ವಾನಿಸಿತು. ಈ ಸಭೆ ಎರಡು ಭಾರಿ ನಡೆಯಿತು. ಇದರಲ್ಲಿ ಗಾಂಧಿ, ಅಂಬೇಡ್ಕರ್, ನೆಹರೂ, ಮದನ ಮೋಹನ ಮಾಳವೀಯ, ರಾಜಗೋಪಾಲಾಚಾರಿ ಮುಂತಾದ ಅನೇಕರು ಇದ್ದರು. ಆದರೆ ಈ ಸಭೆಯಲ್ಲಿ ದಲಿತ ವರ್ಗವನ್ನು ನಿಜಕ್ಕೂ ಪ್ರತಿನಿಧಿಸುತ್ತಿದ್ದವರು ಅಂಬೇಡ್ಕರ್ ಮಾತ್ರ ಆಗಿದ್ದರು. ಈ ಹಿನ್ನೆಲೆಯಲ್ಲಿ ಸಹಜವಾಗಿಯೇ ಅಂಬೇಡ್ಕರ್ ಮತ್ತು ಇತರರ ನಡುವೆ ತಾತ್ವಿಕ ಸಂಘರ್ಷವೇರ್ಪಟ್ಟಿತು.

ಈ ಸಭೆಯಲ್ಲಿ ಮುಸ್ಲಿಂ, ಸಿಖ್, ಕ್ರೈಸ್ತರಿಗೆ ಶಾಸನ ಸಭೆಗಳಲ್ಲಿ ಮೀಸಲಾತಿ ಮತ್ತು ಪ್ರತ್ಯೇಕ ಮತ ಕ್ಷೇತ್ರವನ್ನು ನೀಡಬೇಕೆಂಬ ವಿಚಾರವು ಗಟ್ಟಿಯಾಯಿತು. ಇದರಿಂದ ದಲಿತ ವರ್ಗವನ್ನು ಹೊರಗಿಡಲಾಯಿತು. ಅಂದರೆ ದಲಿತರಿಗೆ ಶಾಸನ ಸಭೆಗಳಲ್ಲಿ ಸ್ಥಾನ ಮೀಸಲಾತಿ ಸೌಲಭ್ಯವನ್ನು ಕೊಟ್ಟು, ಪ್ರತ್ಯೇಕ ಮತ ಕ್ಷೇತ್ರಗಳನ್ನು ನಿರಾಕರಿಸಲಾಗಿತ್ತು. ಇದನ್ನು ಅಂಬೇಡ್ಕರ್‌ರವರು ಖಂಡಿಸಿದರು. ದಲಿತರ ಸಾಮಾಜಿಕ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ಇವರಿಗೆ ರಾಜಕೀಯವಾದ ಈ ವಿಶೇಷ ಸೌಲಭ್ಯವನ್ನು ನೀಡುವುದರಿಂದ ಮಾತ್ರ ಇವರ ಪ್ರಗತಿ ಸಾಧ್ಯ ಎಂದು ಅಂಬೇಡ್ಕರ್ ವಾದಿಸಿದರು. ಇದನ್ನು ವಿರೋಧಿಸಿದ ಗಾಂಧಿ ಈ ಕ್ರಮದಿಂದ ಹಿಂದೂಗಳ ಭಾಗವಾದ ದಲಿತರು ಇತರೆ ಹಿಂದೂಗಳೊಂದಿಗೆ ಪ್ರತ್ಯೇಕತಾ ಭಾವನೆಯನ್ನು ಬೆಳಸಿಕೊಳ್ಳುತ್ತಾರೆಂದು ನಂಬಿದರು. ಅಲ್ಲದೇ ಇದನ್ನು ಶಾಸನವಾಗಿಸ ಹೊರಟ ಬ್ರಿಟಿಷ್ ಸರ್ಕಾರದ ಎದುರು ಸೆಪ್ಟೆಂಬರ್ ೧೯೩೨ರಲ್ಲಿ ಪೂನಾದ ಯರವಾಡ ಜೈಲಿನಲ್ಲಿ ಆಮರಣಾಂತ ಉಪವಾಸವನ್ನು ಕೈಗೊಂಡರು. ಇಲ್ಲಿ ಅಂಬೇಡ್ಕರ್ ಅವರು ತಮ್ಮ ವಾದದೊಂದಿಗೆ ರಾಜಿ ಮಾಡಿಕೊಂಡಲ್ಲಿ ಮಾತ್ರ ಗಾಂಧಿಯವರು ಉಳಿಯುವುದು ಸಾಧ್ಯವಿತ್ತು. ಈ ಹಿನ್ನೆಲೆಯಲ್ಲಿ ಅಥವಾ ಈ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಅಂಬೇಡ್ಕರ್‌ರವರು ಅತ್ಯಂತ ನೋವಿನಿಂದ ತಮ್ಮ ವಾದದಿಂದ ಸ್ವಲ್ಪ ಹಿಂದಕ್ಕೆ ಸರಿದರು. ಗಾಂಧಿ ದೈಹಿಕವಾಗಿ ಬದುಕುಳಿದರು.

ಇದರ ಪರಿಣಾಮವಾಗಿ ದಲಿತರಿಗೆ ಶಾಸನ ಸಭೆಯಲ್ಲಿ ಮೀಸಲಾತಿಯನ್ನು ನೀಡುವುದು ಹಾಗೂ ಅವರಿಗೆ ಪ್ರತ್ಯೇಕ ಮತ ಕ್ಷೇತ್ರಗಳನ್ನು ನಿರಾಕರಿಸುವುದು ಎಂದು ಒಪ್ಪಂದವಾಯಿತು. ಇದಕ್ಕೆ ಪ್ರಾತಿನಿಧಿಕವಾಗಿ ಈಗಾಗಲೇ ಪ್ರಸ್ತಾಪಿಸಿರುವಂತೆ ಹಿಂದೂ ಸವರ್ಣೀಯರ ಪರವಾಗಿ ಮದನ ಮೋಹನ ಮಾಳವೀಯ ಹಾಗೂ ದಲಿತ ವರ್ಗದ ಪರವಾಗಿ ಅಂಬೇಡ್ಕರ್ ಅವರು ಸಹಿ ಹಾಕಿದರು. ಇದು ಘಟಿಸಿದ್ದು ಸೆಪ್ಟೆಂಬರ್ ೨೪, ೧೯೩೨ರಂದು. ಇದು ಮುಂದೆ ಪೂನಾ ಒಪ್ಪಂದವೆಂದೇ ಹೆಸರಾಯಿತು.

ಪೂನಾದ ಈ ಒಪ್ಪಂದದ ಪರಿಣಾಮವು ಇಂದಿಗೂ ದೇಶದ ವಿವಿಧ ರಂಗಗಳಲ್ಲಿ ಕಾಣುತ್ತಿದೆ. ದಲಿತರ ಹಿತಾಸಕ್ತಿಯನ್ನು ಪೂರ್ಣವಾಗಿ ಯಾವ ರಾಜಕೀಯ ನಾಯಕರೂ ಕಾಯದ ಸ್ಥಿತಿ ನಿರ್ಮಾಣವಾಗಿರುವುದು ಆ ಪರಿಣಾಮದ ಒಂದು ಭಾಗ ಮಾತ್ರ. ಈ ಹಿನ್ನೆಲೆಯಲ್ಲಿ ಪೂನಾ ಒಪ್ಪಂದವನ್ನು ವರ್ತಮಾನದೊಂದಿಗೆ ಮುಖಾಮುಖಿ ಮಾಡುವುದು ಹಲವು ನಿಟ್ಟಿನಿಂದ ಸ್ವಾಗತಾರ್ಹ ವಾದುದಾಗಿದೆ.

ಗಾಂಧೀಜಿಯವರ ಸಾಮಾಜಿಕ ಕಳಕಳಿ ದೊಡ್ಡದು. ಅಂತೆಯೇ ಅಂಬೇಡ್ಕರ್ ಅವರದು ಕೂಡ. ಆದರೆ ಅಂಬೇಡ್ಕರ್ ಅವರಿಗಿದ್ದ ಸಾಮಾಜಿಕ ಪ್ರಜ್ಞೆ ಗಾಂಧಿಯವರಿಗಿರಲಿಲ್ಲ. ಇಲ್ಲಿ ಸಾಮಾಜಿಕ ಕಳಕಳಿ ಎಂಬುದು ಬೇರೆ, ಸಾಮಾಜಿಕ ಪ್ರಜ್ಞೆ ಎಂಬುದು ಬೇರೆ ಎಂಬುದನ್ನು ವಿಶೇಷವಾಗಿ ಗಮನಿಸಬೇಕು. ಸಾಮಾಜಿಕ ಪ್ರಜ್ಞೆ ಇರುವಾತನಿಗೆ ಆ ಸಾಮಾಜಿಕ ನೆಲೆಗಳ ಬಗೆಗೆ ತೀವ್ರವಾದ ಅರಿವು ಇರುತ್ತದೆ. ಅವರ ಅಸ್ತಿತ್ವ ಮತ್ತು ಬದಲಾವಣೆಗಳ ಬಗೆಗೆ ಸಹದರ್ಶನ ಇರುತ್ತದೆ. ಆದರೆ ಇದು ಕಳಕಳಿಗೆ ಇರುವುದಿಲ್ಲ. ಅದೇ ಸಂದರ್ಭದಲ್ಲಿ ಅಂಬೇಡ್ಕರ್ ಅವರು ಈ ಸಮಾಜದ ನೆಲೆಗಳನ್ನು ಆಳವಾದ ಅಧ್ಯಯನದಿಂದ ಅರಿತುಕೊಂಡಿದ್ದರು. ಇದರ ಭಾಗವಾಗಿ ಈ ನೆಲೆಗಳ ಕಾರ್ಯ ಕಾರಣ ಸಂಬಂಧಗಳನ್ನು ಹಾಗೂ ಇವುಗಳ ಮುಂದಿನ ಬದಲಾವಣೆಯ ಮಾರ್ಗಗಳನ್ನು ಕಂಡುಕೊಂಡಿದ್ದರು. ಆ ದರ್ಶನವು ಅವರು ರಚಿಸಿದ ಸಂವಿಧಾನದಲ್ಲಿ ಇದೆ. ಅದಕ್ಕೂ ಮಿಗಿಲಾಗಿ ಅವರು ರಚಿಸಿದ ಕರಡು ಸಂವಿಧಾನದಲ್ಲಿ ಅದು ಇನ್ನಷ್ಟು ಗಾಢವಾಗಿತ್ತು ಎಂಬುದನ್ನು ಗಮನಿಸಬೇಕು. ಉದಾಹರಣೆಗೆ ಭೂ ರಾಷ್ಟ್ರೀ ಕರಣ. ಇದು ಒಂದು ಮುಖ್ಯ ತತ್ವ. ಸಂಪತ್ತಿನ ಒಂದು ಮುಖ್ಯ ಧನವಾದ ಇದನ್ನು ರಾಷ್ಟ್ರೀಕರಿಸದೇ ಇದ್ದರೆ ಇದರ ಆಧಾರದ ಮೇಲೆ ನಿರ್ಮಿತವಾದ ಎಲ್ಲ ಬಗೆಯ ಅಸಮಾನತೆಗಳನ್ನು ನಿರ್ಮೂಲನಗೊಳಿಸುವುದು ಸಾಧ್ಯವಿಲ್ಲ ಎಂದೇ ನಂಬಿದ್ದರು. ಆದರೆ ಇದು ಒಪ್ಪಿತ ಸಂವಿಧಾನದಲ್ಲಿ ಸಾಧ್ಯವಾಗಲಿಲ್ಲ ಎಂಬುದು ಬೇರೆ ಮಾತು.

ಒಟ್ಟಾರೆ ಈ ಮೇಲಿನ ಮಾತುಗಳ ಹಿನ್ನೆಲೆಯಲ್ಲಿ ಗಾಂಧೀಜಿಯವರ ಸಾಮಾಜಿಕ ಕಳಕಳಿಯನ್ನು ಮೀರಿದ ಸಾಮಾಜಿಕ ನೆಲೆಗಳ ಅಧ್ಯಯನ ಮತ್ತು ಪ್ರಜ್ಞೆ ಅಂಬೇಡ್ಕರ್ ಅವರಿಗೆ ಮಾತ್ರ ಗಾಢವಾಗಿತ್ತು ಎಂಬುದು ದೃಢಪಡುತ್ತದೆ.

ಗಾಂಧೀಜಿಯವರಿಗೆ ಈ ದರ್ಶನವು ಆದ್ಯತೆಯ ವಿಚಾರವಾಗಿರಲಿಲ್ಲ. ಇವರು ಬ್ರಿಟಿಷ್ ವಸಾಹತುಶಾಹಿಯನ್ನು ದೇಶದಿಂದ ಹೊರಗಟ್ಟುವ ಉದ್ದೇಶ ಮಾತ್ರ ಪ್ರಮುಖವಾಗಿತ್ತು. ಇದು ರಾಜಕೀಯ

ಉದ್ದೇಶ. ಉಳಿದಂತಹ ಎಲ್ಲ ಉದ್ದೇಶಗಳು ಆನುಷಂಗಿಕ ಮಾತ್ರ. ಉದಾಹರಣೆಗೆ ಅವರ ದಲಿತೋದ್ಧಾರದ ನೀತಿ ಮತ್ತು ಕಾರ್ಯಕ್ರಮ ಗಳು. ಹಾಗಾಗಿಯೇ ಅವರ ಅಧ್ಯಯನ, ದರ್ಶನ ಮತ್ತು ಕಾರ್ಯಾಚ ರಣೆ ಮುಖ್ಯವಾಗಿ ರಾಜಕೀಯ ರಂಗವನ್ನು ವಿಶೇಷವಾಗಿ ಕೇಂದ್ರೀಕರಿಸಿದ್ದು. ಈ ನೆಲೆಯಲ್ಲಿ ಇವರು ನಡೆಸಿದ ಹೋರಾಟ ಭಾರತವು ಕಳೆದ ಇನ್ನೂರು ವರ್ಷ ಗಳಲ್ಲಿ ಅನುಭವಿಸುತ್ತಾ ಬಂದಿದ್ದ ರಾಜಕೀಯ ದಾಸ್ಯಕ್ಕೆ ಅಂತ್ಯ ಹಾಡುವುದಾಗಿತ್ತು. ಆದರೆ ಅಂಬೇಡ್ಕರ್ ಆ ಸಂದರ್ಭದಲ್ಲಿ ನಡೆಸುತ್ತಿದ್ದ ಹೋರಾಟವು ಇದೇ ಇನ್ನೂರು ವರ್ಷಗಳ ಆಚೆಗಿನ ಐದಾರು ಸಾವಿರ ವರ್ಷಗಳ ಹರಹನ್ನು ಹಿನ್ನೆಲೆಯನ್ನಾಗಿ ಇಟ್ಟುಕೊಂಡದ್ದು ಆಗಿತ್ತು. ಇಂತಹ ದೀರ್ಘಕಾಲೀನ ಗುಲಾಮಗಿರಿಗೆ ಅಂತ್ಯ ಹಾಡುವ ಅವಕಾಶ ಈ ದೀರ್ಘಕಾಲದ ಇತಿಹಾಸದಲ್ಲಿ ರಾಜಕೀಯವಾಗಿ ಎಂದೂ ಸಿಕ್ಕಿರಲಿಲ್ಲ. ಆದರೆ ಅದು ಹೇಗೋ ಬ್ರಿಟಿಷ್ ವಸಾಹತುಶಾಹಿಯ ಅವಧಿಯಲ್ಲಿ ಸಿಕ್ಕಿತ್ತು. ಆದ್ದರಿಂದಲೇ ಅವರು ಪೂನಾ ಒಪ್ಪಂದದ ಸಂದರ್ಭದಲ್ಲಿ ದಲಿತರಿಗೆ ಪ್ರತ್ಯೇಕ ಮತ ಕ್ಷೇತ್ರಗಳನ್ನು ಕೇಳಿದ್ದು.

ದಲಿತರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ಪಡೆಯುವದರಿಂದ ಇಲ್ಲಿಯ ನಾಯಕರು ದಲಿತರಿಂದಷ್ಟೇ ಆರಿಸಿ ಬರುವ ಅವಕಾಶವನ್ನು ಕಲ್ಪಿಸಿದಂತಾಗುತ್ತದೆ. ಇದರಿಂದ ಈ ನಾಯಕರಿಗೆ ಸಹ ದಲಿತರ ಹಿತರಕ್ಷಣೆಯನ್ನು ಸಂಪೂರ್ಣವಾಗಿ ಕಾಯುವುದು ಸಾಧ್ಯವಾಗುತ್ತದೆ. ದಲಿತರು ಅನುಭವಿಸಿದ ಸಾವಿರಾರು ವರ್ಷಗಳ ಯಾತನೆಗೆ ಪುನಾರ್ಹವಾದ ಚಿಕಿತ್ಸೆಯನ್ನು ಮಾಡಲು ಇದರಿಂದ ಸಾಧ್ಯವಾಗುತ್ತದೆ. ಇದು ತಪ್ಪಿ, ದಲಿತರಿಗೆ ಸಾಮಾನ್ಯ ಮತ ಕ್ಷೇತ್ರಗಳಲ್ಲಿ ಕೆಲವನ್ನು ಮೀಸಲು ಮಾಡಿದರೆ ಅಲ್ಲಿ ಆರಿಸಿ ಬರುವ ವ್ಯಕ್ತಿ ದಲಿತನಾಗಿದ್ದರೂ ಆ ಕ್ಷೇತ್ರದ ಎಲ್ಲ ಜನ ವರ್ಗಗಳ ಪ್ರತಿನಿಧಿಯಾಗಿ ಆತ ಅಸ್ತಿತ್ವ ಪಡೆಯುತ್ತಾನೆ. ಹಾಗೂ ಒಮ್ಮೆ ತೀವ್ರ ದಲಿತಪರ ಕಾಳಜಿಯಿಂದ ರಾಜಕೀಯವಾಗಿ ಕ್ರಮ ಕೈಗೊಂಡು ದಲಿತ ನಾಯಕನೆನ್ನಿಸಿಕೊಳ್ಳ ಹೋದರೆ ಮುಂದಿನ ಚುನಾವಣೆಯಲ್ಲಿ ಬಹು ಸಂಖ್ಯಾತ ದಲಿತೇತರ ಮತದಾರರಿಂದ ಆ ನಾಯಕನ ಪಟ್ಟವನ್ನು ಕಳೆದುಕೊಳ್ಳುವ ಸಾಧ್ಯತೆಯಿರುತ್ತದೆ. ಆದ್ದರಿಂದಲೇ ಅಂಬೇಡ್ಕರ್ ಅವರು ದಲಿತರಿಗೆ ಪ್ರತ್ಯೇಕ ಮತ ಕ್ಷೇತ್ರಗಳನ್ನು ಕೇಳಿದ್ದು.

ಆದರೆ ಗಾಂಧೀಜಿಯವರಿಗೆ ಈ ಮಾತುಗಳ ಹಿನ್ನೆಲೆ ಏಕೋ ಅರ್ಥವಾಗಲಿಲ್ಲ. ಆದರೆ ಅಂದಿನ ಬ್ರಿಟಿಷ್ ಸರ್ಕಾರಕ್ಕೆ ಅರ್ಥವಾಗಿತ್ತು. ಅವರು ಇದನ್ನು ಕಾನೂನನ್ನಾಗಿ ಕೂಡ ಮಾಡುವ ಹಂತದಲ್ಲಿದ್ದರು. ಆ ಸಮಯದಲ್ಲಿ ಗಾಂಧೀಜಿಯವರು ಈಗಾಗಲೇ ಅಸಹಕಾರ ಚಳವಳಿಯ ಹಿನ್ನೆಲೆಯಲ್ಲಿ ಪೂನಾ ನಗರದ ಯರವಾಡ ಸ್ಥಳದ ಜೈಲನ್ನು ಸೇರಿದ್ದರು. ಇದನ್ನು ವಿರೋಧಿಸಿ ಆಮರಣಾಂತ ಉಪವಾಸವನ್ನು ಕೈಗೊಂಡರು. ದೇಶದ ಬಹುಸಂಖ್ಯಾತರ ನಾಯಕರು ಇವರಾದುದರಿಂದ ದೇಶದ ಎಲ್ಲೆಡೆ ಕೋಲಾಹಲವೆಬ್ಬಿಸಿತು. ಮಾಧ್ಯಮಗಳು ಸಹ ಅಂಬೇಡ್ಕರ್ ಅವರನ್ನು ದೂಷಿಸಲಾರಂಭಿಸಿದರು. ಈ ಸಂದರ್ಭದಲ್ಲಿ ಗಾಂಧೀಜಿಯ ರಾಜಕೀಯ ಸಂಗಾತಿಗಳಾದ ಮದನ ಮೋಹನ ಮಾಳವೀಯ, ರಾಜಗೋಪಾಲಚಾರಿ ಮುಂತಾದವರು ಅಂಬೇಡ್ಕರ್ ಅವರನ್ನು ಸಂಪರ್ಕಿಸಿ ಮಾತನಾಡಿದರೂ ಪ್ರಯೋಜನವಾಗಲಿಲ್ಲ. ಆದರೆ ಇವರ ಪ್ರಯತ್ನದಿಂದ ಅಂಬೇಡ್ಕರ್ ಅವರು ಗಾಂಧೀಜಿಯವರನ್ನು ಭೇಟಿ ಮಾಡಿ ಪರಸ್ಪರ ಮಾತನಾಡುವಂತಾಯಿತು. ಆ ಭೇಟಿಯಲ್ಲಿ ಅಂಬೇಡ್ಕರ್ ಅವರು ಗಾಂಧೀಜಿಯ ಮನವೊಲಿಸಲು ತಮ್ಮ ಚರ್ಚೆಯ ಮೂಲಕ ಪ್ರಯತ್ನಿಸಿದರು. ಆದರೆ ಗಾಂಧೀಜಿಯವರ ಹಠ ಅಂಬೇಡ್ಕರ್ ಅವರ ಚಿಂತನೆಗಳ ಒಳ-ಆಳಗಳನ್ನು ಅರಿಯುವ ಸ್ಥಿತಿಯಲ್ಲಿ ಇರಲಿಲ್ಲ. ಮುಂದೆ ಅವರು ಪ್ರಾಣವನ್ನು ಕಳೆದುಕೊಳ್ಳುವ ಸ್ಥಿತಿಯನ್ನು ತಲುಪುವುದನ್ನು ಅರಿತ ಅಂಬೇಡ್ಕರ್ ಅವರು ಅತ್ಯಂತ ನೋವಿನಿಂದ ಗಾಂಧೀಜಿಯವರ ನಿಲುವಿಗೆ ಒಗ್ಗೂಡುತ್ತಾರೆ. ಪರಿಣಾಮವಾಗಿ ದಲಿತರಿಗೆ ಪ್ರತ್ಯೇಕ ಮತ ಕ್ಷೇತ್ರವಿಲ್ಲ ಎಂಬ ನಿರ್ಣಯವಾಗಿ ಅದನ್ನು ಬ್ರಿಟಿಷ್ ಸರ್ಕಾರಕ್ಕೆ ಕಳುಹಿಸಿಕೊಡಲಾಗುತ್ತದೆ. ಈ ನಿರ್ಣಯವು ಒಪ್ಪಂದದ ಪರಿಣಾಮ. ಈ ಒಪ್ಪಂದಕ್ಕೆ ಗಾಂಧೀಜಿ ಅಥವಾ ಸವರ್ಣೀಯರ ಪರವಾಗಿ ಮದನ ಮೋಹನ ಮಾಳವೀಯ ಮುಂತಾದವರು ಸಹಿ ಮಾಡಿದರೆ ಅಂಬೇಡ್ಕರ್ ವಾದಿಸಿದ ವಾದದ ಪರವಾಗಿ ಅಂಬೇಡ್ಕರ್ ಮಾತ್ರ ಸಹಿ ಮಾಡುವುದು ಸಾಧ್ಯವಿರುತ್ತದೆ.

ಇಲ್ಲಿ ಗಾಂಧೀಜಿಯವರ ತತ್ವವೇನೆಂದರೆ ದಲಿತರು ಹಿಂದೂಗಳ ಭಾಗವಾಗಿಯೇ ಇರಬೇಕು. ಇವರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ಕೊಡುವುದರಿಂದ ಇವರು ತಮ್ಮನ್ನು ಹಿಂದೂಗಳಿಂದ ಬೇರೆ ಎಂದು ಭಾವಿಸುತ್ತಾರೆ. ಅದು ಸಾಧ್ಯವಾಗಬಾರದು ಹಾಗೂ ಇಲ್ಲಿರುವ ಅಸಮಾನತೆ, ಅವಮಾನ ಮುಂತಾದ ಎಲ್ಲ ಸಾಮಾಜಿಕ ಸಂಗತಿಗಳು ಮನಃ ಪರಿವರ್ತನೆಯಿಂದ ಮಾತ್ರ ಸಾಧ್ಯವಾಗಬೇಕು ಎಂಬುದು ಇವರ ನಿಲುವಾಗಿತ್ತು.

ಅಂಬೇಡ್ಕರ್ ಅಭಿಪ್ರಾಯದ ಸಾರವೆಂದರೆ ಇಂತಹ ಪರಿವರ್ತನೆ ಕೇವಲ ಮನಃ ಪರಿವರ್ತನೆಯಿಂದ ಸಾಧ್ಯವಿಲ್ಲ. ಕಾರಣ, ಗಾಂಧಿಯಂತಹ ಮಹಾತ್ಮರು ಈಗಾಗಲೇ ಅನೇಕರು ಆಗಿಹೋಗಿದ್ದಾರೆ. ಆದ್ದರಿಂದ ರಾಜಕೀಯ ಹಕ್ಕುಗಳನ್ನು ಪಡೆಯುವುದರಿಂದ ಮಾತ್ರ ಪರಿವರ್ತನೆ ಸಾಧ್ಯ ಎಂದು ನಂಬಿ ವಾದ ಮಾಡಿದರು. ಇದು ಗಾಂಧಿಯವರಿಗೆ ಅರ್ಥವಾಗಬಹುದಿತ್ತು. ಯಾಕೆಂದರೆ ಅದು ಅಂಬೇಡ್ಕರ್ ಅವರಿಗೆ ಪ್ರಥಮ ಆದ್ಯತೆಯಾಗಿದ್ದಂತೆ ಗಾಂಧೀಜಿಯವರಿಗೆ ಕೂಡ ಆಗಿತ್ತು. ಆದರೆ ಗಾಂಧಿಯವರ ಪ್ರಥಮ ಆದ್ಯತೆ ದೇಶದ ರಾಜಕೀಯ ವಿಮುಕ್ತಿ ಆಗಿತ್ತು. ಇವರ ಜಾಗದಲ್ಲಿ ಅಂಬೇಡ್ಕರ್ ಅವರಿಗೆ ದೇಶದ ಸಾಮಾಜಿಕ ವಿಮುಕ್ತಿ ಪ್ರಥಮ ಆದ್ಯತೆಯಾಗಿತ್ತು.

ಹೀಗೆ ಇಬ್ಬರ ಆದ್ಯತೆಗಳಲ್ಲಿ ಇದ್ದ ವಿಭಿನ್ನ ಅನುಕ್ರಮಣಿಕೆಗಳೇ ಇಬ್ಬರ ನಡುವಿನ ತಾತ್ವಿಕ ಸಂಘರ್ಷಕ್ಕೆ ಭೂಮಿಕೆಯನ್ನೊದಗಿಸಿದ ಸಂಗತಿಯದು.

ಇವರಿಬ್ಬರ ನಡುವಿನ ಪೂನಾ ಒಪ್ಪಂದದ ಈ ಸಂದರ್ಭದಲ್ಲಿ ಏರ್ಪಟ್ಟ ವಾದಸರಣಿಯನ್ನು ಗಮನಿಸಿದರೆ ಗಾಂಧೀಜಿಯವರು ಬಹುಸಂಖ್ಯಾತರ ನಾಯಕರಾದುದು ಹೇಗೆ? ಅಂತೆಯೇ ಅಂಬೇಡ್ಕರ್ ಅವರು ಸೀಮಿತ ಸಂಖ್ಯೆಯ ನಾಯಕರಾದುದು ಹೇಗೆ ಎಂಬುದು ಗೊತ್ತಾಗುತ್ತದೆ.

ಈ ನಡುವೆ ಒಮ್ಮೆ ಗಾಂಧೀಜಿಯವರು ಅಂಬೇಡ್ಕರ್ ಅವರಿಗೆ 'ಅಂಬೇಡ್ಕರ್‌ಜೀ, ನಿಮಗಿರುವ ದಲಿತಪರ ಕಾಳಜಿ ನನಗೂ ಕಾಂಗ್ರೆಸ್ ಪಾರ್ಟಿಗೂ ಇದೆ. ಆದ್ದರಿಂದಲೇ ಈಗಾಗಲೇ ದಲಿತೋದ್ಧಾರಕ್ಕಾಗಿ ಪಾರ್ಟಿಯಿಂದ ಸಾಕಷ್ಟು ಹಣವನ್ನು ಖರ್ಚು ಮಾಡಿರುವುದು.' ಇದಕ್ಕೆ ಪ್ರತಿಕ್ರಿಯಿಸಿದ ಅಂಬೇಡ್ಕರ್ ಅವರು ಹೇಳುತ್ತಾರೆ

ಜಾತೀಯತೆ ಹಾಗೂ ಎಲ್ಲಾ ಬಗೆಯ ಮೂಲಭೂತ ವಾದದ ವಿರುದ್ಧ ಸಿಡಿದೆದ್ದ ಅಂಬೇಡ್ಕರ್

ಗಾಂಧೀಜಿಯವರ ಸಾಮಾಜಿಕ ಕಳಕಳಿ ದೊಡ್ಡದು. ಆದರೆ ಅಂಬೇಡ್ಕರ್ ಅವರಿಗಿದ್ದ ಸಾಮಾಜಿಕ ಪ್ರಜ್ಞೆ ಗಾಂಧಿಯವರಿಗಿರಲಿಲ್ಲ. ಇಲ್ಲಿ ಸಾಮಾಜಿಕ ಕಳಕಳಿ ಎಂಬುದು ಬೇರೆ. ಸಾಮಾಜಿಕ ಪ್ರಜ್ಞೆ ಎಂಬುದು ಬೇರೆ ಎಂಬುದನ್ನು ವಿಶೇಷವಾಗಿ ಗಮನಿಸಬೇಕು. ಸಾಮಾಜಿಕ ಪ್ರಜ್ಞೆ ಇರುವಾತನಿಗೆ ಆ ಸಾಮಾಜಿಕ ನೆಲೆಗಳ ಬಗೆಗೆ ತೀವ್ರವಾದ ಅರಿವು ಇರುತ್ತದೆ. ಅದರ ಅಸ್ತಿತ್ವ ಮತ್ತು ಬದಲಾವಣೆಗಳ ಬಗೆಗೆ ಸಹ ದರ್ಶನ ಇರುತ್ತದೆ. ಅದೇ ಸಂದರ್ಭದಲ್ಲಿ ಅಂಬೇಡ್ಕರ್ ಅವರು ಈ ಸಮಾಜದ ನೆಲೆಗಳನ್ನು ಆಳವಾದ ಅಧ್ಯಯನದಿಂದ ಅರಿತುಕೊಂಡಿದ್ದರು. ಇದರ ಭಾಗವಾಗಿ ಈ ನೆಲೆಗಳ ಕಾರ್ಯಕಾರಣ ಸಂಬಂಧಗಳನ್ನು ಹಾಗೂ ಇವುಗಳ ಮುಂದಿನ ಬದಲಾವಣೆಯ ಮಾರ್ಗಗಳನ್ನು ಕಂಡುಕೊಂಡಿದ್ದರು. ಆ ದರ್ಶನವು ಅವರು ರಚಿಸಿದ ಸಂವಿಧಾನದಲ್ಲಿ ಇದೆ. ಅದಕ್ಕೂ ಮಿಗಿಲಾಗಿ ಅವರು ರಚಿಸಿದ ಕರಡು ಸಂವಿಧಾನದಲ್ಲಿ ಅದು ಇನ್ನಷ್ಟು ಗಾಢವಾಗಿತ್ತು ಎಂಬುದನ್ನು ಗಮನಿಸಬೇಕು.

[illegible]
[illegible]
[illegible] ಮತ್ತು ಕಾರ್ಯಕ್ರಮಗಳು
[ನಿ]ಮ್ಮ ಪಾರ್ಟಿಯ ಮುಖ್ಯ ನೆಲೆಯಾಗಬೇಕು. [illegible]ಕೆಗೆ, ಖಾದಿ ಧರಿಸುವುದು ನಿಮ್ಮ ಪಾರ್ಟಿಯ ಮುಖ್ಯ ಕಾರ್ಯಕ್ರಮಗಳಲ್ಲಿ ಒಂದು. ಇದನ್ನು ನಿಮ್ಮ ಕಾರ್ಯಕರ್ತರೆಲ್ಲರೂ ಪಾಲಿಸುತ್ತಾರೆ. ಅಂತೆಯೇ ನಿಮ್ಮ ಕಾರ್ಯಕರ್ತರು ಇರುವ ಊರುಗಳಲ್ಲಿ ದಲಿತರಿಗೆ ದೇವಾಲಯ ಪ್ರವೇಶ ನೀಡಬೇಕು ಎಂಬುದನ್ನು ನಿಮ್ಮ ಪಾರ್ಟಿಯ ಕಾರ್ಯಕ್ರಮವನ್ನಾಗಿ ಮಾಡಿ. ಆಗ ನಿಮ್ಮ ಪಾರ್ಟಿಯಲ್ಲಿ ಎಷ್ಟು ಜನ ಕಾರ್ಯಕರ್ತರು ಉಳಿಯುತ್ತಾರೆ ನೋಡೋಣ' ಎಂದರು.

ಆದರೆ ಈ ಕಾರ್ಯಕ್ರಮ ಗಾಂಧೀಜಿಯವರ ಹಾಗೂ ಕಾಂಗ್ರೆಸ್ ಪಾರ್ಟಿಯ ಮುಖ್ಯ ಕಾರ್ಯಕ್ರಮವಾಗದೇ ಇದ್ದುದರಿಂದಲೇ ಅಲ್ಲಿಯ ಬಹುಸಂಖ್ಯಾತ ಜನ, ಕಾರ್ಯಕರ್ತರು ಗಾಂಧೀಜಿಯವರನ್ನು ತಮ್ಮ ನಾಯಕನೆಂದು ಗುರುತಿಸಿಕೊಳ್ಳುವುದಕ್ಕೆ ಯಾವುದೇ ಚ್ಯುತಿ ಒದಗದೇ ಇದ್ದುದು.

ಇದೇ ಬಗೆಯ ಪ್ರಶ್ನೆ; ಆರ್ಥಿಕ ಪ್ರಶ್ನೆ; ಅದು ಭೂಮಿಯ ಪ್ರಶ್ನೆಯು ಕಾಂಗ್ರೆಸ್ ಮತ್ತು ಕಮ್ಯೂನಿಸ್ಟರ ನಡುವೆ ಇತ್ತಲ್ಲವೇ! ಭೂಮಾಲೀಕರ ಹಿತಕ್ಕೆ ಅಂದರೆ ಭೂಮಾಲೀಕತ್ವದ ಹಿತಕ್ಕೆ ಕಾಂಗ್ರೆಸ್ ನೀತಿ ಮತ್ತು ಕಾರ್ಯಕ್ರಮಗಳಿಂದ ಯಾವುದೇ ಧಕ್ಕೆ ಇದ್ದಿರಲಿಲ್ಲ. ಆದ್ದರಿಂದಲೇ ಭೂಮಾಲೀಕರು ಕಾಂಗ್ರೆಸ್ ಪಾರ್ಟಿಯ ಕಾರ್ಯಕರ್ತರಾಗಿ ಹಳ್ಳಿಹಳ್ಳಿಗಳಲ್ಲಿಯೂ ಇದ್ದದ್ದು. ಅಂತೆಯೇ ದೇಶದ ಬಂಡವಾಳಶಾಹಿಗಳು ಸಹ. ಆದರೆ ಇವರಿಗೆ ಕಮ್ಯೂನಿಸ್ಟ್ ಪಾರ್ಟಿಯ ತತ್ವ ಅಪಥ್ಯ ಹಾಗೂ ತಮ್ಮ ಬುಡಕ್ಕೇ ಬರುವ ತತ್ವ ಮತ್ತು ಕಾರ್ಯಕ್ರಮಗಳನ್ನೊಳಗೊಂಡಿದ್ದ ಪಾರ್ಟಿ ಅದಾಗಿದ್ದುದರಿಂದ ಇದೇ ಬಹುಸಂಖ್ಯಾತ ಅಲ್ಲಿಯೂ ಸೇರಲಿಲ್ಲ. ಈ ಸೈದ್ಧಾಂತಿಕ ನೆಲೆಯಲ್ಲಿ ಬಡವರ ಪರವಾದ ಕಮ್ಯೂನಿಸ್ಟ್ ಪಕ್ಷ ಬೃಹತ್ತಿನಲ್ಲಿ ಎರಡನೇ ಪಕ್ಷವಾಗುವುದು ಮಾತ್ರ ಸಾಧ್ಯವಾಯಿತು.

ಹೀಗೆ ಗಾಂಧೀಜಿಯವರು ಈ ದೇಶದ ಯಾವುದೇ ಬಗೆಯ ಪಟ್ಟಭದ್ರರ ಹಿತಾಸಕ್ತಿಗಳಿಗೆ ತೀವ್ರ ಧಕ್ಕೆ ತರುವ ಮಾತುಗಳನ್ನಾಡದೇ ಇದ್ದುದರಿಂದ ಹಾಗೂ ಆ ನಿಟ್ಟಿನ ಕ್ರಾಂತಿಕಾರಕ ಕಾರ್ಯಕ್ರಮಗಳನ್ನು ಪಾರ್ಟಿಯ ಮುಖೇನ ಹಾಕಿಕೊಳ್ಳದೇ ಇದ್ದುದರಿಂದ ಇವರು ಬಹುಸಂಖ್ಯೆಯ ಜನರ ನಾಯಕರಾಗಿ ಸುಲಭವಾಗಿ ಒಪ್ಪಲ್ಪಟ್ಟರು. ಈ ಹಿನ್ನೆಲೆಯಲ್ಲಿಯೇ ಗಾಂಧಿ ಜಯಂತಿ ಯನ್ನು ಇಂದಿಗೂ ಯಾರೇ ಆದರೂ ಯಾವುದೇ ತಮ್ಮ ಸ್ಥಾನ ಮೂಲದಲ್ಲಿನ ಯಾವುದೇ ಆತಂಕಗಳನ್ನು ಇಟ್ಟುಕೊಳ್ಳದೇ ಆಚರಿಸುವುದು ಸಾಧ್ಯವಿರುವುದು. ಆದರೆ ಇಂತಹ ಸ್ಥಿತಿ ಅಂಬೇಡ್ಕರ್ ಅವರನ್ನು ಅಥವಾ ಇಂತಹ ಕ್ರಾಂತಿಕಾರಿಗಳನ್ನು ಕುರಿತು ಅಲ್ಲ.

ಒಟ್ಟಾರೆ ಪೂನಾ ಒಪ್ಪಂದದ ದುಷ್ಪರಿಣಾಮ ಇಂದಿಗೂ ಇದೆ. ಇದನ್ನು ಮೊದಲಿಗೆ ತೀವ್ರವಾಗಿ ಅರಿತವರು; ಮಾತ್ರವಲ್ಲದೆ ಅನುಭವಿಸಿದವರು ಮೊದಲಿಗೆ ಅಂಬೇಡ್ಕರ್ ಅವರೇ ಆಗಿದ್ದಾರೆ ಎಂಬುದು ಇತಿಹಾಸದ ಒಂದು ದಾರುಣ ಸತ್ಯವಾಗಿದೆ.

ದಲಿತರಿಗೆ ಪ್ರತ್ಯೇಕ ಮತಕ್ಷೇತ್ರಗಳು ಇದ್ದಿದ್ದರೆ ೧೯೫೨ರಲ್ಲಿ ಲೋಕಸಭೆಗಾಗಿ ನಡೆದ ಸಾರ್ವಜನಿಕ ಚುನಾವಣೆಯಲ್ಲಿ ಅಂಬೇಡ್ಕರ್‌ರವರು ಸೋಲುತ್ತಿರಲಿಲ್ಲ.

ಒಮ್ಮೆ ಗಾಂಧೀಜಿಯವರು ಅಂಬೇಡ್ಕರ್ ಅವರಿಗೆ 'ಅಂಬೇಡ್ಕರ್‌ಜೀ, ನಿಮಗಿರುವ ದಲಿತಪರ ಕಾಳಜಿ ನನಗೂ ಕಾಂಗ್ರೆಸ್ ಪಾರ್ಟಿಗೂ ಇದೆ. ಆದ್ದರಿಂದಲೇ ಈಗಾಗಲೇ ದಲಿತೋದ್ಧಾರಕ್ಕಾಗಿ ಪಾರ್ಟಿಯಿಂದ ಸಾಕಷ್ಟು ಹಣವನ್ನು ಖರ್ಚು ಮಾಡಿರುವುದು.' ಇದಕ್ಕೆ ಪ್ರತಿಕ್ರಿಯಿಸಿದ ಅಂಬೇಡ್ಕರ್ ಅವರು ಹೇಳುತ್ತಾರೆ 'ಮಿ. ಗಾಂಧೀಜಿ, ದಲಿತೋದ್ಧಾರಕ್ಕಾಗಿ ಒಂದಷ್ಟು ಹಣವನ್ನು ಖರ್ಚು ಮಾಡಿದರೆ ಅಷ್ಟೇನೂ ಪ್ರಯೋಜನವಿಲ್ಲ. ಬದಲಿಗೆ ದಲಿತಪರ ನೀತಿ ಮತ್ತು ಕಾರ್ಯಕ್ರಮಗಳು ನಿಮ್ಮ ಪಾರ್ಟಿಯ ಮುಖ್ಯ ನೆಲೆಯಾಗಬೇಕು.

ಅಷ್ಟೇ ಅಲ್ಲದೇ ಅಂದಿನಿಂದ ಇಂದಿಗೂ ಅಂತಹ ಕಾಳಜಿಯನ್ನಿಟ್ಟುಕೊಂಡ ಯಾವ ದಲಿತ ನಾಯಕನೂ ಗೆದ್ದು ಬಂದಿಲ್ಲ. ಅಂತಹ ಗುಣವನ್ನು ಇಟ್ಟುಕೊಳ್ಳುವ ನಾಯಕ; ಅಂಬೇಡ್ಕರ್ ಅವರೇ ಚುನಾವಣೆಯಲ್ಲಿ ಸೋತಿರುವಾಗ ಇನ್ನು ಇವರು ಗೆದ್ದು ಬರುವುದಾದರೂ ಹೇಗೆ? ಅವರು ದಲಿತರ ವಿಶಿಷ್ಟ ಸಮಸ್ಯಾ ಜಗತ್ತನ್ನು ಶಾಸನ ಸಭೆಗಳಲ್ಲಿ ಪ್ರತಿನಿಧಿಸುವುದಾದರೂ ಹೇಗೆ?

ಆದ್ದರಿಂದಲೇ ದಲಿತರಿಗೆ ಪ್ರತ್ಯೇಕ ಮತದಾನ ಕ್ಷೇತ್ರ ಬೇಕು; ಸಂಯುಕ್ತ ಮತದಾನ ದೇಶದ ಕ್ಷೇತ್ರದೊಂದಿಗೆ ಇಂತಹ ಎರಡು ಮತಗಳನ್ನು ಪಡೆಯುವ ದಲಿತರು ಒಂದೆಡೆ ತಮ್ಮ ಹಿತವನ್ನು ಮತ್ತೊಂದೆಡೆ ದೇಶದ ಹಿತವನ್ನು ಒಟ್ಟಿಗೆ ಕಾಯುವಂತಾಗುತ್ತದೆ. ಇವು ಒಂದಕ್ಕೊಂದು ಪೂರಕ ಮಾತ್ರ. ಆದರೆ ಸದ್ಯ ಇರುವ ಚುನಾವಣಾ ಸನ್ನಿವೇಶದಲ್ಲಿ ದೇಶದ ಹಿತವನ್ನು ಮಾತ್ರ ಕಾಯುತ್ತಿದ್ದಾರೆ; ತಮ್ಮ ಹಿತವನ್ನು ನಿರೀಕ್ಷಿತ ಮಟ್ಟದಲ್ಲಿ ಕಾಯುವುದು ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನ ಚಿಂತನೆ ದಲಿತರು ಮತ್ತು ದಲಿತೇತರಲ್ಲಿ ಒಟ್ಟಿಗೆ ಮೊಳೆತು ಅದು ಹೆಮ್ಮರವಾಗಬೇಕು. ಈ ನಿಟ್ಟಿನ ಚಿಂತನೆ ರೈತರು, ಕಾರ್ಮಿಕರು, ಮಹಿಳೆಯರು, ಕ್ರೈಸ್ತರು, ಮುಸಲ್ಮಾನರು ಮೊದಲಾಗಿ ಎಲ್ಲ ವಿಶಿಷ್ಟ ಶೋಷಿತ ಸಮುದಾಯಗಳಿಗೂ ವಿಸ್ತರಿಸಬೇಕು. ಆಗ ದಲಿತರ ಒಂದು ಹೆಮ್ಮರದ ಜೊತೆಗೆ ಅನೇಕ ಹೆಮ್ಮರಗಳು ಮೂಡಿ ನಿಲ್ಲುವುದು ಸಾಧ್ಯವಾಗುತ್ತದೆ. ಅದರಿಂದ ಮೋಡ ಕಟ್ಟಿ, ಮಳೆಯಾಗಿ, ಭೂಮಿ ತಂಪಾಗಿ ನಮ್ಮ ಬದುಕು ಹಸನಾಗುತ್ತದೆ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ರಾಮಕೃಷ್ಣರಿಗೂ ಗತಿಯಿಲ್ಲ

ರಾಮಕೃಷ್ಣರಿಗೂ ಗತಿಯಿಲ್ಲ

ಮಥುರಾದ ಕೃಷ್ಣ ಜೈಲಿನೊಳಗೆ ಮಲಗಿದ್ದಾಗ
ಅಯೋಧ್ಯೆಯ ರಾಮನ ಗುಡಿ ಕಳಚಿ ಬಿತ್ತು.

ಮನೆಯಿಲ್ಲದ ರಾಮ
ಕೃಷ್ಣನ ನಾಮ ಸ್ಮರಣೆ ಮಾಡುತ್ತ
ಯಮುನೆಯ ತಟದತ್ತ ನಡೆದ
ರಾಮನ ಕಂಡ ಕೃಷ್ಣ
ಖುಷಿಗೊಂಡು ಕೊಳಲಿಗಾಗಿ
ತಡಕಾಡಿದಾಗ
ಕೊಳಲು ಎಲ್ಲೋ ಮಾಯ.

ಎಲ್ಲಿ ಬಿದ್ದಿದೆ ಕೊಳಲು?
ಯಮುನೆಯಲಿ ಬಿದ್ದು
ಗಂಗೆಯಲಿ ತೇಲಿತೇ
ಧೂಳಿನಲಿ ಬಿದ್ದು
ಕೊಳಚೆಯಲಿ ಹರಿಯಿತೇ
ನಾಮಭಕ್ತರ ಸಂತೆಯಲಿ
ಯಾರದೋ ಜೋಳಿಗೆಯಲಿ
ಮುದುಡಿತೇ ಕೊಳಲು?



ಕೃಷ್ಣ ಗಾಬರಿಗೊಂಡು
ರಾಮನ ತಬ್ಬಿಕೊಂಡು ಅಳತೊಡಗಿದ
ನಿನ್ನ ಬರವಿಗೆ ಕೊಳಲನೂದಲು
ಬಿದಿರ ಕೋಲನು ಕಾಣೆನು
ಕಾಣೆನೆನ್ನಲು ಮನವು ಬೆದರಿದೆ
ನೋವು ನಮ್ಮದು ದೇವನೆ

ರಾಮನ ಮನವೂ ಬೇಸರಗೊಂಡಿತು
ಎಂದನು ಕೃಷ್ಣ ಸುಮ್ಮನಿರು
ನಡೆ ನಡೆ ಬೇಗನೆ ಸುಮ್ಮನೆ ಒಳಗೆ
ಒಳಗುಡಿಯಲಿ ನಡೆಯಲಿ ಮಾತು
ತಬ್ಬಿದ ಕೃಷ್ಣ ರಾಮನ ಕೂಡೆ
ನಡೆದನು ಕೋಣೆಯ ಒಳಗೆ

ಅಲ್ಲಿ ಕೃಷ್ಣನ ಮನೆಗೆ ಬೆಳಕಿರಲಿಲ್ಲ
ರಾಮನಿಗಂತೂ ಗುಡಿಯಿಲ್ಲ
ಗಂಗಾ ಯಮುನಾ ಸಂಗಮದಲ್ಲಿ
ರಾಮಕೃಷ್ಣರಿಗೂ ಗತಿಯಿಲ್ಲ

○ ಪುರುಷೋತ್ತಮ ಬಿಳಿಮಲೆ

ಬಲಪಂಥೀಯ ಸಂಘಟನೆಗಳ ವರ್ಧನೆ ಮತ್ತು ವರ್ತಮಾನದ ಬಿಕ್ಕಟ್ಟುಗಳು

ಬಿ ಹೆಚ್ ಸತ್ಯನಾರಾಯಣ

ಕಳೆದ ೨೫ ವರ್ಷಗಳಲ್ಲಿ ಭಾರತೀಯ ಜನತಾ ಪಕ್ಷ ತನ್ನ ವರ್ಚಸ್ಸನ್ನು, ಗಣನೀಯವಾಗಿ ವೃದ್ಧಿಸಿಕೊಂಡಿದೆ. ಇದು ಕಳೆದ ಅನೇಕ ಸಾರ್ವತ್ರಿಕ ಚುನಾವಣೆಗಳ ಅಂಕಿ-ಅಂಶಗಳಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತದೆ. ಈ ಮಾತಿನ ಅರ್ಥ ಅದರ ಬಲವರ್ಧನೆ ಭಾರತದ ರಾಜಕಾರಣದಲ್ಲಿ ನಿರಾತಂಕವಾಗಿ ನಡೆದಿದೆ ಹಾಗೂ ಅದರ ವರ್ಚಸ್ಸು ಭಾರತದ ಉದ್ದಗಲಗಳಲ್ಲಿ ಸಮಾನವಾಗಿ ವ್ಯಾಪಿಸಿದೆ ಎನ್ನುವುದಲ್ಲ., ಅನೇಕ ಸಂದಿಗ್ಧಗಳು, ಪ್ರತಿರೋಧಗಳು ಹಾಗೂ ಹಿನ್ನಡೆಗಳ ಜೊತೆಯಲ್ಲಿ ಭಾರತೀಯ ಜನತಾಪಕ್ಷ ಒಂದು ಪ್ರಮುಖ ರಾಜಕೀಯ ವಿದ್ಯಮಾನವಾಗಿ ಭಾರತದ ರಾಜಕಾರಣದ ಮಂಚೂಣಿಯಲ್ಲಿದೆ ಎನ್ನುವುದು ಇಲ್ಲಿನ ಪ್ರತಿಪಾದನೆ ಮಾತ್ರವಲ್ಲದೇ, ಭಾರತದ ರಾಜಕಾರಣದಲ್ಲಿ ಭಾರತೀಯ ಜನತಾ ಪಕ್ಷದ ಪ್ರಾಬಲ್ಯ ಸಂಕೀರ್ಣ ಸ್ವರೂಪದಾಗಿದ್ದು ಇತರ ಅನೇಕ ವಿದ್ಯಮಾನಗಳ ಜೊತೆಗೆ ಅದು ಬೆಸೆದುಕೊಂಡಿದೆ.

ಕಳೆದ 20-25 ವರ್ಷಗಳಲ್ಲಿ ಭಾರತದ ರಾಜಕಾರಣದಲ್ಲಿ ಹಿಂದುತ್ವ ಸಾಂಸ್ಕೃತಿಕ ರಾಷ್ಟ್ರೀಯ ವಿದ್ಯಮಾನವಾಗಿ ಅತ್ಯಂತ ಪ್ರಭಾವಶಾಲಿಯಾಗಿ ಮೇಲೆದ್ದು ಬಂದಿದೆ. ಹಿಂದುತ್ವವನ್ನು ಪ್ರತಿಪಾದಿಸುತ್ತಿರುವ ಸಂಘ ಪರಿವಾರದ ಸಂಘಸಂಸ್ಥೆಗಳು ವ್ಯಾಪಕವಾಗಿ ತಮ್ಮ ವರ್ಚಸ್ಸನ್ನು ಬೆಳೆಸಿಕೊಂಡಿವೆ. ಈ ಸಂಕೀರ್ಣ ವಿದ್ಯಮಾನಕ್ಕೆ ಅನೇಕ ಮಜಲುಗಳಿದ್ದು, ಭಾರತದಲ್ಲಿ ಹಿಂದುತ್ವದ ವರ್ಧಮಾನಕ್ಕೆ ಅತ್ಯಂತ ಪ್ರಮುಖವಾದ ಸಾಕ್ಷಿಯೆಂದರೆ ಸಂಘ ಪರಿವಾರದ ರಾಜಕೀಯ ಮುಖವಾದ 'ಭಾರತೀಯ ಜನತಾಪಕ್ಷ'ದ ಹೆಚ್ಚುತ್ತಿರುವ ವರ್ಚಸ್ಸು, ಕಳೆದ 25 ವರ್ಷಗಳಲ್ಲಿ ಭಾರತೀಯ ಜನತಾಪಕ್ಷ ತನ್ನ ವರ್ಚಸ್ಸನ್ನು, ಗಣನೀಯವಾಗಿ ವೃದ್ಧಿಸಿಕೊಂಡಿದೆ. ಇದು ಕಳೆದ ಅನೇಕ ಸಾರ್ವತ್ರಿಕ ಚುನಾವಣೆಗಳ ಅಂಕಿ-ಅಂಶಗಳಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತದೆ. ಈ ಮಾತಿನ ಅರ್ಥ ಅದರ ಬಲವರ್ಧನೆ ಭಾರತದ ರಾಜಕಾರಣದಲ್ಲಿ ನಿರಾತಂಕವಾಗಿ ನಡೆದಿದೆ ಹಾಗೂ ಅದರ ವರ್ಚಸ್ಸು ಭಾರತದ ಉದ್ದಗಲಗಳಲ್ಲಿ ಸಮಾನವಾಗಿ ವ್ಯಾಪಿಸಿದೆ ಎನ್ನುವುದಲ್ಲ., ಅನೇಕ ಸಂದಿಗ್ಧಗಳು, ಪ್ರತಿರೋಧಗಳು ಹಾಗೂ ಹಿನ್ನ ಡೆಗಳ ಜೊತೆಯಲ್ಲಿ ಭಾರತೀಯ ಜನತಾ ಪಕ್ಷ ಒಂದು ಪ್ರಮುಖ ರಾಜಕೀಯ ವಿದ್ಯಮಾನವಾಗಿ ಭಾರತದ ರಾಜಕಾರಣದ ಮಂಚೂಣಿಯಲ್ಲಿದೆ ಎನ್ನುವುದು ಇಲ್ಲಿನ ಪ್ರತಿಪಾದನೆ ಮಾತ್ರವಲ್ಲದೇ, ಭಾರತದ ರಾಜಕಾರಣದಲ್ಲಿ ಭಾರತೀಯ ಜನತಾಪಕ್ಷದ ಪ್ರಾಬಲ್ಯ ಸಂಕೀರ್ಣದ ಸ್ವರೂಪದಾಗಿದ್ದು ಇತರ ಅನೇಕ ವಿದ್ಯಮಾನಗಳ ಜೊತೆಗೆ ಅದು ಬೆಸೆದುಕೊಂಡಿದೆ.

ಸಂಘ ಪರಿವಾರ ಹಾಗೂ ಭಾರತೀಯ ಜನತಾಪಕ್ಷ ಕರ್ನಾಟಕದಲ್ಲಿ ತನ್ನ ಆಸ್ತಿತ್ವವನ್ನು ಪ್ರಬಲವಾಗಿ ಕಂಡು ಕೊಂಡಿರುವುದು ಇತ್ತೀಚಿನ ದಿನಗಳಲ್ಲಿ. 90ರ ದಶಕಗಳಿಂದ ಈಚೆಗೆ ಭಾರತೀಯ [illegible]ನದ ಹಿನ್ನೆಲೆಯಲ್ಲಿ ಕರ್ನಾಟಕ ಕೂಡ ಸಂಘ ಪರಿವಾರದ ಪ್ರಮುಖ ಕಾರ್ಯಕ್ಷೇತ್ರವಾಗಿದೆ. ಮುಖ್ಯವಾಗಿ ಮಲೆನಾಡು ಕರಾವಳಿ ಪ್ರದೇಶಗಳಲ್ಲಿ ತನ್ನ ವಿಸ್ತಾರವನ್ನು ಪಡೆದುಕೊಂಡು, ಉಳಿದ ಪ್ರದೇಶಗಳಲ್ಲಿ ತನ್ನ ಆಸ್ತಿತ್ವಕ್ಕಾಗಿ ಪ್ರಯತ್ನಿಸಿ ಯಶಸ್ವಿಯಾಗಿರುವುದು 13ನೇ ವಿಧಾನಸಭಾ ಚುನಾವಣಾ ಫಲಿತಾಂಶ ಇದಕ್ಕೆ ಸಾಕ್ಷಿಯಾಗಿದೆ. 1985ರ ವಿಧಾನಸಭೆಯಲ್ಲಿ ಕೇವಲ ಎರಡು ಪ್ರತಿನಿಧಿಗಳನ್ನು ಮಾತ್ರ ಹೊಂದಿದ್ದ ಬಿ.ಜೆ.ಪಿ ಇವತ್ತು ಬಹುಮತದ ಸರ್ಕಾರವನ್ನು ಸ್ಥಾಪಿಸುವ ಮೂಲಕ ಇದೇ ಮೊದಲ ಭಾರಿಗೆ ಭಾರತೀಯ ಜನತಾ ಪಕ್ಷ ರಂಗ ಪ್ರವೇಶ ಮಾಡಿದೆ. ಬಿ.ಜೆ.ಪಿ ತನ್ನ ಸ್ವಂತಬಲದ ಮೇಲೆ ಆಧಿಕಾರಕ್ಕೆ ಬರುತ್ತಿರುವುದು ಇದು ಮೊದಲ ಬಾರಿ. ಈ ವಿಷಯವಾಗಿ ನಮ್ಮ ಅಭಿಪ್ರಾಯಗಳು ಏನೇ ಇರಬಹುದು ಇದು ನಮ್ಮ ಸಮಾಜದಲ್ಲಿ ಆಗಿರುವ ಒಂದು ಮಹತ್ವವಾದ ಬೆಳವಣಿಗೆ ಎಂಬುದನ್ನು ಒಪ್ಪಿಕೊಳ್ಳಬೇಕಾಗಿದೆ. ಕಳೆದ ಹದಿನೆಂಟು ವರ್ಷಗಳಿಂದ ನೇಪಥ್ಯದಲ್ಲಿ ನಿಂತು ಆಧಿಕಾರದ ಸೂತ್ರವನ್ನು ಹಿಡಿಯಲು ಕಾಯುತ್ತಿದ್ದ ಬಿ.ಜೆ.ಪಿ ಕೊನೆಗೆ ತನ್ನ ಗುರಿಯನ್ನು ಸಾಧಿಸಿದೆ. ಬಿ.ಜೆ.ಪಿಯ ಪ್ರಾಬಲ್ಯದೊಂದಿಗೆ ಇಡೀ ದೇಶದಲ್ಲಿ ಎರಡೇ ಪಕ್ಷಗಳ ನಡುವಣ ಹೋರಾಟದ ಪರಂಪರೆಯೇ ಬಲಗೊಳ್ಳುತ್ತಿದ್ದರೂ ಕರ್ನಾಟಕದಲ್ಲಿ ಮಾತ್ರ ಇನ್ನೂ ಮೂರನೇ ಶಕ್ತಿಗೆ ಸ್ಥಾನ ಉಳಿದುಕೊಂಡಿದೆ. ರಾಜಕೀಯ ಭೂಪಟದಿಂದಲೇ ಕಾಣೆಯಾಗಿ ಬಿಡುವ ಅಪಾಯವನ್ನು

ಎದುರಿಸುತ್ತಿದ್ದ ಜಾತ್ಯತೀತ ಜನತಾದಳ 26 ಸ್ಥಾನಗಳನ್ನು ಗೆಲ್ಲುವ ಮೂಲಕ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಬಿ.ಜೆ.ಪಿಯ ಗೆಲುವು, ಕಾಂಗ್ರೆಸ್ಸಿನ ಸೋಲುಗಳು ಹೇಗೆ ಸರಳವಾಗಿಲ್ಲವೋ ಹಾಗೆಯೇ ಜಾತ್ಯಾತೀತ ಜನತಾದಳ ತನ್ನ ನೆಲೆಯನ್ನು ಉಳಿಸಿಕೊಂಡಿರುವುದು ಅಷ್ಟೇ ಸಂಕೀರ್ಣವಾದುದು. ಬಿ.ಜೆ.ಪಿಯ ಸಿದ್ಧಾಂತವನ್ನು ಜನರು ಬೆಂಬಲಿಸಿದರು, ಕಾಂಗ್ರೆಸ್‌ನ್ನು ತಿರಸ್ಕರಿಸಿದರು, ಜಾತ್ಯಾ ತೀತ ಜನತಾದಳಕ್ಕೆ ಪಾಠ ಕಲಿಸಿದರು ಎಂಬ ಸರಳ ತೀರ್ಮಾನಕ್ಕೆ ಬರಲಾದರಷ್ಟು ಸಂಕೀರ್ಣವಾದ ಫಲಿತಾಂಶವಾಗಿದೆ. ಕಾಂಗ್ರೆಸ್ ತನ್ನ ಸೋಲಿಗೆ ಜಾತ್ಯಾತೀತ ಮತಗಳು ಒಡೆದದ್ದೆ ಕಾರಣವೆಂದು ಹೇಳಿಕೊಂಡಿತು. ಆದರೆ ಜಾತ್ಯಾತೀತ ಮತಗಳು ಒಡೆದು ಹೋದವು ಎಂಬ ವಾದವನ್ನು ಕರ್ನಾಟಕದ ಮಟ್ಟಿಗೆ ಒಪ್ಪಲು ಸಾಧ್ಯವಿಲ್ಲ. ಕರ್ನಾಕದಲ್ಲಿ ಯಾವತ್ತೂ ಒಂದಕ್ಕಿಂತ ಹೆಚ್ಚು ಜಾತ್ಯಾತೀತ ಪಕ್ಷಗಳು ಕಣದಲ್ಲಿರುತ್ತಿದ್ದವು. ಆದರೂ ತಥಾಕಥಿತ ಜಾತ್ಯಾತೀತ ಪಕ್ಷಗಳು ಗೆಲ್ಲುತ್ತಿದ್ದವು ಎಂಬುದನ್ನು ಇತಿಹಾಸ ಹೇಳುತ್ತಿದೆ.

ಬಿ.ಜೆ.ಪಿಯ ಗೆಲುವಿನ ಹಿಂದೆ ಲಿಂಗಾಯಿತರ ಮತಗಳು ಕೆಲಸ ಮಾಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಜನತಾದಳ ಒಡೆದು ಚೂರಾಗುತ್ತಿದ್ದಂತೆ ಜಗಿತುಕೊಳ್ಳತೊಡಗಿದ ಬಿ.ಜೆ.ಪಿ. ವೀರಶೈವರ ಕೋಟೆಗೆ ಲಗ್ಗೆ ಹಾಕಿದೆ. ಕಳೆದ ಬಾರಿಯಷ್ಟೇ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಖಾತೆ ತೆರೆದಿದ್ದ ಬಿ.ಜೆ.ಪಿ ಈ ಬಾರಿ ಕೆಲವು ಜಿಲ್ಲೆಗಳನ್ನೇ ತನ್ನ ತೆಕ್ಕೆಗೆ ಹಾಕಿಕೊಂಡಿದ್ದರಲ್ಲಿ ಲಿಂಗಾಯಿತ ಓಟುಗಳ ಪಾಲೂ ಇದೆ. ಹೈದ್ರಾಬಾದ್ ಕರ್ನಾಟಕ ಬಿ.ಜೆ.ಪಿಗೆ ಒಲಿಯಲು ಮುಖ್ಯ ಕಾರಣ ಅಲ್ಲಿನ ಜನ ದಶಕಗಳಿಂದ ನಿರೀಕ್ಷಿಸುತ್ತಿದ್ದ ಮೂರನೇ ಆಯ್ಕೆ. ಎರಡೇ ಪಕ್ಷಗಳ ನಡುವಣ ಇಲ್ಲಿನ ಮತದಾರರನ್ನು ಸುಸ್ತು ಮಾಡಿತ್ತು ಮೂರನೇ ಅಯ್ಕೆ ಇವರಿಗೊಂದು ಉತ್ಸಾಹವನ್ನು ತಂದಿದೆಯೇ ಹೊರತು ಇದು ಬಿ.ಜೆ.ಪಿ ಪ್ರತಿಪಾದಿಸುವ ಸಿದ್ಧಾಂತಕ್ಕೆ ದೊರೆತ ಸಾರಾಸಗಟು ಒಪ್ಪಿಗೆಯಲ್ಲ ಎಂಬುದನ್ನು ಮರೆಯಬಾರದು.

ಸಂಘ ಪರಿವಾರವು ತನ್ನ ಸಿದ್ಧಾಂತ, ತತ್ವ, ನೀತಿಗಳನ್ನು ಹಲವು ಮುಖವಾಣಿ ಸಂಸ್ಥೆಗಳ ಮೂಲಕ ಬಹುವಿಧದಲ್ಲಿ ಪ್ರತಿಷ್ಠಾಪಿಸಲು ಕಾರ್ಯತಂತ್ರ ರೂಪಿಸುತ್ತಿದೆ. ಆರ್.ಎಸ್.ಎಸ್. ಪ್ರಾರಂಭವಾದ ದಿನದಿಂದ ದೇಶದ ಪ್ರತಿಯೊಂದು ಕ್ಷೇತ್ರ, ಪ್ರದೇಶ, ಸಂಸ್ಥೆಗಳ ಒಳಹೊಕ್ಕು ಆಯಕಟ್ಟಿನ ಸ್ಥಾನಗಳನ್ನು ವ್ಯವಸ್ಥಿತವಾಗಿ ಆಕ್ರಮಿಸಿಕೊಂಡಿದೆ. ಸಂಘಪರಿವಾರದ ಸಂಘಟನೆಗಳಾದ ನೆಲೆ (ಅನಾಥ, ಮಕ್ಕಳ ಹಾಗೂ ಚಿಂದಿ ಆಯುವ ಮಕ್ಕಳ ಪುನರ್ವಸತಿ ಕೇಂದ್ರ), ರಾಷ್ಟ್ರೋತ್ಥಾನ ಪರಿಷತ್ತು, ಸೇವಾಇನ್‌ಆ್ಯಕ್ಷನ್, ಪ್ರಸನ್ನಜ್ಯೋತಿ, ಅನಾಥಶಿಶುನಿವಾಸ, ಸೇವಾಭಾರತಿ, ಸೇವಾಸಾಗರ, ಪ್ರಭೋಧಿನಿಗುರುಕುಲ, ಮೈತ್ರೇಯಿಗುರುಕುಲಂ, ಎ.ಬಿ.ವಿ.ಪಿ., ವನವಾಸಿ ಕಲ್ಯಾಣ ಆಶ್ರಮ, ವಿಶ್ವ ಹಿಂದು ಪರಿಷತ್, ಭಜರಂಗದಳ, ಭಾರತೀಯ ಮಜ್ದೂರ ಸಂಘ., ಜನಸೇವಾ, ವಿದ್ಯಾಭಾರತಿ, ಸ್ವದೇಶಿ ಜಾಗರಣ ಮಂಚ್, ರಾಷ್ಟ್ರೀಯಸೇವಿಕಾಸಮಿತಿ □ ಇನ್ನು ಮುಂತಾದ ಸಂಘಟನೆಗಳು ತಮ್ಮ ಬಲಪಂಥೀಯ ಅಲೋಚನೆಗಳನ್ನು ತುಂಬಾ ವ್ಯವಸ್ಥಿತವಾಗಿ ಬಿತ್ತುತ್ತಿವೆ. ತನ್ನ ರಾಜಕಾರಣದ ಮುಖ್ಯ ಕೇಂದ್ರವಾಗಿಟ್ಟುಕೊಂಡಿರುವ ಧಾರ್ಮಿಕ ಸಂಗತಿಗಳನ್ನು ಒಂದು ಧರ್ಮದ ವಿರುದ್ಧ ಎತ್ತಿಕಟ್ಟಿ ಅದನ್ನು ಸಾಮಾನ್ಯನ ನಂಬಿಕೆ ಎನ್ನುವಂತೆ ಬಿಂಬಿಸಲಾಗುತ್ತಿದೆ. ಮುಖ್ಯವಾಗಿ ಸಂಘ ಪರಿವಾರ ತಮ್ಮ ನಿಲುವುಗಳನ್ನು ಪ್ರತಿಪಾದಿಸಲು ಬಳಸುತ್ತಿರುವ ಮಾರ್ಗಗಳು ಅಪ್ರಜಾತಾಂತ್ರಿಕವಾಗಿದ್ದರೂ ಬಹುಸಂಖ್ಯಾತರ ಭಾವನೆಗಳನ್ನು ಕೆರಳಿಸಿ ಅವುಗಳನ್ನು ಅಧಿಕೃತಗೊಳಿಸುತ್ತಿವೆ. ಈ ಎಲ್ಲಾ ಕಾರ್ಯತಂತ್ರಗಳು ಇತ್ತೀಚಿನ ರಾಜಕಾರಣವನ್ನು ಗಮನಿಸುವ ಯಾರಿಗಾದರೂ ಅರ್ಥವಾಗುವ ಸಂಗತಿಗಳೇ.

ಕರ್ನಾಟಕದಲ್ಲಿ ಪ್ರಗತಿಪರ ಹಾಗೂ ಬುದ್ಧಿಜೀವಿ ವಲಯದ ಹಲವಾರು ಸಂಘಟನೆಗಳು ಸಕ್ರಿಯವಾಗಿದ್ದರೂ ಬಲಪಂಥೀಯ ಸಂಘಟನೆಗಳ ವಿಸ್ತಾರವನ್ನು ತಡೆಯಲು ಇವರಿಗೇಕೆ ಸಾಧ್ಯವಾಗಿಲ್ಲ ಎನ್ನುವುದು ಮುಖ್ಯ ಪ್ರಶ್ನೆ. ಇದಕ್ಕೆ ಪ್ರಮುಖ ಕಾರಣಗಳೆಂದರೆ.,

□ ಮೇಲ್ಕಾಣಿಸಿದ ರೀತಿಯಲ್ಲಿ ಪ್ರಗತಿಪರರಿಗೆ ಸಾಂಸ್ಕೃತಿಕ ಹಾಗೂ ರಾಜಕೀಯ ನಿಲುವಿನ ಬೇರೆ ಬೇರೆ ಸಂಘಟನೆಗಳು ಕಾರ್ಯ ನಿರ್ವಹಿಸುತ್ತಿಲ್ಲ. ಬಲಪಂಥೀಯ ರಾಜಕಾರಣವನ್ನು ಖಂಡಿಸುವ ನೆಲೆಯಲ್ಲಿ ಮಾತ್ರ ಈ ಸಂಘಟನೆಗಳು ತಮ್ಮ ರಾಜಕೀಯ ನೆಲೆಯನ್ನು ಕಂಡುಕೊಳ್ಳುತ್ತಿದೆಯೇ ಹೊರತು, ಇವುಗಳಿಗೆ ತಮ್ಮದೇ ಆದ ಸ್ವತಂತ್ರ ರಾಜಕಾರಣ ಇರುವುದಿಲ್ಲ ಅಥವಾ ಅವು ಬಹಳ ಕ್ಷೀಣವಾಗಿದೆ. ಈ ಖಂಡಿಸುವ ಮತ್ತು ನಿರಾಕರಿಸುವ ನೆಲೆ ನಾಗರೀಕರ ಹೃದಯವನ್ನು ತಟ್ಟುವುದು ಕಷ್ಟ.

□ ಪ್ರಗತಿಪರ ಸಂಘಟನೆಗಳು ವಿಭಿನ್ನ ಸಿದ್ಧಾಂತಗಳನ್ನು ಹೊಂದಿರುವುದರಿಂದ ಇವುಗಳನ್ನು ಒಂದುಗೂಡಿಸುವುದು ತುಂಬಾ ಕಷ್ಟ. ಹಾಗೆಯೇ ತೀವ್ರ ಉಗ್ರಗಾಮಿ ನಿಲುವಿನ ಎಡಪಂಥೀಯ (Naxalites) ಕೂಡಾ ಈ ಸಂಘಟನೆಗಳ ಜೊತೆಗೆ ಇರುವುದರಿಂದ ಎಲ್ಲರನ್ನು ಒಂದೇ ಬೀಸಿಗೆ ನಕ್ಸಲೀಯರು ಎಂದು ಆರೋಪಿಸುವುದು ಬಲಪಂಥೀಯ ಸಂಘಟನೆಗಳಿಗೆ ಬಹು ಸುಲಭ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಶಕ್ತಿ ರಾಜಕಾರಣವನ್ನು ತಡೆಯುವಷ್ಟು ಬಲ ಪ್ರಗತಿಪರ ಸಂಘಟನೆಗಳಿಗೆ ಇರುವುದಿಲ್ಲ. ಹಾಗಿದ್ದರಿಂದಲೇ ಕಳೆದ ಚುನಾವಣೆಯಲ್ಲಿ 'ಬಿ.ಜೆ.ಪಿ ಸೋಲಿಸಿ' ಎಂಬ ಸಾರ್ವತ್ರಿಕ ಕರೆ ಜನರನ್ನು ಮುಟ್ಟಲು ವಿಫಲವಾಯಿತು. ಲ್ಯಾಟಿನ್ ಅಮೇರಿಕಾ ದೇಶಗಳಲ್ಲಿ ಅಮೆರಿಕಾದ ಸಾಮ್ರಾಜ್ಯಶಾಹಿಯನ್ನು ವಿರೋಧಿಸಲು ಭಿನ್ನ ತಾತ್ವಿಕತೆಯ ಸಂಘಟನೆಗಳು ಒಂದೇ ಸೂರಿನಡಿ ಬಂದಿರುವುದು ನಾವು ವಿಶೇಷವಾಗಿ ಗಮನಿಸ ಬಹುದಾದ ಅಂಶವಾಗಿದೆ. ಅಲ್ಲಿ ಸಾಧ್ಯವಾಗಿದ್ದು ಇಲ್ಲಿ ಏಕೆ ಸಾಧ್ಯವಾಗಿಲ್ಲ ಎಂಬುದನ್ನು ನಾವು ಪರಿಶೀಲಿಸಬೇಕಾಗಿದೆ. ಇದರ ಬಗ್ಗೆ ವಿಶೇಷವಾಗಿ ಅಧ್ಯಯನ ನಡೆಸುವುದು ಇಂದಿನ ತುರ್ತುಗಳಲ್ಲಿ ಒಂದು.

□ ಇಲ್ಲಿಯವರೆಗೆ ಜಾತ್ಯಾತೀತತೆಯನ್ನು ಪ್ರತಿಪಾದಿಸುತ್ತಿದ್ದ ಅನೇಕ ಹಿಂದುಳಿದ ಮತ್ತು ಅಲ್ಪಸಂಖ್ಯಾತ ನಾಯಕರುಗಳು ಆಧಿಕಾರದ ಅಸೆಯಿಂದ ದಿಢೀರನೆ ಬಲಪಂಥೀಯ ಸಂಘಟನೆಗಳ ಜೊತೆಗೆ ಗುರುತಿಸಿಕೊಂಡಿದ್ದಾರೆ. ಇದಕ್ಕೆ ಶಕ್ತ ರಾಜಕಾರಣದ ಹಿನ್ನೆಲೆ ಇರುವುದರಿಂದ ಜಾತ್ಯಾತೀತ ನಿಲುವೇ ಇವತ್ತು ಪ್ರಶ್ನಾರ್ಹವಾಗಿದೆ. ಈ ಹಿನ್ನೆಲೆಯಲ್ಲಿ ಜಾತ್ಯಾತೀತತೆಯನ್ನು ಪ್ರತಿಪಾದಿಸುವ ಯಾವ ನಾಯಕರಿಗಾದರೂ ಜನಸಾಮಾನ್ಯರು ಈ ರೀತಿಯ ವಿರೋಧಾಭಾಸಗಳನ್ನು ಎತ್ತಿ ತೋರಿಸಿದಾಗ ಸುಲಭವಾಗಿ ಉತ್ತರಿಸುವುದು ಕಷ್ಟವಾಗುತ್ತದೆ. ಆದ್ದರಿಂದ Secularism ತನ್ನ ಭಾಷೆ ಮತ್ತು ವಿಸ್ತಾರವನ್ನು ಬದಲಾಯಿಸಿಕೊಳ್ಳಬೇಕಾದ ಅಗತ್ಯ ನಮಗೆ ಎದ್ದು ಕಾಣುತ್ತಿದೆ.

□ ನಮ್ಮ ಸಮೂಹ ಮಾಧ್ಯಮಗಳಲ್ಲಿ ವ್ಯಕ್ತವಾಗುತ್ತಿರುವ ಅಭಿಪ್ರಾಯ ಚರ್ಚೆಗಳ ಸ್ವರೂಪವು ತೀರಾ ಪ್ರಶ್ನಾರ್ಹ. ಅತಿರಂಜಿತ ಸುದ್ದಿಗಳು ಹಾಗೂ ಕಾರ್ಪೋರೆಟ್ ಜಗತ್ತಿನ ವಿದ್ಯಮಾನಗಳೇ ನಮ್ಮ ಮಾಧ್ಯಮಗಳ ಪ್ರಮುಖ ಕಾಳಜಿಯಂತಾಗಿರುವುದರಿಂದ ಪ್ರಗತಿಪರ ಧ್ವನಿಗಳು ಪ್ರಧಾನಧಾರೆ ಮಾಧ್ಯಮಗಳಲ್ಲಿ ಪ್ರಮುಖವಾಗಿ ಕೇಳಿಸುವುದೇ ಇಲ್ಲ. ಮತಾಂತರದಂತಹ ಚರ್ಚೆ ಇಡೀ ಸಮುದಾಯಗಳನ್ನೇ ಹಾಳು ಮಾಡುತ್ತಿರುವಂತೆ ಮಾಧ್ಯಮಗಳು ಬಿಂಬಿಸಿದವು. ಬಲಪಂಥೀಯ ಅಭಿಪ್ರಾಯವನ್ನೇ ಇಡೀ ಸಮಾಜದ ಅಭಿಪ್ರಾಯದಂತೆ ಬಿಂಬಿಸಲಾಯಿತ್ತು. ಆದ್ದರಿಂದ ಶಕ್ತಿರಾಜಕಾರಣ–ಕೋಮುವಾದ–ಸಮೂಹ ಮಾಧ್ಯಮಗಳಿಗಿರುವ ಅನೈತಿಕ ಸಂಬಂಧ ಇವತ್ತಿನ ಅನೇಕ ವಿರೋಧಾಭಾಸಗಳಲ್ಲಿ ಒಂದಾಗಿದೆ.

ನಾಗರೀಕ ಸಮಾಜ ಸಮುದಾಯಗಳಲ್ಲಿ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳಬೇಕಾದ ಅಗತ್ಯ ಕಂಡು ಬರುತ್ತಿದೆ. ಇದು ಒಂದು ಸಾಮೂಹಿಕ ಚಳುವಳಿಯಾಗಬೇಕಾದ ಅಗತ್ಯವಾಗಿದೆಯೇ ಹೊರತು ನಮ್ಮ ಮಾಧ್ಯಮಗಳಲ್ಲಿ ಬರುವ ಮೊಂಬತ್ತಿ ಹಚ್ಚುವ ತಾರೆಗಳಂತೆ ಅಗ ಕೂಡದು. ಹಾಗೆಯೇ ಬಲಪಂಥೀಯ ಸಂಘಟನೆಗಳು ಜನರ ಸಾಮಾನ್ಯ ತಿಳುವಳಿಕೆಯನ್ನು ಉಪಯೋಗಿಸಿಕೊಂಡು ಬೆಳೆಯುತ್ತಿರುವಂತೆ ಈ ತರಹದ ವಾದಗಳು ಪೊಳ್ಳುತನಗಳನ್ನು ಜನರಿಗೆ ತಲುಪಿಸುವುದು ಇವತ್ತಿನ ತುರ್ತಾಗಿದೆ. ಸೆಕ್ಯುಲಾರಿಸಂ ಇವತ್ತು ತನ್ನ ಭಾಷೆಯನ್ನು ಬದಲಿಸಿಕೊಂಡು ನೇರವಾಗಿ ಜನರನ್ನು ತಲುಪುವ ಶಕ್ತಿಗಳಿಸಿಕೊಳ್ಳಬೇಕಾಗಿದೆ. ಬಹುಸಂಖ್ಯಾತರು ನಡೆಸುವ ಹಿಂಸೆಯನ್ನು ಖಂಡಿಸುವಂತೆಯೇ ಅಲ್ಪಸಂಖ್ಯಾತರು ನಡೆಸುವ ಹಿಂಸೆಯನ್ನು ಅದೇ ಭಾಷೆಯಲ್ಲಿ ಮತ್ತು ಅದೇ ನೆಲೆಯಲ್ಲಿ ಖಂಡಿಸಬೇಕಾದ ಅಗತ್ಯವಿದೆ. □

> **ನಮ್ಮ ಸಮೂಹ ಮಾಧ್ಯಮಗಳಲ್ಲಿ ವ್ಯಕ್ತವಾಗುತ್ತಿರುವ ಅಭಿಪ್ರಾಯ ಚರ್ಚೆಗಳ ಸ್ವರೂಪವು ತೀರಾ ಪ್ರಶ್ನಾರ್ಹ. ಅತಿರಂಜಿತ ಸುದ್ಧಿಗಳು ಹಾಗೂ ಕಾರ್ಪೋರೆಟ್ ಜಗತ್ತಿನ ವಿದ್ಯಮಾನಗಳೇ ನಮ್ಮ ಮಾಧ್ಯಮಗಳ ಪ್ರಮುಖ ಕಾಳಜಿಯಂತಾಗಿರುವುದರಿಂದ ಪ್ರಗತಿಪರ ಧ್ವನಿಗಳು ಪ್ರಧಾನಧಾರೆ ಮಾಧ್ಯಮಗಳಲ್ಲಿ ಪ್ರಮುಖವಾಗಿ ಕೇಳಿಸುವುದೇ ಇಲ್ಲ. ಮತಾಂತರದಂತಹ ಚರ್ಚೆ ಇಡೀ ಸಮುದಾಯಗಳನ್ನೇ ಹಾಳು ಮಾಡುತ್ತಿರುವಂತೆ ಮಾಧ್ಯಮಗಳು ಬಿಂಬಿಸಿದವು. ಬಲಪಂಥೀಯ ಅಭಿಪ್ರಾಯವನ್ನೇ ಇಡೀ ಸಮಾಜದ ಅಭಿಪ್ರಾಯದಂತೆ ಬಿಂಬಿಸಲಾಯಿತ್ತು. ಆದ್ದರಿಂದ ಶಕ್ತಿರಾಜಕಾರಣ–ಕೋಮುವಾದ–ಸಮೂಹ ಮಾಧ್ಯಮಗಳಿಗಿರುವ ಅನೈತಿಕ ಸಂಬಂಧ ಇವತ್ತಿನ ಅನೇಕ ವಿರೋಧಾಭಾಸಗಳಲ್ಲಿ ಒಂದಾಗಿದೆ.**

ಮತಾಂತರ ಯಾಕೆ?

ಮೂಲ:
ಬಿ.ಆರ್. ಅಂಬೇಡ್ಕರ್
ಅನು:
ಎನ್.ಎಸ್. ಶಂಕರ್

ಮತಾಂತರ ಮಕ್ಕಳಾಟವಲ್ಲ. ಯಾನ ಹೊರಡುವ ಮುನ್ನ ಅಂಬಿಗ ಹೇಗೆ ಎಲ್ಲ ಥರದ ತಯಾರಿ ಮಾಡಿಕೊಳ್ಳಬೇಕೋ, ಹಾಗೇ ನಾವೂ ಸಿದ್ಧತೆ ಮಾಡಿ ಕೊಳ್ಳಬೇಕು. ಎಷ್ಟು ಜನ ಹಿಂದೂ ಚೌಕಟ್ಟಿನಿಂದ ಆಚೆ ಬರಲು ಸಿದ್ಧರಿದ್ದಾರೆ ಎಂದು ನನಗೆ ತಿಳಿಯದಿದ್ದರೆ, ನಾನು ಮತಾಂತರಕ್ಕೆ ಸಿದ್ಧತೆ ನಡೆಸಲಾರೆ. ಒಬ್ಬ ಸಾಮಾನ್ಯ ಮನುಷ್ಯನಿಗೆ ಈ ಮತಾಂತರದ ವಿಚಾರ ತುಂಬಾ ಪ್ರಮುಖವಾದ, ಆದರೆ ಅರ್ಥ ಮಾಡಿಕೊಳ್ಳಲು ಕಠಿಣವಾದ ಸಂಗತಿ. ಮತಾಂತರಕ್ಕೆ ಎರಡು ಮುಖಗಳಿವೆ. ಒಂದು- ಸಾಮಾಜಿಕ. ಎರಡನೆಯದು-ಆಧ್ಯಾತ್ಮಿಕ. ನೀವು ಯಾವ ದಿಕ್ಕಿನಿಂದ ಯೋಚಿಸಿದರೂ, ಅಸ್ಪೃಶ್ಯತೆಯ ಸ್ವರೂಪ ಆಚರಣೆಗಳ ತಿಳುವಳಿಕೆಯಿಲ್ಲದೆ ಮತಾಂತರದ ನಿಜವಾದ ಅರ್ಥವನ್ನು ತಿಳಿಯಲಾರಿರಿ.

ಮತಾಂತರ ಮಕ್ಕಳಾಟವಲ್ಲ. ಅದು ಮನರಂಜನೆಯ ಸಂಗತಿಯೂ ಅಲ್ಲ. ಮನುಷ್ಯನ ಬದುಕನ್ನು ಹಸನುಗೊಳಿಸುವ ಯಾನವೇ ಅದರ ತಿರುಳು. ಯಾನ ಹೊರಡುವ ಮುನ್ನ ಅಂಬಿಗ ಹೇಗೆ ಎಲ್ಲ ಥರದ ತಯಾರಿ ಮಾಡಿಕೊಳ್ಳಬೇಕೋ, ಹಾಗೇ ನಾವೂ ಸಿದ್ಧತೆ ಮಾಡಿಕೊಳ್ಳಬೇಕು. ಎಷ್ಟು ಜನ ಹಿಂದೂ ಚೌಕಟ್ಟಿನಿಂದ ಆಚೆ ಬರಲು ಸಿದ್ಧರಿದ್ದಾರೆ ಎಂದು ನನಗೆ ತಿಳಿಯದಿದ್ದರೆ, ನಾನು ಮತಾಂತರಕ್ಕೆ ಸಿದ್ಧತೆ ನಡೆಸಲಾರೆ.

ಒಬ್ಬ ಸಾಮಾನ್ಯ ಮನುಷ್ಯನಿಗೆ ಈ ಮತಾಂತರದ ವಿಚಾರ ತುಂಬಾ ಪ್ರಮುಖವಾದ, ಆದರೆ ಅರ್ಥ ಮಾಡಿಕೊಳ್ಳಲು ಕಠಿಣವಾದ ಸಂಗತಿ.

ಮತಾಂತರಕ್ಕೆ ಎರಡು ಮುಖಗಳಿವೆ. ಒಂದು–ಸಾಮಾಜಿಕ/ಧಾರ್ಮಿಕ. ಎರಡನೆಯದು–ಐಹಿಕ ಹಾಗೂ ಆಧ್ಯಾತ್ಮಿಕ. ನೀವು ಯಾವ ದಿಕ್ಕಿನಿಂದ ಯೋಚಿಸಿದರೂ, ಅಸ್ಪೃಶ್ಯತೆಯ ಸ್ವರೂಪ ಆಚರಣೆಗಳ ತಿಳುವಳಿಕೆಯಿಲ್ಲದೆ ಮತಾಂತರದ ನಿಜವಾದ ಅಂತರಾರ್ಥವನ್ನು ತಿಳಿಯಲಾರಿರಿ.

ನಾನು ಹೇಳಬಯಸುವುದಿಷ್ಟೇ: ಅಸ್ಪೃಶ್ಯತೆಯ ಸ್ವರೂಪ ಮತ್ತು ನಿಜಜೀವನದಲ್ಲಿ ಅದರ ಆಚರಣೆಯ ಸ್ಪಷ್ಟ ಕಲ್ಪನೆ ನಿಮಗೆ ಬರಬೇಕಾದರೆ, ನಿಮ್ಮ ವಿರುದ್ಧ ನಡೆದಿರುವ ಅಸಂಖ್ಯ ದೌರ್ಜನ್ಯಗಳನ್ನು ನೆನಪಿಗೆ ತಂದುಕೊಳ್ಳಿ. ಆದರೆ ಇದೆಲ್ಲ ಏಕೆ ನಡೆಯುತ್ತದೆಂದು ನಿಮ್ಮಲ್ಲಿ ಕೆಲ ವರು ಮಾತ್ರ ಮನಗಂಡಿರಬಹುದು. ಈ ದಬ್ಬಾಳಿಕೆಯ ಮೂಲವೇನು? ಇದರ ಬೇರು ಯಾವುದು? ಇದನ್ನು ಅರ್ಥ ಮಾಡಿಕೊಳ್ಳುವುದು ನನ್ನ ಮಟ್ಟಿಗೆ ತುಂಬಾ ಅಗತ್ಯ.

ಇದು ಇಬ್ಬರು ಪ್ರತಿಸ್ಪರ್ಧಿಗಳ ನಡುವಣ ವ್ಯಾಜ್ಯವಲ್ಲ. ಅಸ್ಪೃಶ್ಯತೆಯ ಸಮಸ್ಯೆ ಒಂದು ವರ್ಗಸಂಘರ್ಷದ ಸ್ವರೂಪದ್ದು. ಇದು ಸವರ್ಣೀಯರು ಮತ್ತು ಅಸ್ಪೃಶ್ಯರ ನಡುವಣ ಸಂಘರ್ಷ. ಇದು ಒಬ್ಬ ಮನುಷ್ಯ ಇನ್ನೊಬ್ಬನಿಗೆ ಅನ್ಯಾಯ ಮಾಡುವ ವಿಷಯ ಮಾತ್ರವಲ್ಲ; ಬದಲಿಗೆ ಒಂದು ವರ್ಗ, ಇನ್ನೊಂದು ವರ್ಗದ ಮೇಲೆ ಎಸಗುವ ಅನ್ಯಾಯವಿದು. ಈ ವರ್ಗ ಸಂಘರ್ಷಕ್ಕೂ, ಸಾಮಾಜಿಕ ಅಂತಸ್ತಿಗೂ ಸಂಬಂಧವಿದೆ. ಈ ಸಂಘರ್ಷವು, ಒಂದು ವರ್ಗದೊಡನೆ ಇನ್ನೊಂದು ವರ್ಗ ಎಂಥ ಸಂಬಂಧ ಇಟ್ಟುಕೊಂಡಿರಬೇಕೆಂಬುದನ್ನು ಸೂಚಿಸುತ್ತದೆ. ನೀವು ಇತರರೊಡನೆ ಸಮಾನ ಸ್ಥಾನಮಾನ ಕೇಳಿದ ಕೂಡಲೇ ಸಂಘರ್ಷ ಶುರುವಾಗುತ್ತದೆ.

ಅವರ ಸಿಟ್ಟಿನ ಕಾರಣ ಸರಳವಾಗಿದೆ. ನೀವು ಅವರೊಡನೆ ಸರಿ ಸಮಾನವಾಗಿ ವರ್ತಿಸಿದ ಮಾತ್ರಕ್ಕೇ ಅವರಿಗೆ ಅವಮಾನವಾಗುತ್ತದೆ. ಅಸ್ಪೃಶ್ಯತೆಯೆನ್ನುವುದು ಅಲ್ಪಕಾಲಿಕ ಅಥವಾ ತಾತ್ಕಾಲಿಕ ಸ್ಥಿತಿಯಲ್ಲ. ಇದು ಶಾಶ್ವತವಾದದ್ದು. ನೇರವಾಗಿ ಹೇಳುವುದಾದರೆ, ಹಿಂದೂಗಳು ಮತ್ತು ಅಸ್ಪೃಶ್ಯರ ನಡುವಣ ಸಂಘರ್ಷವೇ ಶಾಶ್ವತವಾದದ್ದು. ಹಿಂದೂ ಸವರ್ಣೀಯರ ನಂಬಿಕೆಯಂತೆ, ನಿಮ್ಮನ್ನು ಸಮಾಜದ ಕನಿಷ್ಠತಮ ಸ್ಥಾನದಲ್ಲಿರಿಸಿರುವ ಧರ್ಮವೇ ನಿರಂತರವಾದದ್ದು. ಆ ಕಾರಣ ಈ ಸಂಘರ್ಷವೂ ನಿರಂತರವಾದದ್ದು. ಇದರಲ್ಲಿ ಕಾಲ, ಸಂದರ್ಭಕ್ಕನುಗುಣವಾಗಿ ಯಾವ ಬದಲಾವಣೆಯೂ ಸಾಧ್ಯವಿಲ್ಲ. ಇಂದು ನೀವು ಅತ್ಯಂತ ಕೆಳಸ್ಥಾನದಲ್ಲಿದ್ದೀರಿ ಮತ್ತು ಎಂದೆಂದಿಗೂ ಅದೇ ಕೆಳಸ್ಥಾನ ದಲ್ಲಿ ಉಳಿಯುತ್ತೀರಿ. ಅಂದರೆ, ಹಿಂದೂಗಳು ಮತ್ತು ಅಸ್ಪೃಶ್ಯರ ಸಂಘರ್ಷವೂ ಸದಾ ಕಾಲ ಉಳಿದೇ ಉಳಿಯುತ್ತದೆ.

ಈ ಸಂಘರ್ಷವನ್ನು ನೀವು ಎದುರಿಸಿ ಉಳಿಯುವುದು ಹೇಗೆ ಎಂಬುದೇ ಇಲ್ಲಿ ಮುಖ್ಯ ಪ್ರಶ್ನೆ. ಈ ಬಗ್ಗೆ ವಿಚಾರ ಮಾಡದಿದ್ದರೆ, ನಿಮಗೆ ಹೊರದಾರಿಯೂ ಹೊಳೆಯುವುದಿಲ್ಲ. ಹಿಂದೂಗಳ ಕಟ್ಟಪ್ಪಣೆಗೆ ವಿಧೇಯರಾಗಿ ಇರಬಯಸುವವರು, ಅವರ ಗುಲಾಮರಾಗಿ ಉಳಿ ಯುತ್ತಾರೆ. ಇವರ ಬಗ್ಗೆ ನಾವು ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ಆದರೆ ಯಾರು ಆತ್ಮಗೌರವ ಮತ್ತು ಸಮಾನತೆ ಬಯಸುವರೋ ಅಂಥವರು ಯೋಚನೆ ಮಾಡದೆ ವಿಧಿಯಿಲ್ಲ.

ನಾವು ಈ ಸಂಘರ್ಷವನ್ನು ಎದುರಿಸಿ ಬದುಕುಳಿಯುವುದು ಹೇಗೆ? ನನ್ನ ಮಟ್ಟಿಗೆ ಇದೇನೂ ಕಠಿಣ ಪ್ರಶ್ನೆಯಲ್ಲ.

ಯಾವುದೇ ಸಂಘರ್ಷದಲ್ಲಿ ಬಲಶಾಲಿಯಾದವನೇ ಗೆಲ್ಲುವನೆಂಬುದನ್ನು ಇಲ್ಲಿ ನೆರೆದವರು ಒಪ್ಪಲೇಬೇಕು. ಬಲವಿಲ್ಲದವನಿಗೆ ಗೆಲುವಿಲ್ಲ. ಇದನ್ನು ಅನುಭವವೇ ಸಾಬೀತು ಮಾಡಿದೆ. ಅದಕ್ಕಾಗಿ ನಾನೇನೂ ನಿದರ್ಶನ ಕೊಟ್ಟು ಹೇಳಬೇಕಾದ್ದಿಲ್ಲ. ಇದರಿಂದ ಉದ್ಭವವಾಗುವ ಪ್ರಶ್ನೆ ಏನೆಂದರೆ, ಈ ಹೋರಾಟದಲ್ಲಿ ಬದುಕುಳಿಯುವಷ್ಟು ಶಕ್ತಿ ನಿಮಗಿದೆಯೇ?

ಮನುಷ್ಯನ ಶಕ್ತಿ ಮೂರು ಬಗೆಯದು:

1. ಮಾನವ ಬಲ (ಸಂಖ್ಯಾಬಲ)
2. ಹಣಕಾಸು ಮತ್ತು
3. ಬೌದ್ಧಿಕ ಶಕ್ತಿ.

ಈ ಮೂರರಲ್ಲಿ ಯಾವ ಬಗೆಯ ಬಲವಿದೆ ನಿಮಗೆ? ಸಂಖ್ಯಾಬಲದ ದೃಷ್ಟಿಯಿಂದ ನೋಡಿದರೆ, ನೀವು ಅಲ್ಪಸಂಖ್ಯಾತರು. ಮುಂಬಯಿ ಪ್ರಸಿಡೆನ್ಸಿಯಲ್ಲಿ ಅಸ್ಪೃಶ್ಯರು ಇಡೀ ಜನಸಂಖ್ಯೆಯ ಕೇವಲ ಎಂಟನೇ ಒಂದು ಭಾಗದಷ್ಟಿದ್ದಾರೆ. ಅದೂ ಅಸಂಘಟಿತರಾಗಿದ್ದಾರೆ. ಅವರ ಒಳಜಾತಿಗಳು ಅವರನ್ನು ಒಂದಾಗಲೂ ಬಿಟ್ಟಿಲ್ಲ. ಅವರು ಒಂದೇ ಭೂಪ್ರದೇಶದಲ್ಲೂ ಕೂಡಿಕೊಂಡಿಲ್ಲ. ಹಳ್ಳಿ ಹಳ್ಳಿಗಳಲ್ಲಿ ಹಂಚಿ ಹೋಗಿದ್ದಾರೆ. ಇಂಥ ಸನ್ನಿವೇಶದಲ್ಲಿ ಬಿಕ್ಕಟ್ಟಿನ ಸಂದರ್ಭ ಎದುರಾದರೆ, ಇವರ ಸಂಖ್ಯಾಬಲ ಎದ್ದು ನಿಂತು ಹೋರಾಡುವ ಶಕ್ತಿಯನ್ನು ಕೊಡುವುದಿಲ್ಲ. ಆರ್ಥಿಕ ಬಲದ್ದೂ ಇದೇ ಸ್ಥಿತಿ. ಹಾಗೆ ನೋಡಿದರೆ, ನಿಮಗೆ ಅಲ್ಪಸ್ವಲ್ಪ ಸಂಖ್ಯಾಬಲವಾದರೂ ಇರಬಹುದು. ಆದರೆ ಹಣಕಾಸಿನ ಬಲವಂತೂ ಏನೇನೂ ಇಲ್ಲ. ನಿಮ್ಮಲ್ಲಿ ಯಾವುದೇ ವಾಣಿಜ್ಯವಿಲ್ಲ, ವ್ಯಾಪಾರವಿಲ್ಲ, ಉದ್ಯೋಗವಿಲ್ಲ, ಭೂಮಿಯಿಲ್ಲ. ಮೇಲ್ಜಾತಿಯವರು ಬಿಸಾಕುವ ರೊಟ್ಟಿಯ ತುಣುಕೇ ನಿಮ್ಮ ಜೀವನಾಧಾರ. ಆಹಾರವಿಲ್ಲ, ಬಟ್ಟೆಬರೆ ಯಿಲ್ಲ, ಹಣಕಾಸಿನ ಬಲ ಇನ್ನೆಲ್ಲಿಂದ ಬಂದೀತು? ಕಾನೂನಿನ ಮೂಲಕ ಸಾಂತ್ವನ ಪಡೆಯುವ ಸಾಮರ್ಥ್ಯವೂ ನಿಮಗಿಲ್ಲ. ನ್ಯಾಯಾಲಯದ ಖರ್ಚು ವೆಚ್ಚ ಭರಿಸಲಾರದ ಸಾವಿರಾರು ಅಸ್ಪೃಶ್ಯರು ಹಿಂದೂಗಳಿಂದ ಆಗುವ ಅಪಮಾನ, ದಬ್ಬಾಳಿಕೆ, ದಮನಗಳನ್ನು ವಿರೋಧದ ಒಂದೇ ಒಂದು ನಿಟ್ಟುಸಿರೂ ಇಲ್ಲದೆ ಸಹಿಸಿಕೊಳ್ಳುತ್ತಾರೆ.

ಇನ್ನು ಬೌದ್ಧಿಕ ಶಕ್ತಿಯ ಪ್ರಶ್ನೆಗೆ ಬಂದರೆ, ಇನ್ನೂ ಶೋಚನೀಯ ಸ್ಥಿತಿ. ಇಷ್ಟು ಕಾಲ ಅಪಮಾನ, ದಬ್ಬಾಳಿಕೆಯನ್ನು ಅವಿರೋಧ ತಾಳ್ಮೆಯಿಂದ ಸಹಿಸಿಕೊಂಡ ಪ್ರವೃತ್ತಿಯೇ ಪ್ರತೀಕಾರ ಮತ್ತು ಬಂಡಾಯದ ಪ್ರಜ್ಞೆಯನ್ನು ಕೊಂದುಬಿಟ್ಟಿದೆ. ಆತ್ಮವಿಶ್ವಾಸ, ಚುರುಕು ಮತ್ತು ಮಹತ್ವಾಕಾಂಕ್ಷೆಗಳೇ ಮಾಯವಾಗಿಬಿಟ್ಟಿವೆ. ನೀವೆಲ್ಲ ನಿಸ್ಸಹಾಯಕರಾಗಿ, ಚೈತನ್ಯ ಹೀನರಾಗಿ ಪೇಲವವಾಗಿಬಿಟ್ಟಿದ್ದೀರಿ. ಎಲ್ಲೆಲ್ಲೂ ಸೋಲು ಮತ್ತು ನಿರಾಶಾ ವಾದದ ವಾತಾವರಣವೇ ಇದೆ. ಏನಾದರೂ

ಮಾಡಲು ಸಾಧ್ಯವೆಂಬ ಅತ್ಯಲ್ಪ ಕಲ್ಪನೆಯೂ ನಿಮ್ಮ ತಲೆಗೆ ಹೋಗುವುದಿಲ್ಲ.

ನಾನು ಈವರೆಗೆ ಹೇಳಿದ್ದೆಲ್ಲ ಸರಿ ಎಂದಾದರೆ, ಇದರಿಂದ ಹೊರಡುವ ತೀರ್ಮಾನಗಳನ್ನೂ ನೀವು ಒಪ್ಪಲೇಬೇಕಾಗುತ್ತದೆ. ಅಂದರೆ ನೀವು ನಿಮ್ಮ ಬಲವನ್ನಷ್ಟೇ ನೆಚ್ಚಿಕೊಂಡರೆ, ಎಂದೆಂದೂ ಹಿಂದೂಗಳ ದಬ್ಬಾಳಿಕೆಯನ್ನು ಎದುರಿಸಲಾರಿರಿ. ನೀವು ಬಲಹೀನರೆಂಬ ಕಾರಣಕ್ಕೇ ನೀವು ತುಳಿತಕ್ಕೊಳಗಾಗಿದ್ದೀರಿ ಎಂಬುದರಲ್ಲಿ ನನಗೆ ಯಾವ ಸಂದೇಹವೂ ಇಲ್ಲ.

ಯಾಕೆಂದರೆ, ಇಲ್ಲಿ ಅಲ್ಪಸಂಖ್ಯಾತರು ನೀವಷ್ಟೇ ಅಲ್ಲ; ಮುಸ್ಲಿಮರೂ ಅಲ್ಪಸಂಖ್ಯಾತರೇ. ಮಹರ್ ಮಾಂಗ್ ಜನರಂತೆ, ಹಳ್ಳಿಗಳಲ್ಲಿ ಅವರ ಮನೆಗಳೂ ಕಡಿಮೆಯೇ. ಅದರೆ ಮುಸ್ಲಿಮರನ್ನು ಮುಟ್ಟುವ ಧೈರ್ಯ ಯಾರಿಗೂ ಬರುವುದಿಲ್ಲ. ನೀವು ಮಾತ್ರ ಸದಾ ಸರ್ವದಾ ದಬ್ಬಾಳಿಕೆಯ ಬಲಿಪಶುವಾಗುತ್ತೀರಿ. ಯಾಕೆ ಹೀಗೆ? ಹಳ್ಳಿಯಲ್ಲಿ ಮುಸ್ಲಿಮರದು ಎರಡೇ ಮನೆಯಿರಲಿ, ಅವರನ್ನು ಯಾರೂ ಮುಟ್ಟುವುದಿಲ್ಲ. ಅದೇ ನಿಮ್ಮವು ಹತ್ತು ಮನೆಯಿದ್ದರೂ, ಇಡೀ ಹಳ್ಳಿಯೇ ನಿಮ್ಮ ಮೇಲೆ ದಬ್ಬಾಳಿಕೆ ನಡೆಸುತ್ತದೆ. ಹೀಗೇಕಾಗುತ್ತದೆ? ತುಂಬಾ ಗಹನವಾದ ಪ್ರಶ್ನೆಯಿದು. ಇದಕ್ಕೆ ನೀವು ಉತ್ತರ ಹುಡುಕಬೇಕು.

ನನ್ನ ಪ್ರಕಾರ ಈ ಪ್ರಶ್ನೆಗೆ ಇರುವುದೊಂದೇ ಉತ್ತರ: ಹಳ್ಳಿಯ ಎರಡೇ ಮನೆಗಳಿಗೆ ಬೆಂಬಲವಾಗಿ ಭಾರತದ ಇಡೀ ಮುಸ್ಲಿಂ ಜನಸಮುದಾಯವೇ ಎದ್ದು ನಿಲ್ಲುತ್ತದೆಂದು ಹಿಂದೂಗಳಿಗೆ ಗೊತ್ತು. ಆದ್ದರಿಂದಲೇ ಅವರಿಗೆ ಮುಸ್ಲಿಮರನ್ನು ಮುಟ್ಟುವ ಧೈರ್ಯ ಬರುವುದಿಲ್ಲ. ಮತ್ತು ಆ ಎರಡು ಮನೆಗಳು ಸಂಪೂರ್ಣ ಸ್ವತಂತ್ರ ನಿರ್ಭಯ ಬದುಕು ಬಾಳುತ್ತವೆ. ಯಾಕೆಂದರೆ ಯಾವುದೇ ಹಿಂದೂ ಅವರ ಮೇಲೆ ಆಕ್ರಮಣ ಮಾಡಿದರೆ, ಪಂಜಾಬಿನಿಂದ ಮದ್ರಾಸಿನವರೆಗೆ ಇಡೀ ಮುಸ್ಲಿಂ ಜನಸ್ತೋಮ ಅವರ ರಕ್ಷಣೆಗೆ ಧಾವಿಸುವುದೆಂದು ಅವರಿಗೂ ಗೊತ್ತು. ಅದೇ ಇನ್ನೊಂದು ಕಡೆ ನಿಮ್ಮನ್ನು ಪಾರು ಮಾಡಲು ಯಾರೂ ಬರುವುದಿಲ್ಲ. ಯಾರೂ ಸಹಾಯ ಮಾಡುವುದಿಲ್ಲ. ಬಿಡಿಗಾಸಿನ ನೆರವೂ ನಿಮ್ಮನ್ನು ತಲುಪುವುದಿಲ್ಲ ಎಂದು ಹಿಂದೂಗಳಿಗೆ ಸ್ಪಷ್ಟವಾಗಿದೆ. ತಹಸೀಲ್ದಾರ್ ಮತ್ತು ಪೊಲೀಸರು ಸವರ್ಣೀಯರಾಗಿರುತ್ತಾರೆ. ಮತ್ತು ಅಸ್ಪೃಶ್ಯರ ವ್ಯಾಜ್ಯಗಳಲ್ಲಿ ಹಿಂದೂಗಳು ತಮ್ಮ ಕರ್ತವ್ಯಕ್ಕಿಂತ ತಮ್ಮ ಜಾತಿಗೇ ಹೆಚ್ಚು ನಿಷ್ಠರಾಗಿರುತ್ತಾರೆ. ನೀವು ನಿಸ್ಸಹಾಯಕರೆಂಬ ಕಾರಣದಿಂದಲೇ ಹಿಂದೂಗಳು ನಿಮ್ಮ ಮೇಲೆ ದಬ್ಬಾಳಿಕೆ, ದೌರ್ಜನ್ಯ ಎಸಗುತ್ತಾರೆ.

ಇದರಿಂದ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ಒಂದು–ಬಲವಿಲ್ಲದೆ ನೀವು ದಬ್ಬಾಳಿಕೆಯನ್ನು ಎದುರಿಸಲಾರಿರಿ. ಎರಡನೆಯದು–ನಿಮಗೆ ದಬ್ಬಾಳಿಕೆಯನ್ನು ಎದುರಿಸುವ ಬಲವಿಲ್ಲ! ಇದರಿಂದ ಇನ್ನೂ ಒಂದು ಸಂಗತಿ ಹೊಳೆಯುತ್ತದೆ. ಅದೆಂದರೆ ಈ ದಬ್ಬಾಳಿಕೆಯನ್ನು ಎದುರಿಸಲು ಬೇಕಾದ ಶಕ್ತಿಯನ್ನು ನಾವು ಹೊರಗಿನಿಂದಲೇ ಪಡೆಯಬೇಕು. ಈಗ ಮುಖ್ಯ ಪ್ರಶ್ನೆಯೆಂದರೆ, ನಮಗೆ ಬೇಕಾದ ಶಕ್ತಿಯನ್ನು ನಾವು ಸಂಪಾದಿಸುವುದು ಹೇಗೆ? ಈ ವಿಚಾರವಾಗಿ ನೀವೀಗ ನಿಷ್ಪಕ್ಷಪಾತ ಆಲೋಚನೆಗೆ ತೊಡಗಬೇಕು.

ನೀವು ಬೇರೊಂದು ಸಮಾಜದೊಡನೆ ನಿಕಟ ಸಂಬಂಧ ಏರ್ಪಡಿಸಿಕೊಳ್ಳದಿದ್ದರೆ, ಅಂದರೆ ಬೇರೊಂದು ಧರ್ಮಕ್ಕೆ ಸೇರಿಕೊಳ್ಳದಿದ್ದರೆ, ಆಚೆ ಕಡೆಯಿಂದ ಬಲ ಸಂಪಾದನೆ ಸಾಧ್ಯವಿಲ್ಲ. ಅಂದರೆ, ನೀವು ನಿಮ್ಮ ಪ್ರಸಕ್ತ ಧರ್ಮವನ್ನು ಬಿಟ್ಟುಕೊಟ್ಟು ಇನ್ನೊಂದು ಸಮಾಜದಲ್ಲಿ ಬೆರೆತುಹೋಗಬೇಕು ಎಂಬುದು ಸುಸ್ಪಷ್ಟ. ಹಾಗೆಮಾಡದೆ, ನಿಮಗೆ ಆ ಹೊರ ಸಮಾಜದ ಶಕ್ತಿ ದೊರೆಯುವುದಿಲ್ಲ. ಆ ಶಕ್ತಿಯಿಲ್ಲದೆ, ನೀವು ಮತ್ತು ನಿಮ್ಮ ಮುಂದಿನ ಪೀಳಿಗೆಗಳು ಇದೇ ದಯನೀಯ ಸ್ಥಿತಿಯಲ್ಲೇ ಬಾಳಬೇಕಾಗುತ್ತದೆ.

> ದೇವರು ಸರ್ವಾಂತರ್ಯಾಮಿ ಎಂಬುದು ವಿಜ್ಞಾನದ ತತ್ವವೇ ಹೊರತು ಧರ್ಮದ್ದಲ್ಲ. ಯಾಕೆಂದರೆ ಧರ್ಮಕ್ಕೆ ನೇರ ಸಂಬಂಧವಿರುವುದು ಮನುಷ್ಯನ ನಡವಳಿಕೆಯ ಜತೆ. ಹಿಂದೂಗಳನ್ನು, ನಡೆ ಮತ್ತು ನುಡಿ ಎರಡು ವಿರುದ್ಧ ಧ್ರುವಗಳಾಗಿರುವಂಥ ಕ್ರೂರ ಜನಾಂಗಗಳ ಜೊತೆ ಗೂಡಿ ನಿಲ್ಲಿಸಬಹುದು. ಬಾಯಲ್ಲಿ ರಾಮನಾಮ, ಕಂಕುಳಲ್ಲಿ ಚಾಕು. ಮಾತಾಡುವುದು ಸಂತರಂತೆ, ನಡವಳಿಕೆ ಕಟುಕರಂತೆ. ಅಸ್ಪೃಶ್ಯರು, ಕನಿಷ್ಠರಾಗಿರುವುದು ಕೇವಲ ಹಿಂದೂಗಳ ಕಣ್ಣಲ್ಲಲ್ಲ. ಹಿಂದೂಗಳು ನಮ್ಮನ್ನು ನಡೆಸಿಕೊಳ್ಳುವ ರೀತಿಯಿಂದಾಗಿ ಇಡೀ ಭಾರತದಲ್ಲೇ ನಾವು ಎಲ್ಲರ ಪಾಲಿಗೂ ಕನಿಷ್ಠತಮವಾಗಿಬಿಟ್ಟಿದ್ದೇವೆ, ಈ ಲಜ್ಜಾಸ್ಪದ ಸ್ಥಿತಿಯಿಂದ ಹೊರಬರಬೇಕಾದರೆ, ನಮಗಂಟಿದ ಕೊಳಕನ್ನು ತೊಳೆದು ನಮ್ಮ ಅಮೂಲ್ಯ ಜೀವದ ಉಪಯೋಗ ಮಾಡಿಕೊಳ್ಳಬೇಕಾದರೆ ನಮಗಿರುವುದೊಂದೇ ದಾರಿ: ಈ ಹಿಂದೂಧರ್ಮದ ಸಂಕೋಲೆಗಳನ್ನು ಕಿತ್ತೆಸೆದು, ನಮ್ಮನ್ನು ಬಂಧಿಸಿರುವ ಹಿಂದೂ ಕಟ್ಟು ಕಳಚಿ ಒಗೆಯುವುದು.

ಈವರೆಗೆ ನಾವು, ಐಹಿಕ ಲಾಭದ ದೃಷ್ಟಿಯಿಂದ ಮತಾಂತರ ಹೇಗೆ ಅಗತ್ಯ ಎಂದು ಚರ್ಚಿಸಿದೆವು. ಈಗ ಮತಾಂತರವು ಆಧ್ಯಾತ್ಮಿಕ ಸುಖಕ್ಕೂ ಹೇಗೆ ಅತ್ಯಗತ್ಯ ಎಂಬ ದಿಕ್ಕಿನಲ್ಲಿ ನನ್ನ ಆಲೋಚನೆ ಮಂಡಿಸಬಯಸುತ್ತೇನೆ. ಧರ್ಮ ಎಂದರೇನು? ಅದೇಕೆ ಅಗತ್ಯವಾಗಿದೆ?

'ಯಾವುದು ಮನುಷ್ಯರನ್ನು ಆಳುತ್ತದೋ, ಅದೇ ಧರ್ಮ'–ಇದು ಧರ್ಮದ ನಿಜವ್ಯಾಖ್ಯಾನ. ಹಿಂದೂಧರ್ಮದಲ್ಲಿ ವ್ಯಕ್ತಿಗೆ ಯಾವುದೇ ಸ್ಥಾನವಿಲ್ಲ. ಹಿಂದೂಧರ್ಮದ ರಚನೆಗೆ ವರ್ಗಕಲ್ಪನೆಯೇ ಆಧಾರ. ಒಬ್ಬ ವ್ಯಕ್ತಿ ಇನ್ನೊಬ್ಬನೊಡನೆ ಹೇಗೆ ವರ್ತಿಸಬೇಕೆಂದು ಹಿಂದೂಧರ್ಮ ಹೇಳಿಕೊಡುವುದಿಲ್ಲ. ಹೀಗೆ ವ್ಯಕ್ತಿಯನ್ನು ಗುರುತಿಸದ ಧರ್ಮ, ವೈಯಕ್ತಿಕವಾಗಿ ನನಗೆ ಸ್ವೀಕಾರಾರ್ಹವಲ್ಲ...

ಒಬ್ಬ ವ್ಯಕ್ತಿಯ ಉನ್ನತಿಗೆ ಮೂರು ಅಂಶಗಳು ಬೇಕು. ಅವು–ಸಹಾನುಭೂತಿ, ಸಮಾನತೆ ಮತ್ತು ಸ್ವಾತಂತ್ರ್ಯ. ಈ ಮೂರರಲ್ಲಿ ಯಾವುದಾದರೂ ಒಂದು ಹಿಂದೂಧರ್ಮದಲ್ಲಿ ಸಿಕ್ಕುವುದೆಂದು ನಿಮ್ಮ ಅನುಭವದಿಂದ ಹೇಳಬಲ್ಲಿರಾ?

ಅಸಮಾನತೆಯ ಇಂಥ ಜೀವಂತ ನಿದರ್ಶನ ಜಗತ್ತಿನಲ್ಲೇ ಇನ್ನೆಲ್ಲೂ ಸಿಕ್ಕುವುದಿಲ್ಲ. ಮನುಕುಲದ ಇತಿಹಾಸದಲ್ಲೇ ಅಸ್ಪೃಶ್ಯತೆಯನ್ನು ಮೀರಿಸುವಂಥ ಉಗ್ರ ಅಸಮಾನತೆ ಕಂಡುಬರುವುದಿಲ್ಲ. ನೀವು ಇನ್ನೂ ಹಿಂದೂಗಳಾಗಿ ಮುಂದುವರೆಯುತ್ತಿರುವುದರಿಂದಲೇ ನಿಮ್ಮನ್ನು ಈ ಸ್ಥಿತಿಗೆ ದಬ್ಬಲಾಗಿದೆಯೆಂದು ನನ್ನ ಭಾವನೆ. ನಿಮ್ಮಲ್ಲೇ ಮುಸ್ಲಿಮರಾದವರನ್ನು ಹಿಂದೂಗಳು ಅಸ್ಪೃಶ್ಯರೆಂದಾಗಲೀ ಅಸಮಾನರೆಂದಾಗಲೀ ನೋಡುವುದಿಲ್ಲ. ಕ್ರೈಸ್ತರಾದವರೂ ಅಷ್ಟೇ.

ದೇವರು ಸರ್ವಾಂತರ್ಯಾಮಿ ಎಂಬುದು ವಿಜ್ಞಾನದ ತತ್ವವೇ ಹೊರತು ಧರ್ಮದ್ದಲ್ಲ. ಯಾಕೆಂದರೆ ಧರ್ಮಕ್ಕೆ ನೇರ ಸಂಬಂಧವಿರುವುದು ಮನುಷ್ಯನ ನಡವಳಿಕೆಯ ಜತೆ. ಹಿಂದೂಗಳನ್ನು, ನಡೆ ಮತ್ತು ನುಡಿ ಎರಡು ವಿರುದ್ಧ ಧ್ರುವಗಳಾಗಿರುವಂಥ ಕ್ರೂರ ಜನಾಂಗಗಳ ಜೊತೆ ಗೂಡಿ ನಿಲ್ಲಿಸಬಹುದು. ಬಾಯಲ್ಲಿ ರಾಮನಾಮ, ಕಂಕುಳಲ್ಲಿ ಚಾಕು. ಮಾತಾಡುವುದು ಸಂತರಂತೆ, ನಡವಳಿಕೆ ಕಟುಕರಂತೆ.

ಅಸ್ಪೃಶ್ಯರು, ಕನಿಷ್ಠರಾಗಿರುವುದು ಕೇವಲ ಹಿಂದೂಗಳ ಕಣ್ಣಲ್ಲಲ್ಲ. ಹಿಂದೂಗಳು ನಮ್ಮನ್ನು ನಡೆಸಿಕೊಳ್ಳುವ ರೀತಿಯಿಂದಾಗಿ ಇಡೀ ಭಾರತದಲ್ಲೇ ನಾವು ಎಲ್ಲರ ಪಾಲಿಗೂ ಕನಿಷ್ಠತಮವಾಗಿಬಿಟ್ಟಿದ್ದೇವೆ. ಈ ಲಜ್ಜಾಸ್ಪದ ಸ್ಥಿತಿಯಿಂದ ಹೊರಬರಬೇಕಾದರೆ, ನಮಗಂಟಿದ ಕೊಳಕನ್ನು ತೊಳೆದು ನಮ್ಮ ಅಮೂಲ್ಯ ಜೀವದ ಉಪಯೋಗ ಮಾಡಿಕೊಳ್ಳಬೇಕಾದರೆ ನಮಗಿರುವುದೊಂದೇ ದಾರಿ: ಈ ಹಿಂದೂಧರ್ಮದ ಸಂಕೋಲೆಗಳನ್ನು ಕಿತ್ತೆಸೆದು, ನಮ್ಮನ್ನು ಬಂಧಿಸಿರುವ ಹಿಂದೂ ಕಟ್ಟು ಕಳಚಿ ಒಗೆಯುವುದು.

ರುಚಿ ಎಷ್ಟು ಬದಲಾದರೂ ವಿಷವೆಂದೂ ಅಮೃತವಾಗಲಾರದು. ಜಾತಿನಾಶದ ಮಾತಾಡುವುದೂ ಒಂದೇ, ವಿಷವನ್ನು ಅಮೃತವಾಗಿ ಮಾಡುವ ಮಾತೂ ಒಂದೇ. ಸಂಕ್ಷಿಪ್ತವಾಗಿ ಹೇಳುವುದಾದರೆ, ಎಲ್ಲಿಯವರೆಗೆ ನಾವು ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಕುಷ್ಠರೋಗಿಯಂತೆ ಕಾಣಲು ಕಲಿಸುವ ಧರ್ಮದಲ್ಲಿರುತ್ತೇವೆಯೋ, ಅಲ್ಲಿಯವರೆಗೆ ಜಾತಿಪದ್ಧತಿಯಿಂದಾಗಿ ನಮ್ಮ ಮನದಲ್ಲಿ ಆಳವಾಗಿ ಬೇರು ಬಿಟ್ಟಿರುವ ತಾರತಮ್ಯಪ್ರಜ್ಞೆ ಅಳಿಸಿಹೋಗಲಾರದು. ಅಸ್ಪೃಶ್ಯರ ಪಾಲಿಗೆ ಜಾತಿ ಮತ್ತು ಅಸ್ಪೃಶ್ಯತೆ ನಾಶವಾಗಬೇಕಾದರೆ, ಧರ್ಮ ಪರಿವರ್ತನೆಯೊಂದೇ ಮದ್ದು.

ಮತಾಂತರದಲ್ಲಿ ನವೀನತೆ ಅನ್ನುವುದೇನಿದೆ?

ನಿಜ ಹೇಳುವುದಾದರೆ, ನಿಮಗೂ ಸವರ್ಣೀಯರಿಗೂ ಹಾಲಿ ಇರುವ ಸಾಮಾಜಿಕ ಸಂಬಂಧವಾದರೂ ಎಂಥದ್ದು? ಹಿಂದೂಗಳಿಂದ ಮುಸ್ಲಿಮರು, ಕ್ರೈಸ್ತರು ಎಷ್ಟು ಪ್ರತ್ಯೇಕವಾಗಿದ್ದಾರೋ, ನೀವೂ ಅಷ್ಟೇ. ನಿಮ್ಮ ಸಮಾಜ ಮತ್ತು ಹಿಂದೂ ಸಮಾಜ ಎರಡು ಪ್ರತ್ಯೇಕ ಪಂಗಡಗಳಾಗಿವೆ. ನೀವು ಮತಾಂತರಗೊಂಡರೆ, ಒಂದು ಸಮಾಜ ಒಡೆದುಹೋಯಿತೆಂದು ಯಾರೂ ಹೇಳಲು ಸಾಧ್ಯವಿಲ್ಲ. ನೀವು ಈಗಲೂ ಪ್ರತ್ಯೇಕವೇ, ಆಗಲೂ ಪ್ರತ್ಯೇಕವೇ. ಮತಾಂತರದಿಂದ ಹೊಸದೇನೂ ಸಂಭವಿಸುವುದಿಲ್ಲ. ಅಂದ ಮೇಲೆ ಮತಾಂತರಕ್ಕೆ ಯಾಕೆ ಹೆದರಬೇಕು? ಅಂಥ ಭಯಕ್ಕೆ ನನಗೆ ಯಾವ ಕಾರಣವೂ ಹೊಳೆಯುವುದಿಲ್ಲ....

ಧರ್ಮ ಪರಿವರ್ತನೆಯೆಂಬುದು ಹೆಸರಿನ ಬದಲಾ

[illegible] ಧರ್ಮ [illegible] ಸಾಮಾಜಿಕ [illegible] ನಾವು [illegible] ಕ್ರಿಸ್ತ [illegible] ಅಥವಾ [illegible] ಕೇವಲ ಧರ್ಮ ಪರಿ[illegible] ಬದಲಾವಣೆಯೂ ಹೌದು.....

ಈ ಮತಾಂತರದ ಆಂದೋಲನ ಆರಂಭವಾದಾಗಿನಿಂದಲೂ, ಎಷ್ಟೋ ಜನರಿಂದ ಇದಕ್ಕೆ ಆಕ್ಷೇಪಣೆಗಳು ಬರುತ್ತಿವೆ. ಅಂಥ ಆಕ್ಷೇಪಗಳಲ್ಲಿ ಸತ್ಯಾಂಶವೇನಾದರೂ ಇದೆಯೇ ಎಂದು ಪರಿಶೀಲಿಸೋಣ. ನಮ್ಮ ಧರ್ಮ,- ನಮ್ಮ ಪೂರ್ವಿಕರ ಧರ್ಮ ಎಂಬ ಒಂದೇ ಕಾರಣದಿಂದ ಈ ಧರ್ಮಕ್ಕೆ ಅಂಟಿಕೊಳ್ಳಬೇಕೆಂದು ಹುಟ್ಟಾ ಮುಟ್ಠಾಳನಾದವ ಮಾತ್ರ ಹೇಳಬಲ್ಲ. ಬುದ್ಧಿ ಸ್ತಿಮಿತವಿರುವ ಯಾವನೂ ಈ ವಾದ ಒಪ್ಪಿಕೊಳ್ಳಲಾರ. ಇಂಥವರು ಚರಿತ್ರೆಯನ್ನು ಓದಿದಂತೆಯೇ ಕಾಣುವುದಿಲ್ಲ. ಪ್ರಾಚೀನ ಆರ್ಯಧರ್ಮಕ್ಕೆ ವೈದಿಕ ಧರ್ಮವೆಂಬ ಹೆಸರಿತ್ತು. ಆ ಧರ್ಮದ ಪ್ರಮುಖ ಲಕ್ಷಣಗಳು ಮೂರು- ಗೋಭಕ್ಷಣೆ, ಮದ್ಯಪಾನ ಮತ್ತು ವಿಲಾಸ. ಇವು ಆ ಧರ್ಮದ ದಿನ ನಿತ್ಯದ ಚಟು ವಟಿಕೆಗಳಾಗಿದ್ದವು. ಆಗ ಭಾರತದಲ್ಲಿ ಸಹಸ್ರಾರು ಜನ ಇದನ್ನೇ ಪಾಲಿಸಿದರು. ಕೆಲವರು ಈಗಲೂ ಆ ದಿನ ಗಳಿಗೆ ಹಿಂತಿರುಗುವ ಕನಸು ಕಾಣುತ್ತಾರೆ. ಈಗ ಪ್ರಾಚೀನ ಧರ್ಮಕ್ಕೆ ಅಂಟಿಕೊಳ್ಳುವುದೇ ಸರಿ ಎಂದಾದರೆ, ಭಾರತದ ಜನ ಹಿಂದೂಧರ್ಮ ಬಿಟ್ಟು ಬೌದ್ಧ ಧರ್ಮವನ್ನೇಕೆ ಒಪ್ಪಿ ಕೊಂಡರು? ಯಾಕೆ ವೈದಿಕ ಧರ್ಮ ತೊರೆದು ಬಂದರು?.... ಆದ್ದರಿಂದ ಹಿಂದೂ ಧರ್ಮ ನಮ್ಮ ಸನಾತನ ಧರ್ಮವಲ್ಲ, ನಮ್ಮ ಮೇಲೆ ಹೇರಿದ ಗುಲಾಮಗಿರಿಯಷ್ಟೇ...

ನಮಗೆ ಮತಾಂತರದಿಂದ ಸ್ವಾತಂತ್ರ್ಯ ಸಿಕ್ಕುವುದಾದರೆ, ನಾವೇಕೆ ಹಿಂದೂಧರ್ಮ ಸುಧಾರಣೆಯ ಹೊಣೆಗಾರಿಕೆ ಹೊರಬೇಕು? ಅದಕ್ಕಾಗಿ ನಮ್ಮ ಶಕ್ತಿ, ಆಸ್ತಿಪಾಸ್ತಿ ಯಾಕೆ ಬಲಿ ಕೊಡಬೇಕು? ನಮ್ಮ ಆಂದೋಲನದ ಉದ್ದೇಶ-ಹಿಂದೂ ಸಮಾಜ ಸುಧಾರಣೆ ಎಂದು ಯಾರೂ ಅಪಾರ್ಥ ಮಾಡಿಕೊಳ್ಳಬಾರದು. ನಮ್ಮ ಉದ್ದೇಶ-ಅಸ್ಪೃಶ್ಯರಿಗೆ ಸಾಮಾಜಿಕ ಸ್ವಾತಂತ್ರ್ಯ ಸಾಧಿಸುವುದು ಮಾತ್ರ, ಮತಾಂತರದ ಮೂಲಕವಲ್ಲದೆ ಈ ಸ್ವಾತಂತ್ರ್ಯ ದಕ್ಕಲಾರದೆಂಬುದೂ ಅಷ್ಟೇ ನಿಚ್ಚಳ ಸತ್ಯ.

ಹಿಂದೂ ಆಗಿ ಉಳಿದುಕೊಂಡರೆ ಮಾತ್ರ ಈ ಸಮಾನತೆ ಸಾಧ್ಯ; ಇಲ್ಲದಿದ್ದರೆ ಇಲ್ಲ ಎಂದು ಹೇಳಬಲ್ಲವರು ಯಾರು? ಸಮಾನತೆಯ ಸಾಧನೆಗೆ ಎರಡು ಮಾರ್ಗಗಳಿವೆ ಅಂದುಕೊಳ್ಳೋಣ. ಒಂದು-ಹಿಂದೂ ಆಗಿಯೇ ಉಳಿದುಕೊಳ್ಳುವುದು. ಎರಡನೆಯದು- ಮತಾಂತರದ ಮೂಲಕ. ಹಿಂದೂ ಚೌಕಟ್ಟಿನಲ್ಲಿ ಉಳಿದೇ ಸಮಾನತೆ ಸಾಧಿಸಬೇಕಾದರೆ ಸ್ಪೃಶ್ಯ ಅಸ್ಪೃಶ್ಯ ಪ್ರಜ್ಞೆ ನಿವಾರಣೆಯಾದರೆ ಸಾಲದು; ಅಂತರ್ಜಾತಿ ಭೋಜನ ಮತ್ತು ಮದುವೆಗಳೂ ನಡೆಯಬೇಕು. ಅಗಷ್ಟೇ ಇದು ಸಾಧ್ಯ. ಅಂದರೆ ಚಾತುರ್ವರ್ಣ ಪದ್ಧತಿ ನಿರ್ಮೂಲ ಮಾಡಿ ಬ್ರಾಹ್ಮಣಧರ್ಮವನ್ನು ಬುಡಮೇಲು ಮಾಡಬೇಕು ಎಂದರ್ಥ. ಇದು ಸಾಧ್ಯವೇ? ಇಲ್ಲ ಅಂದ ಮೇಲೆ ಹಿಂದೂಧರ್ಮದಲ್ಲೇ ಉಳಿದು ಕೊಂಡು ಸಮಾನತೆಯನ್ನು ನಿರೀಕ್ಷಿಸುವುದು ವಿವೇಕ ಅನಿಸಿಕೊಳ್ಳುವುದೇ? ಮತ್ತು ಸಮಾನತೆ ತರುವ ಪ್ರಯತ್ನಗಳಲ್ಲಿ ನೀವು ಜಯಗಳಿಸುವುದು ಸಾಧ್ಯವೇ? ಸಾಧ್ಯವೇ ಇಲ್ಲ. ಇದಕ್ಕಿಂತ ಮತಾಂತರದ ಹಾದಿಯೇ ಎಷ್ಟೋ ಸರಳವಾದದ್ದು.

ರುಚಿ ಎಷ್ಟು ಬದಲಾದರೂ ವಿಷವೆಂದೂ ಅಮೃತವಾಗಲಾರದು. ಜಾತಿನಾಶದ ಮಾತಾಡುವುದೂ ಒಂದೇ, ವಿಷವನ್ನು ಅಮೃತವಾಗಿ ಮಾಡುವ ಮಾತೂ ಒಂದೇ. ಸಂಕ್ಷಿಪ್ತವಾಗಿ ಹೇಳುವುದಾದರೆ, ಎಲ್ಲಿಯವರೆಗೆ ನಾವು ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಕುಷ್ಠರೋಗಿಯಂತೆ ಕಾಣಲು ಕಲಿಸುವ ಧರ್ಮದಲ್ಲಿರುತ್ತೇವೆಯೋ, ಅಲ್ಲಿಯವರೆಗೆ ಜಾತಿ ಪದ್ಧತಿಯಿಂದ ನಮ್ಮ ಮನದಲ್ಲಿ ಆಳವಾಗಿ ಬೇರು ಬಿಟ್ಟಿರುವ ತಾರತಮ್ಯ ಪ್ರಜ್ಞೆ ಅಳಿಸಿ ಹೋಗಲಾರದು. ಅಸ್ಪೃಶ್ಯರ ಪಾಲಿಗೆ ಜಾತಿ ಮತ್ತು ಅಸ್ಪೃಶ್ಯತೆ ನಾಶವಾಗಬೇಕಾದರೆ, ಧರ್ಮ ಪರಿವರ್ತನೆಯೊಂದೇ ಮದ್ದು. ಈ ಮತಾಂತರದ ಆಂದೋಲನ ಆರಂಭವಾದಾಗಿನಿಂದಲೂ, ಎಷ್ಟೋ ಜನರಿಂದ ಇದಕ್ಕೆ ಆಕ್ಷೇಪಣೆಗಳು ಬರುತ್ತಿವೆ. ಅಂಥ ಆಕ್ಷೇಪಗಳಲ್ಲಿ ಸತ್ಯಾಂಶವೇನಾದರೂ ಇದೆಯೇ ಎಂದು ಪರಿಶೀಲಿಸೋಣ. ನಮ್ಮ ಧರ್ಮ, ನಮ್ಮ ಪೂರ್ವಿಕರ ಧರ್ಮ ಎಂಬ ಒಂದೇ ಕಾರಣದಿಂದ ಈ ಧರ್ಮಕ್ಕೆ ಅಂಟಿಕೊಳ್ಳಬೇಕೆಂದು ಹುಟ್ಟಾ ಮುಟ್ಠಾಳನಾದವ ಮಾತ್ರ ಹೇಳ ಬಲ್ಲ. ಬುದ್ಧಿಸ್ತಿಮಿತವಿರುವ ಯಾವನೂ ಈ ವಾದ ಒಪ್ಪಿಕೊಳ್ಳಲಾರ. ಇಂಥವರು ಚರಿತ್ರೆಯನ್ನು ಓದಿದಂತೆಯೇ ಕಾಣುವುದಿಲ್ಲ.

ಹಿಂದೂ ಸಮಾಜ ಮುಸ್ಲಿಂ ಹಾಗೂ ಕ್ರೈಸ್ತರನ್ನು ಸಮಾನರಂತೆ ನಡೆಸಿಕೊಳ್ಳುತ್ತದೆ. ಆದ್ದರಿಂದ ಮತಾಂತರದಿಂದ ಸಾಮಾಜಿಕ ಸಮಾನತೆ ಸಾಧ್ಯವೆಂದು ಸ್ಪಷ್ಟವಾಗುತ್ತದೆ. ಹಾಗಾದಾಗ ನೀವೇಕೆ ಮತಾಂತರದ ಸರಳ ಹಾದಿಯನ್ನು ಆರಿಸಿಕೊಳ್ಳಬಾರದು?

ಧರ್ಮ ಪರಿವರ್ತನೆಯಿಂದ ಅಸ್ಪೃಶ್ಯರು ಮತ್ತು ಹಿಂದೂಗಳಿಬ್ಬರಿಗೂ ಸಂತೋಷ ಸಿಕ್ಕುವುದೆಂದು ನನ್ನ ಅಭಿಪ್ರಾಯ. ನೀವು ಹಿಂದೂ ಗಳಾಗಿ ಉಳಿದಿರುವವರೆಗೆ ಸಾಮಾಜಿಕ ಸಂಪರ್ಕ, ಆಹಾರ, ನೀರು ಮತ್ತು ಅಂತರ್ಜಾತಿ ಮದುವೆಗಳಿಗಾಗಿ ಹೊಡೆದಾಡಬೇಕಾಗುತ್ತದೆ. ಈ ಹೋರಾಟ ನಡೆಯುವಷ್ಟು ಕಾಲವೂ, ನೀವೂ ಹಿಂದೂಗಳೂ ಪರಸ್ಪರ ವೈರಿಗಳಾಗಿರುತ್ತೀರಿ. ಮತಾಂತರಗೊಂಡ ಕೂಡಲೇ ವೈಷಮ್ಯದ ಬೇರುಗಳೇ ನಾಶವಾಗುತ್ತವೆ. ಹೀಗೆ ಮತಾಂತರದಿಂದ ಸಮಾನತೆಯನ್ನು ಸಾಧಿಸಿ, ಹಿಂದೂಗಳು- ಅಸ್ಪೃಶ್ಯರ [illegible] ತರಬಹುದಾದರೆ, ಅಸ್ಪೃಶ್ಯರು ಈ ಸರಳ ಸಂತೋಷದಾಯಕ ಮಾರ್ಗವನ್ನೇಕೆ ಹಿಡಿಯಬಾರದು? ಈ ದೃಷ್ಟಿಯಿಂದ ನೋಡಿದರೆ ಮತಾಂತರ-ಸ್ವಾತಂತ್ರ್ಯ ಮತ್ತು ಸಮಾನತೆಯ ಕಡೆಗ ಕರೆದೊಯ್ಯುವ ಏಕೈಕ ಮಾರ್ಗವಾಗಿ ಗೋಚರಿಸುತ್ತದೆ. ಇದು ಹೇಡಿತನವೂ ಅಲ್ಲ, ಪಲಾಯನ ವಾದವೂ ಅಲ್ಲ...

ಮುಸ್ಲಿಮರು, ಕ್ರೈಸ್ತರಲ್ಲಿಯೂ ಜಾತಿಗಳಿವೆ. ಹಾಗಿದ್ದರೂ, ಅದನ್ನು ಹಿಂದೂಧರ್ಮಕ್ಕೆ ಹೋಲಿಸುವುದು ಸಣ್ಣತನವಾದೀತು. ಹಿಂದೂಗಳ ಜಾತಿವ್ಯವಸ್ಥೆಗೂ, ಮುಸ್ಲಿಂ ಕ್ರೈಸ್ತರ ಜಾತಿಪದ್ಧತಿಗೂ ಮಹತ್ತರ ವ್ಯತ್ಯಾಸವಿದೆ. ಮೊದಲನೆಯದಾಗಿ ಕ್ರೈಸರು- ಮುಸ್ಲಿಮರ ಜಾತಿಪದ್ಧತಿ ಅವರ ಸಾಮಾಜಿಕ ಬದುಕಿನ ಪ್ರಮುಖ ಲಕ್ಷಣವಲ್ಲ. ಹಿಂದೂಗಳು ಮತ್ತು ಮುಸ್ಲಿಂ/ಕ್ರೈಸ್ತರ ಜಾತಿವ್ಯವಸ್ಥೆಗಳ ನಡುವೆ ಇನ್ನೂ ಒಂದು ವ್ಯತ್ಯಾಸವಿದೆ. ಹಿಂದೂಗಳ ಜಾತಿಪದ್ಧತಿಗೆ ಧರ್ಮದ ಅಡಿ ಪಾಯವಿದೆ. ಬೇರೆ ಧರ್ಮಗಳಲ್ಲಿ ಜಾತಿಗಳಿಗೆ ಧಾರ್ಮಿಕ ಸಮ್ಮತಿಯಿಲ್ಲ. ಹಿಂದೂಗಳು ತಮ್ಮ ಧರ್ಮವನ್ನೇ ನಾಶ ಮಾಡದೆ ಜಾತಿವಿನಾಶ ಮಾಡಲಾರರು. ಅದೇ ಮುಸ್ಲಿಮರು ಮತ್ತು ಕ್ರೈಸ್ತರು ಜಾತಿ ನಿರ್ಮೂಲನಕ್ಕೆ ತಮ್ಮ ಧರ್ಮವನ್ನೇ ನಾಶ ಮಾಡುವ ಅಗತ್ಯವಿಲ್ಲ. ಬದಲಿಗೆ ಅವರ ಧರ್ಮವೇ ಅಂಥ ಆಂದೋಲನಗಳನ್ನು ಬಹು ಮಟ್ಟಿಗೆ ಬೆಂಬಲಿಸುತ್ತದೆ.

ಮತಾಂತರವೊಂದರಿಂದಲೇ ಏನು ಸಾಧನೆಯಾಗುತ್ತದೆ ಎಂಬ ಕೆಲವು ಹಿಂದೂಗಳ ಪ್ರಶ್ನೆ ಕೇಳಿ ನನಗೆ ಆಶ್ಚರ್ಯವಾಗಿದೆ. ಭಾರತದ ಇಂದಿನ ಬಹುತೇಕ ಸಿಕ್ಕರು, ಮುಸ್ಲಿಮರು, ಮತ್ತು ಕ್ರೈಸ್ತರು ಹಿಂದೆ ಹಿಂದೂಗಳೇ ಆಗಿದ್ದವರು. ಅದರಲ್ಲೂ ಬಹುತೇಕ ಶೂದ್ರರು ಮತ್ತು ಅಸ್ಪೃಶ್ಯರೇ ಆಗಿದ್ದವರು. ಅಂದರೆ ಹಿಂದೂಧರ್ಮ ಬಿಟ್ಟು ಸಿಖ್ ಅಥವಾ ಕ್ರೈಸ್ತ ಧರ್ಮ ಅಪ್ಪಿಕೊಂಡವರು ಪ್ರಗತಿಯನ್ನೇ ಸಾಧಿಸಿಲ್ಲವೇ? ಹಾಗೆಂದ ಮೇಲೆ ಮತಾಂತರದಿಂದ ಅಸ್ಪೃಶ್ಯರಿಗೇನೂ ಲಾಭವಿಲ್ಲ ಎಂಬ ವಾದವೇ ಹುರುಳಿಲ್ಲದ್ದು.

ಈ ಸಮಸ್ಯೆಯ ಬಗ್ಗೆ ಆಳವಾಗಿ ಚಿಂತಿಸಿ ನೋಡಿದರೆ, ಭಾರತಕ್ಕೆ ಸ್ವರಾಜ್ಯ ಎಷ್ಟು ಅಗತ್ಯವೋ, ಅಸ್ಪೃಶ್ಯರಿಗೆ ಮತಾಂತರವೂ ಅಷ್ಟೇ ಅಗತ್ಯವೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಎರಡರ ಅಂತಿಮ ಗುರಿಯೂ ಒಂದೇ. ಆ ಗುರಿ- ಸ್ವಾತಂತ್ರ್ಯ. ಮನುಕುಲಕ್ಕೆ ಸ್ವಾತಂತ್ರ್ಯ ಅಗತ್ಯ ಎಂದಾದರೆ, ಅಸ್ಪೃಶ್ಯರಿಗೆ ಸಂಪೂರ್ಣ ಸ್ವಾತಂತ್ರ್ಯ ತಂದುಕೊಡುವ ಮತಾಂತರಕ್ಕೆ ಬೆಲೆಯಿಲ್ಲ ಎಂದು ಹೇಗೆ ಹೇಳಲು ಸಾಧ್ಯ?

ಯಾವುದು ಪ್ರಾಥಮಿಕ? ಆರ್ಥಿಕ ಪ್ರಗತಿಯೋ, ಮತಾಂತ ರವೋ? ಈ ಪ್ರಶ್ನೆಯನ್ನೂ ಇಲ್ಲಿ ಚರ್ಚಿಸಬೇಕು. ನಾನೇನೂ ಆರ್ಥಿಕ ಪ್ರಗತಿಯೇ ಮೊದಲು ಶುರುವಾಗಬೇಕು ಅಂದುಕೊಂಡಿಲ್ಲ. ಯಾಕೆಂದರೆ ಅಸ್ಪೃಶ್ಯತೆ, ನಿಮ್ಮ ಪ್ರಗತಿಯ ಹಾದಿಯಲ್ಲಿರುವ ಶಾಶ್ವತ ಕಂಟಕ. ಅದನ್ನು ತೆಗೆದುಹಾಕದೆ ನಿಮ್ಮ ಹಾದಿ ಸುರಕ್ಷಿತವಲ್ಲ. ಮತಾಂತರದ ವಿನಾ ಈ ಕಂಟಕವೂ ನಿವಾರಣೆಯಾಗುವುದಿಲ್ಲ. ಅಲ್ಲದೆ, ನಿಮ್ಮ ವಿದ್ಯೆಗೆ ಬೆಲೆ ಸಿಕ್ಕಬೇಕೆಂದಿದ್ದರೆ, ನಿಮ್ಮ ಶಿಕ್ಷಣದಿಂದ ಏನಾದರೂ ಉಪಯೋಗವಾಗಬೇಕು ಎಂಬ ಗಾಢ ಆಕಾಂಕ್ಷೆಯಿದ್ದರೆ, ನೀವು ಅಸ್ಪೃಶ್ಯತೆಯ ಸಂಕೋಲೆಯನ್ನು ಕಳಚಿ ಒಗೆಯಲೇಬೇಕು. ಅಂದರೆ ನಿಮ್ಮ ಧರ್ಮವನ್ನು ಬದಲಾಯಿಸಲೇಬೇಕು.

ಇನ್ನು ಎರಡನೇ ಸಂದೇಹ ರಾಜಕೀಯ ಹಕ್ಕುಗಳನ್ನು ಕುರಿತದ್ದು. ನಾವು ಮತಾಂತರಗೊಂಡರೆ ನಮ್ಮ ರಾಜಕೀಯ ಹಕ್ಕು ಸವಲತ್ತುಗಳಿಗೇನಾಗುವುದೋ ಎಂಬ

ಆತಂಕ ಕೆಲವರಿಗೆ. ಆದರೆ ಆ ರಾಜಕೀಯ ಸವಲತ್ತುಗಳನ್ನೇ ಅವಲಂಬಿಸಿ ನಿಲ್ಲುವುದು ಸರಿಯಲ್ಲ ಎಂಬುದು ನನ್ನ ನಿಲುವು. ಈ ಹಕ್ಕುಗಳು ನಿರಂತರವಾಗಿರುತ್ತವೆ ಎಂದು ಯಾರೂ ಭರವಸೆ ಕೊಟ್ಟಿಲ್ಲ. ಒಂದಲ್ಲ ಒಂದು ದಿನ ಇವು ಕೊನೆಗೊಳ್ಳಲೇಬೇಕು. ಬ್ರಿಟಿಷ್ ಸರ್ಕಾರದ ಕೋಮು ನೀತಿ ಪ್ರಕಾರ, ನಮ್ಮ ರಾಜಕೀಯ ಹಕ್ಕುಗಳಿಗೆ ಇಪ್ಪತ್ತು ವರ್ಷಗಳ ಕಾಲಮಿತಿ ನಿಗದಿಯಾಗಿತ್ತು. ಪೂನಾ ಒಪ್ಪಂದದಲ್ಲಿ ಇಂಥ ಕಾಲಮಿತಿಯ ನಿರ್ಬಂಧವಿರದಿದ್ದರೂ ಇವು ಶಾಶ್ವತವೆಂದು ಯಾರೂ ಭಾವಿಸಬೇಕಾಗಿಲ್ಲ. ಈ ರಾಜಕೀಯ ಸವಲತ್ತುಗಳನ್ನೇ ಅವಲಂಬಿಸಿದವರು, ಸವಲತ್ತುಗಳುರದ್ದಾದ ದಿನ ಏನಾಗುವುದೆಂದು ಯೋಚಿಸಬೇಕು. ಅಂಥ ಸಂದರ್ಭದಲ್ಲಿ ನಾವು ನಮ್ಮ ಸಾಮಾಜಿಕ ಶಕ್ತಿಯನ್ನೇ ಅವಲಂಬಿಸಬೇಕಾಗುತ್ತದೆ. ಈ ಸಾಮಾಜಿಕ ಬಲ ನಮ್ಮಲ್ಲಿಲ್ಲವೆಂದು ನಾನು ಆಗಲೇ ಸಾಧಿಸಿ ತೋರಿದ್ದೇನೆ. ಮತಾಂತರಗೊಳ್ಳದೆ, ಈ ಶಕ್ತಿ ದಕ್ಕುವುದೂ ಇಲ್ಲವೆಂದು ಮೊದಲೇ ರುಜುವಾತು ಪಡಿಸಿದ್ದೇನೆ.

ಹಾಗಾದರೆ ನಮಗೆ ಶಾಶ್ವತವಾಗಿ ಲಾಭದಾಯಕವಾದದ್ದು ಯಾವುದು? ಯೋಚಿಸಬೇಕು. ನನ್ನ ದೃಷ್ಟಿಯಲ್ಲಿ ನಿರಂತರ ಆನಂದಕ್ಕೆ ಮತಾಂತರವೊಂದೇ ಮಾರ್ಗ. ಆ ಉದ್ದೇಶಕ್ಕಾಗಿ ರಾಜಕೀಯ ಸವಲತ್ತುಗಳನ್ನು ತ್ಯಾಗ ಮಾಡಬೇಕಾಗಿ ಬಂದರೆ ಯಾರೂ ಹಿಂಜರಿಯಬಾರದು. ಮತಾಂತರವು ರಾಜಕೀಯ ಹಕ್ಕುಗಳಿಗೇನೂ ಧಕ್ಕೆ ತರುವುದಿಲ್ಲ. ಮತಾಂತರದಿಂದ ಈ ಸವಲತ್ತುಗಳಿಗೇಕೆ ಹಾನಿಯಾಗಬೇಕೆಂದೇ ನನಗೆ ಅರ್ಥವಾಗುವುದಿಲ್ಲ. ನೀವು ಎಲ್ಲಿ ಹೋದರೂ ನಿಮ್ಮ ಸವಲತ್ತುಗಳೂ ನಿಮ್ಮೊಡನೆ ಬರುತ್ತವೆ. ಇದರಲ್ಲಿ ನನಗೇನೂ ಸಂದೇಹವಿಲ್ಲ.

ನೀವು ಮುಸ್ಲಿಮರಾದರೆ, ಮುಸ್ಲಿಮರಾಗಿಯೇ ನಿಮಗೆ ರಾಜಕೀಯ ಹಕ್ಕುಗಳಿರುತ್ತವೆ. ಕ್ರೈಸ್ತರಾದರೆ ಕ್ರೈಸ್ತರಾಗಿಯೇ ನಿಮ್ಮ ರಾಜಕೀಯ ಹಕ್ಕುಗಳಿರುತ್ತವೆ. ನೀವು ಸಿಕ್ಖರಾದರೆ, ಸಿಕ್ಖರಾಗಿಯೇ ರಾಜಕೀಯ ಹಕ್ಕುಗಳು ನಿಮಗಿರುತ್ತವೆ. ಸಂಕ್ಷಿಪ್ತವಾಗಿ ಹೇಳುವುದಾದರೆ ನಮ್ಮ ರಾಜಕೀಯ ಸವಲತ್ತುಗಳು ನಮ್ಮ ಜೊತೆಯೇ ಬರುತ್ತವೆ. ಆದ್ದರಿಂದ ಆ ಬಗ್ಗೆ ಯಾರೂ ಹೆದರಬೇಕಿಲ್ಲ.

ಇನ್ನೊಂದು ಕಡೆ, ನಾವು ಮತಾಂತರಗೊಳ್ಳದೆ ಹಿಂದೂಗಳಾಗಿಯೇ ಉಳಿದರೆ, ನಮ್ಮ ಹಕ್ಕುಗಳು ಸುರಕ್ಷಿತವೇ? ಇದರ ಬಗ್ಗೆ ಜಾಗರೂಕತೆಯಿಂದ ಯೋಚಿಸಬೇಕು. ಈಗ ಹಿಂದೂಗಳು ಅಸ್ಪೃಶ್ಯತೆ ನಿಷೇಧಿಸಿ, ಅದರ ಆಚರಣೆಯನ್ನು ಶಿಕ್ಷಾರ್ಹಗೊಳಿಸಿ ಒಂದು ಕಾನೂನು ಮಾಡಿದರೆನ್ನಿ, ಆಗ ಅವರು 'ನಾವು ಕಾನೂನು ಮೂಲಕ ಅಸ್ಪೃಶ್ಯತೆ ನಿವಾರಿಸಿದ್ದೇವೆ. ಇನ್ನು ಮುಂದೆ ನೀವು ಅಸ್ಪೃಶ್ಯರಲ್ಲ...' ಎನ್ನಬಹುದು!

ಆ ದೃಷ್ಟಿಯಿಂದ ನೋಡಿದರೂ, ಮತಾಂತರವು ನಿಮ್ಮ ರಾಜಕೀಯ ಹಕ್ಕುಗಳನ್ನು ಭದ್ರಪಡಿಸಿಕೊಳ್ಳುವ ಮಾರ್ಗವಾಗಿ ಕಾಣುವುದೇ ಹೊರತು ಅಡಚಣೆಯಾಗಿ ಅಲ್ಲ. ನೀವು ಹಿಂದೂಗಳಾಗೇ ಇದ್ದರೆ, ನಿಮ್ಮ ರಾಜಕೀಯ ಹಕ್ಕುಗಳನ್ನು ಕಳೆದುಕೊಳ್ಳುವುದು ನಿಶ್ಚಿತ. ಅದನ್ನು ಉಳಿಸಿಕೊಳ್ಳಬೇಕೆಂದಿದ್ದರೆ, ಈ ಧರ್ಮವನ್ನೇ ತೊರೆಯಿರಿ. ಮತಾಂತರದಿಂದ ಮಾತ್ರ ರಾಜಕೀಯ ಹಕ್ಕುಗಳು ಶಾಶ್ವತವಾಗಿರಲು ಸಾಧ್ಯ.

ಹಿಂದೂ ಧರ್ಮ ನನ್ನ ಆತ್ಮಸಾಕ್ಷಿಗೆ ಒಪ್ಪಿಗೆಯಾಗುವುದಿಲ್ಲ. ಅದು ನನ್ನ ಆತ್ಮಗೌರವಕ್ಕೆ ಸಮ್ಮತವಾಗುವುದಿಲ್ಲ. ಆದರೆ ಮತಾಂತರವು ನಿಮ್ಮ ಐಹಿಕ ಮತ್ತು ಆಧ್ಯಾತ್ಮಿಕ ಉನ್ನತಿಗಳೆರಡಕ್ಕೂ ಬೇಕು. ಕೆಲವರು ಐಹಿಕ ಲಾಭಕ್ಕಾಗಿ ಮತಾಂತರವೇ ಎಂದು ಅಪಹಾಸ್ಯ ಮಾಡಿ ನಗಬಹುದು. ಅಂಥವರನ್ನು ಮೂರ್ಖರೆಂದು ಕರೆಯಲು ನನಗೇನೂ ಹಿಂಜರಿಕೆಯಿಲ್ಲ.

ಧರ್ಮ ಇರುವುದು ಮನುಷ್ಯನಿಗಾಗಿಯೇ ಹೊರತು, ಮನುಷ್ಯ ಇರುವುದು ಧರ್ಮಕ್ಕಲ್ಲ. ಇದನ್ನು ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ. ನಿಮಗೆ ಮಾನವೀಯ ಸ್ಪಂದನ ಬೇಕೆಂದಾದರೆ ಮತಾಂತರಗೊಳ್ಳಿ.

ಸಂಘಟಿತರಾಗಲು ಮತಾಂತರಿಸಿ
ಸಶಕ್ತರಾಗಲು ಮತಾಂತರಿಸಿ
ಸಮಾನತೆಗಾಗಿ ಮತಾಂತರಿಸಿ
ಸ್ವಾತಂತ್ರ್ಯಕ್ಕಾಗಿ ಮತಾಂತರಿಸಿ

ನಿಮ್ಮ ಕೌಟುಂಬಿಕ ಜೀವನ ಸಂತೋಷಮಯವಾಗಲು ಮತಾಂತರಿಸಿ.

ಜನರಿಗೆ ಒಳ್ಳೆಯದು ಯಾವುದು, ಕೆಟ್ಟದು ಯಾವುದೆಂದು ಭಯ ಪಕ್ಷಪಾತಗಳಿಲ್ಲದೆ ಯಾರು ಹೇಳುತ್ತಾರೋ, ಅಂಥವರನ್ನೇ ನಾನು ನಾಯಕರೆಂದು ಒಪ್ಪುತ್ತೇನೆ. ನಿಮಗೆ ಇಷ್ಟವಾಗಲಿ, ಬಿಡಲಿ, ನಿಮಗೆ ಯಾವುದು ಒಳ್ಳೆಯದೆಂದು ಹೇಳುವುದು ನನ್ನ ಕರ್ತವ್ಯ. ನಾನು ನನ್ನ ಕರ್ತವ್ಯ ಮಾಡಬೇಕು, ಮಾಡಿದ್ದೇನೆ.

ಇನ್ನು ನೀವೇ ನಿರ್ಧರಿಸಿ. ನಿಮ್ಮ ಜವಾಬ್ದಾರಿ ನಿರ್ವಹಿಸಿ. □

ಹಿಂಸೆ



ಮಾರ್ಕ್ಸ್‌ನ ಮ್ಯಾನಿಫೆಸ್ಟೋದಲ್ಲಿ
'ಹಿಂಸೆ'ಯನ್ನು
ತಡಕಾಡಿದಾಗ
ಸಿಗಲಿಲ್ಲ!
ಶ್ರಮಿಕರು ಉಸಿರಾಡುತ್ತಿದ್ದರು!
ಅಮಾಯಕರು ನಿದ್ರಿಸುತ್ತಿದ್ದರು!

○ ಟಿ.ಎಸ್. ರಾಜೇಂದ್ರ ಪ್ರಸಾದ್

ಸಂವಾದ



ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಒಬಾಮ ಮುಂದಿರುವ ಸವಾಲುಗಳು

ಅಮೆರಿಕಾದ ವರ್ಣಬೇಧ ನೀತಿಯನ್ನು ಧಿಕ್ಕರಿಸಿ ಅಲ್ಲಿನ ಜನತೆ ಒಬಾಮಾರನ್ನು ಚುನಾಯಿಸಿರುವುದು ಐತಿಹಾಸಿಕ ಸಂಗತಿಯಾಗಿದೆ. ಒಬಾಮಾರ ಗೆಲುವಿನಿಂದ ಆಫ್ರಿಕಾದ ಪ್ರಜೆಗಳಲ್ಲಿ ಮತ್ತು ಕಪ್ಪು ಜನಗಳಲ್ಲಿ ಆತ್ಮವಿಶ್ವಾಸ ಹೆಚ್ಚಾಗುವುದಾದರೂ, ಅಮೆರಿಕಾ ನೇತೃತ್ವದ ಸಾಮ್ರಾಜ್ಯಶಾಹಿ ನೀತಿಗಳಲ್ಲಾಗಲೀ, ಏಕಾಧಿಪತ್ಯ ಸಾಧಿಸುವ ಮಹದಾಕಾಂಕ್ಷೆಯಲ್ಲಾಗಲೀ ಯಾವುದೇ ಬದಲಾವಣೆಯಾಗುವುದೆಂದು ನಿರೀಕ್ಷಿಸುವುದು ತಪ್ಪಾಗುತ್ತದೆ. ಒಬಾಮಾ ರವರ ವೈಯಕ್ತಿಕ ಸಿದ್ಧಾಂತ ಅಥವಾ ನಂಬಿಕೆಗಳು ಆಳುವ ಪಕ್ಷದ ಅಧಿಕೃತ ನೀತಿಯಾಗಿ ಪರಿಣಮಿಸುತ್ತದೆ ಎಂದು ಹೇಳಲಾಗುವುದಿಲ್ಲ. ಏಕೆಂದರೆ ಅಮೆರಿಕದಲ್ಲಿ ರಿಪಬ್ಲಿಕನ್ ಪಕ್ಷವಿರಲಿ ಅಥವಾ ಡೆಮಾಕ್ರಟ್ ಪಕ್ಷವಿರಲಿ,ಇಡೀ ಆಡಳಿತ ಸೂತ್ರ ಕಾರ್ಪೋರೇಟ್ ಉದ್ಯಮಿಗಳ ಕೈಯ್ಯಲ್ಲಿರುತ್ತದೆ.

ನಾ. ದಿವಾಕರ

ಒಬಾಮಾ ರವರ ಗೆಲುವನ್ನು ಇಡೀ ವಿಶ್ವವೇ ಕುತೂಹಲದಿಂದ ನಿರೀಕ್ಷಿಸುತ್ತಿತ್ತು. ಕಪ್ಪು ಜನ ಸಮುದಾಯದಲ್ಲಿ ಒಂದು ಹೊಸ ಆಶಾಭಾವನೆಯನ್ನೂ ಒಬಾಮಾ ಮೂಡಿಸಿದ್ದಾರೆ. ತಮ್ಮ ದೇಶದ ಮೂಲ ನಿವಾಸಿಯಲ್ಲದ ವ್ಯಕ್ತಿಯೊಬ್ಬರನ್ನು ರಾಷ್ಟ್ರಾಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದು ಒಂದು ಗಮನೀಯ ವಿಚಾರವಾದರೆ, ಅಮೆರಿಕಾದ ವರ್ಣಬೇಧ ನೀತಿಯನ್ನು ಧಿಕ್ಕರಿಸಿ ಅಲ್ಲಿನ ಜನತೆ ಒಬಾಮಾರನ್ನು ಚುನಾಯಿಸಿರುವುದು ಐತಿಹಾಸಿಕ ಸಂಗತಿಯಾಗಿದೆ. ಒಬಾಮಾರ ಗೆಲುವಿನಿಂದ ಆಫ್ರಿಕಾದ ಪ್ರಜೆಗಳಲ್ಲಿ ಮತ್ತು ಕಪ್ಪು ಜನಗಳಲ್ಲಿ ಆತ್ಮವಿಶ್ವಾಸ ಹೆಚ್ಚಾಗುವುದಾದರೂ, ಅಮೆರಿಕಾ ನೇತೃತ್ವದ ಸಾಮ್ರಾಜ್ಯಶಾಹಿ ನೀತಿಗಳಲ್ಲಾಗಲೀ, ಏಕಾಧಿಪತ್ಯ ಸಾಧಿಸುವ ಮಹದಾಕಾಂಕ್ಷೆಯಲ್ಲಾಗಲೀ ಯಾವುದೇ ಬದಲಾವಣೆಯಾಗುವುದೆಂದು ನಿರೀಕ್ಷಿಸುವುದು ತಪ್ಪಾಗುತ್ತದೆ. ಒಬಾಮಾರವರ ವೈಯಕ್ತಿಕ ಸಿದ್ಧಾಂತ ಅಥವಾ ನಂಬಿಕೆಗಳು ಆಳುವ ಪಕ್ಷದ ಅಧಿಕೃತ ನೀತಿಯಾಗಿ ಪರಿಣಮಿಸುತ್ತದೆ ಎಂದು ಹೇಳಲಾಗುವುದಿಲ್ಲ. ಏಕೆಂದರೆ ಅಮೆರಿಕದಲ್ಲಿ ರಿಪಬ್ಲಿಕನ್ ಪಕ್ಷವಿರಲಿ ಅಥವಾ ಡೆಮಾಕ್ರಟ್ ಪಕ್ಷವಿರಲಿ, ಇಡೀ ಆಡಳಿತ ಸೂತ್ರ ಕಾರ್ಪೋರೇಟ್ ಉದ್ಯಮಿಗಳ ಕೈಯ್ಯಲ್ಲಿರುತ್ತದೆ. ಪ್ರಮುಖವಾಗಿ ರಕ್ಷಣಾ ಇಲಾಖೆಯ ಪೆಂಟಗನ್ ಅಮೆರಿಕದ ಇಡೀ ಆಡಳಿತ ಯಂತ್ರವನ್ನು ನಿಭಾಯಿಸುತ್ತದೆ. ಈ ನಿಟ್ಟಿನಲ್ಲಿ ಒಬಾಮಾ ಏನು ಸಾಧಿಸಬಲ್ಲರು ಎಂದು ವಿಶ್ಲೇಷಿಸುವುದು ಅಗತ್ಯವಾಗುತ್ತದೆ.

ಚುನಾವಣೆಯ ಪೂರ್ವದಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಒಬಾಮ ಮತ್ತು ಮೆಕೈನ್ ಸಿ.ಐ.ಎ ಅಧಿಕಾರಿಗಳೊಡನೆ ಸುದೀರ್ಘ ಸಮಾಲೋಚನೆ ನಡೆಸಿ, ಮುಂದೆ ತಾವು ಎದುರಿಸಬೇಕಾದ ಸವಾಲುಗಳ ಬಗ್ಗೆ ಗಂಭೀರ ಚಿಂತನೆ ನಡೆಸಿದ್ದುಂಟು. ಈ ನಿಟ್ಟಿನಲ್ಲಿ ತಾವು ಅಧಿಕಾರ ವಹಿಸಿಕೊಳ್ಳುವ ಮುನ್ನ (ಜನವರಿ 20, 2009) ಒಬಾಮಾರವರು ತಮ್ಮ ಎಲ್ಲ ಸಂದಿಗ್ಧತೆಗಳನ್ನೂ ನಿವಾರಿಸಿಕೊಳ್ಳಬೇಕಿದೆ. ಚುನಾವಣಾ ಪ್ರಚಾರದ ಹಿನ್ನೆಲೆಯಲ್ಲೇ 300ಕ್ಕೂ ಹೆಚ್ಚು ವಿದೇಶೀ ನೀತಿ ತಜ್ಞರು ಒಬಾಮಾರವರಿಗೆ ಸೂಕ್ತ ನಿರ್ದೇಶನಗಳನ್ನು ನೀಡಿರುವುದು ವರದಿಯಾಗಿದೆ. ಹಿಂದೆ ಬಿಲ್ ಕ್ಲಿಂಟನ್ ಮತ್ತು ಜಾರ್ಜ್ ಬುಷ್ ಅವರುಗಳ ನಡೆದ ಹಾದಿಗಿಂತಲೂ ಭಿನ್ನವಾದ ಮಾರ್ಗದಲ್ಲಿ ಚಲಿಸುವ ನಿರ್ಧಾರ ಕೈಗೊಂಡಿರುವ ಒಬಾಮಾ ಅವರಿಗೆ ಮುಂದಿನ ಹಾದಿ ಹೂವಿನ ಹಾಸಿಗೆಯೇನೂ ಆಗಿರುವುದಿಲ್ಲ.



ಅವರ ಮುಂದಿನ ಪ್ರಮುಖ ಸವಾಲುಗಳು ಕಠೋರ ಹಾದಿಯಲ್ಲೇ ಕ್ರಮಿಸುವುದನ್ನು ಗಮನಿಸಬೇಕಾಗಿದೆ.

ಒಬಾಮಾ ಅವರಿಗೆ ಎದುರಾಗುವ ಮೊದಲನೆಯ ಬಿಕ್ಕಟ್ಟು ಇರಾನ್ ಮತ್ತು ಆ ದೇಶದ ಪರಮಾಣು ಕಾರ್ಯಕ್ರಮವಾಗಿರುತ್ತದೆ. ಸದ್ಯಕ್ಕೆ ಇರಾನ್ ಅಣ್ವಸ್ತ್ರ ಪರೀಕ್ಷೆ ಮಾಡುವ ಯಾವುದೇ ಲಕ್ಷಣಗಳಿಲ್ಲದಿದ್ದರೂ ಬುಷ್ ಸರ್ಕಾರ ಮಧ್ಯ ಪ್ರಾಚ್ಯದಲ್ಲಿ ತನ್ನ ಅಧಿಪತ್ಯ ಸಾಧಿಸಲು ಇರಾನಿನ ಮೇಲೆ ದಾಳಿ ನಡೆಸಲು ಸರ್ವಸಿದ್ಧತೆಗಳನ್ನು ನಡೆಸಿದ್ದುದು ಸತ್ಯ. ಈ ನಿಟ್ಟಿನಲ್ಲಿ ಇರಾನಿನ ಸರ್ಕಾರದೊಡನೆ ನೇರ ಮಾತುಕತೆಗೆ ಸಿದ್ಧ ಎಂದು ಒಬಾಮಾ ಘೋಷಿಸಿದ್ದರೂ ಈ ಮಾತುಕತೆಗಳನ್ನು ಅಮೆರಿಕಾ ನಿರ್ಧರಿಸಿದ ರಾಜತಾಂತ್ರಿಕ ಚೌಕಟ್ಟಿನಲ್ಲೇ ನಡೆಸಲಾಗುತ್ತದೆ. ಇರಾನಿನಲ್ಲಿ ಯುರೇನಿಯಂ ಪುನರ್ ಸಂಸ್ಕರಣವನ್ನು ತಡೆಗಟ್ಟುವ ಉದ್ದೇಶ ಒಬಾಮಾರವರಿಗೂ ಇರುತ್ತದೆ. ಹಾಗಾಗಿ ಹೆಚ್ಚೆಂದರೆ ಇರಾನಿನಲ್ಲಿ ಅಮೆರಿಕಾದ ಹಿತಾಸಕ್ತಿಯನ್ನು ರಕ್ಷಿಸುವ ನಿಟ್ಟಿನಲ್ಲಿ ಒಂದು ಕಛೇರಿಯನ್ನು ಸ್ಥಾಪಿಸುವ ಸಾಧ್ಯತೆಗಳಿರುತ್ತವೆ. ಈ ಪ್ರಯತ್ನದ ಸಾಫಲ್ಯತೆ ಒಬಾಮಾರವರ ಪ್ರಜಾತಾಂತ್ರಿಕ ನಿಲುವನ್ನು ಅಧರಿಸಿರುತ್ತದೆ.

ಎರಡನೆಯದಾಗಿ ಇರಾಕ್ ಮತ್ತು ಆಫ್ಘಾನಿಸ್ತಾನದ ಸಮಸ್ಯೆ

ಅಮೆರಿಕವನ್ನು ಬಾಧಿಸುತ್ತದೆ. ಅಧಿಕಾರಕ್ಕೆ ಬಂದ 16 ತಿಂಗಳೊಳಗಾಗಿ ಇರಾಕ್‌ನಲ್ಲಿರುವ ಸೇನೆಯನ್ನು ಹಿಂತೆಗೆದುಕೊಳ್ಳುವುದಾಗಿ ಒಬಾಮ ಆಶ್ವಾಸನೆ ನೀಡಿದ್ದು ತಮ್ಮ ಮಾತಿಗೆ ಬದ್ಧರಾಗಿರುತ್ತಾರೆಂದು ನಿರೀಕ್ಷಿಸಬಹುದು. ಇದರೊಂದಿಗೆ ಇರಾಕ್ ಸುತ್ತಲಿನ ಮಧ್ಯ ಪ್ರಾಚ್ಯ ದೇಶಗಳ ಸಮಾವೇಶವನ್ನು ನಡೆಸಿ, ಆ ರಾಷ್ಟ್ರಗಳ ವಿಶ್ವಾಸವನ್ನು ಗಳಿಸುವುದೂ ಒಬಾಮರವರ ಪ್ರಥಮ ಆದ್ಯತೆಯಾಗಬೇಕಾಗಿದೆ. ತನ್ನದೇ ಅವ್ಯಾಹತ ದಾಳಿಯಿಂದ ಹಾಳು ಕೊಂಪೆಯಾಗಿರುವ ರಾಷ್ಟ್ರದ ಪುನ ನಿರ್ಮಾಣದಲ್ಲಿ ಅಮೆರಿಕಾ ಮುಂದಾಗಬೇಕಾಗಿದೆ. ಆಫ್ಘಾನಿಸ್ತಾನದಲ್ಲೂ ತನ್ನ ಹಸ್ತಕ್ಷೇಪವನ್ನು ಕಡಿಮೆ ಮಾಡಿ ತಟಸ್ಥ ನೀತಿ ತಾಳುವುದು ಪ್ರಜಾತಾಂತ್ರಿಕ ದೃಷ್ಟಿಯಿಂದ ಸೂಕ್ತವೆನಿಸುತ್ತದೆ. ಆದರೆ ಪ್ರಸ್ತುತ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಇರಾಕ್‌ನಿಂದ ಸೇನೆಯನ್ನು ಹಿಂಪಡೆಯುವ ಸಾಧ್ಯತೆಗಳು ಕಡಿಮೆ ಎನಿಸುತ್ತಿದೆ. ಒಬಾಮಾ ಅವರ ಆಶಯದಂತೆ ಆಫ್ಘಾನಿಸ್ತಾನದಲ್ಲಿ ಸೇನಾ ಕಾರ್ಯವನ್ನು ಮುಂದುವರೆಸಿ, ಅಲ್ ಖೈದಾವನ್ನು ಮಟ್ಟ ಹಾಕಲು ಪಾಕಿಸ್ತಾನದ ಮೂಲಕವೇ ಮುನ್ನುಗ್ಗುವ ಸಾಹಸ ಮಾಡಿದರೆ ಒಬಾಮಾ ಬುಷ್ ಅವರ ಹಾದಿಯಲ್ಲೇ ಕ್ರಮಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ತನ್ನ ಸುತ್ತಲಿನವರಿಂದಲೇ ವಿರೋಧವನ್ನು ಎದುರಿಸುವ ಸಾಧ್ಯತೆಗಳಿಗೂ ಒಬಾಮ ಸಿದ್ಧರಾಗಿರಬೇಕಾಗುತ್ತದೆ. ತಾಲಿಬಾನ್ ವಿರುದ್ಧದ ಸಮರದಲ್ಲಿ ಒಬಾಮ ಪೆಂಟಗನ್‌ನ ಕೈಗೊಂಬೆಯಾಗಿರುವುದನ್ನು ನಿರ್ಲಕ್ಷಿಸಲಾಗುವುದಿಲ್ಲ. ಈಗಾಗಲೇ ಪೆಂಟಗನ್ ಈ ನಿಟ್ಟಿನಲ್ಲಿ ಅಪಾರ ಶಸ್ತ್ರಾಸ್ತ್ರ ಬಂಡವಾಳ ಹೂಡಿರುವುದರಿಂದ, ಯಾವುದೇ ಶಾಂತಿಯುತ ಪ್ರಕ್ರಿಯೆಗೆ ತೀವ್ರ ವಿರೋಧ ಅಮೆರಿಕದಲ್ಲೇ ಪ್ರಕಟವಾಗುತ್ತದೆ. ಭಯೋತ್ಪಾದನೆಯ ವಿರುದ್ಧದ ಸಮರದಲ್ಲಿ ಬುಷ್ ಅನುಸರಿಸುತ್ತಿದ್ದ ನೀತಿಗಳನ್ನು ಒಬಾಮಾ ಕೈಬಿಡುವುದು ಶತಃಸಿದ್ಧ. ಆದರೆ ಅಮೆರಿಕಾ ಸರ್ಕಾರ ಭಯೋತ್ಪಾದಕತೆಯ ನಿಗ್ರಹದ ನೆಪದಲ್ಲಿ ಅನೇಕ ಅಮಾಯಕರಿಗೆ ಚಿತ್ರಹಿಂಸೆ ನೀಡಿ ಅವರನ್ನು ಬಂ ಧಿತರನ್ನಾಗಿರಿಸುವ ಪರಂಪರೆಗೆ ಒಬಾಮಾ ಇತಿಶ್ರೀ ಹಾಡ ಲೇಬೇಕಾಗಿದೆ. ಈ ನಿಟ್ಟಿನಲ್ಲಿ ಅಮೆರಿಕಾದ ನೈತಿಕ ಹೊಣೆಗಾರಿಕೆಯನ್ನು ಒಪ್ಪಿಕೊಂಡು ನೊಂದ ಅಮಾಯಕರಿಗೆ ಮತ್ತು ರಾಷ್ಟ್ರಗಳಿಗೆ ಸೂಕ್ತ ಪರಿಹಾರ ಒದಗಿಸುವುದು ಒಬಾಮ ಸರ್ಕಾರದ ಪ್ರಮುಖ ಧ್ಯೇಯವಾಗಬೇಕಾಗಿದೆ. ಭಯೋತ್ಪಾದನೆ, ಅಣ್ವಸ್ತ್ರ ಪ್ರಸರಣ, ಪರಿಸರ ರಕ್ಷಣೆ ಮತ್ತು ಇಂಧನ ಪೂರೈಕೆಯಂತಹ ಗಂಭೀರ ಸಮಸ್ಯೆಗಳನ್ನು ಎದುರಿಸಲು ಅಮೆರಿಕ ಮಾತುಕತೆ ಮತ್ತು ಪರಸ್ಪರ ಸಹಕಾರದ ಮೂಲಕ ಪ್ರಯತ್ನಿಸುತ್ತದೆ ಎಂದು ಒಬಾಮರವರ ಪಕ್ಷ ಘೋಷಿಸಿದೆ. ಈ ನಿಟ್ಟಿನಲ್ಲಿ ಎಷ್ಟರ ಮಟ್ಟಿಗೆ ಕಾರ್ಯ ಸಾಧನೆಯಾಗುತ್ತದೆ ಎಂದು ಕಾದು ನೋಡಬೇಕಾಗಿದೆ.

ಎಲ್ಲಕ್ಕಿಂತಲೂ ಪ್ರಮುಖವಾದ ಸಮಸ್ಯೆ ಎಂದರೆ ಅಮೆರಿಕಾ ಎದುರಿಸುತ್ತಿರುವ ಆರ್ಥಿಕ ಹಿನ್ನಡೆ ಮತ್ತು ಹಣಕಾಸು ಕ್ಷೇತ್ರದ ತೀವ್ರ ಬಿಕ್ಕಟ್ಟು. ಪ್ರಮುಖ ಬ್ಯಾಂಕುಗಳು ದಿವಾಳಿಯಾಗಿರುವುದರೊಂದಿಗೆ ಇರಾಕ್ ಮತ್ತು ಆಫ್ಘಾನಿಸ್ತಾನ ಸಮರಗಳಿಂದ ಅಮೆರಿಕಾ ಮೂರು ಟ್ರಿಲಿಯನ್ ಡಾಲರ್ ವೆಚ್ಚ ಭರಿಸಬೇಕಾಗಿದೆ. ಇದಲ್ಲದೆ 10 ಟ್ರಿಲಿಯನ್ ಡಾಲರ್‌ಗಳಷ್ಟು ಸಾಲದ ಹೊರೆಯನ್ನು ಅಮೆರಿಕಾ ಹೊರುತ್ತಿದೆ. ಮುಂಬರುವ ಎರಡು ವರ್ಷಗಳಲ್ಲಿ ಅಮೆರಿಕಾದ 20 ಲಕ್ಷ ಕುಟುಂಬಗಳು ನಿರುದ್ಯೋಗಕ್ಕೆ ಸಿಲುಕಲಿವೆ. ಆರ್ಥಿಕ ಕುಸಿತದ ಹಿನ್ನೆಲೆಯಲ್ಲೇ ಚುನಾವಣೆಯಲ್ಲಿ



ಗೆಲುವು ಸಾಧಿಸಿರುವ ಒಬಾಮ ತಮ್ಮ ಆಶ್ವಾಸನೆಗಳನ್ನು ಈಡೇರಿಸದಿದ್ದಲ್ಲಿ ತೀವ್ರ ರಾಜಕೀಯ ಹಿನ್ನಡೆ ಅನುಭವಿಸಬೇಕಾಗುತ್ತದೆ.

ಭವಿಷ್ಯದ ಹಾದಿ

ಅಮೆರಿಕದ ಕಳೆದ ಐದಾರು ದಶಕಗಳ ಇತಿಹಾಸದ ಅವಲೋಕನ ಮಾಡಿದಾಗ ಒಬಾಮಾರವರ ಆಳ್ವಿಕೆಯಲ್ಲಿ ಚಾರಿತ್ರಿಕ ಬದಲಾವಣೆಗಳಾಗುವ ಸಾಧ್ಯತೆಗಳು ಕಂಡುಬರುವುದಿಲ್ಲ. ಅಲ್ಲಿನ ಇಡೀ ರಾಜಕೀಯ ವ್ಯವಸ್ಥೆ ಕಾರ್ಪೊರೇಟ್ ಉದ್ಯಮಿಗಳ ಹಿಡಿತದಲ್ಲಿದ್ದು, ಶಸ್ತ್ರಾಸ್ತ್ರಗಳ ಉದ್ದಿಮೆ ಸರ್ಕಾರದ ಪ್ರಮುಖ ನೀತಿಗಳನ್ನು ನಿರ್ಧರಿಸುತ್ತದೆ. ತಮ್ಮ ಚುನಾವಣಾ ಪ್ರಚಾರಕ್ಕೆ ಒಬಾಮ 650 ಮಿಲಿಯನ್ ಡಾಲರ್ ಖರ್ಚು ಮಾಡಿದರೆ, ಮೆಕೈನ್ 360 ಮಿಲಿಯನ್ ಡಾಲರ್ ಖರ್ಚು ಮಾಡಿದ್ದಾರೆ. ಈ ಮೊತ್ತ ಕೆಲವು ಆಫ್ರಿಕನ್ ದೇಶಗಳ ಸಮಗ್ರ ರಾಷ್ಟ್ರೀಯ ಉತ್ಪನ್ನಕ್ಕೆ ಸಮನಾಗುತ್ತದೆ. ಈ ರೀತಿಯ ವೆಚ್ಚವನ್ನೇ ಪರಿಗಣಿಸಿದಲ್ಲಿ ಮುಂದಿನ 2012ರ ಚುನಾವಣೆಗಳಲ್ಲಿ ಸ್ಪರ್ಧಿಸಲು ಒಬಾಮಾರವರು ದಿನಕ್ಕೆ ನಾಲ್ಕೂವರೆ ಲಕ್ಷ ಡಾಲರ್‌ಗಳಷ್ಟು ಸಂಗ್ರಹಿಸಬೇಕಾಗುತ್ತದೆ. ಈ ಪರಿಸ್ಥಿತಿಯಲ್ಲಿ ಆಡಳಿತ ಸುಧಾರಣೆಗೆ ಎಷ್ಟರ ಮಟ್ಟಿಗೆ ಪ್ರಾಧಾನ್ಯತೆ ನೀಡಲಾಗುತ್ತದೆ ಎಂಬುದೇ ಮೂರ್ತ ಪ್ರಶ್ನೆಯಾಗಿದೆ. ಭಾರತದಂತೆಯೇ ಅಮೆರಿಕದಲ್ಲೂ ಚುನಾವಣೆಗಳಲ್ಲಿ ಹಣದ ಪ್ರಭಾವ ಹೆಚ್ಚಾಗಿರುವುದು ಗಮನಾರ್ಹ ಅಂಶ.

ಹಾಗಾಗಿ ಒಬ್ಬ ಕರಿಯ ಜನಾಂಗದ ವ್ಯಕ್ತಿ ಅಮೆರಿಕಾದ ಅಧ್ಯಕ್ಷರಾಗುವುದರಿಂದ ಸ್ವರ್ಗ ಧರೆಗಿಳಿಯುತ್ತದೆ ಎಂಬ ಮಾಧ್ಯಮಗಳ ಪ್ರಚಾರ ಕೇವಲ ರಂಜನೀಯತೆಗಷ್ಟೇ ಸೀಮಿತ. ಅಮೆರಿಕದಲ್ಲಿ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ, ಸಾಮ್ರಾಜ್ಯಶಾಹಿ ನೀತಿಗಳಲ್ಲಿ ಯಾವುದೇ ಬದಲಾವಣೆ ಕಂಡುಬರುವುದಿಲ್ಲ. ಒಬಾಮ ಅಧ್ಯಕ್ಷರಾಗುವುದರಿಂದ ಅಮೆರಿಕದ ಆಫ್ರಿಕನ್ನರಿಗೆ ಮತ್ತು ಇತರ ಆಫ್ರಿಕ ದೇಶಗಳಿಗೆ ಒಳಿತಾಗುತ್ತದೆ ಎಂದು ಭಾವಿಸುವುದು ಕೇವಲ ಭ್ರಮೆಯಾಗುತ್ತದೆ. ಒಂದು ವೇಳೆ ಒಬಾಮ ಅವರ ಆಡಳಿತದಲ್ಲಿ ಸುಧಾರಣೆ ಮತ್ತು ಪರಿವರ್ತನೆ ಕಾಣಬೇಕೆಂದಲ್ಲಿ, ಅಮೆರಿಕಾದ ಸಾಮ್ರಾಜ್ಯ ಶಾಹಿ ನೀತಿಯಲ್ಲೇ ಬದಲಾವಣೆಯಾಗಬೇಕಾಗಿದೆ. ವಿಶ್ವದೆಲ್ಲೆಡೆ ಸಣ್ಣ ಪುಟ್ಟ ರಾಷ್ಟಗಳಲ್ಲಿ ಪ್ರಜಾತಂತ್ರ ಸ್ಥಾಪನೆಯ ನೆಪದಲ್ಲಿ ಸೇನೆಗಳನ್ನು ನೇಮಿಸುವ ನೀತಿಯನ್ನು ಅಮೆರಿಕಾ ಕೈಬಿಡಬೇಕಾಗಿದೆ. ಜಾರ್ಜಿಯಾ, ಇಥಿಯೋಪಿಯಾ, ಸೊಮಾಲಿಯಾ, ಕೊಸಾವೋ, ಇರಾಕ್, ಲೆಬನಾನ್ ಮುಂತಾದ ರಾಷ್ಟ್ರಗಳಲ್ಲಿ ತನ್ನ ಮಿಲಿಟರಿ ಕಾರ್ಯಾಚರಣೆಯಿಂದ ಅಲ್ಲಿನ ಅಮಾಯಕ ಜನತೆಯನ್ನು ದಿನನಿತ್ಯ ಹತ್ಯೆ ಗೈಯ್ಯುತ್ತಿರುವ ಬುಷ್ ನೀತಿಗೆ ತಿಲಾಂಜಲಿ ನೀಡಬೇಕಾಗಿದೆ. ಕ್ಯೂಬಾದಂತಹ ಸ್ವತಂತ್ರ ರಾಷ್ಟ್ರಗಳ ಮೇಲೆ ಹೇರಿರುವ ಆರ್ಥಿಕ ದಿಗ್ಬಂಧನವನ್ನು ಹಿಂದೆಗೆದುಕೊಳ್ಳಬೇಕಾಗಿದೆ. ಪೆಂಟಗನ್‌ನ ಶಸ್ತ್ರಾಸ್ತ್ರಗಳ ಮಾರಾಟಕ್ಕಾಗಿ ಮತ್ತು ತೈಲ ಸಂಪತ್ತನ್ನು ವಶಪಡಿಸಿಕೊಳ್ಳುವ ಉದ್ದೇಶದಿಂದ ಮಧ್ಯ ಪ್ರಾಚ್ಯ ದೇಶಗಳ ಮೇಲೆ ಇಲ್ಲಸಲ್ಲದ ನೆಪ ಹೂಡಿ ಯುದ್ಧ ಮಾಡುವ ಪರಂಪರೆಗೆ ಅಂತ್ಯ ಹಾಡಬೇಕಾಗಿದೆ. ಅಮೆರಿಕದಂತೆಯೇ ಇತರ ರಾಷ್ಟ್ರಗಳಿಗೂ ಸ್ವಾವಲಂಬನೆಯಿಂದ ಬಾಳ್ವೆ ನಡೆಸುವ ಹಕ್ಕು ಇರುವುದನ್ನು ಒಬಾಮ ಮನ್ನಿಸಬೇಕಾಗಿದೆ. ಇಸ್ರೇಲ್‌ಗೆ ನೀಡುತ್ತಿರುವ ಬೆಂಬಲವನ್ನು ಹಿಂಪಡೆದು ಪಾಲೆಸ್ತೈನಿಯರಿಗೆ ತಮ್ಮ ನೆಲವನ್ನು ಬಿಟ್ಟುಕೊಡಲು ಅಮೆರಿಕಾ ಶ್ರಮಿಸಬೇಕಾಗಿದೆ.

ಈ ನಿಟ್ಟಿನಲ್ಲಿ ಪ್ರಜಾತಾಂತ್ರಿಕ ಮಾರ್ಗದಲ್ಲಿ ಮುನ್ನಡೆದರೆ ಮಾತ್ರ ಒಬಾಮ ಹಿಂದಿನವರಿಗಿಂತ ಭಿನ್ನವಾಗಿ ಕಾಣುವ ಸಾಧ್ಯತೆಗಳಿವೆ. ಇಲ್ಲವಾದಲ್ಲಿ ಅಮೆರಿಕಾ ತನ್ನ ಎಂದಿನ ಸಾಮ್ರಾಜ್ಯಶಾಹಿ ನೀತಿಗಳಿಗೇ ಕಟ್ಟುಬಿದ್ದು, ಹಳೆಯ ಚಾಳಿಯನ್ನೇ ಮುಂದುವರೆಸುತ್ತದೆ. ಒಬಾಮಾ ಅದರ ಪ್ರತಿನಿಧಿಯಾಗಿರುತ್ತಾರಷ್ಟೆ.

□

ಭಯೋತ್ಪಾದನೆಯ ವಿರುದ್ಧದ ಸಮರದಲ್ಲಿ ಬುಷ್ ಅನುಸರಿಸುತ್ತಿದ್ದ ನೀತಿಗಳನ್ನು ಒಬಾಮಾ ಕೈಬಿಡುವುದು ಶತಃಸಿದ್ಧ. ಆದರೆ ಅಮೆರಿಕಾ ಸರ್ಕಾರ ಭಯೋತ್ಪಾದಕತೆಯ ನಿಗ್ರಹದ ನೆಪದಲ್ಲಿ ಅನೇಕ ಅಮಾಯಕರಿಗೆ ಚಿತ್ರ ಹಿಂಸೆ ನೀಡಿ ಅವರನ್ನು ಬಂಧಿತರನ್ನಾಗಿರಿಸುವ ಪರಂಪರೆಗೆ ಒಬಾಮಾ ಇತಿಶ್ರೀ ಹಾಡಲೇಬೇಕಾಗಿದೆ. ಈ ನಿಟ್ಟಿನಲ್ಲಿ ಅಮೆರಿಕಾದ ನೈತಿಕ ಹೊಣೆಗಾರಿಕೆಯನ್ನು ಒಪ್ಪಿಕೊಂಡು ನೊಂದ ಅಮಾಯಕರಿಗೆ ಮತ್ತು ರಾಷ್ಟ್ರಗಳಿಗೆ ಸೂಕ್ತ ಪರಿಹಾರ ಒದಗಿಸುವುದು ಒಬಾಮ ಸರ್ಕಾರದ ಪ್ರಮುಖ ಧ್ಯೇಯವಾಗಬೇಕಾಗಿದೆ. ಭಯೋತ್ಪಾದನೆ, ಪರಿಸರ ರಕ್ಷಣೆ ಮತ್ತು ಇಂಧನ ಪೂರೈಕೆಯಂತಹ ಗಂಭೀರ ಸಮಸ್ಯೆಗಳನ್ನು ಎದುರಿಸಲು ಅಮೆರಿಕ ಮಾತುಕತೆ ಮತ್ತು ಪರಸ್ಪರ ಸಹಕಾರದ ಮೂಲಕ ಪ್ರಯತ್ನಿಸುತ್ತದೆ ಎಂದು ಒಬಾಮರವರ ಪಕ್ಷ ಘೋಷಿಸಿದೆ.

ತಾಯ್ನುಡಿ ದಿನಾಚರಣೆ: ಏನಿದರ ಹೆಚ್ಚಳ?

ತಾಯ್ನುಡಿ ಆಚರಣೆಗೆ ಒಂದು ಚಾರಿತ್ರಿಕ ಹಿನ್ನಲೆ ಇದೆ. ಇವತ್ತಿನ ಬಂಗ್ಲಾದೇಶ ಅಂದರೆ ಅಂದಿನ ಪೂರ್ವ ಪಾಕಿಸ್ಥಾನದ ಭಾಗವಾಗಿದ್ದ ಪೂರ್ವ ಬಾಂಗ್ಲದಲ್ಲಿ ಭಾಷಾ ಚಳುವಳಿಯೊಂದು ಆರಂಭವಾಯಿತು. ೧೯೪೮ರಲ್ಲಿ ಪಾಕಿಸ್ಥಾನವು ಉರ್ದು ಭಾಷೆಯನ್ನು ಆಡಳಿತ ಭಾಷೆಯಾಗಿ ಘೋಷಣೆ ಮಾಡಿತು. ಇದು ಬೆಂಗಾಲಿ ಭಾಷಿಕರ ಅಸಮಧಾನಕ್ಕೆ ಕಾರಣವಾಗಿ ಭಾಷಾ ಆಂದೋಲನ ಶುರುವಾಯಿತು. ಈ ಚಳುವಳಿಯ ಮುಖ್ಯ ಉದ್ದೇಶ ಬೆಂಗಾಲಿಯನ್ನು ಆಡಳಿತ ಭಾಷೆಯಾಗಿ ಗುರುತಿಸಬೇಕು ಎನ್ನುವುದಾಗಿತ್ತು. ಈ ಚಳುವಳಿಯು ತೀವ್ರ ಸ್ವರೂಪ ತಾಳಿದಾಗ ಢಾಕ ವಿಶ್ವವಿದ್ಯಾನಿಲಯದ ನಾಲ್ಕು ಜನ ವಿದ್ಯಾರ್ಥಿಗಳು ಪೋಲಿಸ್‌ರ ಗುಂಡೇಟಿಗೆ ಪ್ರಾಣತ್ಯಾಗ ಮಾಡಿದರು. ಈ ವಿದ್ಯಾರ್ಥಿಗಳು ತಾಯ್ನುಡಿಯ ಹಕ್ಕಿಗಾಗಿ ಪ್ರಾಣ ತ್ಯಾಗ ಮಾಡಿದ್ದರಿಂದ ಆ ದಿನ ೨೧ ಫೆಬ್ರುವರಿ ೧೯೫೨ ರಂದು ಶಾಹೀದ್ ಹುತ್ಮಾತರ ದಿನವನ್ನಾಗಿ ಸಾರಿದರು.

ಮೇಟಿ ಮಲ್ಲಿಕಾರ್ಜುನ್

ಫೆಬ್ರವರಿ 21 ರಂದು ಅಂತರಾಷ್ಟ್ರೀಯ ತಾಯ್ನುಡಿ ದಿನವಾಗಿ ಆಚರಿಸಲಾಗುತ್ತಿದೆ. ತಾಯ್ನುಡಿ ದಿನಾಚರಣೆ ಆಚರಿಸುವುದರ ಮುಖ್ಯ ಉದ್ದೇಶ ಭಾಷಿಕ-ಸಾಂಸ್ಕೃತಿಕ ಬಹುತ್ವತೆ/ವೈವಿಧ್ಯತೆ ಮತ್ತು ಬಹುಭಾಷಿಕತೆಯನ್ನು ಸಂಗೋಪಿಸುವುದು. ಇಂತಹ ಮಹತ್ತರ ಆಶಯದೊಂದಿಗೆ ಯುನಿಸ್ಕೋ ಸಂಸ್ಥೆ ಇದನ್ನು ಅನುಷ್ಠಾನ ಮಾಡಿದೆ. ಯುನಿಸ್ಕೋ ಸಂಸ್ಥೆಯ ಮುಖ್ಯ ಉದ್ದೇಶಗಳಲ್ಲಿ ಇದು ಒಂದು. ಹಾಗಾಗಿ ಯುನಿಸ್ಕೋ ಸಂಸ್ಥೆಯ ಸದಸ್ಯ ರಾಷ್ಟ್ರಗಳು ಪ್ರತಿ ವರ್ಷ ಈ ದಿನವನ್ನು ಅಂತರಾಷ್ಟ್ರೀಯ ತಾಯ್ನುಡಿ ದಿನವಾಗಿ ಆಚರಿಸುತ್ತವೆ. ಯುನಿಸ್ಕೋ ಸಂಸ್ಥೆಯು ಭಾಷೆಗಳನ್ನು ಮಾನವ ಕುಲದ ಮೂರ್ತ ಮತ್ತು ಅಮೂರ್ತ ರೂಪದಲ್ಲಿ ಪರಿಭಾವಿಸಿಕೊಂಡಿರುವ ಪರಂಪರೆಯ ಮಹತ್ವವನ್ನು ಪ್ರತಿನಿಧಿಸುವ ಬಹು ಮುಖ್ಯವಾದ ಮಾನದಂಡಗಳು ಎಂದು ವ್ಯಾಖ್ಯಾನಿಸಿದೆ. ಈ ಕ್ರಮವು ಒಂದು ತಾಯ್ನುಡಿಯು ಪ್ರಸರಿಸುವ ವಿವೇಕ/ಜ್ಞಾನವನ್ನು ಪ್ರೋತ್ಸಾಯಿಸುವದೂ ಆಗಿದೇ. ಈ ಒಂದು ರೂಢಿ/ಆಚರಣೆ ಕೇವಲ ಭಾಷಿಕ ವೈವಿಧ್ಯತೆ ಮತ್ತು ಬಹುಭಾಷಿಕ ಶಿಕ್ಷಣ ಪಡೆಯುವ ಬಗೆಯಲ್ಲ. ಒಂದು ಭಾಷೆ ಪಾರಂಪರಿಕವಾಗಿ ರೂಢಿಸಿಕೊಂಡಿರುವ ಭಾಷಿಕ-ಸಾಂಸ್ಕೃತಿಕ ಇಡೀ ಅನುಭವ, ಅನನ್ಯತೆ ಹಾಗೂ ತಿಳುವಳಿಕೆಯ ಅರಿವು ಮೂಡಿಸುವದೂ ಆಗಿದೆ. ಇಂತಹ ಒಂದು ಮಾದರಿಯು ವಿಶ್ವದಾದಂತ್ಯ ಭಾಷಿಕ-ಸಾಂಸ್ಕೃತಿಕ ಐಕ್ಯತೆ, ಸಹನೆ ಮತ್ತು ಸಂವಾದವನ್ನು ಏರ್ಪಡಿಸುವದಕ್ಕೆ ಪ್ರೇರಣೆಯಾಗುತ್ತೆ ಎನ್ನುವ ನಂಬಿಕೆಯೂ ಇದೆ. ಯಾಕಂದರೆ Languages Matter. ಅನ್ನುವದು ಇಲ್ಲಿ ಸ್ಪಷ್ಟವಾಗಿದೆ.

ತಾಯ್ನುಡಿ ಆಚರಣೆಗೆ ಒಂದು ಚಾರಿತ್ರಿಕ ಹಿನ್ನಲೆ ಇದೆ. ಐವತ್ತರ [1952 ಫೆಬ್ರುವರಿ 21] ದಶಕದಲ್ಲಿ ಇವತ್ತಿನ ಬಂಗ್ಲಾದೇಶ ಅಂದರೆ ಅಂದಿನ ಪೂರ್ವ ಪಾಕಿಸ್ಥಾನದನ ಭಾಗವಾಗಿದ್ದ ಪೂರ್ವ ಬಾಂಗ್ಲದಲ್ಲಿ ಭಾಷಾ ಚಳುವಳಿಯೊಂದು ಆರಂಭವಾಯಿತು. 1947 ರ ಭಾರತ-ಪಾಕಿಸ್ಥಾನ ಪಾರ್ಟಿಷನ್‌ನ ಸಂದರ್ಭದಲ್ಲಿ ಬಾಂಗ್ಲಾ ಪ್ರದೇಶವು ಧಾರ್ಮಿಕ ಮಾನದಂಡದ ಪ್ರಕಾರ ಇಬ್ಭಾಗವಯಿತು. ಪಶ್ಚಿಮ ಬಾಂಗ್ಲವು ಭಾರತಕ್ಕೆ ಸೇರಿದರೆ ಪೂರ್ವ ಬಾಂಗ್ಲವು ಪಾಕಿಸ್ಥಾನಕ್ಕೆ ಸೇರಿತು. 1948ರಲ್ಲಿ ಪಾಕಿಸ್ಥಾನವು ಉರ್ದು ಭಾಷೆಯನ್ನು ಆಡಳಿತ ಭಾಷೆಯಾಗಿ ಘೋಷಣೆ ಮಾಡಿತು. ಇದು ಬೆಂಗಾಲಿ ಭಾಷಿಕರ ಅಸಮಧಾನಕ್ಕೆ ಕಾರಣವಾಗಿ ಭಾಷಾ ಆಂದೋಲನ ಶುರುವಾಯಿತು. ಈ ಚಳುವಳಿಯ ಮುಖ್ಯ ಉದ್ದೇಶ ಬೆಂಗಾಲಿಯನ್ನು ಆಡಳಿತ ಭಾಷೆಯಾಗಿ ಗುರುತಿಸಬೇಕು ಎನ್ನುವ ಬೇಡಿಕೆ ಅವರದಾಗಿತ್ತು. ಈ ಚಳುವಳಿಯು ತೀವ್ರ ಸ್ವರೂಪ ತಾಳಿದಾಗ ಢಾಕ ವಿಶ್ವವಿದ್ಯಾನಿಲಯದ ನಾಲ್ಕು ಜನ ವಿದ್ಯಾರ್ಥಿಗಳು ಪೋಲಿಸ್‌ರ ಗುಂಡೇಟಿಗೆ ಪ್ರಾಣತ್ಯಾಗ ಮಾಡಿದರು. ಈ ವಿದ್ಯಾರ್ಥಿಗಳು ತಾಯ್ನುಡಿಯ ಹಕ್ಕಿಗಾಗಿ ಪ್ರಾಣ ತ್ಯಾಗ ಮಾಡಿದ್ದರಿಂದ ಆ ದಿನ 21 ಫೆಬ್ರುವರಿ 1952 ರಂದು "ಶಾಹೀದ್ ಮಿನಾರ್" [martyr's monument] ಎಂಬ ಹುತಾತ್ಮರ ಸ್ಮರಣಾರ್ಥ ಒಂದು ಮಾನು ಮೆಂಟ್‌ನ್ನು ಕಟ್ಟಿಸಿ ಆ ದಿನವನ್ನು ಹುತ್ಮಾತರ ದಿನವನ್ನಾಗಿ ಸಾರಿದರು. ಇವರ ನಿರಂತರ ಹೋರಾಟ ಮತ್ತು ಒತ್ತಡದಿಂದ 1956 ಫೆಬ್ರುವರಿ 29 ರಂದು ಬೆಂಗಾಲಿಯು ಆಡಳಿತ ಭಾಷೆಯಾಗಿ ಪರಿಗಣಿಸಲ್ಪಟ್ಟಿತು. ನಂತರ ಬಾಂಗ್ಲದೇಶದ ಲಿಬರೇಶನ್ ವಾರ್‌ನಿಂದ 1971 ರಲ್ಲಿ ಬಾಂಗ್ಲದೇಶವು ಸ್ವತಂತ್ರವಾಯಿತು. ನವಂಬರ್ 17 1999ರಲ್ಲಿ ಯುನಿಸ್ಕೋ ಏಕುಷೆಯಾ ಫೆಬ್ರುವರಿ [ಫೆಬ್ರುವರಿ 21] ಎಂದು ತಾಯ್ನುಡಿ ದಿನವನ್ನಾಗಿ ಆಚರಿಸಲು ಘೋಷಣೆ ಮಾಡಿತು. ಇದು ಮೊಟ್ಟ ಮೊದಲು 21 ಫೆಬ್ರುವರಿ 2000ದಲ್ಲಿ ಜಾಗತಿಕ ತಾಯ್ನುಡಿಗಳ ದಿನವಾಗಿ ಆಚರಿಸಲ್ಪಟ್ಟಿತು.

ಭಾರತ ದೇಶದಲ್ಲಿ 1960ರ ಜನಗಣತಿ ಪ್ರಕಾರ ಸಾವಿರದ ಆರು ನೂರ ಐವತ್ತಾರು ಭಾಷೆಗಳಿವೆ ಎನ್ನುವ ಅಂದಾಜಿದೆ. ಹಾಗೇ ಆರು ಸಾವಿರದ ಏಳುನೂರು ಭಾಷೆಗಳು ಜಗತ್ತಿನಾದಂತ್ಯ ಬಳಕೆಯಲ್ಲಿವೆ ಎನ್ನುವ ದಾಖಲೆಗಳೂ ಸಿಗುತ್ತವೆ. ಇವುಗಳಲ್ಲಿ ಅರ್ಧಕ್ಕಿಂತ ಹೆಚ್ಚು ಭಾಷೆಗಳು ಬುಡಕಟ್ಟು ಮತ್ತು ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿವೆ. ಈ ಸಮುದಾಯಗಳು ತಮ್ಮ ಭಾಷೆಗಳನ್ನು ಬಹುಸಂಖ್ಯಾತರ /ಪ್ರಾದೇಶಿಕ/ರಾಷ್ಟ್ರ ಭಾಷೆಗಳ ಪ್ರಾಬಲ್ಯದಿಂದ ಕಳೆದುಕೊಂಡಿವೆ ಇಲ್ಲವಾದರೆ ಕಳಕೊಳ್ಳುವ ಸ್ಥಿತಿಯಲ್ಲಿವೆ ಅಂದರೆ ವಿನಾಶದಂಚಿನಲ್ಲಿವೆ ಎಂದೂ ಅರ್ಥ. ಭಾಷೆಗಳು ಒಂದು ಸಮುದಾಯದ ಆರ್ಥಿಕ-ಸಾಮಾಜಿಕ-ರಾಜಕೀಯ ಆಶೋತ್ತರಗಳನ್ನು ಕಾಪಾಡುವ ಜವಾಬ್ದರಿಯನ್ನು ನಿಭಾಯಿಸುತ್ತವೆ. ಈ ಹಕ್ಕುಗಳು ಕೆಲವು ಸಮುದಾಯಗಳಿಗೆ ಮಾತ್ರ ಲಭಿಸಿರುತ್ತವೆ ಎನ್ನುವದೂ ಕೂಡ ವಾಸ್ತವ. ಇದು ಜಾರ್ಜ್ ಆರ್ವೆಲ್‌ನ ಅನಿಮಲ್ ಫಾರ್ಮ್‌ನಲ್ಲಿ ಉಲ್ಲೇಖಿಸಿದಂತೆ "Some are equal and Some are more equal" ಅನ್ನವಂತಿದೆ. ತಾಯ್ನುಡಿಯನ್ನು ಕಾಪಾಡಿಕೊಳ್ಳುವ ಸಂವಿಧಾನಾತ್ಮಕ ಹಕ್ಕು ಎಲ್ಲರಿಗೂ ಇದೆ. ಆದರೆ ಈ ಹಕ್ಕನ್ನು ಅನುಭವಿಸುವ ಹಕ್ಕನ್ನು ಕಿತ್ತಿಕೊಳ್ಳುವ ನಿದರ್ಶನಗಳೂ ಇತಿಹಾಸದುದ್ದಕ್ಕೂ ಸಿಗುತ್ತವೆ. ಯುನಿಸ್ಕೋನಂತಹ ಸಂಸ್ಥೆಗಳು ಭಾಷಿಕ-ಸಾಂಸ್ಕೃತಿಕ ಪ್ರಾಮುಖ್ಯತೆಯನ್ನು ಮೆರೆಯುವ ತಾತ್ವಿಕತೆಯನ್ನು ಪ್ರದರ್ಶಿಸಿವೆ. ಆದರೆ ಪ್ರಜಾಪ್ರಭುತ್ವ ಮತ್ತು ಜ್ಯಾತ್ಯಾತೀತ ಮೌಲ್ಯಗಳನ್ನು ಕಾಪಾಡುವ ನಮ್ಮ ಸಂವಿಧಾನಗಳು ರೂಪಿಸುವ ಇಬ್ಬಂದಿ ಭಾಷಾ ನೀತಿಯಿಂದ ಎಷ್ಟೋ ಸಮುದಾಯಗಳಿಗೆ ತಮ್ಮ ಭಾಷಿಕ- ಸಾಂಸ್ಕೃತಿಕ ಹಕ್ಕನ್ನೆ ಇಲ್ಲವಾಗಿಸುವ ಹುನ್ನಾರಗಳು ನಡೆಯುತ್ತವೆ. ಇದರ ಪರಿಣಾಮದಿಂದ "ಇಂಗ್ಲಿಶ್ ಮಾತ್ರ"[English Only], "ಕನ್ನಡ ಕಡ್ಡಾಯ" [Kannada Compulsory] ಎನ್ನುವ ಶಾಸನ ಬದ್ಧ ನಿರ್ಧಾರಗಳು ಕಾರ್ಯರೂಪಕ್ಕೆ ಬರಲೂ ಸಾಧ್ಯವಿದೆ. ಈ ನಿರ್ಧಾರಗಳ ಪರಿಣಾಮದಿಂದ ಬಹುಸಾಂಸ್ಕೃತಿಕ ಹಾಗೂ ಬಹುಭಾಷಿಕ ಪ್ರಜ್ಞೆಯನ್ನು ಕಾಪಾಡುವ ಹೊಣೆ ಯಾರದು? ಈ ಸಮುದಾಯಗಳ ಆಶೋತ್ತರಗಳನ್ನು ಈಡೇರಿಸುವ ಜವಾಬ್ದರಿ ಯಾರದು? ಈ ಪ್ರಶ್ನೆಗಳಿಗೆ ಉತ್ತರಿಸುವರು ಯಾರು? ಎನ್ನುದು ಕೂಡ ಆಶ್ಚರ್ಯದ ಪ್ರಶ್ನೆ. ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಇರಾಧೆ ನಮ್ಮ ಪ್ರಭುತ್ವಕ್ಕೆ ಇದ್ದಂತೆ ಕಾಣುತ್ತಿಲ್ಲ. ಇವುಗಳಿಗೆ ಉತ್ತರ ದೊರಕದೇ



ನಮ್ಮ ರಾಷ್ಟ್ರೀಯತೆಯ ಕಲ್ಪನೆ ಸಾಕಾರಗೊಳ್ಳದು ಎನ್ನುವುದು ಕೂಡ ನಿಚ್ಚಳವಾಗಿದೆ.

ರಾಷ್ಟ್ರಿಯತೆಯ ನಿರ್ಮಾಣದ ಪರಿಕಲ್ಪನೆಗಳಲ್ಲಿ ಭಾಷೆಗೂ ಒಂದು ಪ್ರಮುಖ ಸ್ಥಾನವಿದೆ. ವಿಪರ್ಯಾಸವೆಂದರೆ ಇಲ್ಲಿ ನಾಡಿನ ಜನರ ಮಧ್ಯ ಸಂಪರ್ಕ ಕಲ್ಪಿಸಲು, ಶಿಕ್ಷಣ ಮಾಧ್ಯಮವಾಗಿಸಲು ಹಾಗೂ ಆಡಳಿತ ಭಾಷೆಯಾಗಿಸಲು ಕೈಕೊಳ್ಳುವ ನಿರ್ಧಾರಗಳು ಏಕ ಪಕ್ಷೀಯವಾಗಿರುತ್ತವೆ. ಬಹುಸಂಖ್ಯಾತರ ಭಾಷೆಗಳು ಈ ನಿಯೋಗಗಳನ್ನು ಪ್ರತಿನಿಧಿಸುವ ಭಾಷೆಗಳಾಗಿ ಮೇಲುಗೈ ಸಾಧಿಸುತ್ತವೆ. ಇದು ಮೇಲ್ ನೋಟಕ್ಕೆ ಸರಿಯಾಗಿಯೇ ಇರುತ್ತದೆ ಕಾರಣ ಮುಕ್ಕಾಲು ಪ್ರತಿಶತ ಜನರು ಮಾತುನಾಡುವ ಭಾಷೆ ಅದಾಗಿರುತ್ತೆ. ಹೆಚ್ಚಾಗಿ ನೆಮ್ಮೆಲ್ಲರ ದೃಷ್ಟಿಯಲ್ಲಿ ಪ್ರಜಾಪ್ರಭುತ್ವ ಅಂದರೂ ಇದೇ ಆಗಿರುತ್ತೆ. ಪ್ರಜಾಪ್ರಭುತ್ವದ ಸಡಿಲವಾದ ವ್ಯಾಖ್ಯಾನಗಳು ಸೃಷ್ಟಿಸಬಹುದಾದ ಅಪಾಯಗಳು ನಿಜವಾಗಿಯೂ ಆತಂಕಕಾರಿಯಾಗಿವೆ. ಇಂತಹ ಸಂಘರ್ಷದಲ್ಲೂ ಕೆಲವು ಸಮುದಾಯಗಳು ತಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಕಾಪಾಡಿಕೊಂಡಿರುದನ್ನು ಗಮನಿಸಿದರೆ ಬಹುಭಾಷಿಕತೆಗೆ ಹಾಗೂ ಬಹುಸಾಂಸ್ಕೃತಿಕತೆ ಇರುವ ಚೈತನ್ಯವನ್ನು ತೋರಿಸುತ್ತದೆ.

ಇತ್ತೀಚಿನ ಜಾಗತೀಕರಣದಂತಹ ಪ್ರಕ್ರಿಯೆವು ಇಂತಹ ಚೈತನ್ಯವನ್ನು ಪಲ್ಲಟಗೊಳಿಸುವ ಪರಿ ಕೂಡ ನಮ್ಮ ಪ್ರಭುತ್ವದ ಪರೋಕ್ಷ ಸಹಕಾರದಿಂದಲೇ ಸಾಧ್ಯವಾಗಿದೆ. ಅಂದರೆ ಪ್ರಭುತ್ವ ಮತ್ತು ಬಂಡವಾಳಶಾಹಿಗಳ ನಂಟು ಅಮೂರ್ತ ಸ್ವರೂಪದಲ್ಲಿರುತ್ತೆ. ಆದ್ದರಿಂದಲೇ ಈ ಪ್ರಭುತ್ವ ಮತ್ತು ಬಂಡವಾಳಶಾಹಿಗಳ ಸಹಯೋಗದಿಂದ ನಮ್ಮ ಸಾಂಸ್ಕೃತಿಕ-ಶೈಕ್ಷಣಿಕ ಮತ್ತು ಧಾರ್ಮಿಕ ನಿಯೋಗಗಳು ವಿಭಿನ್ನ ರೂಪ ಪಡೆದುಕೊಂಡಿವೆ. ಅಂದರೆ ಈ ಭಾಷಿಕ-ಸಾಂಸ್ಕೃತಿಕ ಬಹುತ್ವತೆಯು ಏಕೀಭವಿಸುವ ಕ್ರಮವೂ ಅಮೂರ್ತವಾಗಿರುತ್ತೆ. ಈ ರೂಪಾಂತರ ಪ್ರಕ್ರಿಯೆಯಲ್ಲಿ ಹಲವಾರು ಸಾಂಸ್ಕೃತಿಕ ಸ್ಥಿತ್ಯಂತರ ನಮ್ಮನ್ನು ಆವರಿಸಿಕೊಂಡಿರುವದಲ್ಲದೆ ಸಾಂಸ್ಕೃತಿಕ ವಿಸ್ಮೃತಿಗೊಳಿಸುವ ಆಕರ್ಷಣೆಗಳನ್ನು ರೂಪಿಸುತ್ತವೆ. ಇಂತಹ ತ್ರಿಶಂಕು ಸ್ಥಿತಿಯಲ್ಲಿ ಯುನಿಸ್ಕೋ ರೂಪಿಸುವ ಸಾಮಾಜಿಕ-ಸಾಂಸ್ಕೃತಿಕ ಆದರ್ಶಗಳು ಹೇಗೆ ಸಹಾಯ ಮಾಡಬಲ್ಲವು ಅನ್ನುವುದು ಇಂದಿನ ಅಗತ್ಯತೆಯ ಪ್ರಶ್ನೆಯಾಗಿದೆ. ನಮ್ಮ ರಾಜಕೀಯ ಸ್ಥಿತ್ಯಂತರಗಳು ಸೃಷ್ಟಿಸಿದ ಸಾಮಾಜಿಕ ಬಿಕ್ಕಟ್ಟುಗಳಾದ ಕೋಮು ದ್ವೇಷ, ಧಾರ್ಮಿಕ ಅಸಹನೆ ಹಾಗೂ ಗಡಿಪ್ರದೇಶದ ಬದ್ಧ ವೈರತ್ವಗಳು ಭಾಷಿಕ-ಸಾಂಸ್ಕೃತಿಕ ನಂಬಿಕೆ, ಸಹಬಾಳ್ವೆ ಮತ್ತು ಸಾಂಸ್ಕೃತಿಕ ಕೊಡುಕೊಳ್ಳುವಿಕೆಯನ್ನು ನಿರ್ನಾಮ ಮಾಡಿವೆ. ಆದ್ದರಿಂದ ತಾಯ್ನುಡಿಯ ಆಚರಣೆಗಳ ಉದ್ದೇಶಗಳು ಕೇವಲ ರಾಜಕೀಯ ಆಚರಣೆಗಳಾಗಿ ಯಾವುದೆ ಸಾಮಾಜಿಕ/ಸಾಂಸ್ಕೃತಿಕ ಮಹತ್ವ ಪಡೆದುಕೊಳ್ಳದೆ ಇರುವುದು ಸ್ಪಷ್ಟವಾಗಿದೆ.

ಇಂತಹ ಆಚರಣೆಗಳ ಕಾರ್ಯಾಚರಣೆ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ನಮಗೆ ಇರಬೇಕಾದ ಭಾಷಿಕ-ಸಾಂಸ್ಕೃತಿಕ-ಸಾಮಾಜಿಕ ವಿವೇಕ ಮತ್ತು ಬದ್ಧತೆಯ ಮರು ಪರಿಶೀಲನೆಯ ಅಗತ್ಯವಿದೆ. ಸಮಾಜದ ಆರೋಗ್ಯವನ್ನು ಕಾಪಾಡುವ ಯಾವುದೇ ತೀರ್ಮಾನವು ಬಹುತ್ವದ ನೆಲೆಗಳನ್ನು ಆಶ್ರಯಿಸಿಕೊಂಡಿರುತ್ತೆ ಎನ್ನುವದನ್ನು ಮರೆತರೆ ನಾವು ಭಾಷೆ-ಸಂಸ್ಕೃತಿ ಮತ್ತು ಸಾಮಾಜಿಕ ಸಂಬಂಧಗಳನ್ನು ಮರೆಯುವ ಸಾಧ್ಯತೆಗಳು ಉಲ್ಬಣಿಸುತ್ತವೆ. ಮಗು ತಾಯ್ನುಡಿಯೊಂದಿಗೆ ಯಾವಾಗಲು ನಿಕಟ ಸಂಪರ್ಕವನ್ನು ಹೊಂದಿರುತ್ತದೆ. ಈ ಕಾರಣದಿಂದಲೇ ಮಗು ತನ್ನ ಬೌದ್ಧಿಕ ವಿಕಾಸ, ಅನುಭವ ಮತ್ತು ಬೆಳವಣಿಗೆಯನ್ನು ತಾಯಿ ಭಾಷೆಯ ಸಹಕಾರದಿಂದ ರೂಪಿಸಿಕೊಳ್ಳುತ್ತೆ. ಇದಕ್ಕೆ ಅಗತ್ಯ ಮತ್ತು ಪೂರಕವಾದ ಪರಿಸರವೂ ಯಾವಾಗಲು ಲಭ್ಯ. ಇಂತಹ ಸಂದರ್ಭಗಳು ಮಗುವಿನ ಭಾಷಿಕ-ಸಾಂಸ್ಕೃತಿಕ-ಸಾಮಾಜಿಕ ತಿಳುವಳಿಕೆಯ ಸಾಮರ್ಥ್ಯದ ನೆಲೆಗಳನ್ನು ವಿಸ್ತರಿಸುವವು. ಭಾಷೆ ಮತ್ತು ಸಂಸ್ಕೃತಿಯ ಮಧ್ಯ ಏರ್ಪಡುವ ಸಂಬಂಧವು ಆ ಸಮುದಾಯದ ಭಾಷಿಕ-ಸಾಂಸ್ಕೃತಿಕ ತಿರುಳನ್ನು ಪ್ರತಿನಿಧಿಸುತ್ತೆ ಅನ್ನುವುದನ್ನು ಯಾರು ಅಲ್ಲಗಳೆಯಲಾರರು. ದೇಶೀಯ ರೂಢಿಗಳು, ಆಚರಣೆಗಳು, ಕತೆ-ಕಾವ್ಯಗಳನ್ನು ನಿರೂಪಿಸುವ ಮಾದರಿಗಳು ಹಾಗೂ ಸಮಾಜವನ್ನು ಪ್ರತಿಬಿಂಬಿಸುವ ಮೌಲ್ಯಗಳು, ಸಾಹಿತ್ಯಿಕ-ಭಾಷಿಕ ಸಂಕಥನಗಳು/ ಸಂವೇದನೆಗಳು ತಾಯಿ ಭಾಷೆಯಿಂದಲೇ ದಕ್ಕುವಂತವು. ಇವುಗಳ ಸಹಾಯದಿಂದ ಪ್ರತಿಯೊಬ್ಬ ಭಾಷಿಕನು ಸಾಮಾಜಿಕತೆಯ ಎಲ್ಲ ವಿವೇಕವನ್ನು ಪಡೆದುಕೊಳ್ಳುತ್ತಾನೆ.

ಇದು ಮಗು ತನ್ನ ಅನುಭವವನ್ನು ರೂಪಿಸಿಕೊಳ್ಳುವ ಏಕೈಕ ಮಾರ್ಗವೆಂದು ನನ್ನ ವಾದವಲ್ಲ. ಆದರೆ ಮಗುವಿನ ಬೌದ್ಧಿಕ ವಿಕಾಸ ಮತ್ತು ಬೆಳವಣಿಗೆಯ ಸಮಗ್ರತೆ ತಾಯಿ ಭಾಷೆಯಿಂದಲೇ ಸಾಧ್ಯ. ಅಂದರೆ, ಒಂದು ಭಾಷೆಯನ್ನು ಕಳೆದುಕೊಳ್ಳುವದು ಒಂದು ಸಮುದಾಯದ ಸಾಂಸ್ಕೃತಿಕ ನೆನಮು ಕಳಕೊಂಡಂತೆ. ಇಂತಹ ಸಾಂಸ್ಕೃತಿಕ ವಿಸ್ಮೃತಿ ಹರಿದು ಹಾಕಿದ ಚಿಂದಿ ಬಟ್ಟೆಯಂತೆ. ಯಾಕಂದರೆ, ಪ್ರತಿ ಭಾಷೆಯ ಗೃಹಿತಗಳು ಅಂದವಾಗಿ ನೇಯ್ದು/ಹೆಣೆದು ಗೋಡೆಗೆ ನೇತಾಕಿದ ಕಸೂತಿ ಬಟ್ಟೆಯ ವಿನ್ಯಾಸದಷ್ಟೇ ಸಂಕೀರ್ಣವಾಗಿರುತ್ತೆ. ಪ್ರತಿಯೊಂದು ಭಾಷೆಯು ವಿಭಿನ್ನ ಮಾದರಿಯ ಜಗತ್ತನ್ನು ಸೃಷ್ಟಿಸುತ್ತ ಈ ಜಗತ್ತು ಅದ್ಭುತ ಅನುಭವದ ನೆಲೆಯನ್ನು ಪ್ರತಿನಿಧಿಸುತ್ತೆ. ಈ ಹಿಂದಿನ ಮಾತುಗಳಿಂದ ಇದನ್ನು ಸ್ಪಷ್ಟಪಡಿಸಬಹುದು "ಒಂದು ಜನಾಂಗವನ್ನು ನಾಶಮಾಡಬೇಕೆಂದರೆ ಆ ಜನಾಂಗದ ಭಾಷೆಯನ್ನು ನಾಶಮಾಡಿದರೆ ಸಾಕು" [ಕೋಡ್ ಸ್ವಿಚರಡ್ ಕಾಲಂ: ಕೆ.ವಿ.ನಾರಾಯಣ: ಪುಟ:90:2005]

ತಾಯಿ ಭಾಷೆಯು ಒಂದು ಸಮಾಜದ ಬುದ್ಧಿ ತಿಳುವಳಿಕೆ, ಸಮುದಾಯ ಪ್ರಜ್ಞೆ ಹಾಗೂ ಮೌಲ್ಯವನ್ನು ಸಂಗ್ರಹವಾಗಿ ಭಾಷಿಕರಲ್ಲಿ ಅಂತರ್ಗತವಾಗುತ್ತೆ ಎನ್ನುವುದು ವಾಸ್ತವ. ಈ ದೃಷ್ಟಿಯಿಂದಲೇ ಬ್ರಿಟಿಷ್ ಪ್ರಭುತ್ವವು ಭಾರತದ ಭಾಷೆಗಳನ್ನು ನಿಷ್ಕ್ರಿಯಗೊಳಿಸಿ ಇಂಗ್ಲಿಶನ್ನು ಸರ್ವಾಧಿಕಾರಿ ಭಾಷೆಯಾಗಿ ರೂಪಿಸಿದರು. ಇದೊಂದು ವಿಸ್ಮೃತಿಯನ್ನು ಸೃಷ್ಟಿಸುವ ಹುನ್ನಾರ. ಹಾಗೂ ಇಂಗ್ಲಿಶನ್ನು ಕೇವಲ ಅಧಿಕಾರ-ಅಂತಸ್ತು ಕೇಂದ್ರಿತ ಭಾಷೆಯನ್ನಾಗಿಯೂ ನಿರ್ಮಾಣ ಮಾಡಿದರು. ಧಾರ್ಮಿಕ ಮೂಲಭೂತವಾದಿಗಳು ಭಾಷೆಯೊಂದಿಗಿನ ಸಂಬಂಧದ ನಿಲುವುಗಳನ್ನು ತಮಗೆ ಬೇಕಾದ ರೀತಿಯಲ್ಲಿ ತಿರುಚುವ ಹುನ್ನಾರ ನಡೆಸಿರುವುದು ಪಕ್ಕಾ ಇದೆ ಕಾರಣಗಳು ಇರಬಹುದು. ಅಲ್ಲದೆ, ಇತ್ತೀಚಿನ ಇಂಗ್ಲಿಶ್ ಭಾಷೆಯ ಏಕೀಂದ್ರಿಕರಣಕ್ಕೆ ಸಾಕಷ್ಟು ವಿರೋಧಗಳು ಬರುವುದಕ್ಕೂ ಭಾಷೆಯ ಬಗೆಗಿನ ಮೌಢ್ಯ ಒಂದು ಕಾರಣವಾದರೆ, ಇಂಗ್ಲಿಶ್-ಅಧಿಕಾರ-ಪ್ರಭುತ್ವ-ಆರ್ಥಿಕತೆಯ ಸಂಬಂಧದ ನೆಲೆಗಳು ಸಡಿಲಗೊಂಡರೆ ಎಲ್ಲಿ ಬಂಡವಾಳಶಾಹಿ ಮತ್ತು ಮೂಲಭೂತವಾದಿ ದೋರಣೆಯ ಜನರ ಆತಂಕ ಇನ್ನೊಂದು ಕಾರಣವಿರಬಹುದು.

ಸಾಕಷ್ಟು ಜನ ಬಹುಭಾಷಿಕತೆಯ ಮೌಲ್ಯವನ್ನರಿಯದ ಕಾರಣದಿಂದ ತಾಯಿ ಭಾಷೆಯ ಮುಖೇನ ಶಿಕ್ಷಣ ಪಡೆಯುವದರ ಮಹತ್ವವನ್ನು ಅರಿಯದೆ ಬಂಡವಾಳಶಾಹಿಗಳ ಹುಸಿ ತರ್ಕದ ಭರವಸೆಗಳಿಗೆ ಮಾರು ಹೋಗಿ ತಾಯಿ ನುಡಿಯನ್ನು ಮೂಲಿಗುಂಪು ಮಾಡಿದ್ದಾರೆ. ಇದು ಕೇವಲ ಇಂಗ್ಲಿಶ್ ಭಾಷಾ ಕಲಿಕೆಯನ್ನು ವಿರೋಧಿಸಿದರೆ ಸಾಮಾಜಿಕ ನ್ಯಾಯ ಸಿಗುತ್ತೆ ಎನ್ನುವ ಅಲ್ಪ ಮತಿಗಳಿಗೇನು ಕಮ್ಮಿಯಿಲ್ಲ. ಬಹುಭಾಷಿಕ ಸಂದ ರ್ಭದ ಶಿಕ್ಷಣ, ಆಡಳಿತ, ಆರ್ಥಿಕತೆಯ ಭಾಷೆ ಯಾವದಿರಬೇಕು ಎನ್ನುವ ಸ್ಪಷ್ಟ ನಿರ್ಧಾರದ ಕೊರತೆಗೆ ಕಾರಣಗಳು: ಪ್ರಭುತ್ವದ ತಾರತಮ್ಯ ನೆಲೆಯ ಭಾಷಾ ನೀತಿಯಂತಹ ಶಾಸನ ಬದ್ಧ ನಿರ್ಧಾರಗಳು ಒಂದು ಕಾರಣವಾದರೆ ಭಾಷಿಕ ಮೌಲ್ಯ, ಅಗತ್ಯ ಮತ್ತು ಸಮುದಾಯ-ಸಂಸ್ಕೃತಿಯ ನಡುವಿನ ಸಾವಯವ ಸಂಬಂಧ ಹಾಗೂ ವೈವಿಧ್ಯತೆಯ ಪರಿಕಲ್ಪನೆಯನ್ನು ಗ್ರಹಿಸದೆ ಇರುವುದೇ ಮತ್ತೊಂದು ಕಾರಣ.

ಈ ವಾಸ್ತವವನ್ನು ಮನಗಂಡ ಭಾಷಾಶಿಕ್ಷಣ ತಜ್ಞರು ಹೇಳುವುದೆನಂದರೆ, ಬಹುಭಾಷಿಕತೆಯು ತಾಯ್ನುಡಿ ಮೂಲಕದ ಶಿಕ್ಷಣವನ್ನು ಸಮರ್ಥಿಸುತ್ತಾರೆ. ಕಾರಣ ತಾಯ್ನುಡಿ ಮೂಲಕ ಶಿಕ್ಷಣವು ತಿಳುವಳಿಕೆಯ ಮೂಲ ಪರಿಕಲ್ಪನೆಗಳನ್ನು ಸಾಕಾರಗೊಳಿಸುವದಕ್ಕೆ ಸೂಕ್ತ ಮಾದರಿ. ಈ ತಾಯ್ನುಡಿಯು ಅನನ್ಯತೆಯ ಪ್ರಜ್ಞೆ ಮೂಡಿಸುತ್ತೆ, ಸಾಂಸ್ಕೃತಿಕ ಸಂಬಂಧದ ನಿಲುವುಗಳನ್ನು ಗಟ್ಟಿಗೊಳಿಸುತ್ತೆ, ಪರಕೀಯತೆಯ ಸಾಧ್ಯತೆಗಳನ್ನು ಕಡಿತ ಗೊಳಿಸುತ್ತೆ

(33ನೇ ಪುಟಕ್ಕೆ)

ಇತ್ತೀಚಿನ ಜಾಗತೀಕರಣದಂತಹ ಪ್ರಕ್ರಿಯೆವು ಇಂತಹ ಚೈತನ್ಯವನ್ನು ಪಲ್ಲಟಗೊಳಿಸುವ ಪರಿ ಕೂಡ ನಮ್ಮ ಪ್ರಭುತ್ವದ ಪರೋಕ್ಷ ಸಹಕಾರದಿಂದಲೇ ಸಾಧ್ಯವಾಗಿದೆ. ಅಂದರೆ ಪ್ರಭುತ್ವ ಮತ್ತು ಬಂಡವಾಳಶಾಹಿಗಳ ನಂಟು ಅಮೂರ್ತ ಸ್ವರೂಪದಲ್ಲಿರುತ್ತೆ. ಆದ್ದರಿಂದಲೇ ಈ ಪ್ರಭುತ್ವ ಮತ್ತು ಬಂಡವಾಳಶಾಹಿಗಳ ಸಹಯೋಗದಿಂದ ನಮ್ಮ ಸಾಂಸ್ಕೃತಿಕ-ಶೈಕ್ಷಣಿಕ ಮತ್ತು ಧಾರ್ಮಿಕ ನಿಯೋಗಗಳು ವಿಭಿನ್ನ ರೂಪ ಪಡೆದುಕೊಂಡಿವೆ. ಈ ರೂಪಾಂತರ ಪ್ರಕ್ರಿಯೆಯಲ್ಲಿ ಹಲವಾರು ಸಾಂಸ್ಕೃತಿಕ ಸ್ಥಿತ್ಯಂತರ ನಮ್ಮನ್ನು ಆವರಿಸಿಕೊಂಡಿರುವದಲ್ಲದೆ ಸಾಂಸ್ಕೃತಿಕ ವಿಸ್ಮೃತಿಗೊಳಿಸುವ ಆಕರ್ಷಣೆಗಳನ್ನು ರೂಪಿಸುತ್ತವೆ. ಇಂತಹ ತ್ರಿಶಂಕು ಸ್ಥಿತಿಯಲ್ಲಿ ಯುನಿಸ್ಕೋ ರೂಪಿಸುವ ಸಾಮಾಜಿಕ-ಸಾಂಸ್ಕೃತಿಕ ಆದರ್ಶಗಳು ಹೇಗೆ ಸಹಾಯ ಮಾಡಬಲ್ಲವು ಅನ್ನುವದು ಇಂದಿನ ಅಗತ್ಯತೆಯ ಪ್ರಶ್ನೆಯಾಗಿದೆ.

ಮಹಿಳಾ ಶಿಕ್ಷಣ: ಸಬಲೀಕರಣ

ಪ್ರಸ್ತುತ ಚರ್ಚೆಯ ಶೀರ್ಷಿಕೆಯಲ್ಲಿ ಎರಡು ವಿಷಯಗಳಿವೆ. ಒಂದು: ಮಹಿಳಾ ಶಿಕ್ಷಣ. ಇನ್ನೊಂದು : ಮಹಿಳಾ ಸಬಲೀಕರಣ. ಶಿಕ್ಷಣ ಎಂಬುದನ್ನು ಸ್ಥೂಲವಾಗಿ/ ಔಪಚಾರಿಕವಾಗಿ ಕಲಿಕೆ ಮತ್ತು ಬೋಧನೆಯ ಸ್ವರೂಪ ಎನ್ನಬಹುದು. ಇದು ಅಧ್ಯಾಪನ ಮತ್ತು ಅಧ್ಯಯನವನ್ನು ಒಳಗೊಂಡಿದೆ. ಈ ಹಿನ್ನೆಲೆಯಲ್ಲಿ ಮಹಿಳಾ ಶಿಕ್ಷಣದ ಸ್ವರೂಪ ಮತ್ತು ಅದರ ಸಮಸ್ಯೆಯ ಸ್ವರೂಪವನ್ನು ಇಲ್ಲಿ ಚರ್ಚಿಸಲಾಗುವುದು. ಸಬಲೀಕರಣ ಎನ್ನುವುದು ಶಕ್ತಗೊಳಿಸು, ಬಲಗೊಳಿಸು ಎಂಬ ಅರ್ಥ ವಿವರಣೆಯನ್ನು ಹೊಂದಿದೆ. ಈ ಅರ್ಥ ವಿವರಣೆ ಸಾರ್ವತ್ರಿಕವಾದುದಲ್ಲ. ಅಂದರೆ ಸಮಾಜದ ವಿವಿಧ ವರ್ಗದವರು ಇದಕ್ಕೆ ಒಂದೇ ರೀತಿಯ ವಿವರಣೆ ಕೊಡಲು ಸಾಧ್ಯವಿಲ್ಲ. ಹಾಗಾಗಿ ಸಬಲೀಕರಣ ಎನ್ನುವುದು ಕೇವಲ ಶಬ್ದ ಕೋಶದ ಇಲ್ಲವೆ ನಿಘಂಟಿನ ಒಂದು ಪದವಲ್ಲ. ಆದ್ದರಿಂದ ವಿವಿಧ ದೃಷ್ಟಿ ಕೋನಗಳ ಮೂಲಕ ಇದನ್ನು ವಿವರಿಸಲು, ನಿರೂಪಿಸಲು ಸಾಧ್ಯವಿದೆ.

ಡಾ. ಬಿ. ಎಂ. ಪುಟ್ಟಯ್ಯ

ಪ್ರಸ್ತುತ ಚರ್ಚೆಯ ಶೀರ್ಷಿಕೆಯಲ್ಲಿ ಎರಡು ವಿಷಯಗಳಿವೆ. ಒಂದು: ಮಹಿಳಾ ಶಿಕ್ಷಣ. ಇನ್ನೊಂದು: ಮಹಿಳಾ ಸಬಲೀಕರಣ. ಶಿಕ್ಷಣ ಎಂಬುದನ್ನು ಸ್ಥೂಲವಾಗಿ/ಔಪಚಾರಿಕವಾಗಿ ಕಲಿಕೆ ಮತ್ತು ಬೋಧನೆಯ ಸ್ವರೂಪ ಎನ್ನಬಹುದು. ಇದು ಅಧ್ಯಾಪನ ಮತ್ತು ಅಧ್ಯಯನವನ್ನು ಒಳಗೊಂಡಿದೆ. ಈ ಹಿನ್ನೆಲೆಯಲ್ಲಿ ಮಹಿಳಾ ಶಿಕ್ಷಣದ ಸ್ವರೂಪ ಮತ್ತು ಅದರ ಸಮಸ್ಯೆಯ ಸ್ವರೂಪವನ್ನು ಇಲ್ಲಿ ಚರ್ಚಿಸಲಾಗುವುದು. ಸಬಲೀಕರಣ ಎನ್ನುವುದು ಶಕ್ತಗೊಳಿಸು, ಬಲ ಗೊಳಿಸು ಎಂಬ ಅರ್ಥ ವಿವರಣೆಯನ್ನು ಹೊಂದಿದೆ. ಈ ಅರ್ಥ ವಿವರಣೆ ಸ್ವತಂತ್ರವಾದುದಲ್ಲ, ಸಾರ್ವತ್ರಿಕವಾದುದಲ್ಲ. ಅಂದರೆ ಸಮಾಜದ ವಿವಿಧ ವರ್ಗದವರು ಇದಕ್ಕೆ ಒಂದೇ ರೀತಿಯ ವಿವರಣೆ ಕೊಡಲು ಸಾಧ್ಯವಿಲ್ಲ. ಹಾಗಾಗಿ ಸಬಲೀಕರಣ ಎನ್ನುವುದು ಕೇವಲ ಶಬ್ದಕೋಶದ ಇಲ್ಲವೆ ನಿಘಂಟಿನ ಒಂದು ಪದವಲ್ಲ. ಆದ್ದ ರಿಂದ ವಿವಿಧ ದೃಷ್ಟಿಕೋನಗಳ ಮೂಲಕ ಇದನ್ನು ವಿವರಿಸಲು, ನಿರೂಪಿಸಲು ಸಾಧ್ಯವಿದೆ. ವಾಸ್ತವವಾಗಿ ಅದರ ನಿರೂಪಣೆಯು ರಾಜಕೀಯ ದೃಷ್ಟಿಕೋನ ಹಾಗೂ ರಾಜಕೀಯ ನಿಲುವುಗಳಿಂದ ಕೂಡಿದೆ. ಹಾಗಾಗಿ ಭಿನ್ನ ಭಿನ್ನ ರಾಜಕೀಯ ದೃಷ್ಟಿಕೋನದವರು ಸಬಲೀಕರಣ ಎಂಬುದನ್ನು ಭಿನ್ನ ನೆಲೆಗಳಲ್ಲಿ, ಭಿನ್ನ ಧೋರಣೆಗಳಲ್ಲಿ ನಿರೂಪಿಸುತ್ತಾರೆ. ಈ ತಾತ್ವಿಕ ಸಮಸ್ಯೆಯ ಸ್ವರೂಪವನ್ನು ಇಲ್ಲಿ ಚರ್ಚಿಸಲಾಗುವುದು.

ಈ ಲೇಖನದಲ್ಲಿ ಮೂರು ಭಾಗಗಳಿವೆ. ಮೊದಲ ಭಾಗದಲ್ಲಿ ಮಹಿಳಾ ಶಿಕ್ಷಣದ ಸ್ವರೂಪ ಮತ್ತು ಸಮಸ್ಯೆಯನ್ನು, ಎರಡನೇ ಭಾಗದಲ್ಲಿ ವಿವಿಧ ಸ್ತರಗಳ ಮಹಿಳಾ ಸಬಲೀಕರಣದ ಸ್ವರೂಪ ಮತ್ತು ಸಮಸ್ಯೆಯನ್ನು ಹಾಗೂ ಕೊನೆಯ ಮೂರನೇ ಭಾಗದಲ್ಲಿ ಮಹಿಳಾ ಶಿಕ್ಷಣಕ್ಕೂ ಹಾಗೂ ಮಹಿಳಾ ಸಬಲೀಕರಣಕ್ಕೂ ಇರುವ ತಾತ್ವಿಕ ವೈರುಧ್ಯತೆಯನ್ನು ಕುರಿತು ಚರ್ಚಿಸಲಾಗುವುದು.

ಭಾಗ ಒಂದು

ಮಹಿಳಾ ಶಿಕ್ಷಣ

ಮಹಿಳಾ ಶಿಕ್ಷಣದ ಸ್ವರೂಪ ಮತ್ತು ಸಮಸ್ಯೆಯ ವಿನ್ಯಾಸವನ್ನು ಮುಂದಿನ ನಾಲ್ಕು ಅಂಶಗಳ ಚರ್ಚೆಯ ಮೂಲಕ ಗ್ರಹಿಸಬಹುದು.

ಒಂದು: ಮಹಿಳಾ ಸಾಕ್ಷರತೆ

ಮಹಿಳಾ ಸಾಕ್ಷರತೆ ಎಂದರೆ ಮಹಿಳೆಯರು ಅಕ್ಷರ ಶಿಕ್ಷಣ ಕಲಿಯುವುದು, ಶಿಕ್ಷಣ ಪಡೆಯುವುದು, ಅರಿವು, ತಿಳುವಳಿಕೆ, ಮಾಹಿತಿಯನ್ನು ಜಾಸ್ತಿ ಮಾಡಿಕೊಳ್ಳುವುದು, ವಿಸ್ತರಿಸಿಕೊಳ್ಳುವುದು ಇತ್ಯಾದಿ. ಇಲ್ಲಿ ಮಹಿಳೆಯರು ಕೇವಲ ಕಲಿಯುವವರು ಮಾತ್ರ ಆಗಿ ರುತ್ತಾರೆ. ಅಂದರೆ ಆಲಿಸಿಕೊಳ್ಳುವವರು ಮಾತ್ರ ಆಗಿರುತ್ತಾರೆ. ರಿಸೀ ವಿಂಗ್ ಎಂಡ್‌ನಲ್ಲಿರುತ್ತಾರೆ. ಅಥವ ರಿಸೀವಿಂಗ್ ಎಂಡ್‌ನಲ್ಲಿ ಇವ ರನ್ನು ಇಡಲಾಗಿರುತ್ತದೆ. ಹಾಗಾಗಿ ಇವರು ಇಲ್ಲಿ ಕೇವಲ ಲರ್ನರ್ಸ್ ಮಾತ್ರ ಆಗಿರುತ್ತಾರೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ತಿಳುವಳಿಕೆ/ಜ್ಞಾನವನ್ನು ಪಡೆಯುವ ಗ್ರಾಹಕರಾಗಿರುತ್ತಾರೆ. ಗ್ರಾಹಕರು ಮಾತ್ರವೇ ಆಗಿರುತ್ತಾರೆ.

ಇದನ್ನೇ ಮಹಿಳಾ ಸಾಕ್ಷರತೆ ಎಂದು ಕರೆಯಲಾಗುತ್ತಿದೆ. ಮಹಿಳಾ ಸಾಕ್ಷರತೆಯನ್ನು ಬೇರೆಬೇರೆ ಆಯಾಮಗಳಲ್ಲಿ ಗುರುತಿಸಲಾಗುತ್ತಿದೆ. ಉದಾಹರಣೆಗೆ,

೧. ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಮಹಿಳಾ ಸಾಕ್ಷರತೆಯ ಪ್ರಮಾಣ ಎಷ್ಟಿದೆ ಎಂಬುದು.

೨. ಆ ಅಂಕಿಅಂಶಗಳನ್ನು ಭಾರತದ ಮಹಿಳಾ ಸಾಕ್ಷರತೆಯೊಂದಿಗೆ ಹೋಲಿಸುವುದು.

೩. ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಸಾಕ್ಷರತೆಯ ಪ್ರಮಾಣ ಎಷ್ಟಿದೆ ಎಂಬುದು.

೪. ಆ ಅಂಕಿಅಂಶಗಳನ್ನು ಕರ್ನಾಟಕದ ಮಹಿಳಾ ಸಾಕ್ಷರತೆಯೊಂದಿಗೆ ಹೋಲಿಸುವುದು.

೫. ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದಲ್ಲಿ ಅಥವಾ ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಮಹಿಳಾ ಸಾಕ್ಷರತೆಯ ಪ್ರಮಾಣ ಎಷ್ಟಿತ್ತು ಎಂಬುದು.

೬. ಸ್ವಾತಂತ್ರ್ಯ ನಂತರದಲ್ಲಿ ಭಾರತದಲ್ಲಿ ಅಥವಾ ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಮಹಿಳಾ ಸಾಕ್ಷರತೆಯ ಪ್ರಮಾಣ ಎಷ್ಟಿದೆ ಎಂಬುದು.

೭. ಇದೇ ರೀತಿ ಜಿಲ್ಲಾವಾರು, ವಲಯ ಅಥವಾ ಪ್ರದೇಶವಾರು ಅಂಕಿಅಂಶ ಸಂಗ್ರಹಿಸುವುದು.

೭. ಮಹಿಳೆಯರು ಯಾವ ಯಾವ ಶಿಕ್ಷಣ ಪಡೆದಿದ್ದಾರೆ ಎಂಬ ಮಾಹಿತಿ ಸಂಗ್ರಹಿಸುವುದು.

೮. ಹೆಣ್ಣು ಮಕ್ಕಳು ಶಾಲೆ ಬಿಡಲು ಕಾರಣಗಳು ಏನು ಎಂಬುದರ ಬಗ್ಗೆ ಮಾಹಿತಿ ಸಂಗ್ರಹಿಸುವುದು.

ಈ ಬಗೆಗಿನ ಅಂಕಿಅಂಶಗಳ ಸಂಗ್ರಹಣೆಯನ್ನೂ ಸಂಶೋಧನೆ ಎಂದು ಕರೆಯಲಾಗುತ್ತಿದೆ. ಇಂತಹ ಸಂಶೋಧನೆಗಳು ಸಂಗ್ರಹಿತ ಅಂಕಿಅಂಶಗಳನ್ನು ಪುರುಷರ ಸಾಕ್ಷರತಾ ಪ್ರಮಾಣದ ಅಂಕಿಅಂಶಗಳೊಂದಿಗೆ ಹೋಲಿಸಿ ನೋಡುತ್ತಿವೆ. ಮಹಿಳಾ ಸಾಕ್ಷರತೆಯ ಪ್ರಮಾಣ ಕಡಿಮೆ ಇರುವುದರಿಂದ ಅದು ಸಬಲೀಕರಣಕ್ಕೆ ತೊಡಕಾಗಿದೆ ಎಂದೂ ಭಾವಿಸುತ್ತಿವೆ. ಹಾಗಾಗಿ ಮಹಿಳಾ ಸಾಕ್ಷರತ ಪ್ರಮಾಣವನ್ನು ಜಾಸ್ತಿ ಮಾಡಬೇಕು ಎಂಬ ಒತ್ತಾಯ ಕೇಳಿ ಬರುತ್ತಿದೆ. ಎನ್‌ಜಿಓಗಳು ಈ ಅಂಶವನ್ನು ಹೆಚ್ಚು ಮುಂಚೂಣಿಗೆ ತರುತ್ತಿವೆ. ವಿಶ್ವಬ್ಯಾಂಕ್ ಮಹಿಳಾ ಸಾಕ್ಷರ ತೆಗೆ ವಿಶೇಷ ಆಸಕ್ತಿ ತೋರಿಸುತ್ತಿದೆ.

ಮಹಿಳಾ ಸಾಕ್ಷರತೆಯ ಬಗ್ಗೆ ಅಂಕಿಅಂಶ ಸಂಗ್ರಹಿಸುತ್ತಿರುವ ವಿಧಾನದಲ್ಲಿ ಮುಖ್ಯವಾದ ಸಮಸ್ಯೆ ಇದೆ. ಅದನ್ನು ಎರಡು ರೀತಿಯಲ್ಲಿ ಗುರುತಿಸಬಹುದು. ಒಂದು: ಮಹಿಳಾ ಸಾಕ್ಷರತೆಯನ್ನು ಗುರುತಿಸುವಾಗ ಇಂದು ಜಾತಿ ವಾರು ಸಮೀಕ್ಷೆಯ ಅಗತ್ಯವಿದೆ. ಅಂದರೆ ಬ್ರಾಹ್ಮಣ ಮಹಿಳಾ ಸಾಕ್ಷರತೆಯ ಪ್ರಮಾಣ, ಅಸ್ಪೃಶ್ಯ ಮಹಿಳಾ ಸಾಕ್ಷರತೆಯ ಪ್ರಮಾಣ, ಆದಿವಾಸಿ ಬುಡಕಟ್ಟು ಮಹಿಳಾ ಸಾಕ್ಷರತಾ ಪ್ರಮಾಣ, ಅಲೆಮಾರಿ ಮಹಿಳಾ ಸಾಕ್ಷರತಾ ಪ್ರಮಾಣ. ಈ ವಿನ್ಯಾಸದಲ್ಲಿ ಮಹಿಳಾ ಸಾಕ್ಷರತೆಯನ್ನು ಗುರುತಿಸುವ ಅಗತ್ಯವಿದೆ. ಈಗ ಗುರುತಿಸಲಾಗುತ್ತಿರುವ ವಿನ್ಯಾಸ ಈ ತಳಸಮುದಾಯಗಳ ಮಹಿಳೆಯರ ಸಾಕ್ಷರತೆಯ ಬಗ್ಗೆ ಯಾವ ಆಸಕ್ತಿಯನ್ನೂ ತಾಳಿಲ್ಲ. ಯಾಕೆಂದರೆ ಬಹುತೇಕ ಮಹಿಳಾ ಅಧ್ಯಯನಗಳ ಆದ್ಯತೆಯಲ್ಲಿ ಈ ಮಹಿಳೆಯರು ಇಲ್ಲವೆ ಇಲ್ಲ. ಹಾಗಾಗಿ 'ಮಹಿಳಾ ಸಾಕ್ಷರತೆ' ಎಂದ ತಕ್ಷಣ ಎಷ್ಟೋ ಸಲ ಯಾವ ಮಹಿಳಾ ಸಾಕ್ಷರತೆ? ಎಂಬ ಪ್ರಶ್ನೆ ಏಳುತ್ತದೆ.

ಎರಡು: ಪುರುಷರ ಮತ್ತು ಮಹಿಳೆಯರ ನಡುವಿನ ಸಾಕ್ಷರತೆಯ ಪ್ರಮಾಣದ ಅಂತರಕ್ಕೆ/ ವ್ಯತ್ಯಾಸಕ್ಕೆ ಸಾಮಾಜಿ ಕವಾದ ಮೂಲಭೂತ ಕಾರಣಗಳು ಎಲ್ಲಿವೆ ಮತ್ತು ಹೇಗಿವೆ ಎಂಬ ಮುಖ್ಯ ಪ್ರಶ್ನೆಯನ್ನು ಇವು ನಯವಾಗಿ ಬದಿಗಿಡುತ್ತಿವೆ, ಮುಚ್ಚಿಹಾಕುತ್ತಿವೆ. ಮಹಿಳೆಯರು ಯಾವ ಶಿಕ್ಷಣ (ವಿಜ್ಞಾನ, ತಂತ್ರಜ್ಞಾನ, ವೃತ್ತಿಪರ, ಪಶುವೈದ್ಯಕೀಯ, ಇಂಜಿನಿಯರಿಂಗ್, ಮೆಡಿಕಲ್ ಇತ್ಯಾದಿ) ಪಡೆದಿದ್ದಾರೆ ಎಂಬ

ಮಾಹಿತಿಯ ಕಡೆಗೆ ಮುಖ್ಯ ಗಮನ ಕೊಡಲಾಗುತ್ತಿದೆ. ಇದು ಮಹಿಳೆ ಯರು (ಗುಣಮಟ್ಟ ಮತ್ತು ಧೋರಣೆಗೆ ಸಂಬಂಧಿಸಿ) ಎಂತಹ ಶಿಕ್ಷಣ ಪಡೆಯುತ್ತಿದ್ದಾರೆ ಎಂಬ ಪ್ರಶ್ನೆಯನ್ನು ಮುಚ್ಚಿಹಾಕುತ್ತಿದೆ.

ಎರಡು: ಮಹಿಳಾ ಬೋಧನೆ

ಮಹಿಳೆಯರು ಶಿಕ್ಷಣ ಕಲಿಸುವ ಕ್ರಿಯೆಯಲ್ಲಿ ಹೆಚ್ಚು ಪ್ರಮಾಣದಲ್ಲಿ ಭಾಗವಹಿಸಬೇಕು. ಬೋಧನೆ, ಅಧ್ಯಾಪನದಲ್ಲಿ ಇವರ ಪ್ರಮಾಣ ಗಣನೀಯವಾಗಿ ಹೆಚ್ಚಳವಾಗಬೇಕು. ಸಂಶೋಧಕರಾಗುವುದು, ಸಂಶೋಧನೆಗೆ ಮಾರ್ಗದರ್ಶಕರಾಗುವುದು, ಶಿಕ್ಷಣ ನೀತಿ ಹಾಗೂ ಪಠ್ಯಕ್ರಮಗಳ ರಚನೆಯಲ್ಲಿ ಮಹಿಳಾ ಧೋರಣೆಯ ಮೂಲಕ ಹೆಚ್ಚು ಪ್ರಮಾಣದಲ್ಲಿ ತೊಡಗುವಂತಾಗಬೇಕು.

ಪ್ರಮಾಣ

ಅಧ್ಯಾಪನ ವಲಯದಲ್ಲಿ ಮಹಿಳೆಯರ ಪ್ರಮಾಣ ಪುರುಷರಿಗೆ ಹೋಲಿಸಿದರೆ ಕಡಿಮೆ ಇದೆ. ಇದಕ್ಕೆ ಕಾರಣಗಳೇನೇ ಇರಲಿ. ಪ್ರಮಾಣವಂತೂ ಕಡಿಮೆ ಇದೆ. ಶೈಕ್ಷಣಿಕ ವಲಯದಲ್ಲಿ ಕೆಳ ಹಂತದಿಂದ ಮೇಲು ಹಂತಕ್ಕೆ ಹೋದಂತೆ ಶಿಕ್ಷಕಿಯರ ಪ್ರಮಾಣ ಕಡಿಮೆ ಯಾಗುತ್ತ ಹೋಗುತ್ತದೆ. ಮೇಲಿನಿಂದ ಕೆಳಗೆ ಬಂದರೆ ಇವರ ಪ್ರಮಾಣ ಜಾಸ್ತಿಯಾಗುತ್ತ ಹೋಗುತ್ತದೆ. ಅತ್ಯಂತ ಕೆಳ ಹಂತವಾಗಿರುವ ಅಂಗನವಾಡಿಗಳಲ್ಲಿ ಮಹಿಳೆಯರ ಪ್ರಮಾಣ ಜಾಸ್ತಿ ಇದೆ. ಅಥವ ಅವರೇ ಇದ್ದಾರೆ. ಇದೇ ಪ್ರಮಾಣ ಉನ್ನತ ಶಿಕ್ಷಣದಲ್ಲಿ ಯಾಕಿಲ್ಲ? ಮಹಿಳೆಯರು ಉನ್ನತ ಶಿಕ್ಷಣ ಪಡೆದಿಲ್ಲ ಅಥವ ಉನ್ನತ ಶಿಕ್ಷಣ ಪಡೆದವರ ಪ್ರಮಾಣ ಕಡಿಮೆ ಇದೆ ಇತ್ಯಾದಿ ವಿವರಗಳು ಇಲ್ಲಿ ಮುಖ್ಯವಲ್ಲ. ಕೆಲವು ಖಾಸಗಿ ಮತ್ತು ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕಿಯರ ಸಂಖ್ಯೆ ಶಿಕ್ಷಕರ ಸಂಖ್ಯೆಗಿಂತ ಸ್ವಲ್ಪ ಜಾಸ್ತಿ ಇದೆ. ಈ ಅಸಮಾನ ಪ್ರಮಾಣಯಾಕಿದೆ? ಇದರ ಹಿಂದಿನ ಆರ್ಥಿಕ ಹಾಗೂ ಸಾಮಾಜಿಕ ಧೋರಣೆ ಯಾವುದು ಎಂಬುದನ್ನು ಪರಿಶೀಲಿಸಬೇಕು.

ಸ್ವಭಾವ

'ಅಂಗನವಾಡಿ ಮತ್ತು ಪ್ರಾಥಮಿಕ ಹಂತದ ಎಳೆಯ ಮಕ್ಕಳನ್ನು ಮಹಿಳೆಯರು ತಾಳ್ಮೆ ಹಾಗೂ ಸೌಮ್ಯದಿಂದ ನೋಡಿಕೊಳ್ಳುತ್ತಾರೆ' ಎಂಬ ಅಭಿಪ್ರಾಯವಿದೆ. ಅಂದರೆ ಮಹಿಳೆಯರಿಗೆ ತಾಳ್ಮೆ ಹಾಗೂ ಸೌಮ್ಯ ಸ್ವಭಾವ ಇದೆ, ಇರುತ್ತದೆ, ಇರಬೇಕು ಎಂದು ಹೇಳಿದಂತಾಯಿತು. ಇದನ್ನು ಇನ್ನೊಂದು ಕೋನದಿಂದ ನೋಡಬಹುದು. ಮಹಿಳೆಯರು ತಾಳ್ಮೆ ಹಾಗೂ ಸೌಮ್ಯದಿಂದ ಎಳೆ ಮಕ್ಕಳನ್ನು ನೋಡಿಕೊಳ್ಳುತ್ತಾರೆ ಎಂಬುದಕ್ಕಿಂತಲೂ ಹೆಚ್ಚಾಗಿ, 'ಮಹಿಳೆಯರು ತಾಳ್ಮೆ ಹಾಗೂ ಸೌಮ್ಯದಿಂದ ಇರಬೇಕು, ಇವು ಅವರ ಗುಣ ಹಾಗೂ ಸ್ವಭಾವ ಆಗಿರಬೇಕು' ಎಂಬ ಪುರುಷ ಸ್ವಭಾವದ ಪರೋಕ್ಷ ಒತ್ತಡ ಇಲ್ಲವೆ ಬಲಾತ್ಕಾರ ಕೂಡ ಇದರಲ್ಲಿ ಇದೆ. ಇದಕ್ಕೆ ವಿರುದ್ಧವಾಗಿ ಪುರುಷರು ತಾಳ್ಮೆಯವರಲ್ಲ ಹಾಗೂ ಸೌಮ್ಯ ಸ್ವಭಾವದವರಲ್ಲ ಎಂಬುದನ್ನು ಪರೋಕ್ಷವಾಗಿ ಹೇಳಿದಂತೆ ಆಯಿತು. ಅಂದರೆ ಪುರುಷರು ತಾಳ್ಮೆ ಹಾಗೂ ಸೌಮ್ಯ ಸ್ವಭಾವದರಾಗಿರಬೇಕಿಲ್ಲ. ಅದೇನಿದ್ದರೂ ಮಹಿಳೆಯರಿಗೆ ಸಂಬಂಧಿಸಿದ್ದು ಎಂದಂತಾಯಿತು. ಹಾಗಾಗಿ ಶಿಕ್ಷಣದ ಮೂಲಕ ಕೂಡ ಸ್ತ್ರೀ-ಪುರುಷ ಅಸಮಾನತೆ ಹಾಗೂ ಶೋಷಣೆಯ ಸಮಾಜದ ಸಾಂಪ್ರದಾಯಿಕ ಧೋರಣೆಗಳನ್ನು ನಯವಾಗಿ ಕಾಪಾಡಲಾಗುತ್ತಿದೆ.

> **ಮಹಿಳಾ ಸಾಕ್ಷರತೆಯ ಬಗ್ಗೆ ಅಂಕಿಅಂಶ ಸಂಗ್ರಹಿಸುತ್ತಿರುವ ವಿಧಾನದಲ್ಲಿ ಮುಖ್ಯವಾದ ಸಮಸ್ಯೆ ಇದೆ. ಅದನ್ನು ಎರಡು ರೀತಿಯಲ್ಲಿ ಗುರುತಿಸಬಹುದು. ಒಂದು: ಮಹಿಳಾ ಸಾಕ್ಷರತೆಯನ್ನು ಗುರುತಿಸುವಾಗ ಇಂದು ಜಾತಿ ವಾರು ಸಮೀಕ್ಷೆಯ ಅಗತ್ಯವಿದೆ. ಅಂದರೆ ಬ್ರಾಹ್ಮಣ ಮಹಿಳಾ ಸಾಕ್ಷರತೆಯ ಪ್ರಮಾಣ, ಅಸ್ಪೃಶ್ಯ ಮಹಿಳಾ ಸಾಕ್ಷರತೆಯ ಪ್ರಮಾಣ, ಆದಿವಾಸಿ ಬುಡಕಟ್ಟು ಮಹಿಳಾ ಸಾಕ್ಷರತಾ ಪ್ರಮಾಣ, ಅಲೆಮಾರಿ ಮಹಿಳಾ ಸಾಕ್ಷರತಾ ಪ್ರಮಾಣ. ಈ ವಿನ್ಯಾಸದಲ್ಲಿ ಮಹಿಳಾ ಸಾಕ್ಷರತೆಯನ್ನು ಗುರುತಿಸುವ ಅಗತ್ಯವಿದೆ. ಈಗ ಗುರುತಿಸಲಾಗುತ್ತಿರುವ ವಿನ್ಯಾಸ ಈ ತಳ ಸಮುದಾಯಗಳ ಮಹಿಳೆಯರ ಸಾಕ್ಷರತೆಯ ಬಗ್ಗೆ ಯಾವ ಆಸಕ್ತಿಯನ್ನೂ ತಾಳಿಲ್ಲ.**

ದುಡಿಮೆ ಮತ್ತು ಸಂಬಳ

ಉನ್ನತ ಶಿಕ್ಷಣದಲ್ಲಿ ಅಧ್ಯಾಪಕರಿಗೆ ಹೆಚ್ಚು ಸಂಬಳ ಕೊಡಲಾಗುತ್ತಿದೆ. ಅಂಗನವಾಡಿ ಮತ್ತು ಪ್ರಾಥಮಿಕ ಹಂತದಲ್ಲಿ ಕಡಿಮೆ ಸಂಬಳ ಕೊಡಲಾಗುತ್ತಿದೆ. ಈ ಸಂಬಳದ ಪ್ರಮಾಣವು ಎಷ್ಟು ವ್ಯತ್ಯಾಸವಿದೆ ಎಂದರೆ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರ ಒಂದು ದಿನದ ಸಂಬಳವು, ಅಂಗನವಾಡಿಯವರ ಒಂದು ತಿಂಗಳ ಸಂಬಳಕ್ಕಿಂತ ಜಾಸ್ತಿ ಇದೆ. ಬೌದ್ಧಿಕವಾಗಿ ಇವರಿಬ್ಬರಲ್ಲಿ ದರ್ಜೆಯ ಮತ್ತು ಶ್ರೇಣಿಯ ವ್ಯತ್ಯಾಸ ಇದೆ ಎನ್ನುವುದು ಬೇರೆ ಮಾತು. ಅಷ್ಟಕ್ಕೂ ತಿಂಗಳಿಗೆ ೩೫ರಿಂದ ೪೦ ಸಾವಿರ ರೂಪಾಯಿ ಸಂಬಳ ಪಡೆಯುವ ಪ್ರಾಧ್ಯಾಪಕರ ಸಾಮಾಜಿಕ ಕೊಡುಗೆ ಹಾಗೂ ಸಾಮಾಜಿಕ ಹೊಣೆಗಾರಿಕೆ ಏನಾಗಿದೆ ಎಂಬುದನ್ನು ಎಲ್ಲರೂ ಬಲ್ಲರು. ಅದನ್ನು ಇಲ್ಲಿ ಚರ್ಚಿಸುವ ಅಗತ್ಯವಿಲ್ಲ. ಆದರೆ ಗಂಭೀರವಾದ ಪ್ರಶ್ನೆ ಏನೆಂದರೆ 'ಸರಿಯಾದ ಶ್ರಮಕ್ಕೆ ಸರಿಯಾದ ಸಂಬಳ' ಎಂಬುದು ಮಾನವ ಸಮಾಜದ ಸಾಮಾನ್ಯ ನಿಯಮ. ಸಮಾಜವು ದುಡಿಮೆ ಮತ್ತು ಶ್ರಮದ ಮೇಲೆ ನಿಂತಿದೆ. ದುಡಿಮೆ ಮತ್ತು ಶ್ರಮಗಳು ಇಲ್ಲದಿದ್ದರೆ ಸಮಾಜ ನಡೆಯುವುದಿಲ್ಲ. ಇಂತಹ ದುಡಿಮೆ ಮತ್ತು ಶ್ರಮದ ವಿಷಯದಲ್ಲಿ ಮಹಿಳೆಯರಿಗೂ ಪುರುಷರಿಗೂ ಎರಡು ಬಗೆಯ ವ್ಯತ್ಯಾಸ ಇದೆ. ೧. ಕೆಲವು ಕ್ಷೇತ್ರಗಳಲ್ಲಿ ಮಹಿಳೆಯರು ಮಾಡುವ ದುಡಿಮೆ ಕಣ್ಣಿಗೇ ಕಾಣುವುದಿಲ್ಲ. ಕಂಡರೂ ಅದನ್ನು ಕೆಲಸ ಎಂದು ಗುರುತಿಸುವುದಿಲ್ಲ. ಉದಾಹರಣೆಗೆ, ಬೆಳಗಿನಿಂದ ರಾತ್ರಿಯವರೆಗೆ ಮನೆಯಲ್ಲಿ ಕೆಲಸ ಮಾಡುವ ಮಹಿಳೆಯರ ಕೆಲಸ ಮೂರ್ತ ರೂಪದಲ್ಲಿ ಕಾಣುವುದಿಲ್ಲ. ಅಥವಾ ಆ ಕೆಲಸದಿಂದ ಉತ್ಪಾದನೆಯಾದುದು ಬಹಳ ಹೊತ್ತು ಇರುವುದಿಲ್ಲ. ಅಡಿಗೆ, ಪಾತ್ರೆ ತೊಳೆಯುವುದು ಇತ್ಯಾದಿ. ಆದರೆ ಪುರುಷರು ಮಾಡುವ ಕೆಲಸದ ಉತ್ಪಾದನೆಯು ವಸ್ತು ರೂಪದಲ್ಲಿ ಕಾಣುತ್ತದೆ. ಅದು ಹೆಚ್ಚು ಹೊತ್ತು ಇರುತ್ತದೆ. ಹೊಲ ಗದ್ದೆಗಳಲ್ಲಿ ಮಾಡುವ ಕೆಲಸ ಇರಬಹುದು. ಇನ್ನಿತರೆ ಯಾವುದೆ ಕೆಲಸ ಇರಬಹುದು. ೨. ಪುರುಷರು ಮಾಡುವ ದುಡಿಮೆಗೆ ಪ್ರತಿಫಲ ಬಹುತೇಕ ಇರುತ್ತದೆ. ಉದಾಹರಣೆಗೆ ಹೊಲ ಗದ್ದೆಗಳಲ್ಲಿ ಮಾಡುವ ಕೆಲಸದಿಂದ ದವಸ ಧಾನ್ಯ ಬೆಳೆಯುತ್ತದೆ. ಅದು ಮಾರಾಟವಾಗುತ್ತದೆ. ಅದರಿಂದ ಹಣ ಬರುತ್ತದೆ. ಅದೇ ಮಹಿಳೆಯರು ಮನೆಯಲ್ಲಿ ಅಡಿಗೆ ಮಾಡಿದರೆ? ಈ ಹಿನ್ನೆಲೆಯಲ್ಲಿ ನೋಡಿದಾಗ ನಿಜವಾಗಿಯೂ ಮಹಿಳೆಯರಿಗೆ ಸರಿಯಾದ ಶ್ರಮಕ್ಕೆ ಸರಿಯಾದ ಸಂಬಳ ಕೊಡಲಾಗುತ್ತಿದೆಯೇ ಎಂಬ ಮುಖ್ಯ ಪ್ರಶ್ನೆಯನ್ನು ಎತ್ತಬೇಕಾಗಿದೆ. ಈ ಮುಖ್ಯ ಪ್ರಶ್ನೆ ಯನ್ನು ಇನ್ನೊಂದು ಉದಾಹರಣೆಯ ಮೂಲಕ ನೋಡೋಣ. ಕೃಷಿಕೂಲಿ ಕಾರ್ಮಿಕರನ್ನು ತೆಗೆದುಕೊಳ್ಳೋಣ. ಅದರಲ್ಲಿ ಪುರುಷರು ಮತ್ತು ಮಹಿಳೆಯರು ದುಡಿಯುತ್ತಿದ್ದಾರೆ. ಇವರ ಪ್ರಮಾಣದ ವ್ಯತ್ಯಾಸ ಏನೇ ಇರಲಿ. ಅವರ ದುಡಿಮೆಯ ವಿಧಾನವನ್ನು ಸೂಕ್ಷ್ಮವಾಗಿ ಗಮನಿಸೋಣ. ಪುರುಷರು ಕೈ ಕಾಲುಗಳನ್ನು ಸ್ಥೂಲವಾಗಿ/ ಪ್ರಧಾನವಾಗಿ ಬಳಸುತ್ತಾರೆ. ಮಹಿಳೆಯರು ಕಣ್ಣು ಮತ್ತು ಬೆರಳುಗಳನ್ನು ಅತ್ಯಂತ ಸೂಕ್ಷ್ಮವಾಗಿ/ ಪ್ರಧಾನವಾಗಿ ಬಳಸುತ್ತಾರೆ. ಕೃಷಿ ವಲಯದ ಸ್ಥೂಲರೂಪದ ದುಡಿಮೆಯಲ್ಲಿ ಪುರುಷರಿದ್ದರೆ, ಸೂಕ್ಷ್ಮರೂಪದ ದುಡಿಮೆಯಲ್ಲಿ ಮಹಿಳೆಯರಿದ್ದಾರೆ. ಅಂದರೆ ಅವರು ಹಾಕುವ ಶ್ರಮದಲ್ಲಿ ವ್ಯತ್ಯಾಸ ಇಲ್ಲ. ಆದರೆ ಪುರುಷರಿಗೆ ೫೦ ರೂಪಾಯಿ ಸಂಬಳ ಇರುವ ಕಡೆಗೆ ಮಹಿಳೆಯರಿಗೆ ೩೦ ರೂಪಾಯಿ. ಪುರುಷರಿಗೆ ೩೦ ರೂಪಾಯಿ ಇರುವ ಕಡೆಗೆ ಮಹಿಳೆಯರಿಗೆ ೨೦ ರೂಪಾಯಿ ಸಂಬಳ ಕೊಡಲಾಗುತ್ತಿದೆ. ಹೀಗೆ ಇವರ ಸಂಬಳದಲ್ಲಿ ಭಾರೀ ವ್ಯತ್ಯಾಸ ಇದೆ. ಇದು ಯಾಕೆ? ಇದೇ ತಾರತಮ್ಯದ ವಿನ್ಯಾಸವನ್ನು ದುಡಿಮೆಯ ಇನ್ನಿತರೆ ವಲಯಗಳಿಗೂ ವಿಸ್ತರಿಸಬಹುದು.

ಕಡಿಮೆ ಸಂಬಳ ಹೆಚ್ಚು ಲಾಭ

ಕಡಿಮೆ ಸಂಬಳವು ಹೆಚ್ಚಿನ ಲಾಭಕ್ಕೆ ಕಾರಣವಾಗುತ್ತದೆ. ಹೆಚ್ಚಿನ ಲಾಭವು ಬಂಡವಾಳದ ಸೃಷ್ಟಿಗೆ ಕಾರಣವಾಗುತ್ತದೆ. ಅನೇಕ ದುಡಿಮೆಗಳಲ್ಲಿ ಪುರುಷರಿಗೆ ಕೊಡುವ ಸಂಬಳಕ್ಕಿಂತ ಮಹಿಳೆಯರಿಗೆ ಕಡಿಮೆ ಸಂಬಳ ಕೊಡಲಾಗುತ್ತದೆ. ಇದರಿಂದ ಬಂಡವಾಳಗಾರರು ಮಹಿಳೆಯರ ದುಡಿಮೆಯ ಬಹುಪಾಲನ್ನು ತಮ್ಮ ಬಂಡವಾಳವನ್ನಾಗಿ ಮಾಡಿಕೊಳ್ಳುತ್ತಾರೆ. ಹಾಗಾಗಿ ಬಂಡವಾಳಗಾರರ ಲಾಭದಲ್ಲಿ ಮಹಿಳೆಯರ ದುಡಿಮೆಯ ಪಾಲು ಜಾಸ್ತಿ ಇದೆ. ಕಡಿಮೆ ಸಂಬಳ ಪಡೆದು ಬಂಡವಾಳಗಾರರಿಗೆ ಹೆಚ್ಚು ಲಾಭ ತರುತ್ತಿರುವ ಮಹಿಳೆಯರು ಪುರುಷರಿಗಿಂತ ಹೆಚ್ಚು ಶೋಷಣೆ ಅನುಭವಿಸುತ್ತಿದ್ದಾರೆ. ಹೆಚ್ಚು ಶೋಷಣೆ ಅನುಭವಿಸಿ, ಹೆಚ್ಚು ಲಾಭಕ್ಕೆ ಕಾರಣವಾಗಿ, ಬಂಡವಾಳದ ನಿರ್ಮಾಣಕ್ಕೆ ಹೆಚ್ಚು ಕೊಡುಗೆ ನೀಡುತ್ತಿದ್ದಾರೆ. ಹೆಚ್ಚು ಲಾಭಗಳಿಸಬೇಕಾದರೆ, ಬಂಡವಾಳ ಹೆಚ್ಚೆಚ್ಚು ಬೆಳೆಯಬೇಕೆಂದರೆ ಅಲ್ಲೆಲ್ಲ ಪುರುಷರಿಗಿಂತ ಕಡಿಮೆ ಸಂಬಳದ ಮಹಿಳೆಯರು ಬೇಕಾಗುತ್ತಾರೆ. ಮಹಿಳೆಯರನ್ನು ಹೆಚ್ಚು ಲಾಭಕ್ಕಾಗಿ ಊಳಿಗಮಾನ್ಯಶಾಹಿ ಸಮಾಜ ಪರಿಣಾಮಕಾರಿಯಾಗಿ ಬಳಸಿಕೊಂಡಿದೆ. ಅದೇ ರೀತಿಯಲ್ಲಿ ಇಂದಿನ ಬಂಡವಾಳಶಾಹಿ ಕೂಡ ಅವರ ಶ್ರಮವನ್ನು ಶೋಷಣೆ ಮಾಡುತ್ತಿದೆ.

ಅಂಗನವಾಡಿ ಕಾರ್ಯಕರ್ತೆಯರನ್ನು ಅಂಗನವಾಡಿಯೇತರ ಕೆಲಸಗಳಿಗೆ ಇಂದು ಬಳಸಿಕೊಳ್ಳಲಾಗುತ್ತಿದೆ. ವಿಶೇ

[illegible] ಅಂಕಿ-ಅಂಶ [illegible] ಕೆಲಸ [illegible] ಮಾಹಿತಿಗಳನ್ನು [illegible] ಕೊಡಲು ಅವರ [illegible] ಬಳಸಿಕೊಳ್ಳಲಾಗುತ್ತಿದೆ. [illegible] ಪ್ರತ್ಯೇಕ ಭತ್ಯೆ [illegible] ಇಲ್ಲ ಎಂಬುದು ಬೇರೆ ಮಾತು. ಅದಕ್ಕಿಂತ ಹೆಚ್ಚಾಗಿ ಅಂಗನವಾಡಿ ಕಾರ್ಯಕರ್ತೆಯರು ಇಂದು ಸಾಮ್ರಾಜ್ಯಶಾಹಿ ಮಾರುಕಟ್ಟೆಗೆ ಬೇಕಾದ ಅಂಕಿ-ಅಂಶಗಳನ್ನು ಕೊಡಲು ಬಳಕೆಯಾಗುತ್ತಿದ್ದಾರೆ. ಶಿಕ್ಷಣದ ಕೆಳ ಹಂತದಲ್ಲಿರುವ ಮತ್ತು ಅಪಾರ ಪ್ರಮಾಣದಲ್ಲಿರುವ ಇವರ ಸೇವೆ ಖಾಯಂ ಆಗಿಲ್ಲ. ವಿಶ್ವ ಬ್ಯಾಂಕ್ ಮತ್ತು ಏಷ್ಯನ್ ಅಭಿವೃದ್ಧಿ ಬ್ಯಾಂಕುಗಳು ಸಾಲ ಹಾಗೂ ಅನುದಾನಗಳನ್ನು ನೀಡುವ ಮೂಲಕ ಅಂಗನವಾಡಿಗಳನ್ನು ಖಾಸಗೀಕರಿಸುವ ಕೆಲಸ ನಡೆದಿದೆ. ಹಾಗಾಗಿ ಅವರನ್ನು ಆರ್ಥಿಕ ಅಭದ್ರತೆ ಮತ್ತು ಅಸ್ಥಿರತೆಯಲ್ಲಿ ಇಡಲಾಗಿದೆ. ಹಾಗೇ ಮುಂದುವರಿಸಲಾಗುತ್ತಿದೆ.

ಉನ್ನತ ಶಿಕ್ಷಣದಲ್ಲಿರುವ ಅಧ್ಯಾಪಕಿಯರು ಅಂಗನವಾಡಿಯವರಂತೆ ಆರ್ಥಿಕ ಅಭದ್ರತೆಯಲ್ಲಿ ಇಲ್ಲ. ಆದರೆ ಅವರ ಮುಂದೆ ಶೋಷಕ ವ್ಯವಸ್ಥೆಯು ಹೇರಿರುವ ಪುರುಷ ಪ್ರಧಾನ ಧೋರಣೆ ಹಾಗೂ ಮೌಲ್ಯಗಳ ಸಂಬಂಧಿ ಶೈಕ್ಷಣಿಕ ಸಮಸ್ಯೆಗಳು ಸಾಕಷ್ಟಿವೆ. ಯಾವುದೇ ಶಿಕ್ಷಣದ ಯಾವುದೇ ಪಠ್ಯಕ್ರಮದಲ್ಲಿ ಆ ಸಮಸ್ಯೆಗಳ ರೂಪವನ್ನು ಗುರುತಿಸಬಹುದು. ಉದಾಹರಣೆಗೆ, ಮಾಧ್ಯಮಿಕ ಅಥವಾ ಪ್ರೌಢ ಶಿಕ್ಷಣದ ಗಣಿತ ಪಠ್ಯವನ್ನೆ ತೆಗೆದುಕೊಳ್ಳಿ, ಅದರಲ್ಲಿ ಕೊಟ್ಟಿರುವ ಲೆಕ್ಕಗಳನ್ನು ಗಮನಿಸಿ. ರಾಮನು ಒಂದು ಕ್ವಿಂಟಾಲ್ ಭತ್ತವನ್ನು ೮೫೫ ರೂಪಾಯಿಗೆ ಮಾರಿದನು. ಹಾಗಾದರೆ ೨೫ ಕ್ವಿಂಟಾಲ್ ಮಾರಿದರೆ ರಾಮನಿಗೆ ಸಿಗುವ ಹಣವೆಷ್ಟು? ಇಂತಹ ಹಲವಾರು ಲೆಕ್ಕಗಳಿರುತ್ತವೆ. ಇಲ್ಲಿ ಪುರುಷರ ವಿಷಯ ಬಂದಿದೆ ಎಂಬುದು ಮಾತ್ರ ಮುಖ್ಯ ಪ್ರಶ್ನೆ ಅಲ್ಲ. ಅಂದರೆ ರಾಮನ ಜಾಗದಲ್ಲಿ ಮಹಿಳೆಯರ ಹೆಸರು ಹಾಕಿಬಿಟ್ಟರೆ ಸಮಸ್ಯೆ ಬಗೆಹರಿಯಿತು ಎಂದು ಸರಳೀಕರಿಸಬಾರದು. ಪ್ರಶ್ನೆ ಇರುವುದು 'ಪುರುಷರಿಗೆ ಸಿಗುವ ಹಣವೆಷ್ಟು? ಪುರುಷರಿಗೆ ಆಗುವ ಲಾಭವೆಷ್ಟು?' ಮುಂತಾದ ವಿಷಯಗಳೇ ಅಲ್ಲಿ ಮುಖ್ಯವಾಗಿರುತ್ತವೆ. ಅಂತಹ ವಿಷಯಗಳ ಮೂಲಕ 'ಲಾಭ ಆದರೆ ಪುರುಷರಿಗೇ ಆಗಬೇಕು' ಎಂಬ ಬಂಡವಾಳಶಾಹಿ ಧೋರಣೆಯನ್ನು, ಬಂಡವಾಳಶಾಹಿ ಪ್ರಜ್ಞೆಯನ್ನು ಸ್ತ್ರೀ ಪುರುಷ ಇಬ್ಬರಲ್ಲೂ ಬಲವಾಗಿ ಮೂಡಿಸಲಾಗುತ್ತಿದೆ. ಜೊತೆಗೆ ಅದನ್ನು ಸಮಾಜದ ಒಪ್ಪಿತ ಮೌಲ್ಯವನ್ನಾಗಿ ಸ್ಥಾಪಿಸಲಾಗುತ್ತದೆ. ಇಂತಹ ವಿಷಯಗಳ ಚರ್ಚೆಯಲ್ಲಿ ಮಹಿಳಾ ಧೋರಣೆ ಎಂಬುದು ಕೇವಲ ಪುರುಷರ ವಿರುದ್ಧ ಮಾತ್ರ ತಿರುಗಿದರೆ ಸಾಲದು. ಅದು ಲಾಭವೇ ತನ್ನ ಪರಮಮೌಲ್ಯ ಎನ್ನುವ ಬಂಡವಾಳಶಾಹಿ ಶೋಷಣೆಯ ವಿರುದ್ಧವೂ ತಿರುಗಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಉನ್ನತ ಶಿಕ್ಷಣದ ಅಧ್ಯಾಪಕಿಯರು ಇಂತಹವುಗಳ ಬಗ್ಗೆ ಹರಿಸಬೇಕಾಗಿದ್ದಷ್ಟು ಗಮನವನ್ನು ಇನ್ನೂ ಹರಿಸಿಲ್ಲ. ಒಂದು ಕಡೆ ರಾಷ್ಟ್ರಪತಿ, ಮುಖ್ಯಮಂತ್ರಿ, ರಾಜ್ಯಪಾಲ, ಸೇನಾ ಮುಖ್ಯಸ್ಥರು, ಪೈಲಟ್ ಮುಂತಾದುವುಗಳಲ್ಲಿ ಮಹಿಳೆಯರು ಅಪವಾದ ಎಂಬಂತೆ ಪ್ರವೇಶ ಪಡೆಯುತ್ತಿದ್ದು, ಇದರಿಂದ ಶ್ರೀಮಂತ ಮತ್ತು ಮೇಲು ಮಧ್ಯಮ ವರ್ಗದ ಮಹಿಳೆಯರು 'ಇದು ಮಹಿಳೆಯರ ಸಾಧನೆ' ಎಂದು ಸಂಭ್ರಮ ಪಡುತ್ತಿದ್ದಾರೆ. ಆ ಸಂಭ್ರಮವನ್ನು ಮಹಿಳಾ ಸಮೂಹದಲ್ಲಿ ಒಂದು ಪ್ರಜ್ಞೆಯಾಗಿ ಸಾರ್ವತ್ರೀಕರಿಸುವ ವಿಫಲ ಪ್ರಯತ್ನ ಕೂಡ ಸಾಗಿದೆ.

ಕಡಿಮೆ ಸಂಬಳವು ಹೆಚ್ಚಿನ ಲಾಭಕ್ಕೆ ಕಾರಣವಾಗುತ್ತದೆ. ಹೆಚ್ಚಿನ ಲಾಭವು ಬಂಡವಾಳದ ಸೃಷ್ಟಿಗೆ ಕಾರಣವಾಗುತ್ತದೆ. ಅನೇಕ ದುಡಿಮೆಗಳಲ್ಲಿ ಪುರುಷರಿಗೆ ಕೊಡುವ ಸಂಬಳಕ್ಕಿಂತ ಮಹಿಳೆಯರಿಗೆ ಕಡಿಮೆ ಸಂಬಳ ಕೊಡಲಾಗುತ್ತದೆ. ಇದರಿಂದ ಬಂಡವಾಳಗಾರರು ಮಹಿಳೆಯರ ದುಡಿಮೆಯ ಬಹುಪಾಲನ್ನು ತಮ್ಮ ಬಂಡವಾಳವನ್ನಾಗಿ ಮಾಡಿಕೊಳ್ಳುತ್ತಾರೆ. ಬಂಡವಾಳಗಾರರ ಲಾಭದಲ್ಲಿ ಮಹಿಳೆಯರ ದುಡಿಮೆಯ ಪಾಲು ಜಾಸ್ತಿ ಇದೆ. ಕಡಿಮೆ ಸಂಬಳ ಪಡೆದು ಬಂಡವಾಳಗಾರರಿಗೆ ಹೆಚ್ಚು ಲಾಭ ತರುತ್ತಿರುವ ಮಹಿಳೆಯರು ಪುರುಷರಿಗಿಂತ ಹೆಚ್ಚು ಶೋಷಣೆ ಅನುಭವಿಸುತ್ತಿದ್ದಾರೆ. ಹೆಚ್ಚು ಶೋಷಣೆ ಅನುಭವಿಸಿ, ಲಾಭಕ್ಕೆ ಕಾರಣವಾಗಿ, ಬಂಡವಾಳದ ನಿರ್ಮಾಣಕ್ಕೆ ಕೊಡುಗೆ ನೀಡುತ್ತಿದ್ದಾರೆ. ಹೆಚ್ಚು ಲಾಭಗಳಿಸಬೇಕಾದರೆ, ಬಂಡವಾಳ ಹೆಚ್ಚೆಚ್ಚು ಬೆಳೆಯ ಬೇಕೆಂದರೆ ಅಲ್ಲೆಲ್ಲ ಪುರುಷರಿಗಿಂತ ಕಡಿಮೆ ಸಂಬಳದ ಮಹಿಳೆಯರು ಬೇಕಾಗುತ್ತಾರೆ.

ಮಹಿಳಾ ರಾಷ್ಟ್ರಪತಿ ಇರುವಾಗ ಶೇ.೩೩ ಮಹಿಳಾ ಮೀಸಲಾತಿ ಬಿಲ್ ಪಾಸಾಗುತ್ತದೆಯೇ?, ಜಯಲಲಿತಾ ಮತ್ತು ಮಾಯಾವತಿ ಸರಕಾರಗಳು ಮಹಿಳಾ ಸಮಸ್ಯೆಗಳನ್ನು ಬಗೆಹರಿಸಿವೆಯೇ? ಎಂಬ ಗಂಭೀರ ಪ್ರಶ್ನೆಗಳನ್ನು ಎತ್ತಬೇಕಾಗಿದೆ. ರಾಜಕೀಯವಾಗಿ ಅವುಗಳ ಹಿಂದೆ ಅಡಗಿರುವ ಪುರುಷ ಪ್ರಧಾನ ಧೋರಣೆಯ ತಂತ್ರವನ್ನು ಗುರುತಿಸುವ ಪ್ರಯತ್ನ ಶುರುವಾಗಿಲ್ಲ. ಯಾವ ಯಾವ ಕ್ಷೇತ್ರದಲ್ಲಿ ಎಷ್ಟೆಷ್ಟು ಮಹಿಳೆಯರಿದ್ದಾರೆ ಎಂಬ ಯಾಂತ್ರಿಕ ಲೆಕ್ಕಾಚಾರದ ಚೌಕಟ್ಟಿಗೆ ಮಹಿಳೆಯರ ಪ್ರಜ್ಞೆಯನ್ನು ಸಯವಾಗಿ ಬೀಳಿಸಲಾಗಿದೆ. ಅನೇಕರು ಈ ಬಗೆಯ ಲೆಕ್ಕಾಚಾರ ಮಾಡುತ್ತ ಕೂತಿದ್ದಾರೆ. ಆದರೆ ಶೈಕ್ಷಣಿಕ ವಲಯದಲ್ಲಿ ಅವರು ಎತ್ತಬೇಕಾಗಿದ್ದ, ಎದುರಿಸಬೇಕಾಗಿದ್ದ ಅನೇಕ ಸಮಸ್ಯೆಗಳು ಹಾಗೇ ಮುಂದುವರಿದಿವೆ.

ಮೂರು: ಮಹಿಳಾಪರ ಪಠ್ಯಕ್ರಮ

ಮಹಿಳೆಯರಿಗೆ ಸಂಬಂಧಿಸಿದ ಕೆಲವು ವಿಷಯಗಳು ಪಠ್ಯಕ್ರಮದಲ್ಲಿ ಇರಬಹುದು. ಇದನ್ನೇ ಮಹಿಳಾ ಪಠ್ಯಕ್ರಮ ಎಂದು ಕರೆಯಬಹುದೆ? ಅನೇಕರು ಇದನ್ನೇ ಮಹಿಳಾ ಪಠ್ಯಕ್ರಮ ಎಂದು ಕರೆಯುತ್ತಾರೆ. ವಾಸ್ತವವಾಗಿ ಇದು ಮಹಿಳಾ ಪಠ್ಯಕ್ರಮವಲ್ಲ; ಬದಲಿಗೆ ಇದನ್ನು ಪಠ್ಯಕ್ರಮದಲ್ಲಿ ಮಹಿಳಾ ವಿಷಯಗಳು ಎಂದಷ್ಟೆ ಕರೆಯಬಹುದು. ಇಂತಹ ಪಠ್ಯಕ್ರಮದ ಕಲಿಕೆ ಮತ್ತು ಬೋಧನೆಯಲ್ಲಿ ದೃಷ್ಟಿಕೋನ ಮುಖ್ಯವಾಗುವುದಿಲ್ಲ. ಅಥವ ದೃಷ್ಟಿಕೋನದ ಪ್ರಶ್ನೆಯೇ ಏಳುವುದಿಲ್ಲ. ಕೇವಲ ವಸ್ತುವಿಗೆ ಸಂಬಂಧಿಸಿ ಮಾತ್ರ ಗಮನ ಹರಿಸಲಾಗುತ್ತದೆ. ಮಹಿಳೆಯರಿಗೆ ಸಂಬಂಧಿಸಿದ್ದು ಪಠ್ಯಕ್ರಮದ ಭಾಗವಾಗಬೇಕು, ಅದನ್ನು ಪಠ್ಯಕ್ರಮಕ್ಕೆ ಸೇರಿಸಬೇಕು ಮುಂತಾದ ಕೋರಿಕೆಗಳು ಇಲ್ಲವೆ ಹಕ್ಕೊತ್ತಾಯಗಳು ಇಲ್ಲಿ ಮುಖ್ಯವಾಗಿರುತ್ತವೆ. ಇಡೀ ಪಠ್ಯಕ್ರಮದ ಚೌಕಟ್ಟಿನ ಹಿಂದೆ ಇರುವ ತಾತ್ವಿಕತೆ ಮತ್ತು ಧೋರಣೆ ಇಲ್ಲಿ ಮುಖ್ಯವಾಗುವುದಿಲ್ಲ. ಈ ಬಗೆಯ ಕೋರಿಕೆ ಮತ್ತು ಹಕ್ಕೊತ್ತಾಯಗಳು ಕಳೆದ ದಶಕದಿಂದ ಕೇಳಿಬರುತ್ತಿವೆ. ಇದರ ಹಿಂದಿರುವ ಸಾಮಾನ್ಯ ತತ್ವ ಏನಾಗಿದೆ ಎಂದರೆ 'ಪಠ್ಯಕ್ರಮದಲ್ಲಿ ಮಹಿಳೆಯರಿಗೆ ಸಂಬಂಧಿಸಿದ ವಿಷಯಗಳನ್ನು ಎಷ್ಟು ಸೇರಿಸಬೇಕಾಗಿತ್ತೊ ಅಷ್ಟನ್ನು ಸೇರಿಸಿಲ್ಲ. ಮಹಿಳೆಯರನ್ನು ಹಾಗೂ ಮಹಿಳಾ ವಿಷಯಗಳನ್ನು ಕಡೆಗಣಿಸಲಾಗಿದೆ, ನಿರ್ಲಕ್ಷಿಸಲಾಗಿದೆ. ಇದು ಅನ್ಯಾಯ. ಹಾಗಾಗಿ ಈ ಅನ್ಯಾಯವನ್ನು ಸರಿಪಡಿಸಬೇಕಾದರೆ ಪಠ್ಯಕ್ರಮದಲ್ಲಿ ಮಹಿಳಾ ವಿಷಯಗಳನ್ನು ಸೇರಿಸಬೇಕು' ಎಂಬ ಧೋರಣೆ ಕೆಲಸ ಮಾಡುತ್ತಿದೆ. ಉದಾಹರಣೆಗೆ, 'ಸಾಹಿತ್ಯ ಪಠ್ಯಕ್ರಮದಲ್ಲಿ ೧೨ನೇ ಶತಮಾನದ ವಚನಕಾರರನ್ನು ಮಾತ್ರ ಸೇರಿಸಲಾಗಿದೆ. ಅವರ ಜೊತೆಗೆ ವಚನಕಾರ್ತಿಯರನ್ನೂ ಸೇರಿಸಿ' ಎಂದು ಕೇಳುವುದು ಹಾಗೂ ಸೇರಿಸುವುದು. 'ನವೋದಯ ಸಾಹಿತ್ಯದಲ್ಲಿ ಕೇವಲ ಪುರುಷ ಸಾಹಿತಿಗಳು ಮಾತ್ರ ಪಠ್ಯಕ್ರಮದಲ್ಲಿದ್ದಾರೆ. ಅವರ ಜೊತೆಗೆ ಮಹಿಳಾ ಬರಹಗಾರ್ತಿಯರನ್ನೂ ಸೇರಿಸಿ' ಎಂದು ಕೇಳುವುದು ಹಾಗೂ ಸೇರಿಸುವುದು. ಈ ಬಗೆಯ ಹಕ್ಕೊತ್ತಾಯ ಬಿಡಿಬಿಡಿಯಾಗಿದ್ದರೂ ಇದು ಬಹಳ ವ್ಯಾಪಕವಾಗಿ ನಡೆಯುತ್ತಿದೆ. ಕಳೆದ ಶತಮಾನದ ೯೦ರ ದಶಕದ ನಂತರ ವಂಚಿಸಲ್ಪಟ್ಟ ಅನೇಕ ತಳ ಸಮುದಾಯಗಳು ಆಳುವ ವರ್ಗದ ಮುಂದೆ ಹಾಗೂ ಪ್ರಭುತ್ವದ ಮುಂದೆ ಈ ಬಗೆಯ ಹಕ್ಕೊತ್ತಾಯವನ್ನು ಬೇರೆ ಬೇರೆ ವಲಯದಲ್ಲಿ ಇಡುತ್ತಿವೆ. ಅದರ ಭಾಗವಾಗಿ ಕೂಡ ಇದನ್ನು ಗ್ರಹಿಸಬಹುದು. ಈ ಬಗೆಯ ಹಕ್ಕೊತ್ತಾಯ ಇನ್ನೂ ಮುಂದುವರಿದಿದೆ. ಇದನ್ನು ಮಹಿಳಾ ಚಿಂತಕಿಯರು ಹಾಗೂ ಮಹಿಳಾ ಹೋರಾಟಗಳು ಸಮಸ್ಯಾತೀತ ಕಾರ್ಯಸೂಚಿ ಎಂದು ಪರಿಗಣಿಸಿವೆ. ಆದರೆ ಇದರಲ್ಲಿ ಕೆಲವು ತಾತ್ವಿಕ ಸಮಸ್ಯೆಗಳಿವೆ. ಅದರ ಒಳಸೂಕ್ಷ್ಮವನ್ನು ಪರಿಶೀಲಿಸೋಣ.

ವ್ಯಾಪ್ತಿ ಮತ್ತು ತಾತ್ವಿಕತೆ

ಈಗ ಜಾರಿಯಲ್ಲಿರುವ ಇಡೀ ಪಠ್ಯಕ್ರಮದ ತಾತ್ವಿಕ

ಚೌಕಟ್ಟು ಮಹಿಳಾ ದೃಷ್ಟಿಕೋನವನ್ನು ಆಧರಿಸಿಲ್ಲ. ಮಹಿಳಾ ದೃಷ್ಟಿಕೋನವನ್ನು ಆಧರಿಸಿರದ ಈ ಚೌಕಟ್ಟಿನ ವ್ಯಾಪ್ತಿಯೊಳಗೆ 'ಮಹಿಳಾ ವಿಷಯಗಳನ್ನು ಸೇರಿಸುವುದು' ಎಂದರೆ ಏನು? ಉದಾಹರಣೆಗೆ, ವಚನಕಾರರ ಜೊತೆಗೆ ವಚನ ಕಾರ್ತಿಯರು, ಬರಹಗಾರರ ಜೊತೆಗೆ ಬರಹಗಾರ್ತಿಯರನ್ನು ಸೇರಿಸುವುದು ಇತ್ಯಾದಿ. ಪಠ್ಯಕ್ರಮದ ಮೂಲ ತಾತ್ವಿಕ ಚೌಕಟ್ಟು ಹಾಗೇ ಇರುತ್ತದೆ. ಆದರೆ ಅದರ ವ್ಯಾಪ್ತಿಗೆ ಕೆಲವು ವಿಷಯಗಳನ್ನು ಸೇರಿಸಲಾಗುತ್ತದೆ ಅಷ್ಟೆ. ಹೀಗೆ ತಾತ್ವಿಕ ಚೌಕಟ್ಟನ್ನು ಬದಲಾಯಿಸದೆ ಕೇವಲ ಮಹಿಳೆಯರ ಕೆಲವು ವಿಷಯಗಳನ್ನು ಸೇರಿಸುವುದು ಎಂದರೆ ಅದು ಇರುವ ಚೌಕಟ್ಟನ್ನು ಹಾಗೇ ಉಳಿಸಿಕೊಂಡು ಅದರ ವ್ಯಾಪ್ತಿಯನ್ನು ಮಾತ್ರ ವಿಸ್ತರಿಸುವುದಾಗುತ್ತದೆ. ಅದು ಕೇವಲ ಅನುಬಂಧದ ರೀತಿಯಾಗಿರುತ್ತದೆ. ಈ ಬಗೆಯ ಬೇಡಿಕೆಯನ್ನು ಹೆಚ್ಚು ವ್ಯಾಪಕವಾಗಿ ಜನಪ್ರಿಯಗೊಳಿಸಲಾಗಿದೆ, ಆಕರ್ಷಣೀಯಗೊಳಿಸಲಾಗಿದೆ. ಇನ್ನೂ ಹೇಳಬೇಕೆಂದರೆ ಇದನ್ನು ಜಾಹೀರಾತುಗೊಳಿಸಲಾಗಿದೆ. 'ಇಂತಹ ಪಕ್ಕೊತ್ತಾಯ ಮಂಡಿಸುವುದು ನಮ್ಮ ಸಾಮಾಜಿಕ ನ್ಯಾಯ' ಎಂದು ಮಹಿಳೆಯರು, 'ನಿಮ್ಮ ಹಕ್ಕೊತ್ತಾಯವನ್ನು ಪರಿಗಣಿಸಿದ್ದೇವೆ ಮತ್ತು ಈಡೇರಿಸಿದ್ದೇವೆ' ಎಂದು ಅದಕ್ಕೆ ಸಂಬಂಧಿಸಿದವರು ಸಂಭ್ರಮಿಸುತ್ತಿದ್ದಾರೆ. ಆದರೆ ಪಠ್ಯಕ್ರಮದ ತಾತ್ವಿಕ ಚೌಕಟ್ಟು ಮಾತ್ರ ಹಾಗೇ ಮುಂದುವರಿದಿದೆ.

ಪಠ್ಯಕ್ರಮದ ಬಗೆಗಿನ ಮಹಿಳೆಯರ ಹಕ್ಕೊತ್ತಾಯ ಪಠ್ಯಕ್ರಮದ ವ್ಯಾಪ್ತಿಗೆ ಸಂಬಂಧಿಸಿರಬೇಕೊ ಅಥವ ಪಠ್ಯ ಕ್ರಮದ ತಾತ್ವಿಕತೆಗೆ, ದೃಷ್ಟಿಕೋನಕ್ಕೆ ಸಂಬಂಧಿಸಿರಬೇಕೊ ಎಂಬ ಮುಖ್ಯವಾದ ಸೈದ್ಧಾಂತಿಕ ಪ್ರಶ್ನೆಯನ್ನು/ಸಮಸ್ಯೆಯನ್ನು ಕುರಿತು ನಾವೀಗ ಚರ್ಚಿಸಬೇಕಾಗಿದೆ. ಉದಾಹರಣೆಗೆ, ಪಠ್ಯಕ್ರಮದಲ್ಲಿ ವಚನಕಾರರ ಜೊತೆಗೆ ವಚನಕಾರ್ತಿಯರನ್ನು ಸೇರಿಸುವುದು ಒಂದು ಸಾಧ್ಯತೆ. ವಚನಕಾರರನ್ನು ಮಹಿಳಾ ದೃಷ್ಟಿಕೋನದ ಮೂಲಕ ಅಥವಾ ವಚನ ಕಾರ್ತಿಯರ ದೃಷ್ಟಿಕೋನದ ಮೂಲಕ ಗ್ರಹಿಸುವುದು ಎರಡನೆ ಸಾಧ್ಯತೆ. 'ಪತಿಯ ದಾರಿಯಲ್ಲಿ ಸತಿ ನಡೆಯಬೇಕಲ್ಲದೆ ಸತಿಗೆ ಸ್ವಾತಂತ್ರ್ಯ ಉಂಟೆ?' ಎಂದು ವಚನಕಾರ್ತಿ ಅಕ್ಕಮ್ಮ ಕೇಳುತ್ತಾಳೆ. ಇದು ವಚನಕಾರ್ತಿಯರ ದೃಷ್ಟಿಕೋನದಲ್ಲಿ ವಚನಕಾರರನ್ನು ಅಧ್ಯಯನ ಮಾಡಲು ಒಂದು ತಾತ್ವಿಕ ಸೂಚನೆ ಅಷ್ಟೆ. ಅಂದರೆ ಪಠ್ಯಕ್ರಮದ ಬಗೆಗಿನ ಮಹಿಳೆಯರ ಹಕ್ಕೊತ್ತಾಯದ ಸ್ವರೂಪದಲ್ಲಿ ಒಂದು ಪರಿಣಾಮಕಾರಿಯಾದ ಪಲ್ಲಟದ ಅಗತ್ಯವಿದೆ ಎಂಬುದನ್ನು ಗಮನಿಸಬೇಕು. ಇದೇ ಆಯಾಮವನ್ನು ಸಮಾಜ ವಿಜ್ಞಾನಗಳು ಹಾಗೂ ಇನ್ನಿತರೆ ವಿಷಯಗಳಿಗೂ ಅನ್ವಯಿಸಬಹುದು.

ನಾಲ್ಕು: ಮಹಿಳಾ ದೃಷ್ಟಿಕೋನದ ಪಠ್ಯಕ್ರಮ

ಪಠ್ಯಕ್ರಮದ ವಸ್ತುವಿಷಯ ಮಹಿಳೆಯರ ಲೋಕದ್ದೇ ಆಗಿರಲಿ, ಅದನ್ನು ಹೊರತುಪಡಿಸಿದ್ದೇ ಆಗಿರಲಿ, ಅದನ್ನು ಮಹಿಳಾ ದೃಷ್ಟಿಕೋನದಿಂದ ಗ್ರಹಿಸಿ, ಬೋಧನೆ ಮತ್ತು ಕಲಿಕೆಯಲ್ಲಿ ಜಾರಿಗೆ ತರುವುದನ್ನು ಮಹಿಳಾ ದೃಷ್ಟಿಕೋನದ ಪಠ್ಯಕ್ರಮ ಎನ್ನಬಹುದು. ಆ ಮೂಲಕ ಮಹಿಳಾ ದೃಷ್ಟಿಕೋನವನ್ನು ಹುಟ್ಟಿಹಾಕುವುದು, ಬೆಳೆಸುವುದು ಮುಖ್ಯವಾಗಿರುತ್ತದೆ. ಪಠ್ಯವಸ್ತು, ಬೋಧನೆ, ಕಲಿಕೆ ಹಾಗೂ ಸಂಶೋಧನೆಯ ಲೋಕದಲ್ಲಿ ಶಕ್ತಿಶಾಲಿಯಾದ ಮಹಿಳಾ ದೃಷ್ಟಿಕೋನವನ್ನು ನಿರ್ಮಾಣ ಮಾಡುವುದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದರೆ, ಉನ್ನತ ಶಿಕ್ಷಣದಲ್ಲಿ ಅನೇಕ ಮಹಿಳೆಯರಿದ್ದಾರೆ. ಅವರು ಅಧ್ಯಾಪನ ದಲ್ಲಿ ತೊಡಗಿದ್ದಾರೆ. ಆದರೆ ಶೈಕ್ಷಣಿಕ ಪರಿಸರದಲ್ಲಿ (ಭೌತಿಕ ಮತ್ತು ಭೌತಿಕೇತರ) ಮಹಿಳಾ ದೃಷ್ಟಿಕೋನ ದಿಂದ ಕೇಳಬೇಕಾಗಿದ್ದ ತೀವ್ರತೆಯಲ್ಲಿ ಇನ್ನೂ ಪ್ರಶ್ನೆಗ ಳನ್ನು, ತಕರಾರುಗಳನ್ನು ಕೇಳಿಲ್ಲ ಎಂದೇ ಹೇಳಬೇಕು. ಅಲ್ಲಲ್ಲಿ ಬಿಡಿ ಪ್ರಯತ್ನಗಳು ನಡೆದಿದ್ದರೂ ಅವು ಒಂದು ಗಟ್ಟಿ ಯಾದ ಆಲೋಚನ ಕ್ರಮವಾಗಿ ಇನ್ನೂ ಬೆಳೆದಿಲ್ಲ. ನನ್ನ ಈ ವಾದಕ್ಕೆ ಪ್ರತಿಯಾಗಿ ಕೆಲವು ಬಿಡಿ ಪ್ರಯತ್ನಗ ಳನ್ನೇ ಮುಂದಿಡುವ ಯಾಂತ್ರಿಕ ಸಾಧ್ಯತೆ ಜಾಸ್ತಿ ಇದೆ. ಹಾಗಾಗಿ ಇದನ್ನು ಒಂದು ಉದಾಹರಣೆಯ ಮೂಲಕ ಗಟ್ಟಿಗೊಳಿಸುತ್ತೇನೆ. ೭೦ರ ದಶಕದಲ್ಲಿ ದಲಿತ ಹೋರಾಟ, ದಲಿತ ಸಾಹಿತ್ಯ, ದಲಿತ ಚಿಂತನೆ ಕ್ರಿಯಾಶೀ ಲವಾಗಿತ್ತು. ಆಗ ಜಾರಿಯಲ್ಲಿದ್ದ ಒಂದನೇ ತರಗತಿಯ ಪಠ್ಯ ಪುಸ್ತಕದಲ್ಲಿ ಒಂದು ಪಾಠವಿತ್ತು. ಅದರ ಒಂದು ಭಾಗ ಈ ರೀತಿ ಇತ್ತು.

ಪಠ್ಯಕ್ರಮದ ಬಗೆಗಿನ ಮಹಿಳೆಯರ ಹಕ್ಕೊತ್ತಾಯ ಪಠ್ಯಕ್ರಮದ ವ್ಯಾಪ್ತಿಗೆ ಸಂಬಂಧಿಸಿರಬೇಕೊ ಅಥವ ಪಠ್ಯ ಕ್ರಮದ ತಾತ್ವಿಕತೆಗೆ, ದೃಷ್ಟಿಕೋನಕ್ಕೆ ಸಂಬಂಧಿಸಿರಬೇಕೊ ಎಂಬ ಮುಖ್ಯವಾದ ಸೈದ್ಧಾಂತಿಕ ಪ್ರಶ್ನೆಯನ್ನು/ಸಮಸ್ಯೆಯನ್ನು ಕುರಿತು ನಾವೀಗ ಚರ್ಚಿಸಬೇಕಾಗಿದೆ. ಉದಾಹರಣೆಗೆ, ಪಠ್ಯಕ್ರಮದಲ್ಲಿ ವಚನಕಾರರ ಜೊತೆಗೆ ವಚನಕಾರ್ತಿಯರನ್ನು ಸೇರಿಸುವುದು ಒಂದು ಸಾಧ್ಯತೆ. ವಚನಕಾರರನ್ನು ಮಹಿಳಾ ದೃಷ್ಟಿಕೋನದ ಮೂಲಕ ಅಥವಾ ವಚನ ಕಾರ್ತಿಯರ ದೃಷ್ಟಿಕೋನದ ಮೂಲಕ ಗ್ರಹಿಸುವುದು ಎರಡನೆ ಸಾಧ್ಯತೆ.

ಚರಕ
ಇದು ಚರಕ
ಇದು ಒಣ ಮರದ ಚರಕ
ಇದು ಬಡವರ ಚರಕ
ಇದು ಇತರರ ಚರಕ
ಇತರರ ಚರಕ ಅಂದ

ಇದನ್ನು ದಲಿತ ಸಾಹಿತಿಗಳು ಮತ್ತು ಚಿಂತಕರು ಬಲವಾಗಿ ಪ್ರಶ್ನಿಸಿದರು. 'ಬಡವರ ಚರಕ ಒಣಮರದ ಚರ ಕವಂತೆ. ಹಾಗಿದ್ದರೆ ಶ್ರೀಮಂತರ ಚರಕ ಹಸಿ ಮರದ್ದೋ? ಇತರರ ಚರಕ ಅಂದವಂತೆ. ಬಡವರ ಚರಕ ಅಂದವ ಲ್ಲವೊ?' ಎಂಬ ಬಲವಾದ ಭಿನ್ನಮತವನ್ನು ಎದುರಿಟ್ಟರು. ಈ ಭಿನ್ನ ಮತದಲ್ಲಿ ಪಠ್ಯವಸ್ತುವಿನ ಪ್ರಶ್ನೆ ಮತ್ತು ಅದರ ಹಿಂದಿನ ಧೋರಣೆಯ ಪ್ರಶ್ನೆ ಎರಡೂ ಇದ್ದವು. ನಂತ ರದ ದಿನಗಳಲ್ಲಿ ಆ ಪಾಠವನ್ನು ಬದಲಿಸಲಾಯಿತು. ಈ ಹಿನ್ನೆಲೆಯಲ್ಲಿ ನೋಡಿದಾಗ ಈಗ ಜಾರಿಯಲ್ಲಿರುವ ಪಠ್ಯ ಕ್ರಮದಲ್ಲಿ ಮಹಿಳಾ ವಿರೋಧಿ ಅಂಶಗಳು ಸಾಕಷ್ಟಿವೆ. ಹಾಗಿದ್ದರೆ ಉನ್ನತ ಶಿಕ್ಷಣದ ಬೋಧನ ವಲಯದ ಮಹಿ ಳೆಯರು ಯಾಕೆ ಇಂತಹ ತಕರಾರುಗಳನ್ನು, ಪ್ರಶ್ನೆಗಳನ್ನು ದಲಿತರಂತೆ, ಅತ್ಯಂತ ತೀವ್ರತೆಯಿಂದ ಗಂಭೀರವಾಗಿ ಎತ್ತುತ್ತಿಲ್ಲ? ಪ್ರಾಯಶಃ ಇದಕ್ಕೆ ಎರಡು ಕಾರಣಗಳಿರ ಬಹುದು. ಒಂದು: ಉನ್ನತ ಶಿಕ್ಷಣದಲ್ಲಿರುವ ಕೆಲವು ಮಹಿಳೆಯರು ಮೇಲು ವರ್ಗ ಮತ್ತು ಮಧ್ಯಮ ವರ್ಗದವರಾಗಿದ್ದಾರೆ. ಈ ಮಾತನ್ನು ಜಾತಿ ಶ್ರೇಣೀಕರಣಕ್ಕೂ ವಿಸ್ತರಿಸಬಹುದು, ಅನ್ವಯಿಸಬಹುದು. ಎರಡು: ಮಹಿಳೆಯರ ಮೇಲೆ [illegible] ಕೆಲವು ಬಲಾತ್ಕಾರದಿಂದ ಹೇರಲಾಗಿರುವ ಪುರುಷಪರ ದೃಷ್ಟಿಕೋನವೂ ಕಾರಣವಾಗಿರಬಹುದು. ಅಂದರೆ ಅಧ್ಯಾಪನ ದಲ್ಲಿ ತೊಡಗಿರುವ ಮಹಿಳೆಯರು ತಮಗೇ ಗೊತ್ತಿಲ್ಲದಂತೆ ಪುರುಷಪರ ದೃಷ್ಟಿಕೋನದಲ್ಲಿ ಅಧ್ಯಾಪನ ಮಾಡುತ್ತಿರಬಹುದು. ಹಾಗಾಗಿಯೇ ಪಠ್ಯ ಕ್ರಮಗಳನ್ನು ಕುರಿತು ಇಂದೂ ಕೂಡ ಪುರುಷರ ಬರವ ಣಿಗೆಯೇ ಜಾಸ್ತಿ ಬರುತ್ತಿದೆ. ಮಹಿಳೆಯರ ಬರವಣಿಗೆ ಕಡಿಮೆ ಇದೆ. ಕೊನೆಯ ಪಕ್ಷ ಕೆಲವು ಪಠ್ಯಗಳನ್ನು ತರಗತಿಯೊಳಗೆ ಬೋಧಿಸುವಾಗ ಅಧ್ಯಾಪಕಿಯರಿಗೆ ಪುರುಷ ಪರ ಧೋರಣೆಯ ಬಗೆಗೆ ಯಾಕೆ ಅನುಮಾನಗಳು, ಸಂದೇಹಗಳು, ಪ್ರಶ್ನೆಗಳು, ತಕರಾರುಗಳು ಏಳುವುದಿಲ್ಲ ಎಂಬ ಪ್ರಶ್ನೆ ಸಹಜವಾಗಿ ಕಾಡುತ್ತದೆ.

ಐದು: ಮಾರುಕಟ್ಟೆಯ ಶಿಕ್ಷಣ

ಶಿಕ್ಷಣ ಎಂಬುದು ಕೇವಲ ಅಕ್ಷರ ಜ್ಞಾನವೊ, ಕಂಪ್ಯೂಟರ್ ಜ್ಞಾನವೊ, ಮಾಹಿತಿಗಳ ಸಂಗ್ರಹವೊ, ಕೇವಲ ನೆನಪಿನ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದೊ ಯಾವುದು? ಶಿಕ್ಷಣ ಬೌದ್ಧಿಕ ಕೌಶಲ್ಯ ಮತ್ತು ಬೌದ್ಧಿಕ ಸಾಮರ್ಥ್ಯವನ್ನು ಹೆಚ್ಚಿಸುವುದೊ ಯಾವುದು? ಕೌಶಲ್ಯ ಮತ್ತು ಸಾಮರ್ಥ್ಯವನ್ನು ಹೆಚ್ಚಿಸುವುದು ಎಂದಿಟ್ಟುಕೊಳ್ಳೋಣ. ಹಾಗಿದ್ದರೆ ಅದು ಸಮಾಜದಲ್ಲಿ ಯಾರ ಹಿತ ವನ್ನು ಕಾಯುವಂತಿದೆ? ಯಾರ ಲಾಭವನ್ನು ಕಾಯುವಂತಿದೆ?

ಲಾಭ ಮತ್ತು ಬಂಡವಾಳದ ಆಧಾರದಲ್ಲಿ ರಚನೆಯಾಗಿರುವ ಸಮಾಜದಲ್ಲಿ ಅಥವ ಅಸಮಾನತೆ ಮತ್ತು ಶೋಷಣೆಯ ಆಧಾರದಲ್ಲಿ ರಚನೆಯಾಗಿ ನಿಂತಿರುವ ಸಮಾಜದಲ್ಲಿ, ಶಿಕ್ಷಣದ ಹೆಸರಿನಲ್ಲಿ ಕೆಲವು ಕೌಶಲ್ಯಗಳನ್ನು, ಸಾಮರ್ಥ್ಯಗಳನ್ನು ಕೊಡಲಾಗುತ್ತಿದೆ. ಅವು ಸಮಾಜದಲ್ಲಿ ಯಾರಿಗೆ ಮತ್ತು ಎಷ್ಟು ಜನರಿಗೆ ಸಿಗುತ್ತಿವೆ ಎಂಬ ಪ್ರಶ್ನೆಯ ಚರ್ಚೆ ಕೂಡ ಇದೆ. ಅದಿರಲಿ. ಆದರೆ ನಮಗಿಲ್ಲಿ ಮುಖ್ಯವಾಗುವುದು ಶಿಕ್ಷಣದ ಮೂಲಕ ಕೊಡಲಾಗುತ್ತಿರುವ ಕೌಶಲ್ಯ ಹಾಗೂ ಸಾಮರ್ಥ್ಯಗಳು ಎಂತವು ಮತ್ತು ಯಾವುವು ಎಂಬುದು. ಇಡೀ ಶೈಕ್ಷಣಿಕ ವಲಯವನ್ನು ಮಾರುಕಟ್ಟೆಯ ಹಿತಾಸಕ್ತಿಯನ್ನು ಕಾಯುವಂತಹ ಕೌಶಲ್ಯ/ಸಾಮರ್ಥ್ಯ ಕೊಡಲು ಬಳಸಲಾಗುತ್ತಿದೆ. ಉನ್ನತ ಶಿಕ್ಷಣದಲ್ಲಿ ಇದರ ವ್ಯಾಪ್ತಿ ದಿನದಿನಕ್ಕೂ ಜಾಸ್ತಿಯಾಗುತ್ತಿದೆ. ಮಾರುಕಟ್ಟೆಯನ್ನು ವಿಸ್ತರಿಸಲು ಹಾಗೂ ಅದನ್ನು ಬೆಳೆಸಲು ಅನುಕೂಲವಾಗುವ ಕೋರ್ಸುಗಳನ್ನು ಜಾರಿ ಮಾಡಲಾಗಿದೆ. ಆ ಕೋರ್ಸುಗಳನ್ನು ಮಾಡಿದರೆ ಸ್ವಯಂ ಉದ್ಯೋಗ ಗ್ಯಾರಂಟಿ ಎಂಬ ಭ್ರಮೆಯನ್ನು ಮಾಧ್ಯಮಗಳ ಮೂಲಕ ಪ್ರಚಾರ ಮಾಡಲಾಗುತ್ತಿದೆ. ತಮ್ಮ ಲಾಭಕ್ಕಾಗಿ ಹೇರುತ್ತಿರುವ ಇಂತಹ ಕೋರ್ಸುಗಳನ್ನು ವಿದ್ಯಾರ್ಥಿಗಳೇ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ ಎಂಬ ಭ್ರಮೆಯನ್ನು ಗಟ್ಟಿಗೊಳಿಸಲಾಗಿದೆ. □

(ಮುಂದುವರೆಯುವುದು)

ಯಡ್ಡಿ ಬಜೆಟ್ ೨೦೦೯-೧೦

ಚಿಟಿಕೆ ಚಪ್ಪರದಲ್ಲಿ ಚಡ್ಡಿ ಬಜೆಟ್!

ಶಿವಸುಂದರ್

ಬಜೆಟ್ ಎಂಬುದು ಈ ಮೊದಲೇ ನಿರ್ಧಾರ ಗೊಂಡಿರುವ ಆರ್ಥಿಕ ನೀತಿ ಮತ್ತು ಕಾರ್ಯಕ್ರಮಗಳಿಗೆ ತಕ್ಕಂತೆ ರೂಪುಗೊಳ್ಳುವ ವಾರ್ಷಿಕ ಯೋಜನೆಯೇ ವಿನಃ ಅದು ತನ್ನಂತೆ ತಾನೆ ಒಂದು ಹೊಸ ಆರ್ಥಿಕ ಕಾರ್ಯಕ್ರಮ ವಲ್ಲ. ಮತ್ತು ಜನಸಾಮಾನ್ಯರ ಬದುಕನ್ನು ಮತ್ತು ಭವಿಷ್ಯವನ್ನು ತೀರ್ಮಾನ ಮಾಡುವ ಆ ಆರ್ಥಿಕ ನೀತಿಗಳನ್ನು ನಮ್ಮನ್ನು ಆಳುವ ಧಣಿಗಳು ಅವರ ಧಣಿಗಳಾದ ವಿಶ್ವಬ್ಯಾಂಕ್ ಮತ್ತು ವಾಷಿಂಗ್‌ಟನ್‌ನ ಅಣತಿಯಂತೆ ರೂಪಿಸುತ್ತಾರೆ ಎಂಬುದು ಸಹ ಗುಟ್ಟಿನ ಸಂಗತಿಯೇನಲ್ಲ. ಹೀಗಾಗಿ ಬಜೆಟ್ಟಿನ ಬಗ್ಗೆ ಸಾಮಾನ್ಯ ಜನರ ಆಸಕ್ತಿಯೂ ಸಹ ಯಾವ ಸರಕಿಗೆ ತೆರಿಗೆ ಜಾಸ್ತಿ ಆಯ್ತು ಎಂಬ ಬಗ್ಗೆ ಮಾತ್ರ ಸೀಮಿತವಾಗಿರುತ್ತದೆ. ಜನರ ಈ ಸಿನಿಕ ನಿರಾಸಕ್ತಿಯನ್ನೇ ಬಂಡವಾಳವಾಗಿಸಿಕೊಂಡಿರುವ ರಾಜಕೀಯ ಪಕ್ಷಗಳು ಅದರಲ್ಲೂ ಬಿಜೆಪಿಯಂತ ಚಡ್ಡಿ ಪಕ್ಷಗಳು ಈ ಅವಕಾಶವನ್ನು ಬಳಸಿಕೊಂಡು ಜನರಲ್ಲಿ ಹುಸಿ ಭರವಸೆಗಳನ್ನು ಮೂಡಿಸುತ್ತಿದ್ದಾರೆ.

ಬಂಡ್ವಾಳವಿಲ್ಲದೆ ಬಡಾಯಿ ಬಿಡೋ ಉಡಾಫೆ ಜನರ ಬಗ್ಗೆ ಹಳ್ಳಿಗಾಡಿನ ಕಡೆ ಚಿಟಿಕೆ ಚಪ್ಪರ ಹಾಕಿಸಿ ಮದುವೆ ಮಾಡಿಸೋನು ಅಂತಾ ಕೂಡಾ ಲೇವಡಿ ಮಾಡುತ್ತಾರೆ. ಅಂತವರು ಕೈಯಲ್ಲಿ ಚಿಟಿಕೆ ಹೊಡೆಯುತ್ತಾ ಅಗೋ ಅಲ್ಲಿ ಚಪ್ಪರ, ಇಲ್ಲಿ ವಾಲಗ, ಅಲ್ಲಿ ಮದುವೆ ಎಂದು ಭ್ರಮೆ ಮೂಡಿಸುತ್ತಾ ಬೇಳೆ ಬೇಯಿಸಿಕೊಳ್ಳುವ ಕುತಂತ್ರಿಗಳು. ಆದರೆ ಯಡಿಯೂರಪ್ಪನವರ ಎರಡನೇ 'ಸ್ವತಂತ್ರ' ಬಜೆಟ್ ನೋಡಿದರೆ ಚಿಟಿಕೆ ಚಪ್ಪರದವರೇ ವಾಸಿ ಅನಿಸಬೇಕು!

ಬಜೆಟ್ ಎಂಬುದು ಈ ಮೊದಲೇ ನಿರ್ಧಾರಗೊಂಡಿರುವ ಆರ್ಥಿಕ ನೀತಿ ಮತ್ತು ಕಾರ್ಯಕ್ರಮಗಳಿಗೆ ತಕ್ಕಂತೆ ರೂಪುಗೊಳ್ಳುವ ವಾರ್ಷಿಕ ಯೋಜನೆಯೇ ವಿನಃ ಅದು ತನ್ನಂತೆ ತಾನೆ ಒಂದು ಹೊಸ ಆರ್ಥಿಕ ಕಾರ್ಯಕ್ರಮವಲ್ಲ. ಮತ್ತು ಜನಸಾಮಾನ್ಯರ ಬದುಕನ್ನು ಮತ್ತು ಭವಿಷ್ಯವನ್ನು ತೀರ್ಮಾನ ಮಾಡುವ ಆ ಆರ್ಥಿಕ ನೀತಿಗಳನ್ನು ನಮ್ಮನ್ನು ಆಳುವ ಧಣಿಗಳು ಅವರ ಧಣಿಗಳಾದ ವಿಶ್ವಬ್ಯಾಂಕ್ ಮತ್ತು ವಾಷಿಂಗ್‌ಟನ್‌ನ ಅಣತಿಯಂತೆ ರೂಪಿಸುತ್ತಾರೆ ಎಂಬುದು ಸಹ ಗುಟ್ಟಿನ ಸಂಗತಿಯೇನಲ್ಲ. ಹೀಗಾಗಿ ಬಜೆಟ್ಟಿನ ಬಗ್ಗೆ ಸಾಮಾನ್ಯ ಜನರ ಆಸಕ್ತಿಯೂ ಸಹ ಯಾವ ಸರಕಿಗೆ ತೆರಿಗೆ ಜಾಸ್ತಿ ಆಯ್ತು ಎಂಬ ಬಗ್ಗೆ ಮಾತ್ರ ಸೀಮಿತವಾಗಿರುತ್ತದೆ. ಜನರ ಈ ಸಿನಿಕ ನಿರಾಸಕ್ತಿಯನ್ನೇ ಬಂಡವಾಳವಾಗಿಸಿಕೊಂಡಿರುವ ರಾಜಕೀಯ ಪಕ್ಷಗಳು ಅದರಲ್ಲೂ ಬಿಜೆಪಿಯಂತ ಚಡ್ಡಿ ಪಕ್ಷಗಳು ಈ ಅವಕಾಶವನ್ನು ಬಳಸಿಕೊಂಡು ಜನರಲ್ಲಿ ಹುಸಿ ಭರವಸೆಗಳನ್ನು ಮೂಡಿಸುತ್ತಿದ್ದಾರೆ ಮತ್ತು ತಮ್ಮ ಕೋಮುವಾದಿ ಕಾರ್ಯಕ್ರಮಗಳನ್ನು ನಿರಾತಂಕವಾಗಿ ಜಾರಿಗೊಳಿಸುವುದಕ್ಕೆ ಬಳಸಿಕೊಳ್ಳುತ್ತಿದ್ದಾರೆ.

ಅದರಲ್ಲೂ ಈ ವರ್ಷದ ಬಜೆಟ್ಟಿಗೆ ಎರಡು ವಿಶೇಷ ಸಂದರ್ಭಗಳಿವೆ. ಮೊದಲನೆಯದಾಗಿ ಮುಂದಿನ ಎರಡು ತಿಂಗಳಲ್ಲಿ ಸಂಸತ್ ಚುನಾವಣೆ ನಡೆಯಲಿದೆ. ಎನ್‌ಡಿಎಯನ್ನು ಅಧಿಕಾರಕ್ಕೆ ತಂದು ಅದ್ವಾನಿಯನ್ನು ಪ್ರಧಾನಿ ಮಂತ್ರಿ ಸೀಟಿನಲ್ಲಿ ಕೂಡಿಸಲು ಸಾಧ್ಯವಾಗುವಂತೆ ಕರ್ನಾಟಕದಿಂದ ಕನಿಷ್ಟ ಹತ್ತಿಪ್ಪತ್ತು ಎಂಪಿಗಳನ್ನು ಗೆಲ್ಲಿಸಿಕೊಡುವುದಾಗಿಯೂ ಇತ್ತೀಚೆಗೆ ನಡೆದ ಬಿಜೆಪಿ ಕಾರ್ಯಕಾರಣಿಯಲ್ಲಿ ಯಡಿಯೂರಪ್ಪನವರು ಚಿಟಿಕೆ ಚಪ್ಪರ ಹಾಕಿ ಬಂದಿದ್ದಾರೆ! ಎರಡನೆಯದಾಗಿ ಇಡೀ ಜಗತ್ತನ್ನೇ ಆವರಿಸಿರುವ ಆರ್ಥಿಕ ಹಿನ್ನೆಡೆಯಿಂದಾಗಿ ಒಟ್ಟಾರೆ ಆರ್ಥಿಕ ಚಟುವಟಿಕೆಗಳು ಕುಂಠಿತವಾಗಿ ಜನರು ಅತಿ ಹೆಚ್ಚು ಸಂಕಷ್ಟದಲ್ಲಿ ಸಿಲುಕಿ ಸರ್ಕಾರದೆಡೆ ಸಹಾಯಕ್ಕಾಗಿ ನೋಡುತ್ತಿದ್ದಾರೆ. ಆದರೆ ಇವೆಲ್ಲಾ ಆಗಬೇಕೆಂದರೆ ವಿಶ್ವಬ್ಯಾಂಕ್ ಆದೇಶವನ್ನು ಮೀರಿ ಈ ದೇಶದ ಶ್ರೀಮಂತರ ಮತ್ತು ವಿದೇಶಿ

ವ್ಯಂಗ್ಯ ಚಿತ್ರ ಕೃಪೆ: ಕನ್ನಡ ಪ್ರಭ

ಬಂಡವಾಳಿಗರ ಹಿತಾಸಕ್ತಿಗೆ ವಿರುದ್ಧವಾದ ನೀತಿಗಳನ್ನು ಮಾಡಬೇಕು. ಅದು ಬಿಜೆಪಿಯಿರಲಿ. ಈ ದೇಶದ ಯಾವ ಚುನಾಯಿತ ಪಕ್ಷಗಳು ಮಾಡುವೆಂತಿಲ್ಲ. ಏಕೆಂದರೆ ಒಟ್ಟಾರೆಯಾಗಿ ಆರ್ಥಿಕತೆಯಲ್ಲಿ ಅಂದರೆ ತೆರಿಗೆ ಸಂಗ್ರಹಣೆ ಮತ್ತು ವೆಚ್ಚದ ಬಗೆಯಲ್ಲಿ ಬರಬೇಕಿರುವ ಬದಲಾವಣೆಗಳ ಬಗ್ಗೆ ನಾಲ್ಕು ವರ್ಷಗಳ ಮಧ್ಯಮಾವಧಿ ವಿತ್ತೀಯ ಯೋಜನೆ –Medium Term Fiscal Plan-MTFP ನೀತಿಯನ್ನು ರೂಪಿಸಬೇಕೆಂದು ವಿಶ್ವಬ್ಯಾಂಕ್ ಕಡ್ಡಾಯ ಮಾಡುತ್ತದೆ. ಈ ಹಿಂದೆ ಅದು ಪ್ರತಿ ವರ್ಷ ಕಂತಿನ ಸಾಲವನ್ನು ಬಿಡುಗಡೆ ಮಾಡುವ ಮುನ್ನ ಈ ನೀತಿಗೆ ಸರ್ಕಾರ ಬದ್ಧವಾಗಿದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಿ ಕಂತು ಬಿಡುಗಡೆ ಮಾಡುತ್ತಿತ್ತು. ಆದರೆ ಈಗಲೂ ವಿದೇಶಿ ಬಂಡವಾಳ ಹೂಡಿಕೆಗೆ ನಮ್ಮ ರಾಜ್ಯ ಅರ್ಹವಾಗಿದೆಯೋ ಇಲ್ಲವೋ ಎಂಬುದನ್ನು ತೀರ್ಮಾನಿಸಲು ವಿದೇಶಿ ಬಂಡವಾಳಿಗರು ಸರ್ಕಾರವು ಒಬಿಈಕ ನೀತಿಯನ್ನು ದಕ್ಷವಾಗಿ ಜಾರಿಗೆ ತರುತ್ತಿದೆಯೋ ಇಲ್ಲವೋ ಎಂಬುದನ್ನೇ ಮಾನದಂಡವಾಗಿ ಬಳಸಿಕೊಳ್ಳುತ್ತವೆ. ಆದ್ದರಿಂದಲೇ ಸರ್ಕಾರಗಳು ಮತ್ತು ಪಕ್ಷಗಳು ಸದನದ ಒಳಗಡೆ ಮತ್ತು ಹೊರಗಡೆ ಏನೇ ಯೋಜನೆಗಳನ್ನು ಘೋಷಿಸಿದರೂ ಕಾರ್ಯಾಚರಣೆಯಲ್ಲಿ ಮಾತ್ರ ಈ ಮಧ್ಯಮಾವಧಿ ವಿತ್ತೀಯ ಯೋಜನೆಯಿಂದ ಕಿಂಚಿತ್ತೂ ಆಚೀಚೆ ಸರಿಯುತ್ತಿರಲಿಲ್ಲ. ೨೦೦೮-೦೯ನೇ ಸಾಲಿನ ಯಡ್ಡಿಯವರ ಬಿಜೆಪಿ ಬಜೆಟ್ ಸಹ ಇದರಿಂದ ಎಳ್ಳಷ್ಟೂ ಆಚೀಚೆ ಸರಿದಿರಲಿಲ್ಲ.

೨೦೦೨ರಲ್ಲಿ ವಿಶ್ವಬ್ಯಾಂಕಿನ ಈ ನಿರ್ದೇಶನವೇ ವಿತ್ತೀಯ ಸುಧಾರಣಾ ಶಾಸನ (Fiscal Responsibility Act- FRA-2002) ಆಗಿ ಜಾರಿಯಾಯಿತು. ಈ ಶಾಸನವು ತನ್ನ ಮುನ್ನುಡಿಯಲ್ಲೇ "ಪ್ರತಿ ವರ್ಷ ಸರ್ಕಾರಗಳು ಮಂಡಿಸುವ ವಾರ್ಷಿಕ ಬಜೆಟ್ಟುಗಳು ಒಬಿಈಕಯಲ್ಲಿ ವಿಷದವಾಗಿರುವ ಮಧ್ಯಮಾವಧಿ ಯೋಜನೆಗೆ ಬದ್ಧವಾಗಿರತಕ್ಕದ್ದು" ಎಂದು ತಾಕೀತು ಮಾಡುತ್ತದೆ. ಈ ಕಾಯಿದೆಯ ಪ್ರಕಾರ ಒಟ್ಟಾರೆ ಆರ್ಥಿಕ ಯೋಜನೆಗಳು "೨೦೦೨ರಿಂದ ಮೊದಲುಗೊಂಡು ನಂತರದ ನಾಲ್ಕು ವರ್ಷಗಳಲ್ಲಿ ಸರ್ಕಾರ ತನ್ನ ರೆವೆನ್ಯೂ ಕೊರತೆಯನ್ನು ಸೊನ್ನೆಗೂ ಹಾಗೂ ವಿತ್ತೀಯ ಕೊರತೆಯನ್ನು ಒಟ್ಟಾರೆ ರಾಜ್ಯ ಅಂತರಿಕ ಉತ್ಪನ್ನದ ಶೇ.೩ಕ್ಕೆ ಇಳಿಸಬೇಕೆಂದು" (ಕಲ೯(೪)(೩))ಕಡ್ಡಾಯ ಮಾಡುತ್ತದೆ. ಇದನ್ನು ಸರ್ಕಾರ ತನ್ನ ಆದಾಯ ತರದ ಖರ್ಚುಗಳನ್ನು ಕಡಿಮೆ ಮಾಡಿಕೊಳ್ಳುವ ಮೂಲಕ ಮತ್ತು ಆದಾಯದ ಮೂಲಗಳನ್ನು ಹೆಚ್ಚಿಸಿಕೊಳ್ಳುವ ಮೂಲಕ ಸಾಧಿಸಬೇಕೆಂದು ನಿರ್ದೇಶನ ಮಾಡುತ್ತದೆ.

ಆದರೆ ಈ ಸಾಲಿನಲ್ಲಿ ಇಡೀ ಜಗತ್ತೇ ಆರ್ಥಿಕ ಹಿಂದ್ಸರಿತ ಎದುರಿಸುತ್ತಿರುವುದರಿಂದ ವಿತ್ತೀಯ ಕೊರತೆಯನ್ನು ಶೇ.೩.೫ಕ್ಕೆ ಹೆಚ್ಚಿಸಿಕೊಳ್ಳುವುದಕ್ಕೆ ಮಾತ್ರ ಅನುಮತಿ ನೀಡಲಾಗಿದೆ. ಅಂದರೆ ಮಿಕ್ಕೆಲ್ಲಾ ಜನವಿರೋಧಿ ನೀತಿಗಳು ಹಾಗೆಯೇ ಮುಂದುವರೆಯಬೇಕೆಂಬುದು ಅದರರ್ಥ. ಆದರೆ ಈ ಸಾಲಿನಲ್ಲಿ ಚುನಾವಣೆಯೂ ಇರುವುದರಿಂದ ಜನರಿಗೆ ನೀಡಲು ಹಣವಿಲ್ಲ. ಜನಪರ ಕಾರ್ಯಕ್ರಮಗಳಿಲ್ಲದೆ ಓಟಿಲ್ಲ. ಈ ಇಕ್ಕಟ್ಟಿನಲೇ ಯಡ್ಡಿ ಸರ್ಕಾರ ಜನತೆಗೆ ಚಿಟಿಕೆ ಚಪ್ಪರ ಹಾಕಿಸಿ ಮದುವೆ ಮಾಡಿಸಲು ಹೊರಟಿದೆ.

ಬಜೆಟ್ಟಿನಲ್ಲಿ ಯಾವ್ಯಾವ ವರ್ಗಗಳಿಗೆ ಏನೇನು ಕೊಟ್ಟಿದ್ದಾರೆ ಎಂದು ನೋಡಿಕೊಂಡು ಅದು ಜನಪರವೋ

ಬಜೆಟ್ಟಿನಲ್ಲಿ ಯಾವ್ಯಾವ ವರ್ಗಗಳಿಗೆ ಏನೇನು ಕೊಟ್ಟಿದ್ದಾರೆ ಎಂದು ನೋಡಿಕೊಂಡು ಅದು ಜನಪರವೋ ಅಲ್ಲವೋ ಎಂದು ತೀರ್ಮಾನಕ್ಕೆ ಬರುವ ರಾಜಕಾರಣಿಗಳ ಮತ್ತು ಕೆಲವು ಸರ್ಕಾರಿ ಪಂಡಿತರ ಪದ್ಧತಿ ಮುಠಾಳತನದ್ದು. ಏಕೆಂದರೆ ಅದರ ಹಿಂದೆ ಬಜೆಟ್ಟಿನಲ್ಲಿ ಘೋಶಿಸಿದ ಕಾರ್ಯಕ್ರಮಗಳೆಲ್ಲಾ ಜಾರಿಗೆ ಬರುತ್ತವೆ ಎಂಬ ಆತ್ಮವಂಚಕ ನಿರೀಕ್ಷೆಗಳಿರುತ್ತವೆ. ಆದರೆ ಬಿಜೆಪಿ ಸರ್ಕಾರದ ವಹಿವಾಟನ್ನೇ ನೋಡಿದರೆ ಬಜೆಟ್ಟಿನ ಭರವಸೆಗಳೆಲ್ಲಾಬರೀ ಬೋಗಸೆಂಬುದು ಗೊತ್ತಾಗುತ್ತದೆ. ಉದಾಹರಣೆಗೆ ಕಳೆದ ಸಾಲಿನಲ್ಲಿ ಯಡಿಯೂರಪ್ಪನವರು ೫೫,೨೭೩ ಕೋಟಿ ರೂಪಾಯಿಗಳ ಅಯವ್ಯಯ ಪತ್ರವನ್ನು ಮಂಡಿಸಿದ್ದರು. ಅದರ ಹಿಂದಿನ ವರ್ಷ ಅದು ೪೭,೬೪೯.೪೨ ಕೋಟಿ ರೂಗಳಷ್ಟಾಗಿತ್ತು. ಅಂದರೆ ೯೦೦೦ ಕೋಟಿ ರೂಪಾಯಿಗಳಷ್ಟು ಅಧಿಕ ಬಜೆಟ್ಟನ್ನು ಯಾವುದೇ ಆಧಾರವಿಲ್ಲದೆ ಮಂಡಿಸಲಾಗಿತ್ತು. ಆಗಲೇ ಅದನ್ನು ಸಾಲ ಮತ್ತು ಉತ್ಪ್ರೇಕ್ಷೆಯಿಂದ ಕೂಡಿದ ಬಜೆಟ್ ಎಂದು ವಿಶ್ಲೇಷಿಸಲಾಗಿತ್ತು.

ಅಲ್ಲವೋ ಎಂದು ತೀರ್ಮಾನಕ್ಕೆ ಬರುವ ರಾಜಕಾರಣಿಗಳ ಮತ್ತು ಕೆಲವು ಸರ್ಕಾರಿ ಪಂಡಿತರ ಪದ್ಧತಿ ಮುಠಾಳತನದ್ದು. ಏಕೆಂದರೆ ಅದರ ಹಿಂದೆ ಬಜೆಟ್ಟಿನಲ್ಲಿ ಘೋಶಿಸಿದ ಕಾರ್ಯಕ್ರಮಗಳೆಲ್ಲಾ ಜಾರಿಗೆ ಬರುತ್ತವೆ ಎಂಬ ಆತ್ಮವಂಚಕ ನಿರೀಕ್ಷೆಗಳಿರುತ್ತವೆ. ಆದರೆ ಬಿಜೆಪಿ ಸರ್ಕಾರದ ವಹಿವಾಟನ್ನೇ ನೋಡಿದರೆ ಬಜೆಟ್ಟಿನ ಭರವಸೆಗಳೆಲ್ಲಾಬರೀ ಬೋಗಸೆಂಬುದು ಗೊತ್ತಾಗುತ್ತದೆ. ಉದಾಹರಣೆಗೆ ಕಳೆದ ಸಾಲಿನಲ್ಲಿ ಯಡಿಯೂರಪ್ಪನವರು ೫೫,೨೭೩ ಕೋಟಿ ರೂಪಾಯಿಗಳ ಅಯವ್ಯಯ ಪತ್ರವನ್ನು ಮಂಡಿಸಿದ್ದರು. ಅದರ ಹಿಂದಿನ ವರ್ಷ ಅದು ೪೭,೬೪೯.೪೨ ಕೋಟಿ ರೂಗಳಷ್ಟಾಗಿತ್ತು. ಅಂದರೆ ೯೦೦೦ ಕೋಟಿ ರೂಪಾಯಿಗಳಷ್ಟು ಅಧಿಕ ಬಜೆಟ್ಟನ್ನು ಯಾವುದೇ ಆಧಾರವಿಲ್ಲದೆ ಮಂಡಿಸಲಾಗಿತ್ತು. ಆಗಲೇ ಅದನ್ನು ಸಾಲ ಮತ್ತು ಉತ್ಪ್ರೇಕ್ಷೆಯಿಂದ ಕೂಡಿದ ಬಜೆಟ್ ಎಂದು ವಿಶ್ಲೇಷಿಸಲಾಗಿತ್ತು.

ವಾಸ್ತವವಾಗಿ ೨೦೦೮-೦೯ರ ಸಾಲಿನಲ್ಲಿ ತೆರಿಗೆಗಳಿಂದ ೪೮೦೦೦ ಕೋಟಿ ರೂ. ಸಂಗ್ರಹವಾಗುತ್ತದೆ ಎಂದು ನಿರೀಕ್ಷಿಸಲಾಗಿದ್ದರೂ ಬಜೆಟ್ಟಿನ ರಿವೈಸ್ಡ್ ಎಸ್ಟಿಮೇಟ್‌ಗಳ ಪ್ರಕಾರ ಆಗಿರುವ ತೆರಿಗೆ ಸಂಗ್ರಹ ಕೇವಲ ೪೩೦೦೦೦ ಕೋಟಿ ರೂ.ಮಾತ್ರ, ಅಂದರೆ ಸರ್ಕಾರದ ಪ್ರಕಾರವೇ ೫೦೦೦ ಕೋಟಿ ರೂ. ಆದಾಯ ಖೋತಾ! ಅದೂ ಆರ್ಥಿಕ ಬಿಕ್ಕಟ್ಟು ಇನ್ನೂ ಪ್ರಾರಂಭವಾಗದ ಕಾಲದಲ್ಲಿ. ಈಗ ಆರ್ಥಿಕ ಬಿಕ್ಕಟ್ಟು ಪ್ರಾರಂಭವಾಗಿದೆ. ಸರ್ಕಾರದ ಸಮೀಕ್ಷೆಯ ಪ್ರಕಾರವೇ ರಾಜ್ಯದ ಪ್ರಮುಖ ಆದಾಯ ಮೂಲವಾಗಿರುವ ಮೋಟಾರು ವಾಹನ ತೆರಿಗೆ, ಮುದ್ರಾಂಕ ತೆರಿಗೆ, ಮಾರಾಟ ತೆರಿಗೆ ಇನ್ನಿತ್ಯಾದಿಗಳಲ್ಲಿ ಗಮನಾರ್ಹ ಕುಸಿತವಾಗಿದೆ. ಮತ್ತು ಬರಲಿರುವ ದಿನಗಳಲ್ಲಿ ಅದಿನ್ನೂ ಜಾಸ್ತಿಯಾಗಲಿದೆ. ಅಂದರೆ ರಾಜ್ಯದ ಆದಾಯ ಕಡಿಮೆಯಾಗುತ್ತದೆ ಎಂದಾಯಿತಲ್ಲವೇ? ಆಗ ಸರ್ಕಾರ ಸಹಜವಾಗಿ ತನ್ನ ವೆಚ್ಚವನ್ನು ಅದಕ್ಕೆ ತಕ್ಕಹಾಗೆ ತೋರಿಸಬೇಕಲ್ಲವೇ? ಆದರೆ ಬಿಜೆಪಿ ಜನರಿಗೆ ಚುನಾವಣೆ ಟೋಪಿ ಹಾಕುವ ಪಕ್ಕೈಕ ಉದ್ದೇಶದಿಂದ, ತನ್ನ ಆದಾಯದ ಮೂಲ ಕಳೆದ ವರ್ಷಕ್ಕಿಂತ ಕಡಿಮೆಯಾಗಿದ್ದರೂ, ವೆಚ್ಚದ ಗಾತ್ರವನ್ನು ಕಳೆದ ವರ್ಷಕ್ಕಿಂತ ೩೦೦೦ ಕೋಟಿ ರೂ. ಹೆಚ್ಚಿಸಿ ೫೮೦೩೧ ಕೋಟಿ ರೂ.ಗಳಿಗೆ ನಿಗದಿ ಪಡಿಸಿದೆ. ಹಾಗೂ ತನ್ನೆಲ್ಲಾ ಬಜೆಟ್ ಪ್ರಸ್ತಾಪಗಳನ್ನೂ ಇದಕ್ಕೆ ತಕ್ಕ ಹಾಗೆ ರೂಪಿಸಿದೆ. ಅಂದರೆ ಬೊಕ್ಕಸದಲ್ಲಿ ಕಾಸಿಲ್ಲ ಎಂದು ಗೊತ್ತಿದ್ದರೂ ಬೋಗಸ್ ಯೋಜನೆಗಳನ್ನೂ ಬುರುಡೆ ಕಾರ್ಯಕ್ರಮಗಳನ್ನೂ ಘೋಷಿಸಿದೆ.

ಕಳೆದ ವರ್ಷ ಯಡ್ಡಿ ಸರ್ಕಾರ ಘೋಶಿಸಿದ ಯೋಜನೆಗಳಲ್ಲಿ ಶೇ.೩೦ರಷ್ಟು ಸಹ ಅನುಷ್ಟಾನಕ್ಕೆ ಬರಲಿಲ್ಲ. ಕಳೆದ ಸಾಲಿನಲ್ಲಿ ಒಟ್ಟಾರೆ ಯೋಜನಾ ವೆಚ್ಚ ೨೪೦೦೦ ಕೋಟಿ ರೂ.ಗಳಷ್ಟಿದ್ದರೆ ೨೦೦೯ರ ಜನವರಿ ೧೯ ರ ವೇಳೆಗೆ ೧೦,೦೦೦ ಕೋಟಿ ರೂ.ಗಳಷ್ಟು ಸಹ ವೆಚ್ಚವಾಗಿರಲಿಲ್ಲ. ಅಥವಾ ಆ ಬಾಬತ್ತಿಗೆ ಹಂಚಿಕೆಯಾಗಿರಲಿಲ್ಲ. ಮಠಮಾನ್ಯಗಳಿಗೆ ಕೊಟ್ಟ ಹಣವನ್ನು ಬಿಟ್ಟು! ಈ ವರ್ಷವೂ ಸಹ ಯಾವ ಹೊಸ ತೆರಿಗೆಯನ್ನೂ ಹಾಕದೆ ಅಂದರೆ ಯಾವ ಹೊಸ ಆದಾಯ ಮೂಲವೂ ಇಲ್ಲದೆ ೧೫,೦೦೦ ಕೋಟಿಗೂ ಹೆಚ್ಚು ಹೊಸ ಕಾರ್ಯಕ್ರಮಗಳನ್ನು ಘೋಷಿಸಲಾಗಿದೆ. ಹಣವೇ ಇಲ್ಲವಾದ್ದರಿಂದ ಅದರಲ್ಲಿ ಅರ್ಧಕ್ಕಿಂತ ಹೆಚ್ಚಿಗೆ ಭಾಗ ಅನುಷ್ಟಾನಕ್ಕೆ ಬರುವುದಿಲ್ಲ. ಆದರೆ ಅಷ್ಟರೊಳಗೆ ಸಂಸತ್ ಚುನಾವಣೆ ನಡೆದುಬಿಟ್ಟಿರುತ್ತದೆ! ಇದು ಬಜೆಟ್ ಭಾಷಣದಲ್ಲಿ ಪ್ರಿಂಟಾಗದಿದ್ದ ರಹಸ್ಯ!

ಈ ಕುತಂತ್ರವನ್ನು ಈ ಸಾಲಿನ ಬಜೆಟ್ಟಿನ ಒಂದೆರಡು ಉದಾಹರಣೆಗಳೇ ಸ್ಪಷ್ಟಪಡಿಸುತ್ತವೆ.

ಬಿಜೆಪಿ ಪಕ್ಷ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಕಡು ಬಡವರಿಗೆ ಎರಡು ರೂಪಾಯಿಗೆ ಕೆಜಿ ಅಕ್ಕಿ ಕೊಡುವುದಾಗಿ ಭರವಸೆ ನೀಡಿತ್ತು. ಅಧಿಕಾರಕ್ಕೆ ಬಂದ ಮೇಲೆ ತನ್ನ ಮೊದಲ ಬಜೆಟ್ಟಿನಲ್ಲಿ ಅದರ ಪ್ರಸ್ತಾಪವನ್ನೇ ಮಾಡಲಿಲ್ಲ. ನಂತರ ಕಳೆದ ಇಡಿ ವರ್ಷ ನಿಜವಾದ ಕಡುಬಡವರನ್ನು ಗುರುತಿಸಿ ಅವರಿಗೆ ತಾತ್ಕಾಲಿಕ ಕಾರ್ಡು ಕೊಟ್ಟು ರಿಯಾಯತಿ ದರದಲ್ಲಿ ಆಹಾರ ಧಾನ್ಯ ಕೊಡುವುದಾಗಿ ಹೇಳಿತ್ತು. ಅದನ್ನು ನಂಬಿಕೊಂಡ ಬಡಜನ ಪೊಲೀಸರ ಲಾಠಿಗಳನ್ನು ತಿನ್ನುತ್ತಾ ಕಾರ್ಡ್‌ಗಾಗಿ ಕಚೇರಿಗಳ ಮುಂದೆ ಅನ್ನಾಹಾರ ತೊರೆದು ಕ್ಯೂ ಹಚ್ಚಿದರು. ಸರ್ಕಾರವೂ ಸಹ ರಾಜ್ಯದಲ್ಲಿ ಒಟ್ಟು ಒಂದು ಕೋಟಿ ಹತ್ತು ಲಕ್ಷ ಅರ್ಹ ಬಡ ಕುಟುಂಬಗಳಿವೆ. ಅವರಲ್ಲಿ ೭೫ ಲಕ್ಷಕ್ಕಾದರೂ ಬಿಪಿಎಲ್ ಕಾರ್ಡ್ ಮತ್ತು ರಿಯಾಯತಿ ರೇಷನ್ ಒದಗಿಸುವುದಾಗಿ ಹೇಳಿತು. ೨೦೦೪ರಲ್ಲಿ ಸರ್ಕಾರದ ಅಂಕಿಅಂಶದ ಪ್ರಕಾರವೇ ಆಗ ಗುರುತಿಸಲಾಗಿದ್ದ ೪೦ ಲಕ್ಷ ಬಡವರಿಗೆ ರಿಯಾಯತಿ ದರದಲ್ಲಿ ಆಹಾರ ಧಾನ್ಯ ಒದಗಿಸಲು ೬೦೦ ಕೋಟಿ ರೂ.

ಲೆಕ್ಕಾಚಾರದಂತೆ ಈಗ ಕೇಂದ್ರ ಸರ್ಕಾರ ನಿಗದಿ ಪಡಿಸಿರುವ ಬಡತನ ರೇಖೆಗಳ ಅನ್ವಯ ಹೇಳಲಾಗಿದೆ. ಮತ್ತು ಸರ್ಕಾರವೇ ಹೇಳುವಂತೆ ಅರ್ಹ ಫಲಾನುಭವಿಗಳ ಸಂಖ್ಯೆ ೭೫ ಲಕ್ಷವಾಗಿದೆ. ಹಾಗಿದ್ದಲ್ಲಿ ೪೦ ಲಕ್ಷ ಜನರಿಗೆ ೬೦೦ ಕೋಟಿ ವೆಚ್ಚವಾಗುತ್ತಿದ್ದ ಕಡೆ ೭೫ ಲಕ್ಷ ಜನರಿಗೆಲ್ಲಾ ರಿಯಾಯತಿ ರೇಷನ್ ಪೂರೈಸಬೇಕೆಂದರೆ ಕನಿಷ್ಟ ೧೨೦೦ ಕೋಟಿ ಬೇಕಲ್ಲವೇ? ಆದರೆ, ಸರ್ಕಾರ ಈ ಬಾಬತ್ತಿಗೆ ತೆಗೆದಿಟ್ಟಿರುವ ಹಣ ಕೇವಲ ೭೫೦ ಕೋಟಿ. ಅದೂ ಕೊಡಲು ಸಾಧ್ಯವಾಗುವುದು ಒಟ್ಟಾರೆ ೫೮೦೦೦ ಕೋಟಿಯಷ್ಟು ಆದಾಯವನ್ನು ರೂಢಿಸಿಕೊಂಡಾಗ!

ಅದೇ ರೀತಿ ಉಚಿತ ವಿದ್ಯುತ್ ಎಂಬ ಪ್ರಹಸನ. ಉಚಿತ ವಿದ್ಯುತ್ ಇರಲಿ ಕಾಸು ಕೊಟ್ಟರೂ ವಿದ್ಯುತ್ ಕೊಡದ ಪರಿಸ್ಥಿತಿಯಲ್ಲಿ ಸರ್ಕಾರವಿರುವಾಗ ಮತ್ತೆ ಬಿಜೆಪಿ ಸರ್ಕಾರ ೧೭ ಲಕ್ಷ ರೈತರಿಗೆ ಉಚಿತ ವಿದ್ಯುತ್ ನೀಡಲು ೨೧೦೦ ಕೋಟಿ ರೂ. ಎತ್ತಿಟ್ಟಿರುವುದಾಗಿ ಕೊಚ್ಚಿಕೊಂಡಿದೆ. ಕಳೆದ ಬಾರಿಯೇ ಸ್ಪಷ್ಟವಾಗಿರುವಂತೆ ಅಷ್ಟು ಹಣ ಉಚಿತ ವಿದ್ಯುತ್ತಿನ ಬಾಬತ್ತಿಗಲ್ಲ. ಬದಲಿಗೆ ಈಗಾಗಲೇ ನೀಡುತ್ತಿರುವ ರಿಯಾಯತಿ ವಿದ್ಯುತ್ತಿಗೆ ಮತ್ತು ರೈತರ ಪಂಪ್‌ಸೆಟಿಗೆ ಮೀಟರ್ ಹಾಕಿ ಬಾಕಿ ವಸೂಲಿ ಮಾಡುವುದಕ್ಕೆ ಮತ್ತು ಕ್ರಮೇಣ ವಿದ್ಯುತ್ ಸರಬರಾಜನ್ನು ಖಾಸಗೀಕರಿಸುವುದಕ್ಕೆ!

ಇದಲ್ಲದೆ ರೈತರಿಗೆ ಸಾವಯವ ಕೃಷಿ ಕಲಿಸಲು

ಸಾವಯವ ಕೃಷಿ ಕಲಿಸಲು ೧೦೦ ಕೋಟಿ ಎತ್ತಿಟ್ಟಿರುವುದಾಗಿ ಹೇಳುವ ಸರ್ಕಾರ ಅದೇ ಉಸಿರಿನಲ್ಲಿ ರೈತರಿಗೆ ಆಧುನಿಕ ಕೃಷಿ ಕಲಸಲು ಈ ಸಾಲಿನಲ್ಲೂ ಸಾವಿರ ರೈತರನ್ನೂ ವಿದೇಶಕ್ಕೆ ಕರೆದೊಯ್ಯಲು ನೂರು ಕೋಟಿ ಎತ್ತಿಟ್ಟಿರುವುದಾಗಿಯೂ ಹೇಳುತ್ತದೆ.

೧೦೦ ಕೋಟಿ ಎತ್ತಿಟ್ಟಿರುವುದಾಗಿ ಹೇಳುವ ಸರ್ಕಾರ ಅದೇ ಉಸಿರಿನಲ್ಲಿ ರೈತರಿಗೆ ಆಧುನಿಕ ಕೃಷಿ ಕಲಸಲು ಈ ಸಾಲಿನಲ್ಲೂ ಸಾವಿರ ರೈತರನ್ನೂ ವಿದೇಶಕ್ಕೆ ಕರೆದೊಯ್ಯಲು ನೂರು ಕೋಟಿ ಎತ್ತಿಟ್ಟಿರುವುದಾಗಿಯೂ ಹೇಳುತ್ತದೆ.

ಈ ಶಕುನಿ ಕುತಂತ್ರಗಳನ್ನು ಮಾತ್ರವಲ್ಲದೆ ಕೋಮುವಾದಿ ಮತ್ತು ಫ್ಯೂಡಲ್ ಅಜೆಂಡಾಗಳನ್ನು ಬಿಜೆಪಿ ಸರ್ಕಾರ ಸಂತೆಯೊಳಗೆ ಸಮಾರಾಧನೆಯೆಂಬಂತೆ ತೂರಿಸಿದೆ. ಈ ಸಾಲಿನಲ್ಲೂ ಚುನಾವಣೆಯಲ್ಲಿ ಪ್ರಮುಖವಾಗುವ ಎಲ್ಲಾ ಜಾತಿಗಳ ಮಠಗಳಿಗೆ ಮತ್ತು ಐತಿಹಾಸಿಕ ವ್ಯಕ್ತಿಗಳ ಸ್ಮಾರಕಕ್ಕೆ ಏನಿಲ್ಲವೆಂದರೂ ೨೦೦ ಕೋಟಿ ರೂ.ಗಳನ್ನು ಎತ್ತಿಡಲಾಗಿದೆ. ರೈತರಿಗೆ ಗೋವಿನ ಬಗ್ಗೆ ಇರುವ ಋಣೀ ಭಾವನೆಯನ್ನು ಕೋಮುವಾದೀಕರಿಸಲು ಮತ್ತು ತಮ್ಮ ಮುಸ್ಲಿಂ ವಿರೋಧಿ ಅಜೆಂಡಾವನ್ನು ಹಳ್ಳಿ ಹಳ್ಳಿಗೆ ತೆಗೆದುಕೊಂಡು ಹೋಗಲು ತಾಲ್ಲೂಕಿಗೊಂದು ಗೋ ಶಾಲೆಯನ್ನು ಮತ್ತು ಅದಕ್ಕೆ ೧೦ ಲಕ್ಷ ರೂ.ಗಳನ್ನು ಎತ್ತಿಡಲಾಗಿದೆ. ಮಠಗಳು ಮತ್ತು ಪ್ರಭಾವೀ ಫ್ಯೂಡಲ್ ಶಕ್ತಿಗಳು ಭೂಮಿಯ ಮೇಲಿನ ತಮ್ಮ ಸ್ವಾಮ್ಯವನ್ನು ಉಳಿಸಿಕೊಳ್ಳಲು ಅನುಕೂಲವಾಗುವಂತೆ ಭೂ ಸುಧಾರಣಾ ಕಾಯಿದೆಗೆ ತಿದ್ದುಪಡಿ ತರುವ ಪ್ರಸ್ತಾಪವನ್ನು ಮಾಡಲಾಗಿದೆ.

ಇವಲ್ಲದೆ ಜಾಗತಿಕ ಬಿಕ್ಕಟ್ಟಿನಿಂದ ಹೊರಬರಲು ಕೇಂದ್ರ ಸರ್ಕಾರವೂ ಒಳಗೊಂಡಂತೆ ಬಿಜೆಪಿ ಸರ್ಕಾರವು ಜಾರಿಗೊಳಿಸುತ್ತಿರುವ ನೀತಿಗಳು ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗದ ವಿಲಾಸಿ ಜೀವನಕ್ಕೆ ಪೂರಕವಾಗಿದೆಯೇ ಹೊರತು ಬಡಜನತೆಯ ಆರ್ಥಿಕ ಪುನಶ್ಚೇತನಕ್ಕೆ ಸಹಾಯಕವಾಗಿಲ್ಲ. ಈ ಬಜೆಟ್ಟಿನಲ್ಲಿ ಸರ್ಕಾರ ಪ್ರಸ್ತಾಪಿಸಿರುವಂತೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ರೈತರಿಗೆ ಒದಗಿಸುವ ಶೇ.೩ ರ ಸಾಲದ ಫಲಾನುಭವಿಗಳು ಮಧ್ಯಮ ಮತ್ತು ಶ್ರೀಮಂತ ರೈತರೇ ವಿನಃ ಆತ್ಮಹತ್ಯೆಯ ಅಂಚಿನಲ್ಲಿರುವ ಸಣ್ಣ ಮತ್ತು ಅತಿ ಸಣ್ಣ ರೈತರಲ್ಲ. ಅಸಲು ಅವರು ವಾಣಿಜ್ಯ ಬ್ಯಾಂಕುಗಳಿರಲಿ ಕೋ ಅಪರೇಟಿವ್ ಬ್ಯಾಂಕುಗಳಿಂದಲೂ ಸಾಲ ಮಾಡಲಾಗದವರು! ಅದೇ ರೀತಿ ಈ ಸಾರಿ ಬಜೆಟ್ಟಿನಲ್ಲಿ ಅತಿ ಹೆಚ್ಚು ಪಾಲು ಪಡೆದುಕೊಂಡಿರುವ ನಗರಾಭಿವೃದ್ಧಿಯ ಪ್ರಧಾನ ಫಲಾನುಭವಿಗಳೂ ಸಹ ಮೇಲ್ ಮಧ್ಯಮ ವರ್ಗದವರು ಮತ್ತು ಅವರಿಗಾಗಿ ಮೂಲಭೂತ ಸೌಕರ್ಯ ಒದಗಿಸುವ ಉದ್ಯಮಪತಿಗಳು. ನಗರಾಭಿವೃ

ಕಾವ್ಯ

ಕ್ಷಮಿಸು



ಹರಯ ಉಕ್ಕಿ ಚಿಮ್ಮುತ್ತಿದೆ
ಈಟಿಯ ಅಲುಗಿನಂತೆ
ಹಿಮಗಟ್ಟಿದ ಶಲಾಕೆಯಂತೆ
ಜೀವದೊಡಲ ಜಗ್ಗಿ ಎಳೆದಂತೆ
ಹಾಲಿನಂಥ ನದಿಯಲ್ಲಿ ಭಯದ ವಿಷ
ಕಣ್ಣಂಚಿನ ತಿರಸ್ಕಾರ
ತುಟಿಯ ಮೇಲಿನ ಅಣಕ
ಅಯ್ಯೋ ಗೆಳೆಯ!
ಕಾಷ್ಠದೊಳಗೆ ಚಿಗುರಿನ ಬೇರು ತಿಳಿ
ಚಿಗುರಿಗೆ ಬೆಂಕಿ ಬಿದ್ದರೆ
ಕ್ಷಮಿಸಿ ಬಿಡು.

○ ಕೆ.ಬಿ. ಸರಸ್ವತಿ

ದ್ಧಿಯ ಹೆಸರಲ್ಲಿ ಸರ್ಕಾರ ಮತ್ತು ಖಾಸಗಿ ಜಂಟಿ ಪಾಲುದಾರಿಕೆಯ ಹೆಸರಲ್ಲಿ ಜಾರಿಯಾಗುತ್ತಿರುವ ಯೋಜನೆಗಳೆಲ್ಲಾ ತಮ್ಮ ಸ್ವಯಂ ಕೃತ ಅಪರಾಧಗಳಿಂದ ನಷ್ಟದಲ್ಲಿರುವ, ಕಷ್ಟದಲ್ಲಿರುವ ದೊಡ್ಡ ದೊಡ್ಡ ಉದ್ಯಮಗಳಿಗೆ ಅಪಾರ ಲಾಭ ಗಳಿಸಿಕೊಡಲೆಂದೇ ಜಾರಿಯಾಗುತಿರುವ ಯೋಜನೆಗಳಾಗಿವೆ. ಕಾವೇರಿ ನೀರು ಸರಬರಾಜನ್ನು ಟಾಟಾಗೆ ವಹಿಸಿಕೊಟ್ಟಿರುವುದು, ಸತ್ಯಂ ಜೊತೆಗೆ ಆರೋಗ್ಯ ಕವಚ ಯೋಜನೆ ಮಾಡಿಕೊಂಡಿರುವುದು, (ಈ ಸಾಲಿನಲ್ಲಿ ಈ ಬಾಬತ್ತಿಗೆ ಖಾಸಗಿ ಸಹಯೋಗದಲ್ಲಿ ೨೨೧ ಕೋಟಿ ಖರ್ಚಿನಲ್ಲಿ ೫೫೦ ಆಂಬ್ಯುಲೆನ್ಸ್‌ಗಳನ್ನು ಕೊಳ್ಳಲಾಗುವುದಂತೆ!) ಇವೆಲ್ಲಾ ಕೆಲವು ಉದಾಹರಣೆಗಳಷ್ಟೆ. ಇದು, ಬಿಜೆಪಿಯೆಂದರೆ ಕೇವಲ ಅಲ್ಪಸಂಖ್ಯಾತರನ್ನು ಕೊಲ್ಲುವ ತ್ರಿಶೂಲಗಳು ಮಾತ್ರವಲ್ಲ, ಕಡುಬಡವರ ಕತ್ತು ಕೊಯ್ಯಲೆಂದು ಕಾರ್ಪೋರೇಟ್ ಉದ್ಯಮಿಗಳ ಕೈಯಲ್ಲಿರುವ ಕತ್ತಿಗಳು ಸಹ ಎಂದು ಸ್ಪಷ್ಟಪಡಿಸುತ್ತದೆ. ಇದು ಫ್ಯಾಸಿಷ್ಟರ ಅಸಲಿ ರೂಪ.

ಬಿಜೆಪಿಯ ಈ ಫ್ಯಾಸಿಸ್ಟ್ ಸ್ವರೂಪ ಅದು ಕಾನೂನೂ ಸುವ್ಯವಸ್ಥೆ ಕ್ಷೇತ್ರದಲ್ಲಿ ತರಬಯಸಿರುವ 'ಸುಧಾರಣೆಗಳಿಂದ' ಇನ್ನಷ್ಟು ಸ್ಪಷ್ಟವಾಗುತ್ತದೆ. ಮೊದಲನೆಯದಾಗಿ ಪೊಲೀಸ್ ವ್ಯವಸ್ಥೆಯ ಸುಧಾರಣೆಯ ಬಗ್ಗೆ ಸಲಹೆ ನೀಡಲು ಮಳೀಮಠ್ ಸಮಿತಿಯನ್ನು ಮಾಡಲಾಗಿದೆ. ಈ ಮಹಾಶಯರು ಈ ದೇಶದಲ್ಲಿ ಪೋಟಾ ಮತ್ತು ಟಾಡಾ ದಂಥ ಎಕ್ಸ್ಟ್ರಾರ್ಡಿನರಿ ಕಾಯಿದೆಗಳಲ್ಲಿದ್ದ ಮಾನವ ಹಕ್ಕು ಹರಣ ಮಾಡುವಂತ ಅಂಶಗಳನ್ನು ಸಿಆರ್‌ಪಿಸಿ ಮತ್ತು ಐಪಿಸಿಗಳಲ್ಲೇ ಸೇರಿಸಬೇಕು ಎಂದು ಸಲಹೆ ನಿಡಿದವರು. ಇಂದು ದೇಶಾದ್ಯಂತ ವಕೀಲರು ಸಿಆರ್‌ಪಿಸಿ ಯ ಸೆಕ್ಷನ್ ೩೧ ಮತ್ತು ಸೆಕ್ಷನ್ ೩೦೯ಕ್ಕೆ ತರಬೇಕೆಂದಿರುವ ತಿದ್ದುಪಡಿಯ ವಿರುದ್ಧ ಹೋರಾಡುತ್ತಿದ್ದಾರಲ್ಲವೇ? ಅದನ್ನು ಶಿಫಾರಸ್ಸು ಮಾಡಿದವರು ಈ ಮಹಾಶಯರೇ. ಇವಲ್ಲದೆ ಸರ್ಕಾರಿ ನೌಕರರನ್ನು ಮತ್ತು ನಾಗರೀಕರನ್ನು ಗುಲಾಮರನ್ನಾಗಿಸುವ ಎಸ್ಮಾ ಕಾಯಿದೆಯನ್ನು ವಿಸ್ತರಿಸುವ ಮತ್ತು ಜನವಿರೋಧಿ ಕೋಕಾ ಕಾಯಿದೆಯನ್ನು ಜಾರಿಗೆ ತರುವ ಪ್ರಸ್ತಾಪವನ್ನು ಸಹ ಈ ಫ್ಯಾಸಿಷ್ಟ್ ಸರ್ಕಾರ ಪ್ರಸ್ತಾಪಿಸಿದೆ. ಇದಲ್ಲದೆ ಮುಗ್ದರನ್ನು ಭಯೋತ್ಪಾದಕರ ಮತ್ತು ನಕ್ಸಲರ ಹೆಸರಲ್ಲಿ ಬೇಟೆಯಾಡಲು ಮಲೆನಾಡಿನಲ್ಲಿ ಇನ್ನೂ ಐದು ಪೊಲೀಸ್ ಸ್ಟೇಷನ್‌ಗಳನ್ನು ತೆರೆಯಲು ಮತ್ತು ಮೂರು ಇಂಡಿಯನ್ ರಿಸರ್ವ್ ಬೆಟಾಲಿಯನ್‌ಗಳು ಸ್ಥಾಪಿಸಲು ಸಹ ಸರ್ಕಾರ ಮುಂದಾಗಿದೆ. ಬಡಜನರಿಗೆ ಪಡಿತರ ನೀಡಲು ಹಣ ಇಲ್ಲದಿದ್ದರೂ ಇದಕ್ಕೆ ಮಾತ್ರ ಖಚಿತವಾಗಿ ಹಣ ದೊರೆಯುವುದರ ಬಗ್ಗೆ ಯಾರಿಗೂ ಸಂಶಯವಿರಬೇಕಿಲ್ಲ!

ಬಜೆಟ್ ಭಾಷಣದ ಪ್ರಾರಂಭದಲ್ಲಿ ಯಡಿಯೂರಪ್ಪನವರು ತಮ್ಮ ಬಜೆಟ್ ಭಿಕ್ಷುಕ ಮತ್ತು ಭೂಪತಿಗಳಿಬ್ಬರನ್ನೂ ಸಮಾನವಾಗಿ ನೋಡುವ ಬಜೆಟ್ ಎಂದು ಹೇಳಿಕೊಳ್ಳುತ್ತಾರೆ. ಆದರೆ ಸಮಾನತೆ ಇದ್ದ ಕಡೆ ಭಿಕ್ಷುಕ ಮತ್ತು ಭೂಪತಿಗಳೆಂಬ ವರ್ಗಗಳೇ ಇರುವುದಿಲ್ಲ ವೆಂಬುದು ಬಿಜೆಪಿಯಂತ ಅಸಮಾನತೆಯನ್ನೇ ಸಾಮಾಜಿಕ ನಿಯಮವೆನ್ನುವ ಫ್ಯಾಸಿಷ್ಟರಿಗೆ ಅರ್ಥವಾಗುವುದಿಲ್ಲ. ಅದು ಯಾವತ್ತೂ ದುರ್ಬಲರನ್ನು ಮತ್ತಿನಲ್ಲೋ, ಅಮಾನತ್ತಿನಲ್ಲೋ ಇಟ್ಟು ಪ್ರಬಲರ ಪರವಾಗಿ ರಾಜಕಾರಣ ಮಾಡುತ್ತದೆ. ಈ ಬಜೆಟ್ ಕೂಡಾ ಅಷ್ಟೆ ಭಿಕ್ಷುಕರ ಹೆಸರಿನಲ್ಲಿ ಭೂಪತಿಗಳ ಪರವಾದ ಬಜೆಟ್! □

ತಾಯ್ನುಡಿ ದಿನಾಚರಣೆ: ಏನಿದರ ಹೆಚ್ಚಳ?

(25ನೇ ಪುಟದಿಂದ)

ಹಾಗೂ ದೇಶೀಯತೆಯ ವಿಸ್ತಾರವೇನು ಎಂಬುದನ್ನು ಪರಿಚಯಿಸುತ್ತೆ. ಹಾಗಾಗಿ ತಾಯ್ನುಡಿಯು ಅಗಾಧ ಸಾಮಾಜಿಕ-ಸಾಂಸ್ಕೃತಿಕ ಸಂವಹನವನ್ನು ಏರ್ಪಡಿಸುತ್ತೆ ಮತ್ತು ಪ್ರತಿ-ಸಂಸ್ಕೃತಿ [ಕ್ರಾಸ್-ಕಲ್ಚರಲ್] ಸಂವ ಹನಕ್ಕೆ ಹೆಚ್ಚಿನ ಆದ್ಯತೆ ಸಿಗುತ್ತೆ ಇದರಿಂದ ಬಹುಭಾಷಿಕ-ಬಹು ಸಾಂಸ್ಕೃತಿಕ ಸಂದರ್ಭವು ಜನರಲ್ಲಿ ಸಹಜ ಐಕ್ಯತೆಯನ್ನು ಮೂಡಿಸುತ್ತೆ.

ಆಧುನೀಕರಣ ಪ್ರಕ್ರಿಯೆ ಪ್ರಪಂಚದಾದಂತ್ಯ ಆರಂಭಗೊಳ್ಳುತ್ತಿದ್ದಂತೆ ದುರ್ಬಲ ಮತ್ತು ಸಣ್ಣ ಸಮುದಾಯದ ತಾಯ್ನುಡಿಗಳು ಅವಸಾನಗೊಳ್ಳುವ ಪ್ರಕ್ರಿಯೆಗಳೂ ಶುರುಗೊಂಡವು. ಶಿಕ್ಷಣ, ಉದ್ಯೋಗ ಮತ್ತು ಮಾಧ್ಯಮ ದಂತಹ ವಲಯಗಳಲ್ಲಿ ಅಧಿಕಾರಿಯುತ ಭಾಷೆಗಳಿಗೆ ಹೆಚ್ಚು ಹೆಚ್ಚು ಬೇಡಿಕೆಗಳು ಉಂಟಾದವು. ಅಧಿಕಾರಿಯುತ ವಲಯಗಳಾದ ಆಡಳಿತ, ಸರಕಾರ, ವಾಣಿಜ್ಯ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಅವಕಾಶಗಳನ್ನು ಪಡೆಯ ಬೇಕಂದರೆ ಅಧಿ ಕಾರದ ಭಾಷೆಗಳನ್ನು ರೂಢಿಸಿಕೊಳ್ಳುವ ಜರೂರಿತ್ತು. ಈ ಪ್ರಕ್ರಿಯೆಯು ಜಾಗತೀಕರಣದ ತೀವ್ರತೆ ಹೆಚ್ಚಾದಂತೆ ತಾಯ್ನುಡಿಗಳ ವಿನಾಶವೂ ಹೆಚ್ಚಾಯಿತು. ಯಾಕಂದರೆ, ಎಲ್ಲ ಕ್ರಿಯಾತ್ಮಕ ವಲಯಗಳಲ್ಲಿ ಇಂಗ್ಲಿಶ್‌ನ ಪ್ರಾಬಲ್ಯ ಹೆಚ್ಚಾದುದ್ದೆ ಇದಕ್ಕೆ ಮುಖ್ಯ ಕಾರಣ. ಈ ಪ್ರಕ್ರಿಯೆಯ ಪರಿಣಾಮದಿಂದ ಜಗತ್ತಿನ ಎಷ್ಟೋ ಸಣ್ಣ-ಪುಟ್ಟ ಭಾಷೆಗಳು ವಿನಾಶದ ಅಪಾಯದಲ್ಲಿವೆ. ಬಿಬಿಸಿ ದೂರದರ್ಶನದ ಜನವರಿ 24 2008ರ ಸಂಶೋಧನ ವರದಿ ಪ್ರಕಾರ ಅಮೇರಿಕದ ಅಲಸ್ಕ ಎನ್ನುವ ಭಾಷೆ ಅವಸಾನ ಹೊಂದಿತು. ಇದಕ್ಕೆ ಕಾರಣ ಈ ಭಾಷೆಯನ್ನು ಮಾತನಾಡುವ ಕೊನೆಯ ವ್ಯಕ್ತಿ ಸಾವು. ಈ ವ್ಯಕ್ತಿಯ ಎಂಟು ಜನ ಮಕ್ಕಳಿಗೆ ಇಂಗ್ಲಿಶ್‌ನ ಕಡ್ಡಾಯದಿಂದ ತಮ್ಮ ಭಾಷೆಯನ್ನು ಮಾತನಾಡುವ ಅವಕಾಶವಿಲ್ಲ. ಈ ಪರಿಸ್ಥಿತಿ ಇಲ್ಲಿಯೂ ಘಟಿಸಬಹುದು.

ಇಲ್ಲಿಯ ಪ್ರಾದೇಶಿಕ ಭಾಷೆಗಳನ್ನು ಕಡ್ಡಾಯಗೊಳಿಸುವ ಕ್ರಮ ಇಲ್ಲಿಯ ಸಣ್ಣ-ಪುಟ್ಟ ಭಾಷೆಗಳ ಸಾವಿಗೆ ಕಾರಣವಾಗಬಹುದು. ಹಾಗೂ ಇಂಗ್ಲಿಶ್‌ನ ಅಗತ್ಯವನ್ನು ಗುರುತಿಸದೆ ಕೇವಲ ಆ ಭಾಷೆಯ ವ್ಯಾಮೋಹ ದಿಂದ ಮಧ್ಯಮ ವರ್ಗದ ಕನ್ನಡ ಭಾಷಿಕರ ತೀರ್ಮಾನ ಹಾಗೂ ಇವರ ಮನಸ್ಥಿತಿ ಅರಿಯದ ಸರಕಾರ ಮತ್ತು ತುಂಬಾ ಜನ ಬುದ್ಧಿಜೀವಿಗಳು ಈ ಅಪಾಯದ ಸೂಕ್ಷ್ಮ ತೆಯನ್ನು ಗುರುತಿಸದೆ ಇಂಗ್ಲಿಶ್‌ನ್ನು ಕಲಿಯಬೇಡಿ ಎನ್ನುವ ಇವರ ಬೇಡಿಕೆಗೆ ವ್ಯತಿರಿಕ್ತವಾಗಿ ಮಧ್ಯಮ ವರ್ಗದ ಜನರು ಕನ್ನಡ ವನ್ನಾದರೂ ಬಿಟ್ಟೆವು ಇಂಗ್ಲಿಶ್‌ನ್ನು ಬಿಡಲಾರೆವು ಎನ್ನುವ ಹಠದಿಂದ ಇಂಗ್ಲಿಶ್‌ನ್ನು ಕಲಿಯುತ್ತಿದ್ದಾರೆ. ಇಂತಹ ತೀರ್ಮಾನಗಳಿಂದ ಕನ್ನಡ ಅವಸಾನ ಹೊಂದಿದರೆ ಏನು ಆಶ್ಚರ್ಯವಿಲ್ಲ.

ಇದು ಕೇವಲ ಹಿಂದುಳಿದ ಸಮುದಾಯದವರು ಇಂಗ್ಲಿಷ್ ಕಲಿತರೆ ಆಗುವ ಅಪಾಯವಲ್ಲ. ಹಾಗಾಗಿ ಬಹು ಭಾಷಿಕತೆಯ ಮಹತ್ವವನ್ನರಿತು ಭಾಷಾ ನೀತಿ ಮತ್ತು ಭಾಷಾ ಯೋಜನೆಗಳು ಅನುಷ್ಠಾನಗೊಳ್ಳಬೇಕು ಎನ್ನುವ ವಾದ ತುಂಬಾ ಮುಖ್ಯವಾದದ್ದು. ನಮ್ಮ ಭಾಷಾ ಯೋಜನೆಗಳು ಯಾವುದೇ ವೈಜ್ಞಾನಿಕ-ತಾಂತ್ರಿಕ ಪರಿಕಲ್ಪನೆ, ವಿಷಯಗಳನ್ನು [illegible]/[illegible] ನಿಟ್ಟಿನಲ್ಲಿ ರೂಪಗೊಳ್ಳದೆ ಇರು ವುದು ಇಂಗ್ಲಿಶ್‌ನ ಬೇಡಿಕೆಗೆ ಮುಖ್ಯ ಪ್ರೇರಣೆಯಾಗಿರಬಹುದು. ಇದರ ಪರಿಣಾಮವಾಗಿ ಸಾರ್ವಜನಿಕ ಹಾಗೂ ವೈಯಕ್ತಿಕ ವಲಯಗಳಲ್ಲಿ ತಾಯ್ನುಡಿಗಳನ್ನು ತುಂಬಾ ಕೀಳಾಗಿ ಭಾವಿಸುವ ಸ್ಥಿತಿ ಉದ್ಭವಿಸಿದೆ. ಬೆಂಗಳೂರನಂತಹ ಕಾನ್ವೆಂಟ್ ಶಾಲೆಗಳಲ್ಲಿ ಕನ್ನಡ/ಇನ್ನಾವುದೆ ಸ್ಥಳಿಯ ಭಾಷೆಗಳನ್ನು ಮಾತನಾಡಿದರೆ ದಂಡ ವಿದಿಸುವ ಕ್ರಮ ಜಾರಿಯ ಲ್ಲಿದೆ. ಈ ಕ್ರಮಕ್ಕೆ ಪೂರಕವಾಗಿ ಕನ್ನಡ/ಇನ್ನಾವುದೆ ಸ್ಥಳಿಯ ಭಾಷೆಗಳಲ್ಲಿ ಮಾತನಾಡಲು ಅಸಹ್ಯಪಡುವ ಪಾಲಕರಿಗೇನು ಕಮ್ಮಿಯಿಲ್ಲ.

ಇಂತಹ ಪರಿಸ್ಥಿತಿಗಳ ಬಿಕ್ಕಟ್ಟನ್ನು ನಿಭಾಯಿಸುವ ಮತ್ತು ತಾಯ್ನುಡಿಗಳ [ಹೆಚ್ಚಾಗಿ ಅಲ್ಪಸಂಖ್ಯಾತರ ಭಾಷೆ] ಮಹತ್ವವನ್ನು ಗುರುತಿಸಿ ಅವುಗಳನ್ನು ಸಂಗೋಪಿಸುವ ಹಾಗೂ ಉತ್ತೇಜಿಸುವ ಅಗತ್ಯದ ಹಿನ್ನಲೆಯಲ್ಲಿ ಯುನಿಸ್ಕೋ ತಾಯ್ನುಡಿ ದಿನಾಚರಣೆಯನ್ನು ಜಾರಿಗೊಳಿಸಿದೆ.

ಯುನಿಸ್ಕೋ ಸದಸ್ಯ ರಾಷ್ಟ್ರಗಳು ಈ ದಿನಾಚರಣೆ ಆಚರಿಸುವ ಮುಖೇನ ಎಲ್ಲ ತಾಯ್ನುಡಿಗಳನ್ನು ಮತ್ತು ಅವುಗಳ ಸಾಂಸ್ಕೃತಿಕ ಪರಂಪರೆಯನ್ನು ಕಾಪಾಡುವ ಹಾಗೂ ಪುನರುಜ್ಜೀವನಗೊಳಿಸಬೇಕಿದೆ ಎನ್ನುವುದು ಸ್ಪಷ್ಟ ಈ ಪ್ರಯತ್ನಗಳ ಫಲದಿಂದ ಆ ಭಾಷೆಗಳಲ್ಲಿ ಮಾತಾಡುವ, ಸಂವಾದ ಮಾಡುವ ಬಗೆಗಳು ವಿಭಿನ್ನ ಜನರ ಮಧ್ಯೆ ಒಂದು ಐಕ್ಯತೆಯ ತಿಳುವಳಿಕೆಯನ್ನು ಮೂಡಿಸುತ್ತೆ ಹಾಗೂ ಪ್ರತಿ-ಸಾಂಸ್ಕೃತಿಕ [ಕ್ರಾಸ್-ಕಲ್ಚರಲ್] ಸಂವಹನಕ್ಕೆ ಆದ್ಯತೆ ದೊರಕುವದು ಇದು ಬಹುಭಾಷಿಕ-ಬಹುಸಾಂಸ್ಕೃತಿಕ ಅಗೋಚರ ಪರಂಪರೆಯ ಉತ್ತೇಜನಕ್ಕೆ ಸಹಕಾರಿ. ಭಾಷೆಯು ಕೇವಲ ಸಂವಹನ ಮತ್ತು ತಿಳುವಳಿಕೆ ಮಾಧ್ಯಮವಾಗಿರದೆ ಒಬ್ಬ ವ್ಯಕ್ತಿ/ಒಂದು ಸಮುದಾಯದ ಸಾಂಸ್ಕೃತಿಕ ಅನನ್ಯತೆಯ ಕುರುಹು ಆಗಿದೆ.

ಇದು ಆ ವ್ಯಕ್ತಿ/ಸಮುದಾಯಕ್ಕೆ ಸಾಂಸ್ಕೃತಿಕ ಅಧಿಕಾರವನ್ನು ದಕ್ಕಿಸುವ ಕ್ರಮವೂ ಆಗಿದೆ. ಭಾಷೆಗಳನ್ನು ಗೌರವಿಸುವದರಿಂದ ವಿಭಿನ್ನ ಭಾಷಿಕ-ಸಾಂಸ್ಕೃತಿ ಸಮುದಾಯಗಳ ಮಧ್ಯ ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತವೆನ್ನುವ ಭೇದ ವನ್ನರಿಯದೆ ಸಹಜೀವನ ಮತ್ತು ಸಾಮರಸ್ಯಕ್ಕೆ ಅವಕಾಶವಿದೆ. ಇದೆಲ್ಲಕ್ಕಿಂತ ಹೆಚ್ಚಾಗಿ ಪ್ರತಿ ಸಮುದಾಯದ ಭಾಷಿಕ-ಸಾಂಸ್ಕೃ ತಿಕ ಹಕ್ಕನ್ನು ಕಾಪಾಡುವ ಅವಕಾಶ ಇರುತ್ತದೆ. ಎಷ್ಟೋ ಸಂದರ್ಭದಲ್ಲಿ ಯಾವುದೆ ಪ್ರಗತಿಯನ್ನು ಸಾಧಿಸದೆ ಅವಸಾ ನವ್ನು ಹೊಂದದೆ ಜೀವನ್ಮರಣದ ಸ್ಥಿತಿಯಲ್ಲಿರುತ್ತವೆ ಅಂದರೆ ಡಾರ್ವಿನ್‌ನ ವಿಕಾಸವಾದದ "survival of the fittest" ನಂತಹ ಸ್ಥಿತಿಯೂ ಆಗಬಹುದು. ಆದರಿಂದ ಭಾಷೆಯ ಎಲ್ಲ ಬಗೆಯ ಬೆಳವಣಿಗೆಯು ಪ್ರಾಯಶಃ ಮಾನವನ ಸೃಜ ನಾತ್ಮಕತೆಯ ಪ್ರೇರಣೆ ಆಗಬಹುದು. ಇದು ಆ ಸಮುದಾ ಯದ ಒಟ್ಟು ಸಂವಹನ ಮತ್ತು ಸಂವಾದದ ಪ್ರಾಮುಖ್ಯತೆಯ ಮಹತ್ವವನ್ನು ಎತ್ತಿ ತೋರಿಸುತ್ತೆ. □

ಶನಿದೇವರು: ಒಂದು ಚಿಂತನೆ...

ಕಂಪ್ಲಪ್ಪ ಚನ್ನಸಾಗರ

ವಿಶ್ವಕ್ಕೆ ಹೋಲಿಸಿದರೆ ಭಾರತದಲ್ಲಿ ಬಹುತೇಕ ದೇವರುಗಳು ಗುಡಿಗಳಲ್ಲಿ ಠಿಕಾಣಿ ಹೂಡಿವೆ. ಬ್ರಿಟೀಷರು ವಸಾಹತು ಭಾರತದಲ್ಲಿ ಮೊದಲಿಗೆ ಕಂಡದ್ದೇ ಗುಡಿಗಳಲ್ಲಿ. ಕಲ್ಲಲ್ಲಿ ನೀರಲ್ಲಿ ಮರದಲ್ಲಿ ದೇವರಿರುವನೆಂದು ಭ್ರಮಿಸಿ ಆರಾಧಿಸಿ ಹರಕೆಯೊಪ್ಪಿಸುವ ಪ್ರಕ್ರಿಯೆಯನ್ನು. ಭಾರತೀಯರ ಅಜ್ಞಾನ, ಮೌಢ್ಯತೆ ತಿಳಿಗೇಡಿತನಕ್ಕೆ ಬ್ರಿಟೀಷರು ಮನನೊಂದರು. ಆದಷ್ಟು ಈ ವಿಧಿಗಳಿಂದ ಜನರನ್ನು ಮುಕ್ತಗೊಳಿಸಲು ಶ್ರಮಿಸಿದರು. ಆದರೂ ಇಲ್ಲಿ ವೈಜ್ಞಾನಿಕ ಹಾಗೂ ವೈಚಾರಿಕ ಮನೋಭಾವ ಗಟ್ಟಿಗೊಳ್ಳಲಿಲ್ಲ. ಇಲ್ಲಿನ ಮತಾಂಧರೂ ಪುರೋಹಿತ ಶಾಹಿಗಳು ವಿಚಾರವಾದವನ್ನು ಬೆಳೆಯಗೊಡದೆ ಮಟ್ಟ ಹಾಕಿದರು. ಇದರ ಫಲವೇ ಇಂದು ಎಲ್ಲೆಂದರಲ್ಲಿ ಕಾಲಿಗೆ ತೊಡರುವ ಕೈಗೆ ಎಟುಕುವ ದೇವರುಗಳು! ದೇವಸ್ಥಾನಗಳು! ಈ ಹಿನ್ನಲೆಯಲ್ಲಿ ಶನಿದೇವರ ಬಗೆಗಿರುವ ಭಕ್ತಿಯ ನೆಲೆಗಳನ್ನು ಅನಾವರಣ ಮಾಡುವುದು ಈ ಲೇಖನದ ಉದ್ದೇಶವಾಗಿದೆ.

ವಿಶ್ವಕ್ಕೆ ಹೋಲಿಸಿದರೆ ಭಾರತದಲ್ಲಿ ಬಹುತೇಕ ದೇವರುಗಳು ಗುಡಿಗುಂಡಾರಗಳಲ್ಲಿ ಠಿಕಾಣಿ ಹೂಡಿವೆ. ಬ್ರಿಟೀಷರು ವಸಾಹತು ಭಾರತದಲ್ಲಿ ಮೊದಲಿಗೆ ಕಂಡದ್ದೇ ಗುಡಿಗಳಲ್ಲಿ ಕಲ್ಲಲ್ಲಿ ನೀರಲ್ಲಿ ಮರದಲ್ಲಿ ದೇವರಿರುವನೆಂದು ಭ್ರಮಿಸಿ ಆರಾಧಿಸಿ ಹರಕೆಯೊಪ್ಪಿಸುವ ಪ್ರಕ್ರಿಯೆಯನ್ನು. ಭಾರತೀಯರ ಅಜ್ಞಾನ, ಮೌಢ್ಯತೆ ತಿಳಿಗೇಡಿತನಕ್ಕೆ ಬ್ರಿಟೀಷರು ಮನನೊಂದರು. ಆದಷ್ಟು ಈ ವಿಧಿಗಳಿಂದ ಜನರನ್ನು ಮುಕ್ತಗೊಳಿಸಲು ಶ್ರಮಿಸಿದರು. ಆದರೂ ಇಲ್ಲಿ ವೈಜ್ಞಾನಿಕ ಹಾಗೂ ವೈಚಾರಿಕ ಮನೋಭಾವ ಗಟ್ಟಿಗೊಳ್ಳಲಿಲ್ಲ. ಇಲ್ಲಿನ ಮತಾಂಧರೂ ಡಾಂಭಿಕರು ಪುರೋಹಿತ ಶಾಹಿಗಳು ವಿಚಾರವಾದವನ್ನು ಬೆಳೆಯಗೊಡದೆ ಮಟ್ಟ ಹಾಕಿದರು. ಇದರ ಫಲವೇ ಇಂದು ಎಲ್ಲೆಂದರಲ್ಲಿ ಕಾಲಿಗೆ ತೊಡರುವ ಕೈಗೆ ಎಟುಕುವ ದೇವರುಗಳು! ದೇವಸ್ಥಾನಗಳು! ಈ ಹಿನ್ನಲೆಯಲ್ಲಿ ಶನಿದೇವರ ಬಗೆಗಿರುವ ಭಕ್ತಿಯ ನೆಲೆಗಳನ್ನು ಅನಾವರಣ ಮಾಡು ವುದು ಈ ಲೇಖನದ ಉದ್ದೇಶವಾಗಿದೆ.

ಬೆಳಿಬೆಳಿಗ್ಗೆ ಬಂದ ಶನಿ, ಥೂ ಶನಿಪೀಡೆ ತೊಲಗಾಚೆ, ಬೆಳಿಬೆಳಿಗ್ಗೆ ಶನಿತರ ವಕ್ಕರಿಸಬೇಡ (ಹೇಗಲೇರಬೇಡ) ಕೊಡ್ತೀನಿ ಹೋಗಣ್ಣ. ಮುಂತಾದ ವಾಕ್ಯಗಳನ್ನು ವ್ಯವಹಾರಿಕ ಜಗತ್ತಿನಲ್ಲಿ ಕೇಳಿರುತ್ತೇವೆ. ಆಡಿರುತ್ತೇವೆ. ಶನಿದೇವರು ಆಗುವ ಕೆಲಸ ಕಾರ್ಯಗಳಿಗೆ ಅಡ್ಡಿಪಡಿಸುವವನು, ಕೆಟ್ಟವನು, ಹೆಗಲೇರುವವನು, ನಿರಂತರ ಕಷ್ಟಗಳನ್ನು ಕೊಡುವವನು, ಪೀಡಿಸುವವನು ಮುಂತಾಗಿ ಜನರ ಮನಸ್ಸಿನಲ್ಲಿ ಚಿತ್ರಗೊಂಡಿದ್ದಾನೆ. ಶನಿವಾರಕ್ಕೂ ಇವನಿಗೂ ಸಂಬಂಧ ಕಲ್ಪಿಸಿದ್ದೇ, ಅವನಲ್ಲಿ ಭಯಟ ನೆಲೆ ಬೆಳೆಯಲು ಕಾರಣವಾಗಿದೆ. ಬೇರೆ ದಿನ ಇವನಿಗೆ ಪೂಜೆ ಪುನಸ್ಕಾರ ನಡೆದರೂ ಶನಿವಾರದ ಪೂಜೆಗೆ ವಿಶೇಷ ಮಹತ್ವವಿದೆ.

ಶನಿದೇವರ ಬಗೆಗಿನ ಮತ್ತೊಂದು ಭಯವೆಂದರೆ ಅವನು ನವಗ್ರಹಗಳಿಗೆ ಅಧಿಪತಿ. ನವಗ್ರಹಗಳು ಅಪಾಯಕಾರಿ ಹಾಗೂ ಅಮಂಗಳಕಾರಿ, ಅವು ಶನಿದೇವರ ಹಿಡಿತದಲ್ಲಿರುವುದರಿಂದ ಅವನನ್ನು ಪೂಜಿಸಿದರೆ ಅವು ಶುಭಫಲಗಳನ್ನು ನೀಡುತ್ತವೆ, ಎಂಬ ಸಂಬಿಕೆ ಭಕ್ತರಲ್ಲಿ ನೆಲೆ ಮಾಡಿದೆ. ಹೀಗಾಗಿ ಶನಿದೇವರ ಗುಡಿಯಿದ್ದಡೆ ನವಗ್ರಹಗಳ ಪುಟ್ಟ ಕಟ್ಟೆಯಿರುತ್ತದೆ. ಹಾಗೆ ನೋಡಿದರೆ ಗ್ರಹಗಳು ಏಳೇ! ಒಂಭತ್ತಲ್ಲ, ವಾಸ್ತವವಾಗಿ ಇದು ಮೂಢಮತಿ ಜನರ ಕಲ್ಪನೆ. ಒಟ್ಟಿನಲ್ಲಿ ಮುಗ್ಧ ಜನರಲ್ಲಿ ಭಯವನ್ನುಂಟು ಮಾಡಲು ಯಾವ್ಯಾವ ತಂತ್ರ ಅನುಸರಿಬೇಕೋ ಅವೆಲ್ಲವನ್ನು ಪುರೋಹಿತರು ಮುಂದುವರೆಸಿಕೊಂಡು ಬಂದರು.

ಶನಿದೇವರಿಗೆ ಕರ್ನಾಟಕದಲ್ಲಿ ಬಹುಬೇಡಿಕೆ ಇದೆ. ಬೆಂಗಳೂರೊಂದರಲ್ಲೇ ಹಲವು ಕಡೆ ಈತನ ಪೂಜಾ ಮಂದಿರಗಳಿವೆ. ಅವನ ರೂಪ, ಆಕಾರ, ಬಣ್ಣ, ವಾಹನ, ಆಯುಧ, ಇವೆಲ್ಲಾ ಸಹ ಜನರಲ್ಲಿ ಭಯವನ್ನು ಉದ್ದೀಪಿಸುತ್ತವೆ. ಎಲ್ಲಾ ದೇವರಂತೆ ಇದು ಕೂಡ ಮನುಷ್ಯ ನಿರ್ಮಿತ ಬೊಂಬೆ ಎಂಬುದನ್ನು ಅರಿಯದೆ ಮುಗ್ಧರು ಬುದ್ಧಿವಂತರೆನ್ನದೆ ಪ್ರತಿ ಶನಿವಾರ, ಶ್ರಾವಣದಲ್ಲಿ ಆತನ ಪೂಜಾ ಮಂದಿರಗಳಿಗೆ ಮುಗಿ ಬೀಳುತ್ತಾರೆ.

ಇನ್ನಿತರ ದೇವರಗುಡಿಗಳಂತೆ ಶನಿದೇವರಿಗೂ ಭವ್ಯವಾದ ಗುಟಿಕಟ್ಟಿಸಿ, ಎತ್ತರವಾದ ಗೋಪುರ ನಿರ್ಮಿಸಿ, ವಿವಿಧ ಕೆತ್ತನೆ ಶಿಲ್ಪಗಳನ್ನು ಕೆತ್ತಿಸಿ, ವಿವಿಧ ಬಣ್ಣಗಳಿಂದ ತುಂಬಿಸಿ, ಧ್ವನಿ ವರ್ಧಕದಲ್ಲಿ ಸುಪ್ರಭಾತದ ಹಾಡುಗಳನ್ನು ಹಾಕಿ ಗುಂಗಿಡಿಸುತ್ತಾರೆ. ಅಲ್ಲದೆ ದೇವಸ್ಥಾನದ ಮುಂಭಾಗ ಹೋಟೆಲ್ ತಿಂಡಿ ತಿನಿಸುಗಳ ಪಟ್ಟಿಯಂತೆ, ದೇವರಿಗೆ ಮಾಡುವ ಅಲಂಕಾರಗಳ ಹೆಸರನ್ನು ಅವುಗಳ ಧರವನ್ನು ಬರೆದು ತೂಗಾಕಿರುತ್ತಾರೆ. ಹೊಗಡೆ ತಾರೆಮರ ಬಿಳಿ ಎಕ್ಕದ ಗಿಡವನ್ನು ಬೆಳಸಿ ಅದನ್ನು ಸುತ್ತು ಬರುನಂತೆ ಮಾಡಿರುತ್ತಾರೆ. ಹಾಗೂ ಕಬ್ಬಿಣದ

> ದೇವಸ್ಥಾನಗಳಿಗೆ ಇವತ್ತು ಜನ ಭಕ್ತಿಯಿಂದ ಹೋಗದೆ ವಸ್ತು ಪ್ರದರ್ಶನಕ್ಕೆ ಹೋದಂತೆ ಹೋಗಿ ಬರುತ್ತಾರೆ. ನೂರಾರು ರೂಪಾಯಿ ತೆತ್ತು ಖರೀದಿಸಿದ ಎಕ್ಕಡಗಳನ್ನು ಹೊರಗಡೆ ಬಿಟ್ಟು ದೇವರ ಮೂತಿ ಕಾಣಲು ಹೋದ ಭಕ್ತರಿಗೆ ಭಕ್ತಿಯ ಬದಲಿಗೆ ಎಕ್ಕಡದ್ದೇ ಚಿಂತೆ ಕಾಡುತ್ತದೆ. ಇದನ್ನು ತಪ್ಪಿಸಲು ಇತ್ತೀಚೆಗೆ ಪ್ರತಿ ಪೂಜಾ ಮಂದಿರದ ಇದಿರಿಗೆ ಎಕ್ಕಡ ಕಾಯುವವರ ಗುಂಪು ಹುಟ್ಟಿಕೊಂಡಿದೆ. ಪ್ರೇಮಿಗಳು ದೇವರ ನೆಪದಲ್ಲಾದರೂ ಪರಸ್ಪರ ಭೇಟಿ, ನಗು, ಪಿಸುಮಾತಿನ ಅವಕಾಶ ಪಡೆದೆವಲ್ಲ ಎಂದು ಧನ್ಮೋಸ್ಮಿತ ಭಾವದಲ್ಲಿ ದೇವರಿಗೆ ವಂದನೆ ಸಲ್ಲಿಸುತ್ತಾರೆ. ಪೂಜಾರಿ ಕೂಡ ಜನಾಕರ್ಷಣೆ ಹಾಗೂ ಧನಾಕರ್ಷಣೆಗಾಗಿ ದೇವರ ಮೂರ್ತಿಯನ್ನು ವಿವಿಧ ರೀತಿಯಲ್ಲಿ ಅಲಂಕರಿಸಿ ಗಂಟೆ ಅಲ್ಲಾಡಿಸಿ ಮಂಗಳಾರತಿ ಎತ್ತುತ್ತಾನೆ. 'ಜನ ಮರುಳೋ ದೇವರು ಮರುಳೋ' ತರ್ಕ ನಿರೀಶ್ವರ ವಾದಿಗೆ ಕಾಡುತ್ತದೆ.

ಗುಂಡಿಯಲ್ಲಿ ಅರಗು, ಎಣ್ಣೆಬತ್ತಿ, ಕರ್ಪೂರದಿಂದ ಬೆಂಕಿ ಹೊತ್ತಿಸಿ ಅದನ್ನೂ ಸುತ್ತಿ ಬರುವಂತೆ ಮಾಡಿರುತ್ತಾರೆ. ಅದರ ಹೊಗೆ ಮನುಷ್ಯನ ಉಸಿರಾಟಕ್ಕೆ ಎಷ್ಟೊಂದು ಕೆಟ್ಟದ್ದು ಎಂಬುದನ್ನು ಬೇರೆ ಹೇಳಬೇಕಾಗಿಲ್ಲ.

ದೇವಸ್ಥಾನಗಳಿಗೆ ಇವತ್ತು ಜನ ಭಕ್ತಿಯಿಂದ ಹೋಗದೆ ವಸ್ತು ಪ್ರದರ್ಶನಕ್ಕೆ ಹೋದಂತೆ ಹೋಗಿ ಬರುತ್ತಾರೆ. ನೂರಾರು ರೂಪಾಯಿ ತೆತ್ತು ಖರೀದಿಸಿದ ಎಕ್ಕಡಗಳನ್ನು ಹೊರಗಡೆ ಬಿಟ್ಟು ದೇವರ ಮೂತಿ ಕಾಣಲು ಹೋದ ಭಕ್ತರಿಗೆ ಭಕ್ತಿಯ ಬದಲಿಗೆ ಎಕ್ಕಡದ್ದೇ ಚಿಂತೆ ಕಾಡುತ್ತದೆ. ಇದನ್ನು ತಪ್ಪಿಸಲು ಇತ್ತೀಚೆಗೆ ಪ್ರತಿ ಪೂಜಾ ಮಂದಿರದ ಇದಿರಿಗೆ (50 ಪೈಸೆಯಿಂದ 1ರೂ.ವರೆಗೂ) ಎಕ್ಕಡ ಕಾಯುವವರ ಗುಂಪು ಹುಟ್ಟಿಕೊಂಡಿದೆ. ಪ್ರೇಮಿಗಳು ದೇವರ ನೆಪದಲ್ಲಾದರೂ ಪರಸ್ಪರ ಭೇಟಿ, ನಗು, ಪಿಸುಮಾತಿನ ಅವಕಾಶ ಪಡೆದೆವಲ್ಲ ಎಂದು ಧನ್ಮೋಸ್ಮಿತ ಭಾವದಲ್ಲಿ ದೇವರಿಗೆ ವಂದನೆ ಸಲ್ಲಿಸುತ್ತಾರೆ. ಪೂಜಾರಿ ಕೂಡ ಜನಾಕರ್ಷಣೆ ಹಾಗೂ ಧನಾಕರ್ಷಣೆಗಾಗಿ ದೇವರ ಮೂರ್ತಿಯನ್ನು ವಿವಿಧ ರೀತಿಯಲ್ಲಿ ಅಲಂಕರಿಸಿ ಗಂಟೆ ಅಲ್ಲಾಡಿಸಿ ಮಂಗಳಾರತಿ ಎತ್ತುತ್ತಾನೆ. 'ಜನ ಮರುಳೋ ದೇವರು ಮರುಳೋ' ತರ್ಕ ನಿರೀಶ್ವರ ವಾದಿಗೆ ಕಾಡುತ್ತದೆ.

ಅನ್ಯ ದೇವರಿಗಿರುವಂತೆ ಈ ದೇವರಿಗೂ ಬ್ರಾಹ್ಮಣರೇ ಪೂಜಾರಿಗಳು. ಇವರು ಇಂದಿನ ಹೈಟೆಕ್ ಯುಗದಲ್ಲಿ ದೇವರಿಲ್ಲದ ಗುಡಿಯನ್ನು ನಂಬಿ ಜನರಿಗೂ ನಂಬಿಸಿ ಗೇಣುದ್ದ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆ. ಸಜ್ಜನ-ನೀಚ ಭೇದ ಭಾವವಿಲ್ಲದೆ ನೀಡಿದ ಧನ-ಧಾನ್ಯ, ವಸ್ತು-ಒಡವೆಗಳನ್ನು ಕಾಣಿಕೆ ರೂಪದಲ್ಲಿ ಸ್ವೀಕರಿಸಿ ತಮ್ಮ ಹೊಟ್ಟೆಯನ್ನು ದುಂಡಗೆ ಮಾಡಿಕೊಳ್ಳುತ್ತಾರೆ.

ಮುಗ್ಧ ಜನರ ಎದುರಿನಲ್ಲಿ ಅರೆ ನಗ್ನರಾಗಿ ತಮ್ಮ ಪುಷ್ಕಳ ಮಾಂಸ ಖಂಡಗಳನ್ನು (ಅಲ್ಲಿಗೆ ಬಂದವರಲ್ಲಿ ಯೌವನದ ಹುಡುಗಿಯರಿದ್ದಾರೆ... ಹೆಂಗಸರಿದ್ದಾರೆ.... ಪೌಷ್ಟಿಕ ಆಹಾರ ಕಾಣದ ನವಪೇತಲ ನಾರಾಯಣರಿದ್ದಾರೆ ಎಂಬುದನ್ನು ಲಕ್ಷಿಸದೆ) ಪ್ರದರ್ಶನಕ್ಕಿಡುತ್ತಾರೆ. ಇವರು ಕಣ್ಣಿಗೆ ಕಾಣದ ನಿರಾಕಾರ ನಿರ್ಗುಣ ಶಕ್ತಿಯನ್ನೇ ದೇವರೆಂದು ಭ್ರಮಿಸಿ ಜನರಿಗೂ ಹುಚ್ಚತ್ತಿಸಿ ಪೂಜಾರಿಕೆ ವೃತ್ತಿಯನ್ನು ಗುತ್ತಿಗೆ ಹಿಡಿದಿದ್ದಾರೆ.

ಜನಸಂಖ್ಯೆ ಹೆಚ್ಚಿ ಅನಕ್ಷರಸ್ಥರ ಬೀಡಾದ ಈ ದೇಶದಲ್ಲಿ ಅನ್ನದಾನ, ಅನಾಥಶ್ರಮ, ವಿದ್ಯಾಸಂಸ್ಥೆಗಳನ್ನು ಕಟ್ಟಲು ಮುಂದಾಗದೇ ಮುಗ್ಧರನ್ನು, ಶ್ರಮಿಕರನ್ನು, ಪ್ರಕೃತಿಯ ಮಕ್ಕಳನ್ನು ದೇವರು-ದಿಂಡರ ಹೆಸರಿನಲ್ಲಿ ಪಾಪ-ಪುಣ್ಯ, ಶುಭ-ಅಶುಭ, ಸ್ವರ್ಗ-ನರಕಗಳ ಭೀತಿಯಲ್ಲಿ ಪರಂಪರಾಗತವಾಗಿ ಪುರೋಹಿತ ಶಾಹಿ ವರ್ಗ ಶೋಷಿಸುತ್ತಲೇ ಬಂದಿದೆ. 'ಊರು ಬೆಳೆದರೆ ಮಾರಿ ಬೆಳೆಯಿತು' ಎಂಬ ಮಾಸ್ತಿಯವರ ಮಾತಿಂದು ಗಾದೆ ಮಾತಾಗಿ ಎಲ್ಲೆಲ್ಲೂ ದೇವರ ಗುಡಿಗಳು ತಲೆ ಎತ್ತುತ್ತಿವೆ.

ಮನುಷ್ಯ ನಿರ್ಮಿತ ಗುಡಿಗಳಲ್ಲಿ ದೇವರಿರುವುದೇ ಸತ್ಯವಾದರೆ ಲೋಕದಲ್ಲಿ ರೋಗ-ರುಜಿನ, ಸಾವು-ನೋವು, ಚಿಂತೆ-ಹಸಿವುಗಳೇಕೆ ತಪ್ಪಿಲ್ಲ. ಬಡವ-ಶ್ರೀಮಂತ ಭೇದಭಾವ ನಿಂತಿಲ್ಲ. ಬೇಡಿದವರಿಗೆ ಬೇಡಿದ್ದನ್ನು ನೀಡುವ ಭಗವಂತನ ಇದಿರಿನಲ್ಲೇ ದಾನ-ದಕ್ಷಿಣೆ, ಧನ-ಕನಕ ವಸ್ತು ಒಡವೆಗಳನ್ನು ಸ್ವೀಕರಿಸುವ ಪೂಜಾರಿಗಳ ನಡವಳಿಕೆ ದೇವರ ಅಸ್ತಿತ್ವವನ್ನು ಸುಳ್ಳು ಮಾಡುತ್ತವೆಯಲ್ಲವೇ? ಅವನು ಮಾನವ ನಿರ್ಮಿತ ನಾಲ್ಕು ಗೋಡೆಗಳ ನಡುವೆ ಇರುವನೆಂಬುದು ನಿಜವಾದರೆ ಸರ್ವಶಕ್ತ, ಸರ್ವಾಂತರ್ಯಾಮಿ, ಸರ್ವಜ್ಞನೆಂಬ ಪದಗಳಿಗೇನರ್ಥವುಂಟು? ಇವತ್ತು ದೇವಸ್ಥಾನಕ್ಕೆ ಹಾಕುವ ಬಂಡವಾಳ ಶಾಶ್ವತ ಲಾಭಾದಾಯಕವಾಗಿ ಪರಿಣಮಿಸಿದ್ದರಿಂದಲೇ ಪೈಪೋಟಿಯಲ್ಲಿ ದೇವಸ್ಥಾನಗಳು ಎಲ್ಲೆಂದರಲ್ಲಿ ತಲೆಯತ್ತುತ್ತಿವೆ.

ಪುರಿ ಜಗನ್ನಾಥ ದೇವಾಲಯ, ಕಾಶೀ ವಿಶ್ವನಾಥ ದೇವಾಲಯ, ಕಂಚಿ ಕಾಮಾಕ್ಷಿ ಮಧುರೆ ಮೀನಾಕ್ಷಿ, ಕಾಳಹಸ್ತಿ, ಗುರುವಾಯೂರ್, ಮಂತ್ರಾಲಯ, ಶ್ರೀ ಶೈಲ, ಮಹಾನಂದಿ, ನಂಜನಗೂಡು ಶ್ರೀ ಕಂಠೇಶ್ವರ, ಶೃಂಗೇರಿ ಶಾರದಮಠ, ಉಡುಪಿ ಶ್ರೀ ಕೃಷ್ಣದೇವಸ್ಥಾನ, ಧರ್ಮಸ್ಥಳದ ಮಂಜುನಾಥ, ತಿರುಪತಿ ತಿರುಮಲ ದೇವಸ್ಥಾನ, ಹೊರನಾಡು ಅನ್ನಪೂರ್ಣೇಶ್ವರಿ, ಕೊಲ್ಲೂರು ಮೂಕಾಂಬಿಕೆ, ಕಟೀಲು ದುರ್ಗಾ ಪರಮೇ ಶ್ವರಿ, ಶಿರಸಿ ಮಾರಿಕಾಂಬೆ, ಮೈಸೂರು ಚಾಮುಂಡಿ ಮುಂತಾದ ಎಡೆಗಳಲ್ಲಿ ದೇವರಿಗಿಂತ ದೇವರನ್ನು ಪೂಜಿಸುವ ಪೂಜಾರಿಗಳ ದಂಡೆ ಅಧಿಕವಾಗಿದೆ. ಒಬ್ಬ ದೈವನಿಗೆ ಇಷ್ಟೊಂದು ಪೂಜಾರಿಗಳೇ? ಪ್ರಶ್ನೆಗಳನ್ನು ಬಿಡಿಸುತ್ತಾ ಹೋದರೆ ಅವರ ಉಳ್ಳೂಕತನ ಬಯಲಾಗುತ್ತದೆ. ಇದನ್ನು ಕಂಡೆ ಸು.ರಂ.ಎಕ್ಕುಂಡಿಯವರು ಈ ಪದ್ಯ ಬರೆದಿದ್ದಾರೆ.

ಬಿಲ್ವಾ ಮಠ ಈಗೀಗ ಬಿಲದ ಮಠವಾಗಿಹುದು
ಯಾರಲ್ಲಿಯೂ ಇಲ್ಲ ಶಿವನ ಹುಚ್ಚು
ಸಿಕ್ಕಿದ್ದು ಸಿಕ್ಕಷ್ಟು ಮುಕ್ಕಿ ಕಣ್ಮರೆಯಾಗಿ
ಬದುಕಿರುವ ಇಲಿಗಳೇ ಇಲ್ಲಿ ಹೆಚ್ಚು

ಒಟ್ಟಿನಲ್ಲಿ ನಮ್ಮ ದೇಶದಲ್ಲಿರುವ ದೇವಾಲಯಗಳು ಮತ್ತು ಪೂಜಾರಿಗಳ ಹಿನ್ನೆಲೆಗಿರುವ ವಾಸ್ತವವನ್ನು ಎಂದಿಗಿಂತಲೂ ಇಂದು ತುರ್ತಾಗಿ ಬಯಲು ಮಾಡಿ ವೈಚಾರಿಕತೆ ವಿಚಾರವಾದ ಬೆಳೆಯಲು ಪ್ರಜ್ಞಾವಂತರೆಲ್ಲರೂ ಶ್ರಮಿಸಬೇಕಾಗಿದೆ.

ಇಂದು ಕರ್ನಾಟಕ ರಾಜ್ಯದಲ್ಲಿ ಆರ್ಥಿಕ ಸಂಪನ್ಮೂಲಗಳಿಲ್ಲದ 24,229 ದೇವಾಲಯ ಮತ್ತು ಧಾರ್ಮಿಕ ದತ್ತಿ ಸಂಸ್ಥೆಗಳಿದ್ದು; ಹನ್ನೊಂದು ಜಿಲ್ಲೆಗಳಲ್ಲಿ 22,887 ಜನ ಅರ್ಚಕರು ಇದ್ದು, ಅವರಲ್ಲಿ ಪ.ಜಾ.113 ಪ.ಪಂ.314 ಜನರಿದ್ದು, ಉಳಿದವರೆಲ್ಲಾ ಬ್ರಾಹ್ಮಣ ವರ್ಗಕ್ಕೆ ಸೇರಿದವರಾಗಿದ್ದಾರೆ. *2000ದ ಚಳಿಗಾಲದ ಅಧಿವೇಶನದಲ್ಲಿ ಮುಜರಾಯಿ ಸಚಿವ ಬಾಬುರಾವ್ ಚಿಂಚನೂರ್ ವಿರೋಧಪಕ್ಷದವರ ಪ್ರಶ್ನೆಗಳಿಗೆ ಉತ್ತರಿಸಿದರು. ಪ್ರಜಾವಾಣಿ.18-11-2000. □

ನಾನು ಕಾಯುತ್ತಿದ್ದೇನೆ

ನಾನು ಕಾಯುತ್ತಿದೇನೆ ಸೂರ್ಯನಿಗಾಗಿ
ಭೂಮಿಯ ಮೇಲೆ ಹಾಲಬೆಳಕ ಚೆಲ್ಲಲೆಂದು
ಹೋದೆಡೆಯೆಲ್ಲೆಲ್ಲಾ ಜನ ನನ್ನ
ಕಂಡು ಮುಗುಳ್ನಗಲೆಂದು.

ನಾನು ಕಾಯುತ್ತಿದ್ದೇನೆ ಯುದ್ಧದ ಯಾತನೆ,
ಈ ನೋವು, ಹಿಂಸೆ ದುಃಖ ನಿಲ್ಲಲೆಂದು
ಎಲ್ಲ ಜನ ಪ್ರಜೆಗಳಾಗಲಿ
ರಾಜನೇ ಇಲ್ಲದ ನಾಡಿನಲ್ಲೆಂದು.

ನಾನು ಕಾಯುತ್ತಿದ್ದೇನೆ ಚರ್ಮದ ಬಣ್ಣ
ಅಮುಖ್ಯವಾಗುವ ಸಮಯಕ್ಕಾಗಿ
ಪಡೆಯುವುದಕ್ಕಿಂತ ಕೊಡುವುದೇ
ಮುಖ್ಯವಾಗುವ ಸಮಯಕ್ಕಾಗಿ
ಎಲ್ಲರೂ ಒಂದೇ ಆಗಿರುವ ಸಮಯಕ್ಕಾಗಿ

○ ವೆನೆಸ್ಸಾ ಸಿ ಹೋವರ್ಡ್
(ವಿದ್ಯಾರ್ಥಿ ಪದ್ಯ)
ಕನ್ನಡಕ್ಕೆ: ಡಾ॥ ಜೆ. ಬಾಲಕೃಷ್ಣ

ವರ್ತಮಾನದ ಧಾವಂತಗಳ ಅನಾವರಣ

ಪುಸ್ತಕ ಅವಲೋಕನ

ಲೇ: ಡಾ॥ ಮೂಡ್ನಾಕೂಡು ಚಿನ್ನಸ್ವಾಮಿ
ಬೆಲೆ: ರೂ. ೪೦/-
ಪ್ರಕಾಶಕರು: ನವಕರ್ನಾಟಕ ಪ್ರಕಾಶನ, ಬೆಂಗಳೂರು

ಡಾ ಮೀನಾಕ್ಷಿ ಬಾಳಿ

ಓದು [illegible] [illegible] ಈ ಹೊತ್ತಿನಲ್ಲಿ ಗತದ [illegible] ಕುರಿತು ಓದುವುದು ಬರೆಯುವುದು, [illegible]ಸುವುದು ಕೂಡಾ ಎಂಥ ರಿಲೀಫ್ ಕೊಡಬಹುದ [illegible]? ಹೌದು. ಬುದ್ಧ-ಬಸವ-ಬಾಬಾ ಸಾಹೇಬರ ಅಂದಂದಿನ ಸಾಮಾಜಿಕ ಚಳುವಳಿಯನ್ನು ಕುರಿತು "ಸ್ವ"ದ ನೆಲೆಯಲ್ಲಿ ಪರಾಮರ್ಶಿಸಿರುವ ಮೂಡ್ನಾಕೂಡು ಚಿನ್ನ ಸ್ವಾಮಿಯವರ "ಒಂದು ಕೊಡ ಹಾಲಿನ ಸಮರ" ಕೃತಿಯು ಇಂಥದೊಂದು ರಿಲೀಫನ್ನು ಕಟ್ಟಿಕೊಡುತ್ತದೆ. ಹೀಗೆ ಅನಿಸಿದ್ದು ಕೂಡಾ ಅಕಾರಣ ಓದಿನ ಲಹರಿಯಾಗ ಬೇಕಿಲ್ಲ. ಮೂಡ್ನಾಕೂಡು ನಮ್ಮ ನಡುವಿನ ಗಂಭೀರ ಲೇಖಕರು ಮತ್ತು ಚಿಂತಕರು. ಅವರ ಬರವಣಿಗೆಗೆ ಇರುವ ಸಾಮಾಜಿಕ ಬದ್ಧತೆಯು ವರ್ತಮಾನ ಚಿಂತೆ ಯಾಗಿ ಕಾಡುತ್ತಿದೆಯಲ್ಲ. ಇದು ತುಂಬಾ ಮುಖ್ಯ. ಏಕೆಂದರೆ ಈ ಹೊತ್ತಿನ ಅನೇಕ ಪ್ರಚ್ಛನ್ನ ಪ್ರಚಂಡ ಚಿಂತಕರಿಗೆ ಬೌದ್ಧಿಕ ಹುಡುಕಾಟದ ಬಗೆಗಿರುವಷ್ಟು ವ್ಯಾಮೋಹ ಸಮುದಾಯಗಳ ಬದುಕಿನ ಬಿಕ್ಕಟ್ಟುಗಳ ಬಗೆಗೆ ಇರದಿರುವುದು ವಿಷಾದನಿಯ ಸಂಗತಿ. ಮೂಡ್ನಾ ಕೂಡರಿಗೆ ಅನ್ವೇಷಣೆಯ ಆಸಕ್ತಿ ಇದೆಯಾದರೂ ಬೌದ್ಧಿಕ ಹಪಾಹಪಿ ಇಲ್ಲದಿರುವುದರಿಂದಲ್ಲೇ ಅವರು ಬುದ್ಧನ ಭೌತ ವಾದಿ ದರ್ಶನ ಧಾರೆಗಳನ್ನು ತೀರ ಸರಳವಾಗಿ ಅಕ್ಷರ ಬಲ್ಲವರೆಲ್ಲರಿಗೂ ತಿಳಿಯುವಂತೆ ಬರೆದಿದ್ದಾರೆ.

ಬುದ್ಧನ ಅನಾತ್ಮ ಮತ್ತು ಅನಿಚ್ಛ ತತ್ವಗಳು, ಬಸ ವನ ಕರ್ಮಸಿದ್ಧಾಂತದ ನಿರಾಕರಣೆ, ಸ್ವಾಭಿಮಾನಿ ಕಾಯಕ ಧೀರತೆ ಮತ್ತು ಬಾಬಾಸಾಹೇಬರ ಶಿಕ್ಷಣ-ಸಂಘಟನೆ-ಹೋರಾಟಗಳ ಬಗೆಗಿನ ರಾಜಕೀಯ ಇಚ್ಛಾಶಕ್ತಿ: ಇವು ಚಿನ್ನಸ್ವಾಮಿಯವರ ಚಿಂತನೆಗೆ ಒದಗಿ ಬಂದಿವೆ. ವೈದಿಕ ವಿರೋಧಿ ನೆಲೆಯಲ್ಲಿ ಅರಳಿದ ಈ ಮೂರು ಸಮಾಜೋ -ಧಾರ್ಮಿಕ ಚಳುವಳಿಗಳು ಖಂಡಿತ ವರ್ತ ಮಾನದ ರಾಜಕೀಯ ಅರಾಜಕತೆಗೆ ಪರಿಹಾರದ ದಾರಿಗಳಾಗ ಬೇಕಿದೆ. ಆದರೆ ಹಾಗಾಗುತ್ತಿಲ್ಲವಲ್ಲ ಏಕೆ? ಎಂಬ ಪ್ರಶ್ನೆಗ ಳಿಗೆ ಉತ್ತರಗಳು ಅಷ್ಟು ಸುಲಭವಲ್ಲ. ಇಂಥ ಸಂಕೀರ್ಣ ಸವಾಲುಗಳಿಗೆ ಉತ್ತರ ಕಂಡುಕೊಳ್ಳಬೇಕೆಂಬ ಹಟದಲ್ಲಿ ಚಿನ್ನಸ್ವಾಮಿಯವರು ದಿಗಿಲಿನ ಸ್ಥಿತಿಗೆ ಬಂದು ತಲುಪಿ ದ್ದಾರೆ. ಈ ದಿಗಿಲಾದರೂ ಅವಜ್ಞೆ ಮಾಡುವಂಥದಲ್ಲ. ಕ್ರಮಿಸಬೇಕಾದ ದಾರಿಯಲ್ಲಿನ ಸಕಾರಾತ್ಮಕ ಆಶಯಗಳನ್ನು ಇದು ಹೊಳೆಸಬಲ್ಲದು ಎಂಬ ಸೂಚನೆಯನ್ನು ಲೇಖ ಕರೇ ನೀಡಿದ್ದಾರೆ. ಪ್ರಾಯಶಃ ಬಹುತೇಕ ಪ್ರಾಮಾಣಿಕ ಪ್ರಜ್ಞಾವಂತ ಮನಸ್ಸುಗಳು ಈ ತರದ ಹುಡುಕಾಟದಲ್ಲಿ ಬಸವಳಿಯದೇ ಗತ್ಯಂತರವಿಲ್ಲವೇನೊ? ವರ್ತಮಾನದ ಈ ದಿಗಿಲಿನ ಹಿಂದೆ ಬಂಡವಾಳಶಾಹಿ ರಾಜಕೀಯ ಶಕ್ತಿಯು ನಡೆಸುತ್ತಿರುವ ಸಂಚನ್ನು ಅದರೆಲ್ಲ ಆಯಾಮಗ ಳೊಟ್ಟಿಗೆ ಸ್ಪಷ್ಟ ಪಡಿಸಿಕೊಳ್ಳಬೇಕಿದೆ.

ಬೌದ್ಧ ಧಮ್ಮವು ಭಾರತದ ನೆಲದಿಂದಲೇ ಉಚ್ಚಾಟಿ ತವಾದುದರ ಬಗೆಗೆ, ಬಸವ ಚಳುವಳಿಯು ಮಠೀಯ ರೇಜಿಮೆಂಟಿಗೆ ಸಿಕ್ಕು ನಲುಗುತ್ತಿರುವ ಬಗೆಗೆ, ಮತ್ತು ಬಾಬಾಸಾಹೇಬರ ಬೌದ್ಧ ಮತಾಂತರದ ನಂತರವೂ ದಲಿತರು ಬೌದ್ಧರಾಗಿ ಪರಿವರರ್ತಿತರಾಗದಿರುವ ಬಗೆಗೆ ಚಿನ್ನಸ್ವಾಮಿಯವರಿಗೆ ತೀವ್ರ ಸಂಕಟವಾಗಿದೆ. ಆಗಬೇಕಾ ದ್ದದೆ. ಜಡಗೊಂಡು ಜಡ್ಡುಗಟ್ಟಿದ ವ್ಯವಸ್ಥೆಯೊಳಗೆ ಆಮೂಲ ಪರಿವರ್ತನೆ ತರಬೇಕೆಂದು ಹೊರಟ ಈ ಎಲ್ಲ ಚಳುವಳಿಗಳ ಸಾಧ್ಯತೆ ಮತ್ತು ಮಿತಿಯನ್ನು ಕುರಿತ ಅನ್ವೇ ಷಣೆ ಹಲವು ಕುತೂಹಲಕಾರಿ ಸತ್ಯಗಳನ್ನು ಹೊಮ್ಮಿಸಿದೆ. ದಲಿತರು ಬೌದ್ಧರಾಗಲು ನಿರಾಕರಿಸುತ್ತಿರುವುದಕ್ಕೆ ನೀಡಿ ರುವ ಕರಣಗಳನ್ನು ಒಂದೊಂದಾಗಿ ಸವಿಸ್ತಾರವಾಗಿ ವಿವ ರಿಸಿ ಕೊಳ್ಳಬೇಕಾದ ಅನಿವಾರ್ಯತೆಯನ್ನು ಚಿನ್ನಸ್ವಾಮಿ ಕರಾ ರುವಕ್ಕಾಗಿ ಗ್ರಹಿಸುವ ಪ್ರಯತ್ನ ಮಾಡಿದ್ದಾರೆ.

ಪ್ರಜ್ಞೆ ಮಾತ್ರದಿಂದಲೇ ಇಂದ್ರಯಜನ್ಯ ಕುತೂಹಲಗ ಳನ್ನು ತಣಿಸುತ್ತ ತನ್ನ ಇರುವಿಕೆ ಮತ್ತು ಜಗತ್ತಿನ ಆಗುವಿ ಕೆಯನ್ನು ಗ್ರಹಿಸುವುದು ತುಂಬಾ ಕಷ್ಟ ಸಾಧ್ಯ. ಇದು ಹೆಚ್ಚು ನಿಖರವಾದ ದಾರಿಯೇ ಇರಬಹುದಾದರೂ ಸುಲ ಭಸಾಧ್ಯವಲ್ಲದ ದಾರಿಯೆಂಬುದೇ ದೊಡ್ಡ ತಲೆನೋವಿನ

> ಬುದ್ಧನ ಅನಾತ್ಮ ಮತ್ತು ಅನಿಚ್ಛ ತತ್ವಗಳು, ಬಸವನ ಕರ್ಮಸಿದ್ಧಾಂತದ ನಿರಾಕರಣೆ, ಮತ್ತು ಬಾಬಾಸಾಹೇಬರ ಹೋರಾಟಗಳ ಬಗೆಗಿನ ರಾಜಕೀಯ ಇಚ್ಛಾಶಕ್ತಿ: ಇವು ಚಿನ್ನಸ್ವಾಮಿಯವರ ಚಿಂತನೆಗೆ ಒದಗಿ ಬಂದಿವೆ.

ಸಂಗತಿ. ಅವರೆ ಎಲ್ಲವನ್ನು ಇಂದ್ರಿಯಾತೀತವೆಂದು ಭ್ರಮಿ ಸುತ್ತ ನಿಗೂಢಕ ರಣದ ಅಲೆಯಲ್ಲಿ ಎಲ್ಲವೂ ತಿಳಿದಂತೆ ಭಾವಿಸುದಿದೆಯಲ್ಲ ಇದು ಸುಲಭ ಸಾಧ್ಯ. ಆದ್ದರಿಂದಲೇ ಭಾವವಾದಿ ಆಖ್ಯಾಯಿಕೆಗಳು ರಕ್ತ ಬೀಜಾಸುರನಂತೆ ಮತ್ತೆ ಮತ್ತೆ ಜನತೆಯನ್ನು ಮೋಹಕಗೊಳಿಸುತ್ತಲೆ ಇರುತ್ತವೆ, ಈ ಮೊಹರಗೊಳಿಸುವ ಶಕ್ತಿಯನ್ನು ಎನ್‌ಕ್ಯಾಷ್ ಮಾಡಿಕೊ ಳ್ಳುವ ಪ್ರಭುತ್ವವೊಂದು ಸದಾ ಹೊಂಚು ಹಾಕುತ್ತಲೆ ಇರು ತ್ತದೆ. ಪ್ರಭುತ್ವಗಳು ತನ್ನ ಅವಶ್ಯಕತೆಗೆ ತಕ್ಕಷ್ಟು, ತನಗೆ ಬೇಕಾದಂತೆ ಆಯಾ ಸಂದರ್ಭದ ಧರ್ಮಗಳನ್ನು ಬಳಸಿ ಕೊಳ್ಳುತ್ತಲೆ ಹೋಗುತ್ತದೆ. ಅಂತೆಯೇ ತನಗೆ ಬೇಕಾದ ಅಂದರೆ ತನ್ನ ಅಧಿಕಾರದ ಅಸ್ತಿತ್ವಕ್ಕೆ ಪೂರಕವಾಗುವ ಧರ್ಮಗಳನ್ನು ಎತ್ತಿಹಿಡಿಯುತ್ತ, ಬೇಡವಾದ ಧರ್ಮಗ ಳನ್ನು ಹತ್ತಿಕ್ಕುತ್ತ ಅಥವಾ ಉಚ್ಚಟಿಸುತ್ತಲೇ ಬರುತ್ತದೆ. ತನ್ನ ಸಾರ್ವಭೌಮತೆಯನ್ನು ಪ್ರಶ್ನಿಸುವ ಬುದ್ಧ-ಬಸವ-ಬಾಬಾ ಸಾಹೇಬ-ರಂಥವರು ಹುಟ್ಟುಹಾಕಿದ ಚಳುವಳಿಗಳು ಯಾವತ್ತಿದ್ದರೂ ಪ್ರಭುತ್ವಕ್ಕೆ ವರ್ಜ್ಯವೇ.

ಈ ಹೊತ್ತು ಅಲ್ಪಸ್ವಲ್ಪವಾದರೂ ಅಕ್ಷರ ಕಲಿತು ವಿದ್ಯಾ ವಂತರಾದ ದಲಿತರಾದರೂ "ನಾನು ಹಿಂದೂವಾಗಿ ಸಾಯಲರೆ! ಎಂದು ಹೇಳುತ್ತಿಲ್ಲವೇಕೆ? ಎಂಬ ತಳಮಳ ಚಿನ್ನಸ್ವಾಮಿಯರನ್ನು ಸತಾಯಿಸುತ್ತದೆ ಅಲ್ಲದೆ, ಅದೆ ಕಾಲಕ್ಕೆ "ರೈತ. ಕಾರ್ಮಿಕ ಮತ್ತು ಅನ್ಯ ಜಾತಿಗಳ ಸಮಸ್ಯೆಗಳನ್ನು ಕೈಗೆತ್ತಿಕೊಂಡಾಗಲೇ ದಲಿತ ನಾಯಕತ್ವಕ್ಕೆ ದಾರಿ ನಿರ್ಮಾ ಣವಾಗುತ್ತದೆ ಎಂಬುದನ್ನು ಅಂಬೇಡ್ಕರ್ 1937ರಲ್ಲಿಯೇ ತೋರಿಸಿಕೊಟ್ಟರು. ಅದೇ ಹಾದಿಯನ್ನು ಇಂದಿನ ಬಹು ಜನ ಸಮಾಜ ಪಕ್ಷ ತುಳಿಯುತ್ತಿದೆ ಮತ್ತು ಯಶಸ್ಸನ್ನು ಕಾಣುತ್ತಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ. ವರ್ತಮಾನದ ಪವರ್ ಪಾಲಿಟಿಕ್ಸನ ಒಳಸುಳ್ಳುಗಳನ್ನು ತುಂಬಾ ಎಚ್ಚರ ದಿಂದ ಗಮನಿಸದಿದ್ದರೆ ನಾವೆಲ್ಲ ಮತ್ತೆ ಹಳೆಯ ಹಳ ವಂಡಕ್ಕೆ ಬೀಳುವ ಸಾಧ್ಯತೆ ಇಲ್ಲದಿಲ್ಲ.. ದಲಿತ ನಾಯಕತ್ವ ಗಳನ್ನು ಅಧಿಕಾರ ರಾಜಕಾರಣದ ಆಮಿಷಕ್ಕೊಡ್ಡುತ್ತಿರುವ ತನ್ಮೂಲಕ ದಲಿತ ಸಂವೇದನೆಗಳಬನ್ನೆ ಹೈಜಾಕ್ ಮಾಡು ತ್ತಿರುವ ಸದ್ಯದ ರಾಜಕಾರಣವನ್ನು ಅರ್ಥಮಾಡಿಕೊಳ್ಳುವ ಜರೂರಿ ಇದೆ. ಅಧಿಕಾರದ ತೋರಿಕೆಯ ಗದ್ದುಗೆಯನ್ನು ಅಲಂಕರಿಸಲೆಂದೇ ಬಿಎಸ್‌ಪಿಯಂಥ ಪಕ್ಷಗಳು ಕೋಮು ವಾದಿ ಬಿಜೆಪಿ ಪಕ್ಷಗಳೊಂದಿಗೆ ಕೈಜೋಡಿಸುವುದು ಯಾವ ತ್ತಿದ್ದರೂ ಅಪಾಯಕಾರಿ ಸಂಗತಿಯೇ. ಇದು ಸದ್ಯದ ರಾಜಕೀಯ ಹುನ್ನಾರು (ಪಾಲಿಟಿಕಲ್ ಸ್ಟಾಟಜಿ) ಎಂದು ನಾವು ಸಮರ್ಥಾಯಿಸಿಕೊಟ್ಟುಕೊಳ್ಳಬಹುದಾದರೂ ನಮ್ಮೊಂದಿಗೆ ಸೇರಿಕೊಳ್ಳುವಾಗಲೇ ಬ್ರಾಹ್ಮಣತ್ವದ ಸಂಘ ಪರಿವಾರಿಗಳು ತುಂಬಾ ದೂರಗಾಮಿಯಾದ ಹುನ್ನಾರನ್ನು ಮಾಡಿಕೊಂಡಿರುತ್ತವೆ ಎಂಬುದನ್ನು ಮರೆಯದಿರೋಣ.

ಒಟ್ಟಾರೆ ಚಿನ್ನಸ್ವಾಮಿಯವರ ಒಟ್ಟು ಹುಡುಕಾಟದಲ್ಲಿ ವರ್ತಮಾನದ ಧಾವಂತಗಳು, ತುಂಬಾ ಸರಳವಾಗಿ ಮತ್ತು ಸ್ಪಷ್ಟವಾಗಿ ಅನಾವರಣಗೊಂಡಿವೆ. ಎಂಬುದೆ ಖುಷಿ ಕೊಡುವ ಸಂಗತಿಯಾಗಿದೆ. ಇಲ್ಲಿ ಅವರು ಎತ್ತಿರುವ ಹಲವು ಪ್ರಶ್ನೆಗಳು ಸಕಾಲಿಕ ಮತ್ತು ಹಲವು ಸಂವಾದಗ ಳನ್ನು ಏರ್ಪಡಿಸಿಕೊಳ್ಳಬೇಕಾದ ಜರೂರಿಯನ್ನು ಅವು ಕಾಣಿಸಿವೆ.

ಜನಸ್ಪಂದನ

ಸರ್ಕಾರವೇ ಗ್ರಾಮೀಣ ಜನರ ಬಳಿಗೆ ತೆರಳುವ ವಿಶಿಷ್ಟ ಕಾರ್ಯಕ್ರಮ

ಜನರ ಬಳಿಗೆ ಸರ್ಕಾರ

ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ಸಾರ್ವಜನಿಕ ಕುಂದು-ಕೊರತೆಗಳನ್ನು ಪರಿಹರಿಸುವ ದಿಶೆಯಲ್ಲಿ ವಿನೂತನ ವಿಧಾನಕ್ಕೆ ಚಾಲನೆ ನೀಡುತ್ತಿದೆ. ಹೋಬಳಿ ಮಟ್ಟದಲ್ಲಿ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಸಲ್ಲಿಸಿ ಪರಿಹಾರ ಪಡೆದುಕೊಳ್ಳುವ ಅಪೂರ್ವ ಅವಕಾಶವೇ 'ಜನಸ್ಪಂದನ' ಕಾರ್ಯಕ್ರಮ

೨೦-೦೯-೨೦೦೮ ರಿಂದ ಈ ವಿನೂತನ ಕಾರ್ಯಕ್ರಮ ಚಾಲನೆಯಲ್ಲಿದೆ

ಗ್ರಾಮೀಣ ಜನರಿಗೆ ಅನುಕೂಲವಾಗಲೆಂದೇ ರೂಪಿಸಿರುವ ಈ ವಿಶಿಷ್ಟ ಕಾರ್ಯಕ್ರಮವು ಪ್ರತಿ ಶನಿವಾರ (ತಿಂಗಳ 2ನೇ ಶನಿವಾರ ಹೊರತುಪಡಿಸಿ) ಆಯ್ದ ಬೇರೆ ಬೇರೆ ಹೋಬಳಿ ಕೇಂದ್ರಗಳಲ್ಲಿ ನಡೆಯುತ್ತದೆ. ಈ ಕಾರ್ಯಕ್ರಮ ನಡೆಯುವ ಕುರಿತು ಅಧಿಕಾರಿಗಳು ಹೋಬಳಿ ವ್ಯಾಪ್ತಿಯ ಸಾರ್ವಜನಿಕರಿಗೆ ಸಾಕಷ್ಟು ಮುಂಚಿತವಾಗಿಯೇ ಮಾಹಿತಿ ಒದಗಿಸುತ್ತಾರೆ. ನಿಗದಿತ ದಿನಾಂಕದಂದು ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಸಾರ್ವಜನಿಕರು ಭೇಟಿ ನೀಡಿ ತಮ್ಮ ಅಹವಾಲುಗಳಿಗೆ ಸೂಕ್ತ ಉತ್ತರ/ಪರಿಹಾರ ಪಡೆಯಬಹುದಾಗಿದೆ. ನಿಮ್ಮ ಕುಂದು-ಕೊರತೆಗಳ ನಿವಾರಣೆಗೆ ಇನ್ನು ಮುಂದೆ ದೂರದ ಜಿಲ್ಲಾ ಕೇಂದ್ರಗಳಿಗೆ ಹೋಗುವ ಅಗತ್ಯವಿಲ್ಲ. ಸರ್ಕಾರವೇ ನಿಮ್ಮ ಬಳಿಗೆ ಬರುತ್ತದೆ.

ಅಭಿವೃದ್ಧಿಯೇ ಆಡಳಿತ ಮಂತ್ರ

ಕರ್ನಾಟಕ ವಾರ್ತೆ
Karnataka Information

ಕಾಲ - ದೇಶ ನಿರಾಕರಣೆ

ಡಾ. ಎಸ್. ನಟರಾಜ್ ಬೂದಾಳು

ಕಾಲ ದೇಶಗಳ ಬಗೆಗೆ ನಾವು ತಳೆಯುವ ನಿಲುವು ನಮ್ಮ ಲೋಕಗ್ರಹಿಕೆಯನ್ನು ನಿಯಂತ್ರಿಸುವುದರ ಜೊತೆಗೆ ನಮ್ಮ ಕಾವ್ಯ ಮೀಮಾಂಸೆಯನ್ನು ಪ್ರಭಾವಿಸುತ್ತದೆ. ಕಾಲದ ಬಗೆಗೆ ದರ್ಶನಗಳಲ್ಲಿ ಅನೇಕ ಗೊಂದಲಗಳಿವೆ. ವಿಜ್ಞಾನವೂ ಈ ಗೊಂದಲವನ್ನು ನಿವಾರಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಲೇ ಬಂದಿದೆ. ಇತ್ತೀಚೆಗೆ ಭೌತವಿಜ್ಞಾನಿ ಸ್ಟೀಫನ್ ಹಾಕಿಂಗ್ ಕಾಲವೆನ್ನುವುದು ಇಲ್ಲ ಅದು ಕೇವಲ ಮನೋಕಲ್ಪಿತವೆಂದು ಘೋಷಿಸಿದನು. ಸ್ವತಂತ್ರ ಕಾಲವೆನ್ನುವುದು ಇಲ್ಲ, ಅದೇನಿದ್ದರೂ ಅವಕಾಶದ ಜೊತೆಯಲ್ಲಿ, ಕ್ರಿಯೆಯ ಜೊತೆಯಲ್ಲಿ, ಭಾವದ ಜೊತೆಯಲ್ಲಿ ಮಾತ್ರವೇ ಗ್ರಹಿಸಬಹುದಾದ ಸಾಪೇಕ್ಷ ಕಲ್ಪನೆ ಎಂದು ಇದುವರೆಗೆ ವಿಜ್ಞಾನವೂ ಸೂಚಿಸಿತ್ತು. ಈಗ ಸಾಪೇಕ್ಷ ಕಾಲವೂ ಇಲ್ಲ, ಸ್ವತಂತ್ರ ಕಾಲವೂ ಇಲ್ಲ; ಅವೆರಡೂ ಕಲ್ಪನೆಗಳು ಎಂದು ಸಾರಿದೆ. ಕಾಲವನ್ನು ಹಠ ಹಿಡಿದು ಸ್ಥಾಪಿಸಬಯಸುವ ದರ್ಶನಗಳು ವಸ್ತು ಪ್ರಪಂಚವನ್ನು ಅಸ್ತಿತ್ವವೆಂದೋ ನಾಸ್ತಿತ್ವವೆಂದೋ ತೀರ್ಮಾನಿಸಿಕೊಂಡು ಕುಳಿತಿರುತ್ತವೆ.

ಕಾಲ ದೇಶಗಳ ಬಗೆಗೆ ನಾವು ತಳೆಯುವ ನಿಲುವು ನಮ್ಮ ಲೋಕಗ್ರಹಿಕೆಯನ್ನು ನಿಯಂತ್ರಿಸುವುದರ ಜೊತೆಗೆ ನಮ್ಮ ಕಾವ್ಯ ಮೀಮಾಂಸೆಯನ್ನು ಪ್ರಭಾವಿಸುತ್ತದೆ. ಕಾಲ ಮತ್ತು ಆಕಾಶ ತತ್ವದ ಬಗೆಗೆ ದರ್ಶನಗಳಲ್ಲಿ ಅನೇಕ ಗೊಂದಲಗಳಿವೆ. ವಿಜ್ಞಾನವೂ ಈ ಗೊಂದಲವನ್ನು ನಿವಾರಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಲೇ ಬಂದಿದೆ. ತೀರಾ ಇತ್ತೀಚೆಗೆ ಭೌತವಿಜ್ಞಾನಿ ಸ್ಟೀಫನ್ ಹಾಕಿಂಗ್ ಕಾಲವೆನ್ನುವುದು ಇಲ್ಲ ಅದು ಕೇವಲ ಮನೋಕಲ್ಪಿತವೆಂದು ಘೋಷಿಸಿದನು. ಸ್ವತಂತ್ರ ಕಾಲವೆನ್ನುವುದು ಇಲ್ಲ, ಅದೇನಿದ್ದರೂ ಅವಕಾಶದ (ಆಕಾಶ) ಜೊತೆಯಲ್ಲಿ, ಕ್ರಿಯೆಯ ಜೊತೆಯಲ್ಲಿ, ಭಾವದ (ವಸ್ತುಪ್ರಪಂಚ) ಜೊತೆಯಲ್ಲಿ ಮಾತ್ರವೇ ಗ್ರಹಿಸಬಹುದಾದ ಸಾಪೇಕ್ಷ ಕಲ್ಪನೆ ಎಂದು ಇದುವರೆಗೆ ವಿಜ್ಞಾನವೂ ಸೂಚಿಸಿತ್ತು. ಈಗ ಸಾಪೇಕ್ಷ ಕಾಲವೂ ಇಲ್ಲ, ಸ್ವತಂತ್ರ ಕಾಲವೂ ಇಲ್ಲ; ಅವೆರಡೂ ಮನೋ-ಕಲ್ಪನೆಗಳು ಎಂದು ಸಾರಿದೆ. ಕಾಲವನ್ನು ಹಠ ಹಿಡಿದು ಸ್ಥಾಪಿಸಬಯಸುವ ದರ್ಶನಗಳು ವಸ್ತು ಪ್ರಪಂಚವನ್ನು ಅಸ್ತಿತ್ವವೆಂದೋ ನಾಸ್ತಿತ್ವವೆಂದೋ ತೀರ್ಮಾನಿಸಿಕೊಂಡು ಕುಳಿತಿರುತ್ತವೆ. ಹಾಗಾಗಿ ಕಾಲವನ್ನು ಸಹ ಬ್ರಹ್ಮ, ಆತ್ಮ ಇತ್ಯಾದಿಗಳ ರೀತಿಯಲ್ಲಿ ಸ್ವತಂತ್ರವಾದುದೆಂದು, ಶಾಶ್ವತವಾದುದೆಂದು ಮತ್ತು ಲೋಕವನ್ನು ನಿಯಂತ್ರಿಸುವುದೆಂದು ಲೋಕಾತೀತಗೊಳಿಸುತ್ತಾರೆ. ಕಾಲ ಮತ್ತು ದೇಶಗಳ ಬಗೆಗೆ ನಾವು ತಳೆಯುವ ನಿಲುವು ನಾವು ಲೋಕವನ್ನು ವಸ್ತು ನಿಷ್ಠವಾಗಿ ನೋಡುತ್ತೇವೆಯೋ, ವ್ಯಕ್ತಿನಿಷ್ಠವಾಗಿ ನೋಡುತ್ತೇವೆಯೋ ಎಂಬುದನ್ನು ನಿರ್ಧರಿಸುತ್ತದೆ. ನಾವು ವ್ಯವಹರಿಸುತ್ತಿರುವ ಈ ಭೂಮಿಯ ಸಂಪರ್ಕವನ್ನು ತೊರೆದು ನೋಡಿದಾಗ ಕಾಲ ದೇಶದ ಕಲ್ಪನೆಗಳು ಇಲ್ಲವಾಗುತ್ತವೆ. ಕಲಾ ಜಗತ್ತು ಈ ಕಾಲ ಮತ್ತು ದೇಶಗಳ ಜೊತೆಗೆ ನಿರಂತರ ಕಾದಾಡುತ್ತಲೇ ಬಂದಿದೆ. ದೇಶ ಅಥವಾ ಆಕಾಶವನ್ನು (ಜಾಗ, ಅವಕಾಶ) ಪಂಚ ಭೂತಗಳಲ್ಲಿ ಒಂದೆಂದು ಭಾವಿಸುತ್ತಲೇ ಬರಲಾಗಿದೆ. ಕಾಲ ದೇಶಗಳನ್ನು ಕುರಿತ ಬೌದ್ಧಮೀಮಾಂಸೆಯ ನಿಲುವೇನು ಎಂಬುದನ್ನು ಈ ಲೇಖನದಲ್ಲಿ ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ.

ಕಾಲದ ಬಗೆಗಿನ ನಿಲುವುಗಳು:

ಕಾಲದ ಬಗೆಗಿನ ಬೌದ್ಧ ನಿಲುವಿಗೆ ಮುನ್ನ ಇತರ ತಾತ್ವಿಕತೆಗಳು ವ್ಯಕ್ತಪಡಿಸಿದ ನಿಲುವುಗಳನ್ನು ಸಂಗ್ರಹಿಸಬಹುದು.

1. ವಸ್ತುಗಳ ಉತ್ಪತ್ತಿ-ಸ್ಥಿತಿ-ಲಯಗಳಿಗೆ ನಿಮಿತ್ತವಾದದ್ದು ಕಾಲ. ಕಾಲವು ಒಂದೇ ಆದರೂ ಉಪಾಧಿ ಬೇಧದಿಂದ ನಾನಾ ರೂಪಗಳನ್ನು ತಾಳಿ ವ್ಯವಹಾರದಲ್ಲಿ ಗೋಚರಿಸುತ್ತದೆ. ಬ್ರಹ್ಮಶಕ್ತಿಯೇ ಕಾಲ - ಇದು ವಾಕ್ಯಪದೀಯಕಾರ ಭರ್ತೃಹರಿಯ ಸಿದ್ಧಾಂತ.

2. ಕಾಲದ ಬಗೆಗೆ ಸಾಂಖ್ಯರು ಭಿನ್ನ ನಿಲುವುಗಳನ್ನು ತಳೆದಿದ್ದಾರೆ. ಅವುಗಳೆಂದರೆ :

(ಅ) ಕಾಲವೆಂಬ ಪದಾರ್ಥವೇ ಇಲ್ಲ. ಹಗಲು, ರಾತ್ರಿ, ಘಂಟೆ, ನಿಮಿಷ [] ಮುಂತಾದ ವ್ಯವಹಾರವು ಅಖಂಡ ಕಾಲದಲ್ಲಿ ಸೂರ್ಯ ಗತಿ ಮುಂತಾದ ಉಪಾಧಿಗಳಿಂದ ಸಿದ್ಧಿಸುತ್ತವೆ. ಈ ಉಪಾಧಿಗಳಿಂದಲೇ ಹಗಲು, ರಾತ್ರಿ ಮುಂತಾದ ವ್ಯವಹಾರಗಳು ನಡೆಯುತ್ತವೆ ಯಾದ್ದರಿಂದ ಕಾಲವೆಂಬ ವಸ್ತುವೇ ಬೇಕಾಗಿಲ್ಲ.

(ಆ) ಸತ್ವರಜಸ್ತಮೋ ಗುಣಾತ್ಮಕವಾದ ಪ್ರಕೃತಿಯ ಪರಿಣಾಮದಿಂದ ಕಾಲವು ಹುಟ್ಟಿದೆ. ಆದ್ದರಿಂದ ಕಾಲವೆಂಬ ವಸ್ತುವುಂಟು.

(ಇ) ಪ್ರಕೃತಿಯಿಂದ ಕಾಲವು ಹುಟ್ಟುತ್ತದೆಯೆಂದೇಕೆ ಹೇಳಬೇಕು? ಪ್ರಕೃತಿಯನ್ನೇ ಕಾಲವೆಂದು ಹೇಳಬಹುದು

(ಈ) ಅಖಂಡಕಾಲಕ್ಕೆ ಉಪಾಧಿಯಾದ ಕ್ರಿಯೆಯನ್ನೇ ಕಾಲವೆಂದು ಹೇಳಬಹುದು.

(ಉ) ಆಕಾಶವನ್ನೇ ಕಾಲವೆಂದು ಹೇಳಬಹುದು.

ಈ ಅಭಿಪ್ರಾಯಗಳಿದ್ದರೂ ಕಾಲವೆಂಬ ಅತಿರಿಕ್ತ ಪದಾರ್ಥವಿಲ್ಲ ಎಂಬ ನಿಲುವೇ ಪ್ರಧಾನವಾದದ್ದು.

3. ಪತಂಜಲಿ ಮುನಿ ಪ್ರಣೀತವಾದ ಯೋಗದರ್ಶನವು ಕ್ಷಣಾತ್ಮಕವಾದ ಕಾಲವನ್ನು ಅಂಗೀಕರಿಸುತ್ತದೆ. ಎಂದರೆ ಕಾಲವು ಪರಮಾಣುವಿನಂತೆ ಅತಿಸೂಕ್ಷ್ಮವಾದ ವಸ್ತುವಾಗಿರುತ್ತದೆ. ಮುಹೂರ್ತ, ಹಗಲು, ರಾತ್ರಿ, ಘಂಟೆ, ನಿಮಿಷ, - ಇತ್ಯಾದಿಗಳು ವ್ಯವಹಾರಕ್ಕಾಗಿ ಬುದ್ಧಿಕಲ್ಪಿತವಾದವು.

4. ಕಣಾದ ಮುನಿಯಿಂದ ಪ್ರಣೀತವಾದ ವೈಶೇಷಿಕ ದರ್ಶನದ ಪ್ರಕಾರ ಕಾಲವು ಒಂದು ದ್ರವ್ಯ ಇದು ಪ್ರತ್ಯಕ್ಷವಲ್ಲ. ಇದು ವಿಭು, ನಿತ್ಯ. ವಿಭುವಾದರೂ ಉಪಾಧಿಬೇಧದಿಂದ ಕ್ಷಣ, ಮುಹೂರ್ತ ಮುಂತಾದ ಭೇದಗಳನ್ನು ಪಡೆದು ವ್ಯವಹಾರ ಗೋಚರವಾಗುತ್ತದೆ. ಇದು ಸರ್ವವಸ್ತುಗಳಿಗೂ ಕಾರಣ, ಸರ್ವಕ್ಕೂ ಆಧಾರವಾದದ್ದು. ನ್ಯಾಯದರ್ಶನದ ನೈಯಾಯಿಕರದ್ದು ಹೆಚ್ಚೂ ಕಡಿಮೆ ಇದೇ ಅಭಿಪ್ರಾಯ.

5. ಮೀಮಾಂಸೆಯಲ್ಲಿ ಎರಡು ಅಭಿ ಪ್ರಾಯಗಳು ಮುಖ್ಯವಾದವು. ಒಂದು : ಕುಮಾರಿಲಭಟ್ಟರ ಮತ. ಅವರ ಮತದಲ್ಲಿ ಕಾಲವು ದ್ರವ್ಯ, ವಿಭು ಮತ್ತು ನಿತ್ಯವಾದದ್ದು. ಅದು ಒಂದೇ. ಆದರೂ ಕ್ಷಣ, ದಿನ, ಮಾಸಾದಿ ಭೇದವ್ಯವ ಹಾರವು ಬರುತ್ತದೆ. ಇದು ಆರು ಇಂದ್ರಿಯಗಳಿಗೂ ಗೋಚರವಾಗುತ್ತದೆ. ಇವುಗಳಿಂದ ನೇರವಾಗಿ ಕಾಲವು ಗೃಹೀತವಾಗದಿದ್ದರೂ ಆ ಇಂದ್ರಿಯಗಳಿಗೆ ಗೋಚರಿಸುವ ವಿಷಯಗಳಿಗೆ ಕಾಲವು ವಿಶೇಷಣವಾಗಿ ಇದ್ದೇ ಇರುವುದರಿಂದ ಕಾಲವೂ ಆ ಇಂದ್ರಿಯಗಳಿಂದ ಗೃಹೀತವಾಗುತ್ತದೆ ಎಂದು ತಿಳಿಯಬೇಕು. ಎರಡನೆಯದು : ಪ್ರಾಭಾಕರರ ಮತ; ಅವರು ಕಾಲಕ್ಕೆ ದ್ರವ್ಯತ್ವ, ವಿಭುತ್ವ, ಏಕತ್ವ, ಮುಂತಾದುವುಗಳನ್ನು ಒಪ್ಪುತ್ತಾರೆ. ಆದರೆ ಅದು ಇಂದ್ರಿಯಗ್ರಾಹ್ಯವೆಂಬುದನ್ನು ಒಪ್ಪುವುದಿಲ್ಲ. ಇವರ ಮತದಲ್ಲಿ ಕಾಲವು ಯಾವ ಇಂದ್ರಿಯಕ್ಕೂ ಗೋಚರವಲ್ಲ.

6. ಇಪ್ಪತ್ತು ವಿಧದ ದ್ರವ್ಯಗಳಲ್ಲಿ ಕಾಲವೂ ಒಂದು. ಆದರೆ ಅದು ಅಖಂಡವಾದ

ದ್ರವ್ಯವಲ್ಲ. ಕ್ಷಣ, ಮುಹೂರ್ತ ಇತ್ಯಾದಿ ಬಹುಸ್ವರೂಪವುಳ್ಳದ್ದು. ಸರ್ವವ್ಯಾಪಿಯಾದ ಕಾಲಕ್ಕೆ ಉತ್ಪತ್ತಿ-ವಿನಾಶಗಳುಂಟು. ಆದ್ದರಿಂದ ಅಸ್ತಿತ್ವದ್ರವ್ಯ, ಪ್ರಕೃತಿಯಿಂದ ಕಾಲವು ಹುಟ್ಟುತ್ತದೆ, ಇತ್ಯಾದಿ – ಇದು ಮಧ್ವಾಚಾರ್ಯರ ಕಾಲಸಂಬಂಧೀ ನಿಲುವು.

7. ಕಾಲವು ಸರ್ವಾಧಾರವೆಂಬುದನ್ನು ಅದ್ವೈತ ವೇದಾಂತವು ಒಪ್ಪುವುದಿಲ್ಲ. ವ್ಯವಹಾರದಲ್ಲಿ ಕಾಲವಿರುವುದರಿಂದ ವ್ಯವಹಾರ ಸಿದ್ಧಿಗಾಗಿ ಕಾಲವಿದೆ ಎಂದು ಒಪ್ಪುತ್ತದೆ. ವ್ಯಾವಹಾರಿಕ ಕಾಲವೆನ್ನುವುದೂ ಅವಿದ್ಯೆ ಅಥವಾ ಮಾಯೆ. ಆದ್ದರಿಂದ ವ್ಯವಹಾರದಲ್ಲಿ ಗೋಚರಿಸುವ ಕಾಲವು ಬ್ರಹ್ಮದ ಮಾಯಾಶಕ್ತಿಯಾಗಿದೆ. ಉಪಾಧಿಭೇಧದಿಂದ ಅದೂ ಕ್ಷಣ, ಮುಹೂರ್ತ, ಘಂಟೆ, ದಿನ ಇತ್ಯಾದಿ ಭೇದಗಳನ್ನು ಪಡೆಯುತ್ತದೆ. ವ್ಯಾವಹಾರಿಕ ಸತ್ಯವಾಗಿ ಕಾಲವಿದೆ ಇದು ಅದ್ವೈತ ಸಿದ್ಧಾಂತದ ನಿಲುವು.

8. ಜೈನಸಿದ್ಧಾಂತದಲ್ಲಿ ದ್ರವ್ಯವು ಜೀವ-ಅಜೀವ ಎಂದು ಎರಡು ವಿಧ. ಅಜೀವವು ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲ- ಎಂದು ಐದು ವಿಧ. ಕಾಲವು ವ್ಯವಹಾರ ಕಾಲ, ನಿಶ್ಚಯಕಾಲ ಎಂದು ಎರಡು ವಿಧವಾಗಿದೆ. ಕ್ಷಣ, ಮುಹೂರ್ತ, ಇತ್ಯಾದಿ ವಿಭಾಗರಹಿತವಾದ ಕಾಲವು ನಿಶ್ಚಯಕಾಲ. ಕ್ಷಣಾದಿ ವಿಭಾಗಸಹಿತವಾದದ್ದು ವ್ಯವಹಾರಕಾಲವೆನಿಸುತ್ತದೆ. ನಿಶ್ಚಯ ಕಾಲವು ಅಣುರೂಪಿಪವಾಡ ದ್ರವ್ಯ. ಇದು ನಿತ್ಯವಾದದ್ದು. ವ್ಯವಹಾರಕಾಲವನ್ನು ಜೈನರು ಸಮಯ ಎನ್ನುತ್ತಾರೆ. ಇದು ದ್ರವ್ಯಗಳೊಡನೆ ಪ್ರತ್ಯಕ್ಷವಾಗುತ್ತದೆ. ನಿಶ್ಚಯಕಾಲವು ಪ್ರತ್ಯಕ್ಷ ಕಾಲವಲ್ಲ.

ಈ ವಿವರಣೆಗಳಲ್ಲಿ ಗೋಚರವಾಗುವ ಪ್ರಮುಖ ಅಂಶಗಳೆಂದರೆ :

(1) ನಿರೀಶ್ವರವಾದಿಗಳ ಹೊರತಾಗಿ ಉಳಿದವರದ್ದು ಕಾಲ ನಿತ್ಯವೆನ್ನುವ ಮತ್ತು ಪ್ರಥಮ ಕಾರಣವೊಂದರಿಂದ ಪ್ರವರ್ತಿತ ಎನ್ನುವ ನಿಲುವು. ಅದರ ಅನಾದಿ ಅನಂತ ಗುಣಗಳು ಕೂಡ ಒಂದು ಮೂಲಕ್ಕೆ ಬದ್ಧವಾದವು.

(2) ವಸ್ತು ಪ್ರಪಂಚ ಶಾಶ್ವತವಾದರೆ ಕಾಲವೂ ಶಾಶ್ವತ, ವ್ಯಾವಹಾರಿಕ ಪ್ರಪಂಚ ಅಸ್ತಿತ್ವರಹಿತವಾದರೆ ಕಾಲವೆಂಬುದೂ ಇಲ್ಲ

(3) ಈ ದರ್ಶನಗಳು ವಸ್ತು ಮತ್ತು ಕ್ರಿಯೆಯ ಜೊತೆಗೇ ಕಾಲದ ಅಸ್ತಿತ್ವವನ್ನು ಹೇಳುವುದರಿಂದ ವಸ್ತು ಮತ್ತು ಕ್ರಿಯೆಯ ಅಸ್ತಿತ್ವವನ್ನು ಕಾಲವೂ ಅವಲಂಬಿಸಿರುವುದು ಸ್ಪಷ್ಟವಾಗಿದೆ.

ಬೌದ್ಧ ಮಾಧ್ಯಮಿಕರ ನಿಲುವು :

ಕಾಲದ ಬಗೆಗೆ ಬೌದ್ಧ ಮಾಧ್ಯಮಿಕರ ನಿಲುವನ್ನು ನಾಗಾರ್ಜುನ ತನ್ನ 'ಮೂಲಮಾಧ್ಯಮಕ ಕಾರಿಕಾ' ದಲ್ಲಿ ಚರ್ಚಿಸುತ್ತಾನೆ.

ಕಾರಿಕೆಗಳು:

ವರ್ತಮಾನ ಮತ್ತು ಭವಿಷ್ಯತ್ಕಾಲಗಳು
ಭೂತಕಾಲವನ್ನಾಧರಿಸಿ ಉಂಟಾಗುತ್ತವೆ ಎಂದಾದರೆ
ವರ್ತಮಾನ ಮತ್ತು ಭವಿಷ್ಯತ್ಕಾಲಗಳು
ಭೂತಕಾಲದೊಳಗೇ ಇವೆ ಎಂದಾಯಿತು
ವರ್ತಮಾನ ಮತ್ತು ಭವಿಷ್ಯತ್ಕಾಲಗಳೂ
ಭೂತಕಾಲದೊಳಗೇ ಇಲ್ಲವಾದರೆ
ವರ್ತಮಾನ, ಭವಿಷ್ಯತ್ಕಾಲಗಳು
ಭೂತಕಾಲವನ್ನಾಧರಿಸಿ ಉತ್ಪನ್ನವಾಗುವುದೆಂತು ?

ನಾಗಾರ್ಜುನನ ಕಾರಿಕೆಗಳನ್ನು ಟಿಬೆಟಿಯನ್ ತಾತ್ವಿಕ ಸಾಂಖಿಪಾ ಹೀಗೆ ವ್ಯಾಖ್ಯಾನಿಸುತ್ತಾರೆ: ವರ್ತಮಾನ ಮತ್ತು ಭವಿಷ್ಯತ್ತುಗಳು ಭೂತದಲ್ಲಿ ಅಂತರ್ಗತವಾಗಿ ಈಗಾಗಲೇ ಇವೆ ಎಂದಾದರೆ, ಅವುಗಳಲ್ಲಿ ಯಾವುದೊಂದನ್ನೂ ದಾಟಿ ಹೋಗಲಾಗುವುದಿಲ್ಲ. ವರ್ತಮಾನ ಮತ್ತು ಭವಿಷ್ಯತ್ತುಗಳು ಭೂತಕಾಲದಿಂದ ಉದಯಿಸಿ ಸಂಭವಿಸಬೇಕಾದರೆ ಅವು ಭೂತಕಾಲದಲ್ಲಿ ಅಸ್ತಿತ್ವವನ್ನು ಪಡೆದಿರಬೇಕು. ಹಾಗೇನಾದರೂ ಭೂತಕಾಲದಲ್ಲೇ ಅವು ಇದ್ದರೆ, ಅವೂ ಭೂತಕಾಲವೇ ಆಗಿಬಿಡುತ್ತವೆ. ಆಗ ಭೂತಕಾಲವನ್ನೂ ಸ್ಥಾಪಿಸಲು ಸಾಧ್ಯವಾಗುವುದಿಲ್ಲ. ಭೂತ ಮತ್ತು ಭವಿಷ್ಯತ್ತುಗಳನ್ನೇನಾದರೂ ಒಟ್ಟಿಗೇ ಸ್ಥಾಪಿಸಹೋದರೆ ವರ್ತಮಾನವನ್ನು ಸ್ಥಾಪಿಸಲು ಸಾಧ್ಯವಿಲ್ಲ. ಭೂತ ಮತ್ತು ಭವಿಷ್ಯತ್ತುಗಳು ವರ್ತಮಾನದ ಸಂಬಂಧದಲ್ಲಿ ಮಾತ್ರ ಸ್ಥಾಪಿಸಲು ಸಾಧ್ಯವಾಗುವಂಥವು. ಆದರೆ ವರ್ತಮಾನ ಕಾಲವು ಇಲ್ಲದಿರುವುದರಿಂದ ಭೂತ, ಭವಿಷ್ಯತ್ತುಗಳೂ ಇಲ್ಲ.

ವರ್ತಮಾನ ಮತ್ತು ಭವಿಷ್ಯತ್ಕಾಲಗಳು
ಭೂತಕಾಲವನ್ನವಲಂಬಿಸದೇ ಸಿದ್ಧಗೊಳ್ಳಲಾರವು
ಹಾಗಾಗಿ ವರ್ತಮಾನ ಕಾಲವೂ ಇಲ್ಲ ಭವಿಷ್ಯತ್ಕಾಲವೂ ಇಲ್ಲ

ನಾಗಾರ್ಜುನನ ಈ ಕಾರಿಕೆಗಳನ್ನು ಟಿಬೆಟಿಯನ್ ತಾತ್ವಿಕ ಸಾಂಖಿಪಾ ಹೀಗೆ ವ್ಯಾಖ್ಯಾನಿಸುತ್ತಾರೆ: ವರ್ತಮಾನ ಮತ್ತು ಭವಿಷ್ಯತ್ತುಗಳು ಭೂತದಲ್ಲಿ ಅಂತರ್ಗತವಾಗಿ ಈಗಾಗಲೇ ಇವೆ ಎಂದಾದರೆ, ಅವುಗಳಲ್ಲಿ ಯಾವುದೊಂದನ್ನೂ ದಾಟಿ ಹೋಗಲಾಗುವುದಿಲ್ಲ. ವರ್ತಮಾನ ಮತ್ತು ಭವಿಷ್ಯತ್ತುಗಳು ಭೂತಕಾಲದಿಂದ ಉದಯಿಸಿ ಸಂಭವಿಸಬೇಕಾದರೆ ಅವು ಭೂತಕಾಲದಲ್ಲಿ ಅಸ್ತಿತ್ವವನ್ನು ಪಡೆದಿರಬೇಕು. ಹಾಗೇನಾದರೂ ಭೂತಕಾಲದಲ್ಲೇ ಅವು ಇದ್ದರೆ, ಅವೂ ಭೂತಕಾಲವೇ ಆಗಿಬಿಡುತ್ತವೆ. ಆಗ ಭೂತಕಾಲವನ್ನೂ ಸ್ಥಾಪಿಸಲು ಸಾಧ್ಯವಾಗುವುದಿಲ್ಲ. ಭೂತ ಮತ್ತು ಭವಿಷ್ಯತ್ತುಗಳನ್ನೇನಾದರೂ ಒಟ್ಟಿಗೇ ಸ್ಥಾಪಿಸಹೋದರೆ ವರ್ತಮಾನವನ್ನು ಸ್ಥಾಪಿಸಲು ಸಾಧ್ಯವಿಲ್ಲ. ಭೂತ ಮತ್ತು ಭವಿಷ್ಯತ್ತುಗಳು ವರ್ತಮಾನದ ಸಂಬಂಧದಲ್ಲಿ ಮಾತ್ರ ಸ್ಥಾಪಿಸಲು ಸಾಧ್ಯವಾಗುವಂಥವು. ಆದರೆ ವರ್ತಮಾನ ಕಾಲವು ಇಲ್ಲದಿರುವುದರಿಂದ ಭೂತ, ಭವಿಷ್ಯತ್ತುಗಳೂ ಇಲ್ಲ.

ಭೂತಕಾಲ ಮಾತ್ರ .ಸತ್ಯ ಎನ್ನುವುದಾದರೂ, ಮೊಳಕೆ ತನ್ನ ಸ್ಥಿತಿಯಿಂದ ಮುಂದಕ್ಕೆ ಹೋಗದು. ಭೂತಕಾಲದ ಮುಂದುವರಿಕೆಯಾಗಿ ವರ್ತಮಾನವನ್ನು ಸ್ಥಾಪಿಸಬಹುದೇ ಹೊರತು ಅದನ್ನು ಸ್ವತಂತ್ರವಾಗಿ ಸ್ಥಾಪಿಸಲಾಗದು. ಹಾಗೆಯೇ ಭವಿಷ್ಯತ್ತು ಕೂಡ ಪರೋಕ್ಷವಾಗಿ ಭೂತವನ್ನೇ ಅವಲಂಬಿಸಿದೆ. ಭೂತಕಾಲದಲ್ಲಿರುವ ವರ್ತಮಾನವಾಗಲೀ ಭವಿಷ್ಯತ್ತಾಗಲೀ ಅಸ್ತಿತ್ವದಲ್ಲಿಲ್ಲದವು. ಭೂತಕಾಲದ ಹೊರತಾಗಿ ಬೇರಾವುದನ್ನೂ ಅವಲಂಬಿಸಿ ಅಸ್ತಿತ್ವಕ್ಕೆ ಬರಲಾರವು. ಅಸ್ತಿತ್ವಕ್ಕೆ ಬಾರದಿರುವುದರಿಂದ [illegible] [illegible] ಅವು ಇಲ್ಲವೆಂದೇ ಹೇಳಬೇಕು.

ಕಾಲವನ್ನು ಸತ್ಯವೆನ್ನುವ [illegible] ಭೂತಕಾಲವನ್ನು ವರ್ತಮಾನ ಕಾಲಕ್ಕೆ ಅಗತ್ಯವಾದ ಪ್ರತ್ಯಯ ಎನ್ನುತ್ತದೆ ಮಡಕೆಯ ಮಾಡುವರೆ ಮಣ್ಣೆ ಮೊದಲು ಎನ್ನುವಂತೆ. ಅಸ್ತಿತ್ವವೆಂಬುದು ಆದಿ ಮತ್ತು ಅಂತ್ಯವುಳ್ಳದ್ದೆಂದು ಗ್ರಹಿಸುವಲ್ಲಿನ ಪ್ರಮಾದವು ಕಾಲದ ಗ್ರಹಿಕೆಗೆ ಅಡ್ಡಿಯಾಗಿದೆ. ಆದಿಯುಂಟು ಎಂಬ ತಪ್ಪುಗ್ರಹಿಕೆ ಭೂತಕಾಲಕ್ಕೆ ಸಂಬಂಧಿಸಿದ್ದಾದರೆ ಅಂತ್ಯವುಂಟೆಂಬ ತಪ್ಪುಗ್ರಹಿಕೆ ಭವಿಷ್ಯತ್ಕಾಲಕ್ಕೆ ಸಂಬಂಧಿಸಿದ್ದುದಾಗಿದೆ. ಇದಕ್ಕೆ ಮಾಧ್ಯಮಿಕರು ಸೂಚಿಸಿದ ಪರಿಹಾರವೆಂದರೆ ಲೋಕವು ಸಂಬಂಧಗಳಿಂದ ಸೃಷ್ಟಿಯಾದುದು ಮತ್ತು ನಿರಂತರ ಪ್ರವಾಹ ರೂಪಿಯಾದುದು. ಪ್ರತಿ ಹಂತವೂ ಅದರ ಹಿಂದನ್ನು ಮತ್ತು ಮುಂದನ್ನು ಅದಕ್ಕೆ ಸಂಬಂಧಿಸಿದ ಹಾಗೆ ಹೊಂದಿದೆ. ಆ ಹಂತವಾಗಲೀ, ಅದರ ಹಿಂದಾಗಲೀ, ಮುಂದಾಗಲೀ ಶಾಶ್ವತ ಸ್ಥಿತಿಯನ್ನು ಪಡೆದು ಇರಲಾರವು. ಭೂತ, ಭವಿಷ್ಯತ್, ವರ್ತಮಾನ ಕಾಲಗಳು ಸಾಪೇಕ್ಷ ಕಲ್ಪನೆಗಳಷ್ಟೇ ಆಗಿದ್ದು ಸ್ವತಂತ್ರ ಕಾಲವೆನ್ನುವುದಿಲ್ಲ.

ಕಾಲವು ಶಾಶ್ವತ ಎನ್ನುವುದಾದರೆ, ಅದರ ಲಕ್ಷಣಗಳೂ ಶಾಶ್ವತ ಸ್ವರೂಪದವುಗಳಾಗಿರಬೇಕು. ಕಾಲವನ್ನು ಒಂದು ಸ್ವತಂತ್ರ ಘಟಕವನ್ನಾಗಿ ಗ್ರಹಿಸಿ ವಿಶ್ಲೇಷಿಸಲೂ ನಾಗಾರ್ಜುನ ಸಿದ್ಧನಿಲ್ಲ.

ಕಾರಿಕೆ:

ಅಸ್ತಿತ್ವದಲ್ಲಿಲ್ಲದ ಕಾಲ ಗ್ರಾಹ್ಯವಲ್ಲ
ಸ್ಥಿತ ಕಾಲವಿಲ್ಲ. ಅಗ್ರಾಹ್ಯ ಕಾಲವನ್ನು
ಗ್ರಹಿಸಿದ್ದಾದರೆ ವ್ಯಕ್ತಪಡಿಸುವುದು ಹೇಗೆ?

ಕಾಲವೆಂತೂ ಏಕಾಕಿಯಾಗಿ ತನ್ನ 'ವ್ಯವಹಾರ'ವನ್ನು ಮಾಡಲಾರದು. ಅದಕ್ಕೆ ಸ್ವತಂತ್ರ ಅಸ್ತಿತ್ವವಂತೂ ಇಲ್ಲ. ಇಲ್ಲದ ಮತ್ತು ಗ್ರಹಿಕೆಗೆ ಸಿಗದ್ದನ್ನು ವ್ಯಕ್ತಪಡಿಸಲೂ ಸಾಧ್ಯವಿಲ್ಲ. Absolute time ಎನ್ನುವುದಕ್ಕೆ ನಾಗಾರ್ಜುನನ ದೃಷ್ಟಿಯಲ್ಲಿ ಅರ್ಥವಿಲ್ಲ. ಹಾಗಾದರೆ ಕಾಲದ ವ್ಯವಹಾರವನ್ನು ವಸ್ತು ಅಥವಾ 'ಭಾವ' ವೊಂದರ ಸಂಬಂಧದಲ್ಲಿ ಅಂದರೆ ಪ್ರಕ್ರಿಯೆಯ ನೆರವಿನಲ್ಲಿ ಮಾಡುತ್ತೇವೆ. ಭಾವದ ನೆರವಿನಲ್ಲಿ ಅದನ್ನು ಗ್ರಹಿಸಬಹುದೆ? ನಾಗಾರ್ಜುನ ಹೀಗೆನ್ನುತ್ತಾನೆ :

ಕಾರಿಕೆ:

ಭಾವವನ್ನವಲಂಬಿಸಿ ಕಾಲ ಇರುತ್ತದೆಯಾದರೆ
ಇಲ್ಲದ್ದನ್ನವಲಂಬಿಸಿ ಇರಲು ಸಾಧ್ಯವೆ?
ಭಾವವೆಂಬ ಯಾವುದಕ್ಕೂ ಅಸ್ತಿತ್ವವಿಲ್ಲ
ಕಾಲ ಇರುವುದಾದರೂ ಎಲ್ಲಿ?

ಶುದ್ಧ ಕಾಲವನ್ನು ಈಗಾಗಲೇ ನಿರಾಕರಿಸಿಯಾಗಿದೆ. ಭಾವವನ್ನವಲಂಬಿಸಿ ಅಂದರೆ ವಸ್ತುಪ್ರಪಂಚವನ್ನು ಅವಲಂಬಿಸಿ ಕಾಲ ಅಸ್ತಿತ್ವಕ್ಕೆ ಬರುತ್ತದೆಯೆಂದಾದರೆ 'ಭಾವ ಶೂನ್ಯತೆ'ಯನ್ನು ಅಂದರೆ ಸ್ವತಂತ್ರ ವಸ್ತುವೆನ್ನುವುದು ಇಲ್ಲವೆಂದು ಸಿದ್ಧಪಡಿಸಿದೆ. ಹಾಗಾಗಿ ಕಾಲವೆನ್ನುವುದು, ಭಾವದ ನೆರವಿನಿಂದ ಗ್ರಹಿಸಲೂ ಸಾಧ್ಯವಿಲ್ಲ. ಕಾಲವು ಶಾಶ್ವತ ಎನ್ನುವುದಾದರೆ ಅದರ ಲಕ್ಷಣಗಳೂ ಶಾಶ್ವತ ಸ್ವರೂಪದವುಗಳಾ

[illegible] ಅಂದರೆ ಭೂತಕಾಲ [illegible] ಸೃಷ್ಟಿ [illegible] 'ತ್ರಿ' [illegible]ದರೆ ಭೂತಕಾ[illegible] ವರ್ತಮಾನ ಕಾಲವನ್ನಾಗಲೀ, ಭವಿಷ್ಯತ್ಕಾಲವನ್ನಾಗಲೀ ಸೃಷ್ಟಿಸುವ ಸಂದರ್ಭವೇ ಬಾರದು. ಹಾಗಾಗಿ ಕಾಲವೆನ್ನುವುದು ಇಲ್ಲ. ನಾಗಾರ್ಜುನನ ಈ ಸೂತ್ರಗಳ ಜೊತೆಗೇ ಡೇಸೆಜ್ ಸುಜುಕಿಯ ಒಂದು ಹೇಳಿಕೆ ಮತ್ತು ಅಲ್ಲಮನ ಒಂದು ವಚನವನ್ನು ಇಲ್ಲಿ ಉದ್ಧರಿಸಬಹುದು:

ಡೇಸೆಜ್ ಸುಜುಕಿ : "In this spiritual world, there are no time divisions such as the past, present and future; for they have contracted themselves into a single moment of the present.. The past and the future are both rolled up in this present moment of illumination."

ಅಲ್ಲಮನ ವಚನ :

ಹಿಂದಣ ಅನಂತವನು, ಮುಂದಣ ಅನಂತವನು
ಒಂದು ದಿನ ಒಳಕೊಂಡಿತ್ತು ನೋಡಾ !
ಒಂದು ದಿನವನೊಳಕೊಂಡು ಮಾತನಾಡುವ
ಮಹಂತನ ಕಂಡು ಬಲ್ಲವರಾರಯ್ಯ ?
ಆದ್ಯರು ವೇದ್ಯರು ಅನಂತ ಹಿರಿಯರು
ಲಿಂಗದಂತುವನರೆಯದೆ ಅಂತೆಹೋದರು ಕಾಣಾ ಗುಹೇಶ್ವರ!

'ಆಕಾಶ' ಶೂನ್ಯತೆಯ ವಿವರಣೆ'

ಆಕಾಶ ತತ್ವದ ಬಗೆಗೆ ಪ್ರಾಚೀನ ಭಾರತೀಯ ದರ್ಶನಗಳಲ್ಲಿ ಅನೇಕ ಗೊಂದಲಗಳಿವೆ. ಇಂತಹ ಆದಿ ಭೌತಿಕ ಊಹೆಗಳನ್ನು ನಿವಾರಿಸಿಕೊಳ್ಳಲು ನಾಗಾರ್ಜುನ ಜ್ಞೇಯ, ಜ್ಞಾನ ಮತ್ತು ಆಕಾಶ ಇವುಗಳನ್ನು ವಿಸ್ತಾರವಾದ ವಿಶ್ಲೇಷಣೆಗೆ ಒಳಪಡಿಸುತ್ತಾನೆ. ನಾಗಾರ್ಜುನನಿಗೆ ಆಕಾಶವನ್ನು ನಿರಾಕರಿಸುವ ಅಗತ್ಯವೇ ಕಾಣುವುದಿಲ್ಲ. ಇಲ್ಲದ ಆಕಾಶವನ್ನು ನಿರಾಕರಿಸಬೇಕಾಗಿಲ್ಲ. ಆದರೆ ಅದನ್ನು ಅರ್ಥೈಸುವ ಕ್ರಮವನ್ನು ಭಿನ್ನವಾಗಿ ಪ್ರತಿಪಾದಿಸುತ್ತಾನೆ. ಆಕಾಶವನ್ನು ಶುದ್ಧಾಸ್ತಿತ್ವವನ್ನಾಗಿ ಗ್ರಹಿಸಿದ್ದೇ ಆದರೆ, ಇತರೆ ಸಂಯೋಜಿತ ವಸ್ತುಗಳಿಗೆ ಅನ್ವಯಿಸುವಂತೆ ಲಕ್ಷಣಗಳನ್ನು ಆಕಾಶಕ್ಕೂ-ಅನ್ವಯಿಸಬೇಕಾಗುತ್ತದೆ. ಯಾವ ಸಂಯೋಜಿತ ವಸ್ತುಗಳೂ ಲಕ್ಷಣಗಳಿಲ್ಲದೆ ಇರಲು ಸಾಧ್ಯವಿಲ್ಲ. ಆಕಾಶಕ್ಕೆ ಅಂತಹ ಲಕ್ಷಣಗಳಿಲ್ಲ. ಉದಾಹರಣೆಗೆ ವಸ್ತುವೊಂದರ ಲಕ್ಷಣಗಳಲ್ಲಿ ಆವರಣ-ಸ್ವಭಾವವೂ ಒಂದು. ಅಂದರೆ ಅದು ತಾನು ವ್ಯಾಪಿಸಿಕೊಳ್ಳುವ ಆವರಣದಲ್ಲಿ 'ಪ್ರತಿಘ'ವನ್ನುಂಟು ಮಾಡಬೇಕು. ಆಕಾಶವು 'ಅಸ್ತಿತ್ವದಲ್ಲಿ ಉಂಟು' ಎನ್ನುವುದಾದರೆ ಅದು ತನ್ನದೇ ಆದ 'ಅವಕಾಶ' (space)ವನ್ನು ಹೊಂದಿರಬೇಕಾಗುತ್ತದೆ. ಏಕೆಂದರೆ ವಸ್ತುವೊಂದು ದೇಶರಹಿತ ಅವಸ್ಥೆಯಲ್ಲಿರಲಾರದು. ಆಕಾಶವು ಮತ್ತೊಂದು ಶೂನ್ಯ ಅವಕಾಶದಲ್ಲಿದೆ ಎನ್ನುವುದೂ ಮಾನ್ಯವಲ್ಲ. ಆಗ ಆಕಾಶವು ಆಕಾಶದಲ್ಲಿದೆ ಎಂದಂತಾಗುತ್ತದೆ. ಮತ್ತೆ ಅದರ ಆಕಾಶಕ್ಕೆ ಹುಡುಕಾಡುವ ಅನಂತ ಹಿಮ್ಮುಖ ಚಲನೆಯುಂಟಾಗುತ್ತದೆ. ಆಕಾಶವು 'ಉಂಟು' ಎನ್ನುವುದಾದರೆ ಅದಕ್ಕೆ ಅದರದ್ದೇ ಆದ ಲಕ್ಷಣಗಳಿರಬೇಕಾಗುತ್ತದೆ. ಆಕಾಶಕ್ಕೆ ಅದರದ್ದೇ ಆದ ಲಕ್ಷಣಗಳಿಲ್ಲ. ಯಾವ ವಸ್ತುವಿಗೂ ಲಕ್ಷಣಗಳ ಹೊರತಾಗಿ ಅಸ್ತಿತ್ವವಿಲ್ಲ. ಲಕ್ಷಣಗಳ ಮೂಲಕವೇ ಗ್ರಹಿಸಲ್ಪಡುವ ಜ್ಞೇಯವು ಅವುಗಳ ಹೊರತಾಗಿ ಎಂತೂ ಗ್ರಹಿಸಲ್ಪಡದಿರುವುದರಿಂದ ಆಕಾಶದ ಪರೀಕ್ಷೆಯನ್ನು ನಾಗಾರ್ಜುನ ಲಕ್ಷಣಗಳ ಮೂಲಕ ನಡೆಸುತ್ತಾನೆ.

ಆಕಾಶ ತತ್ವದ ಬಗೆಗೆ ಪ್ರಾಚೀನ ಭಾರತೀಯ ದರ್ಶನಗಳಲ್ಲಿ ಅನೇಕ ಗೊಂದಲಗಳಿವೆ. ಇಂತಹ ಆದಿಭೌತಿಕ ಊಹೆಗಳನ್ನು ನಿವಾರಿಸಿಕೊಳ್ಳಲು ನಾಗಾರ್ಜುನ ಜ್ಞಾನ ಮತ್ತು ಆಕಾಶ ಇವುಗಳನ್ನು ವಿಸ್ತಾರವಾದ ವಿಶ್ಲೇಷಣೆಗೆ ಒಳ ಪಡಿಸುತ್ತಾನೆ. ನಾಗಾರ್ಜುನನಿಗೆ ಆಕಾಶವನ್ನು ನಿರಾಕರಿಸುವ ಅಗತ್ಯವೇ ಕಾಣುವುದಿಲ್ಲ. ಇಲ್ಲದ ಆಕಾಶವನ್ನು ನಿರಾಕರಿಸಬೇಕಾಗಿಲ್ಲ. ಆದರೆ ಅದನ್ನು ಅರ್ಥೈಸುವ ಕ್ರಮವನ್ನು ಭಿನ್ನವಾಗಿ ಪ್ರತಿಪಾದಿಸುತ್ತಾನೆ. ಆಕಾಶವನ್ನು ಶುದ್ಧಾಸ್ತಿತ್ವವನ್ನಾಗಿ ಗ್ರಹಿಸಿದ್ದೇ ಆದರೆ, ಇತರೆ ಸಂಯೋಜಿತ ವಸ್ತುಗಳಿಗೆ ಅನ್ವಯಿಸುವಂತೆ ಲಕ್ಷಣಗಳನ್ನು ಆಕಾಶಕ್ಕೂ-ಅನ್ವಯಿಸಬೇಕಾಗುತ್ತದೆ. ಯಾವ ಸಂಯೋಜಿತ ವಸ್ತುಗಳೂ ಲಕ್ಷಣಗಳಿಲ್ಲದೆ ಇರಲು ಸಾಧ್ಯವಿಲ್ಲ. ಆಕಾಶಕ್ಕೆ ಅಂತಹ ಲಕ್ಷಣಗಳಿಲ್ಲ. ಉದಾಹರಣೆಗೆ ವಸ್ತುವೊಂದರ ಲಕ್ಷಣಗಳಲ್ಲಿ ಆವರಣ-ಸ್ವಭಾವವೂ ಒಂದು. ಅಂದರೆ ಅದು ತಾನು ವ್ಯಾಪಿಸಿಕೊಳ್ಳುವ ಆವರಣದಲ್ಲಿ 'ಪ್ರತಿಘ' ವನ್ನುಂಟು ಮಾಡಬೇಕು. ಆಕಾಶವು 'ಅಸ್ತಿತ್ವದಲ್ಲಿ ಉಂಟು' ಎನ್ನುವುದಾದರೆ ಅದು ತನ್ನದೇ ಆದ 'ಅವಕಾಶ' (space) ವನ್ನು ಹೊಂದಿರಬೇಕಾಗುತ್ತದೆ. ಏಕೆಂದರೆ ವಸ್ತುವೊಂದು ದೇಶರಹಿತ ಅವಸ್ಥೆಯಲ್ಲಿರಲಾರದು.

ಹಾಗಾದರೆ, 'ಧಾತು' ನಿಶ್ಶೂನ್ಯತೆಯನ್ನು (ರೂಪರಹಿತತೆಯನ್ನು) ಆಕಾಶದ ಲಕ್ಷಣವೆನ್ನಲಾಗದೆ? ವಸ್ತುವೊಂದು ಇಲ್ಲದಿರುವ ಸ್ಥಿತಿಯೇ ಆಕಾಶದ ಲಕ್ಷಣವೆಂದು ಆರೋಪಿಸುವುದು ಉರಿಯನ್ನು ಸಂದಿಸಿದಾಗ ಉಂಟಾಗುವುದಕ್ಕೆ ಸಮಾನವಾದುದು. ಇವು ಕೇವಲ ನಿರಾಕರಣೆಗಳೇ ಹೊರತು ಮತ್ತೊಂದು ಇರುವುದರ ಸ್ವೀಕರಣೆಗಳಲ್ಲ. ಮತ್ತೊಂದು ಸಾಧ್ಯತೆಯೆಂದರೆ ರೂಪವು ಅನಿತ್ಯವಾದರೆ ಆಕಾಶವು ನಿತ್ಯವಾದುದು ಎಂಬ ವಾದ. ಹಾಗಾದರೆ ರೂಪಕ್ಕೆ ಮುನ್ನವೇ ಆಕಾಶ 'ಇರಬೇಕಾಗುತ್ತದೆ'. 'ರೂಪಕ್ಕೆ' ಮುನ್ನವೇ 'ರೂಪರಹಿತತೆ' ಹೇಗೆ ಸಾಧ್ಯ? ರೂಪರಹಿತತೆಯನ್ನು ಆಕಾಶದ ಲಕ್ಷಣವೆನ್ನುವುದಾದರೆ, ರೂಪರಹಿತತೆಯು 'ರೂಪ'ದ ಅವಳಿ ವೈರುಧ್ಯವಾಗಿರುವುದರಿಂದ ರೂಪದ ನೆರವಿಲ್ಲದೇ ಅದು ಗ್ರಹಿಕೆಗೆಬಾರದು. ರೂಪವುಂಟಾದರೆ ರೂಪರಹಿತತೆ ಇರದು. ಹಾಗಾದರೆ ಆಕಾಶದ ಲಕ್ಷಣವೆಲ್ಲಿ? ಆದುದರಿಂದ ಆಕಾಶವೆಂಬುದೊಂದು ಕೇವಲ ಹೆಸರೇ ಹೊರತು ಅದು ಇರುವ ವಸ್ತುವಲ್ಲ. ನಾಗಾರ್ಜುನ ಧಾತುಗಳ ಜ್ಞಾನವುಂಟಾಗುವುದು ಲಕ್ಷಣಗಳ ಮೂಲಕವೇ ಆದುದರಿಂದ ನಾಲ್ಕು ಸಾಧ್ಯತೆಗಳನ್ನಾಗಿ ವಿಂಗಡಿಸಿಕೊಂಡು ಪರೀಕ್ಷಿಸುತ್ತಾನೆ. (1) ಅಸ್ತಿತ್ವದಲ್ಲಿರುವ 'ಭಾವ'ವಾಗಿ (3) ಅಸ್ತಿತ್ವದಲ್ಲಿಲ್ಲದ 'ಅಭಾವ'ವಾಗಿ (3) 'ಲಕ್ಷ್ಯ'ವಾಗಿ (4) ಲಕ್ಷಣವಾಗಿ.

ಕಾರಿಕೆ1

'ಆಕಾಶಲಕ್ಷಣದ'ದ ಪೂರ್ವದಲ್ಲಿ ಆಕಾಶವಿರದು
ಲಕ್ಷಣ ಪೂರ್ವದಲ್ಲಿ ಅದಿರುವುದಾದರೆ
ಅದು ಲಕ್ಷಣರಹಿತವಾಗಿ ಇದೆ ಎಂದಾಗುತ್ತದೆ.

ಕಾರಿಕೆ2

ಲಕ್ಷಣರಹಿತವಾದದ್ದು ಎಲ್ಲೂ ಸಂಭವಿಸದು
ಲಕ್ಷಣರಹಿತ ವಸ್ತುವಿಲ್ಲವೆಂದಾಗ
ಲಕ್ಷಣಗಳು ಕಾಣಿಸಿಕೊಳ್ಳುವುದೆಲ್ಲ?

ಲಕ್ಷಣವಿಲ್ಲದೆ ವಸ್ತು ಸಂಭವಿಸುವುದು ಹೇಗೆ ಅಸಾಧ್ಯವೋ ಹಾಗೆಯೇ ವಸ್ತುವಿಲ್ಲದೇ ಲಕ್ಷಣಗಳು ಅಸ್ತಿತ್ವಕ್ಕೆ ಬರಲಾರವು. ಈ ಅನಿವಾರ್ಯ ಪರಸ್ಪರಾವಲಂಬನೆಯಲ್ಲಿಯೇ ಅವು ಸಂಭವಿಸಲು ಸಾಧ್ಯ. ಅಂದ ಮಾತ್ರಕ್ಕೆ ಎರಡನ್ನೂ ಭಿನ್ನ ಶಾಶ್ವತ ಘಟಕಾಂಶಗಳೆಂದೂ ಭಾವಿಸಲಾಗದು.

ಕಾರಿಕೆ3

ಲಕ್ಷಣಗಳಿರುವ ವಸ್ತುವಿನಲ್ಲಾಗಲೀ
ಲಕ್ಷಣಗಳಿರದ ವಸ್ತುವಿನಲ್ಲಾಗಲೀ
ಲಕ್ಷಣಗಳು ಅವಿರ್ಭವಿಸಲಾರವು.
ಲಕ್ಷಣರಹಿತ/ಲಕ್ಷಣಸಹಿತ (ಉಭಯ) ವಸ್ತುವಿನಲ್ಲಿಯೂ
ಅವು ಪ್ರವರ್ತಿಸಲಾರವು.

ಈಗಾಗಲೇ ಲಕ್ಷಣಗಳಿರುವ ವಸ್ತುವಿಗೆ ಲಕ್ಷಣಗಳು ವ್ಯಾಪಿಸುತ್ತವೆ ಎನ್ನುವುದು ಅತಿಶಯೋಕ್ತಿ. ಅದಾಗದು. ಲಕ್ಷಣಗಳಿಲ್ಲದೇ ವಸ್ತುವೊಂದು ಉಂಟಾಗಿದೆ ಎಂದಾದರೆ ಅದಕ್ಕೆ ಇವುಗಳ ಅಗತ್ಯವಿಲ್ಲ ; ಅದು ಸ್ವ-ಭಾವವುಳ್ಳದ್ದು ಎಂದಾಗುತ್ತದೆ. ಇನ್ನೂ ಲಕ್ಷಣಗಳಿರುವ / ಇಲ್ಲದಿರುವ ಎಂಬ ವಸ್ತುವಿಗೂ ಮೇಲಿನ ಕಾರಣಗಳಿಂದಾಗಿಯೇ ಲಕ್ಷಣಗಳ ಪ್ರವರ್ತತೆ ಅಸಾಧ್ಯ. ಇಲ್ಲಿಗೆ ಲಕ್ಷಣಗಳ ಸ್ವತಂತ್ರ ಅಸ್ತಿತ್ವದ ಪ್ರಾಪಂಚಿಕ ಸಾಧ್ಯತೆ ಮುಗಿಯಿತು. ಹಾಗಾದರೆ ಆಕಾಶ-ಲಕ್ಷಣವೆನ್ನುವುದು ಅದಿರುವುದಾದರೆ ಅದು ಸ್ವತಂತ್ರ ಅಸ್ತಿತ್ವವುಳ್ಳದ್ದಲ್ಲ.

ಕೋವಿ-ಕವಿ



ನ್ಯಾಯ ಹುಡುಕಲು
ಹೊರಟ
ಕಾವ್ಯಕೆ
ಕೋವಿ
ಮಾನದಂಡವಾದರೆ
ಕವಿ
ಕಟುಕನಾಗುತ್ತಾನೆ!

❍ ಟಿ.ಎಸ್. ರಾಜೇಂದ್ರ ಪ್ರಸಾದ್

ಕಾರಿಕೆ4

ಲಕ್ಷಣಗಳ ಅನ್ವಯ ಸಾಧ್ಯವಿಲ್ಲವೆಂದರೆ
ಲಕ್ಷ್ಯವೂ ಇರಲು ಸಾಧ್ಯವಿಲ್ಲ
ಲಕ್ಷ್ಯವು ಇಲ್ಲವೆಂದರೆ ಲಕ್ಷಣಗಳೂ ಅಸಂಭವ.

ಲಕ್ಷ-ಲಕ್ಷಣಗಳು ಭಿನ್ನ ಭಿನ್ನವೆಂದೋ, ಅಭಿನ್ನವೆಂದೋ ಭಾವಿಸುವುದರ ಮೂಲಕ ನಡೆಸುವ ವಸ್ತು ವಿಶ್ಲೇಷಣೆಯ ಕ್ರಮವೇ ಯುಕ್ತವಾದುದಲ್ಲವೆಂಬುದು ನಾಗಾರ್ಜುನನ ಅಭಿಮತ. ಈ ನಿಲುವು, ಭಿನ್ನಾಭಿನ್ನವಾದಗಳಿಂದ ವಸ್ತುವನ್ನಾಗಲೀ (ಅಂದರೆ ರೂಪವನ್ನಾಗಲೀ) ವಸ್ತು ರಹಿತತೆ (ಅಂದರೆ ಆಕಾಶವನ್ನಾಗಲೀ)ಯನ್ನಾಗಲೀ ಸಿದ್ಧಪಡಿಸಲು ಸಾಧ್ಯವಾಗದು. ಭಿನ್ನಾಭಿನ್ನ ಗ್ರಹಿಕೆಗಳನ್ನು ಮೊದಲು ಪರಿಭಾವಿಸಿ ನಂತರ ಅವುಗಳನ್ನು ದಾಟುವುದರಿಂದಲೂ ಪರಿಹಾರ ದೊರಕುವುದಿಲ್ಲ.

ಕಾರಿಕೆ5

ಲಕ್ಷ್ಯವೂ ಇಲ್ಲ ಲಕ್ಷಣವೂ ಇಲ್ಲ
ಲಕ್ಷ್ಯ-ಲಕ್ಷಣಗಳಿಂದ ಹೊರತಾದ
ಬೇರೊಂದು ಭಾವವೂ ಇಲ್ಲ.

ಕಾರಿಕೆ5

ಭಾವವೆಂಬುದೊಂದು ಇಲ್ಲವೆಂದಾಗ
ಯಾವುದರ ಅ-ಭಾವ ಇರಲು ಸಾಧ್ಯ?
ಭಾವ-ಅಭಾವಗಳು ಯಾವ ಭಿನ್ನ
ಭಾವಾಭವಗಳಿಂದ ಗುರುತಿಸಲ್ಪಡಬೇಕು?

-ನಾಗಾರ್ಜುನ ವಸ್ತು ಪ್ರಪಂಚವನ್ನೇ ನಿರಾಕರಿಸುತ್ತಾನೆಂದು ಭಾವಿಸಲಾಗದು. ಶಾಶ್ವತ ವಸ್ತು ರೂಪಗಳನ್ನಷ್ಟೇ ನಿರಾಕರಿಸುತ್ತಿದ್ದಾನೆ. ಶಾಶ್ವತ ಲಕ್ಷಣಗಳನ್ನು ನಿರಾಕರಿಸುತ್ತಾನೆ. ವಸ್ತುಗಳು ಇವೆಯೆಂದಾಕ್ಷಣ ಆ-ವಸ್ತುಗಳ ಕಲ್ಪನೆ ಉದಯಿಸುತ್ತದೆ. ವಸ್ತುಗಳಿಲ್ಲವೆಂದಾಗ ಅದರ ವಿರುದ್ಧವೂ ಕಲ್ಪನೆಗೆ ಬಾರದು. ಹಾಗಾಗಿ ಅವಳಿ ವೈರುಧ್ಯಗಳಲ್ಲಿ ಯಾವುದಾದರೊಂದರ ನಿರಸನ ಎರಡನ್ನೂ ನಿರಸನಗೊಳಿಸುತ್ತದೆ. ರೂಪವು ರೂಪರಹಿತತೆಯ ಭಾವಕ್ಕೆ ಕಾರಣವಾಗುತ್ತದೆ. ಹಾಗಾಗಿ ಆಕಾಶವೆಂಬುದು ನಿರಾಕರಣೆಯ ನಿರಾಕರಣೆ. ಮೊದಲು ವಸ್ತು ರೂಪ, ನಂತರ ರೂಪರಹಿತತೆ. ಅದೇ ಆಕಾಶಲಕ್ಷಣವೆಂಬ ಆರೋಪಿತ ಸಂಗತಿ. ವಸ್ತು ರೂಪವೂ ಇಲ್ಲ ಅದರ ಅವಳಿ ವೈರುಧ್ಯವಾದ ರೂಪರಹಿತತೆಯೂ ಇಲ್ಲ. ಹಾಗಾಗಿ ಆಕಾಶವಿಲ್ಲ.

ಕಾರಿಕೆ 2

ಆಕಾಶವು ಭಾವವೂ ಅಲ್ಲ ಅಭಾವವೂ ಅಲ್ಲ
ಲಕ್ಷ್ಯವೂ ಅಲ್ಲ ಲಕ್ಷಣವೂ ಅಲ್ಲ
ಉಳಿದ ಐದು ಧಾತುಗಳೂ ಆಕಾಶದಂತೆಯೇ.

ಕಾರಿಕೆ 8 ಅ 5:

ಭಾವಗಳನ್ನು ಅಸ್ತಿತ್ವವೆಂದೋ ನಾಸ್ತಿತ್ವವೆಂದೋ
ಗ್ರಹಿಸುವ ಅಲ್ಪಬುದ್ಧಿಯವರು
ಶಿವವೂ ಉಪಶಮೆಯೂ ಆದದ್ದನ್ನು ಗ್ರಹಿಸಲಾರರು.

ಪ್ರಪಂಚೋಪಶಮೆಯೆಂದರೆ ಭಾವಾಭಾವಗಳ ನಿರಾಕರಣೆ-ಸ್ವೀಕರಣೆಯಲ್ಲ. ಅವುಗಳ ಉಪಶಮೆಯಷ್ಟೆ. ಅಸ್ತಿತ್ವ-ನಾಸ್ತಿತ್ವ ಕಲ್ಪನೆಗಳು ಸಾಪೇಕ್ಷವಾದವು. ಒಂದರ ಸ್ವೀಕರಣೆ ಅಥವಾ ನಿರಾಕರಣೆ ಮತ್ತೊಂದರ ನಿರಾಕರಣೆ ಸ್ವೀಕರಣೆಗಳಷ್ಟೇ ಆಗಿರುತ್ತವೆ. ಇವೆರಡೂ ಭ್ರಾಂತಿಯ ತುದಿಗಳು ಎರಡನ್ನೂ ನಿರಾಕರಿಸಿದ ಮಧ್ಯಮ ಮಾರ್ಗವು ಮಂಗಳವಾದುದು ಮತ್ತು ಶಾಂತವಾದುದು. □

ಕಪ್ಪು ಮುಖದ ಕಪ್ಪು ಕಲ್ಲುಗಳು



ಬಯಲು ಸೀಮೆಯ ತವರಿನ
ಆ ಕಪ್ಪು ಕಲ್ಲಿನಲ್ಲಿ
ಯಾರ ಕಣ್ಣು ಅಡಗಿದಿಯೋ
ಯಾವುದೋ ನೋವಿನ ಕಥೆಗೆ
ಸುರಿಸುತ್ತಿದೆ ಕಣ್ಣೀರು
ಪಾಪ, ಪುಣ್ಯಗಳಿಗೆ ಗಜದೂರ ನಿಂತು.

ಈ ನೆಲದ ನೋವುಗಳನ್ನೆಲ್ಲ
ತನ್ನೆದೆಯಲ್ಲಿ ಅದುಮಿಕೊಂಡು
ಸಹಿಸುತ್ತಿದೆ, ಅಣ್ಣನನ್ನು ಕಳಕೊಂಡ ಅವ್ವನಂತೆ

ಹಕ್ಕಿಗಳ ಲದ್ದಿಮೆತ್ತಿದ ಮುಖಕ್ಕೆ
ದಿನ ದಿನವು ಇದೇ ಪಾಡು
ಗುಡಿ, ಗೋಪುರ, ಮಂದಿರದೊಳಗೆದ್ದಿದ್ದರೆ
ನೆಡೆಯಿತಿತ್ತು. ಅಭಿಷೇಕಾ, ನೈವೇದ್ಯಾ
ಬಿದ್ದಿದೆ ಕಾಲ ಕಸವಾಗಿ ಪಾಯಿಖಾನೆಯ
ಮೂಲೆಗಳಲ್ಲಿ

ಬಹಿರಂಗ ಬದುಕು ಬಯಲಾಯಿತು
ಅಂತರಂಗದ ಬೆಳಕೇ ಹೋಗು
ರೂಪ ಬಯಲು ಮಾಡು ಸಕಲ ಎದೆಗಳಲ್ಲೂ....
ಜೀವವಿದ್ದ ಮನುಷ್ಯನಿಗಿನ್ನ
ನಯವಾದ ಪೂರ್ವಿಕರ ಆ ಕಪ್ಪುಮುಖದ ಕಪ್ಪು
ಕಲ್ಲುಗಳೇ ಚೆನ್ನ

○ ಗಂಗಪ್ಪ ತಳವಾರ

ಅಭಿವೃದ್ಧಿಯ ಮುನ್ನೋಟ-೨೦೨೦



- ೮ -

ಡಾ. ಟಿ.ಆರ್. ಚಂದ್ರಶೇಖರ್

ಒಂದು ಕಂಪನಿಯ ಸಿಈಒಗೂ ದೇಶವೊಂದರ ಪ್ರಧಾನಿಗೂ ಇಲ್ಲಿ ವ್ಯತ್ಯಾಸವಿದ್ದಂತೆ ಕಾಣುತ್ತಿಲ್ಲ. ಕಾರ್ಪೊರೇಟ್ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವ 'ಮುನ್ನೋಟ' ತಂತ್ರವನ್ನು ಸರ್ಕಾರಗಳು ಕುರುಡಾಗಿ ಅನುಕರಿಸುತ್ತಿವೆ. ಅಂತಹ ಒಂದು ಅನುಕರಣೆಯ ಭಾಗವಾಗಿ ಕರ್ನಾಟಕ ಸರ್ಕಾರವು ಇದೀಗ ತನ್ನ 'ಕರ್ನಾಟಕ ಅಭಿವೃದ್ಧಿ ಮುನ್ನೋಟ-೨೦೨೦' ವರದಿಯನ್ನು ಸಿದ್ಧಪಡಿಸಿ ಸಾರ್ವಜನಿಕ ಚರ್ಚೆಗೆ ಬಿಡುಗಡೆಗೊಳಿಸಿದೆ. ಈ ವರದಿಯ ಹಿಂದಿರುವ ಸೈದ್ಧಾಂತಿಕ ಸಂಗತಿಗಳಾವುವು, ಅದು ಸಮಾಜದಲ್ಲಿ ಯಾವ ವರ್ಗಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತದೆ, ಇಲ್ಲಿ ವರದಿ ಹೇಳುತ್ತಿರುವುದಕ್ಕೂ ಮತ್ತು ವರದಿಯಲ್ಲಿ ಹುದುಗಿರುವ ಒಳ ರಾಜಕಾರಣಕ್ಕೂ ನಡುವೆ ಇರುವ ಸಂಬಂಧ ಎಂತಹದು, ಅದು ಎಷ್ಟರಮಟ್ಟಿಗೆ ಜನತಾಂತ್ರಿಕವಾಗಿದೆ, ಅದು ಯಾವ ಬಗೆಯ ಲಿಂಗ ಸಮಾನತೆಯನ್ನು ಪ್ರತಿಪಾದಿಸುತ್ತದೆ ಮುಂತಾದ ಸಂಗತಿಗಳನ್ನು ಪ್ರಬಂಧದಲ್ಲಿ ಚರ್ಚಿಸುವ ಉದ್ದೇಶವಿದೆ.

ಪ್ರಸ್ತಾವನೆ:

ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಮುನ್ನೋಟ ವರದಿಯನ್ನು ಸಿದ್ಧಪಡಿಸುವ ಕ್ರಮವೊಂದು ಇತ್ತೀಚೆಗೆ ವಾಡಿಕೆಗೆ ಬಂದಿದೆ. ಪ್ರತಿಯೊಂದು ದೇಶ-ಸರ್ಕಾರವೂ ಅಂತಹ ವರದಿಯನ್ನು ಸಿದ್ಧಪಡಿಸುವುದನ್ನು ವಿಶ್ವ ಸಂಸ್ಥೆಯು ಬಯಸುತ್ತದೆ. 'ವಾಷಿಂಗ್‌ಟನ್ ಕನ್‌ಸೆನ್ಸಸ್' ತಂತ್ರದ ಭಾಗವಾಗಿರುವ ವಿಶ್ವಸಂಸ್ಥೆ(ಐಬಿಆರ್‌ಡಿ), ಐಎಮ್‌ಎಫ್ ಮತ್ತು ವಿಶ್ವ ವ್ಯಾಪಾರ ಸಂಘಟನೆ(ಡಬ್ಲುಟಿಒ)ಗಳು ಅಭಿವೃದ್ಧಿಗೆ ಸಂಬಂಧಿಸಿದ ಮುನ್ನೋಟ ವರದಿಗಳನ್ನು ಸಿದ್ಧಪಡಿಸುವುದನ್ನು ಒಂದು ರೀತಿಯಲ್ಲಿ ಸದಸ್ಯ ರಾಷ್ಟ್ರಗಳಿಗೆ ಅನಿವಾರ್ಯವನ್ನಾಗಿ ಮಾಡಿಬಿಟ್ಟಿವೆ. ಈ ರೀತಿಯಲ್ಲಿ ಮುನ್ನೋಟ ವರದಿಯನ್ನು ಸಿದ್ಧಪಡಿಸುವುದನ್ನು ವಾಷಿಂಗ್‌ಟನ್ ಕನ್‌ಸೆನ್ಸಸ್ ಒತ್ತಾಯಿಸುತ್ತಿರುವುದಕ್ಕೂ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಮೇನೇಜ್‌ಮೆಂಟ್ ದೃಷ್ಟಿಕೋನ ಮತ್ತು ಕಾರ್ಪೊರೇಟ್ ಸಂಸ್ಕೃತಿ ಆದ್ಯತೆಯ ಸಂಗತಿಯಾಗುತ್ತಿರುವುದಕ್ಕೂ ನಡುವೆ ಸಂಬಂಧವಿದೆ. ಮೇನೇಜ್‌ಮೆಂಟ್ ಪ್ರಣಾಳಿಕೆಯಲ್ಲಿ ಮುನ್ನೋಟ ನಿಗದಿಪಡಿಸುವುದು ಅತ್ಯಂತ ಅಗತ್ಯವಾದ ಒಂದು ಕ್ರಮವಾಗಿದೆ. ಅದಿಲ್ಲದೆ ಅಲ್ಲಿ ಹುಲ್ಲುಕಡ್ಡಿಯು ಮುಂದೆ ಹೋಗುವುದಿಲ್ಲ. ಮುನ್ನೋಟ ಗುರಿಗಳು-ಅದನ್ನು ಈಡೇರಿಸಿಕೊಳ್ಳಲು ಇರುವ ಪರ್ಯಾಯ ತಂತ್ರಗಳು-ಅವುಗಳಲ್ಲಿ ಅತ್ಯಂತ ಸಮರ್ಥವಾದುದನ್ನು ಅಯ್ಕೆ ಮಾಡುವುದು-ಇವು ಮೇನೇಜ್‌ಮೆಂಟ್ ದೃಷ್ಟಿಕೋನದ ಅಂತರ್ಗತ ಭಾಗವಾಗಿವೆ. ಈ ಬಗೆಯ ಕಾರ್ಯತಂತ್ರದ ಹಿಂದೆ 'ಕಡಿಮೆ ಸಂಪನ್ಮೂಲಗಳ ಬಳಕೆ' ಮತ್ತು 'ಗರಿಷ್ಠ ಪ್ರತಿಫಲ' ಎಂಬ ಸಿದ್ಧಾಂತವು ಕೆಲಸ ಮಾಡುತ್ತಿರುತ್ತದೆ. ಹೀಗೆ ಮಾರುಕಟ್ಟೆಯಲ್ಲಿ ವರ್ತಿಸುವುದನ್ನು 'ರ್‍ಯಾಷನಲ್' ವರ್ತನೆಯೆಂದು ಕರೆಯಲಾಗುತ್ತದೆ. ಉದ್ದಿಮೆಗಳು ಮತ್ತು ಬ್ಯಾಂಕುಗಳು ಇಂದು ಇಂತಹ ಕ್ರಮಗಳನ್ನು ತಪ್ಪದೆ ಅಳವಡಿಸಿಕೊಳ್ಳಬೇಕಾಗಿದೆ. ಅವುಗಳ ಯಶಸ್ಸು ಅಂತಹ ನೀತಿ-ತಂತ್ರಗಳ ಮೇಲೆ ನಿಂತಿದೆಯೆಂದು ಹೇಳಲಾಗುತ್ತಿದೆ.

ಒಂದು ಉದ್ದಿಮೆಯ ನಿರ್ವಹಣೆಗೆ ಅಳವಡಿಸಿಕೊಳ್ಳುವ ಕ್ರಮಗಳನ್ನೇ ಒಂದು ಅರ್ಥಿಕತೆಯ ನಿರ್ವಹಣೆಗೂ ಅಳವಡಿಸಿಕೊಳ್ಳಬಹುದೆಂದು ಇಲ್ಲಿ ವಾದಿಸಲಾಗುತ್ತದೆ. ಒಂದು ಕಂಪನಿಯ ಸಿಈಒಗೂ ದೇಶವೊಂದರ ಪ್ರಧಾನಿಗೂ ಇಲ್ಲಿ ವ್ಯತ್ಯಾಸವಿದ್ದಂತೆ ಕಾಣುತ್ತಿಲ್ಲ. ಕಾರ್ಪೊರೇಟ್ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವ 'ಮುನ್ನೋಟ' ತಂತ್ರವನ್ನು ಸರ್ಕಾರಗಳು ಕುರುಡು ಕುರುಡಾಗಿ ಅನುಕರಿಸುತ್ತಿವೆ. ಅಂತಹ ಒಂದು ಅನುಕರಣೆಯ ಭಾಗವಾಗಿ ಕರ್ನಾಟಕ ಸರ್ಕಾರವು ಇದೀಗ ತನ್ನ 'ಕರ್ನಾಟಕ ಅಭಿವೃದ್ಧಿ ಮುನ್ನೋಟ-2020' ವರದಿಯನ್ನು ಸಿದ್ಧಪಡಿಸಿ ಅದನ್ನು ಸಾರ್ವಜನಿಕ ಚರ್ಚೆಗೆ ಬಿಡುಗಡೆಗೊಳಿಸಿದೆ. ಈ ವರದಿಯ ಹಿಂದಿರುವ ಸೈದ್ಧಾಂತಿಕ ಸಂಗತಿಗಳಾವುವು, ಅದು ಸಮಾಜದಲ್ಲಿ ಯಾವ ವರ್ಗಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತದೆ, ಇಲ್ಲಿ ವರದಿ ಹೇಳುತ್ತಿರುವುದಕ್ಕೂ ಮತ್ತು ವರದಿಯಲ್ಲಿ ಗುಪ್ತವಾಗಿ ಹುದುಗಿರುವ ಒಳ ರಾಜಕಾರಣಕ್ಕೂ ನಡುವೆ ಇರುವ ಸಂಬಂಧ ಎಂತಹದು. ಅದು ಎಷ್ಟರ ಮಟ್ಟಿಗೆ ಜನತಾಂತ್ರಿಕವಾಗಿದೆ, ಅದರ ಸಿದ್ಧತೆಯು ಎಷ್ಟರ ಮಟ್ಟಿಗೆ ಸಹ ಭಾಗಿತ್ವದಿಂದ ಕೂಡಿದೆ. ಅದು ಯಾವ ಬಗೆಯ ಲಿಂಗ ಸಮಾನತೆಯನ್ನು ಪ್ರತಿಪಾದಿಸುತ್ತದೆ ಮುಂತಾದ ಸಂಗತಿಗಳನ್ನು ಪ್ರಸ್ತುತ ಪ್ರಬಂಧದಲ್ಲಿ ಚರ್ಚಿಸುವ ಉದ್ದೇಶವಿದೆ. ಏಕೆಂದರೆ ಇದನ್ನು ಸಿದ್ಧಪಡಿಸಿ ಚರ್ಚೆಗೆ ಬಿಡುಗಡೆಗೊಳಿಸಿರುವ ಸರ್ಕಾರವು ಜನತಂತ್ರ ಮೌಲ್ಯಗಳ ಬಗ್ಗೆ ಇಟ್ಟುಕೊಂಡಿರುವ ನಂಬಿಕೆಯೇ ಇಂದು ಪ್ರಶ್ನೆಗೆ ಒಳಗಾಗುತ್ತಿದೆ. ಜನತಂತ್ರ ಕುರಿತಾದ ಸರ್ಕಾರದ ವಿಶ್ವಾಸದ ಬಗ್ಗೆ ಜನರಿಗೆ ಅನುಮಾನ ಉಂಟಾಗುವಂತೆ ಕರ್ನಾಟಕದಲ್ಲಿ ಇಂದು ಅನೇಕ ಘಟನೆಗಳು ಮೇಲಿಂದ ಮೇಲೆ ನಡೆಯುತ್ತಿವೆ. ಜನತಂತ್ರದ ಜೀವಾಳವಾದ ಚರ್ಚೆ-ಸಂವಾದ-ಭಿನ್ನಾಭಿಪ್ರಾಯ-ಲಿಂಗ ಸಮಾನತೆ ಮುಂತಾದ ಸಂಗತಿಗಳು, ಯಾವುದನ್ನು ಪ್ರಗತಿಪರ ಸಂಗತಿಗಳೆಂದು ಕರೆಯುತ್ತಿದ್ದೇವೆಯೋ ಅಂತಹ ಸಂಗತಿಗಳು, ರಾಜ್ಯದಲ್ಲಿ ಕೆಲವು ಶಕ್ತಿಗಳಿಂದ ವಿರೋಧವನ್ನು ಎದುರಿಸುತ್ತಿವೆ. ಆಳುವ ವರ್ಗವು ಜನತಂತ್ರದ ಬಗ್ಗೆ ಇಟ್ಟುಕೊಂಡಿರುವ ನಂಬಿಕೆಗಳು ಮತ್ತು ಬದ್ಧತೆ ಇಂದು ಪ್ರಶ್ನೆಗಳಿಗೆ ಒಳಗಾಗಿವೆ. ಈ ಸಂಗತಿಗಳು ನಮ್ಮನ್ನು ಕಾಡತೊಡಗಿವೆ. ಈ ಎಲ್ಲ ಸಂಗತಿಗಳ ಹಿನ್ನೆಲೆಯಲ್ಲಿ ನಾವು ಸರ್ಕಾರವು ಚರ್ಚೆಗೆ ಬಿಡುಗಡೆಗೊಳಿಸಿರುವ 'ಕರ್ನಾಟಕವು 2020ರಲ್ಲಿ ಹೇಗಿರಬೇಕು' ಎಂಬುದನ್ನು ಕುರಿತ ವರದಿಯನ್ನು ಪರಾಮರ್ಶಿಸಬೇಕಾಗುತ್ತದೆ. ಬಹಳ ವಿಚಿತ್ರವಾದ ಸಂಗತಿಯೆಂದರೆ ಒಂದು ಕಡೆ ವಿದ್ವಾಂಸರ ವೈಚಾರಿಕ ಸ್ವಾತಂತ್ರ್ಯವನ್ನು ಪ್ರಶ್ನಿಸುವ ಸರ್ಕಾರವು ಮತ್ತೊಂದು ಕಡೆ ತನ್ನ ಯೋಜನೆ-ಯೋಚನೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಸಾರ್ವಜನಿಕ ಚರ್ಚೆಗೆ ಬಿಡುಗಡೆಗೊಳಿಸುತ್ತಿದೆ. ಇದೆಲ್ಲ ಜನರನ್ನು ದಾರಿ ತಪ್ಪಿಸುವ ಸರ್ಕಾರದ ಹುನ್ನಾರದ ಭಾಗವಾಗಿರಲೂಬಹುದು!..

ಮುನ್ನೋಟದ ಸೈದ್ಧಾಂತಿಕ ನೆಲೆಗಟ್ಟು

ಈ ವರದಿಯ ಹಿಂದೆ ಕೆಲಸ ಮಾಡಿರಬಹುದಾದ ಸೈದ್ಧಾಂತಿಕ ಸಂಗತಿ ಯಾವುದಿರಬಹುದೆಂದು ಸೂಕ್ಷ್ಮವಾಗಿ ಪರಿಶೀಲಿಸ ತೊಡಗಿದರೆ ನಾವು ಪೂರ್ಣವಾಗಿ ಗೊಂದಲದಲ್ಲಿ ಬೀಳುವುದು ಖಚಿತ. ಏಕೆಂದರೆ ಇಲ್ಲಿ ಅನೇಕ ಸೈದ್ಧಾಂತಿಕ ಸಂಗತಿಗಳನ್ನು ಮತ್ತೆ ಮತ್ತೆ ಉಲ್ಲೇಖಿಸಾಗಿದೆ. ಈ ವರದಿಯನ್ನು ಸಿದ್ಧಪಡಿಸಿರುವ ತಜ್ಞರ ಅಥವಾ ತಜ್ಞರ ಸಮಿತಿಯ ಸದಸ್ಯರ ಹೆಸರನ್ನು ಬಹಿರಂಗಗೊಳಿಸಿಲ್ಲ. ಯಾಕೆ ಬಹಿರಂಗಗೊಳಿಸಿಲ್ಲ ಎಂಬುದು ಕುತೂಹಲಕಾರಿಯಾದುದಾಗಿದೆ. ಈ ವರದಿಯನ್ನು ಸಿದ್ದಪಡಿಸಲು ಸರ್ಕಾರಕ್ಕೆ ಎಷ್ಟು ಖರ್ಚು ಬಂತು ಎಂಬುದರ ವಿವರಗಳೂ ಅಲ್ಲಿ ಇಲ್ಲ. ಸೈದ್ಧಾಂತಿಕ ಸಂಗತಿ ಬಗ್ಗೆ ವರದಿಯು ತುಂಬಾ 'ಪಾಪುಲಿಸ್ಟ್' ಧೋರಣೆ ತಳೆದಂತೆ ಕಾಣುತ್ತದೆ. ಅಮರ್ತ್ಯಸೆನ್‌ನ 'ಧಾರಣಾ ಸಾಮರ್ಥ್ಯ' ಮತ್ತು 'ಸ್ವಾತಂತ್ರವಾಗಿ ಅಭಿವೃದ್ಧಿ' ಎಂಬ ಸಿದ್ಧಾಂತಗಳನ್ನು ಮತ್ತೆ ಮತ್ತೆ ವರದಿಯಲ್ಲಿ ನೆನಪಿಸಿಕೊಳ್ಳಲಾಗಿದೆ. ಯುಎನ್‌ಡಿಪಿಯ ಮಾನವ

ಅಭಿವೃದ್ಧಿ ವರದಿಗಳ ಬಗ್ಗೆಯೂ ಇಲ್ಲಿ ಮಾತನಾಡಲಾಗಿದೆ. ಡಾ.ಡಿ.ಎಮ್. ನಂಜುಂಡಪ್ಪ ಸಮಿತಿಯ ಪ್ರಾದೇಶಿಕ ಅಸಮಾನತೆ ನಿವಾರಣಾ ಉನ್ನತಾಧಿಕಾರಿ ಸಮಿತಿ ಅಧ್ಯಯನ ವರದಿಯ ಬಗ್ಗೆಯೂ ಇಲ್ಲಿ ವಿವರಗಳನ್ನು ನೀಡಲಾಗಿದೆ. ಸಹ ಸ್ರಮಾನ ಅಭಿವೃದ್ಧಿ ಗುರಿಗಳನ್ನು ಕುರಿತಂತೆಯೂ ಚರ್ಚೆ ಮಾಡಲಾಗಿದೆ. ಇಲ್ಲಿ ಯಾವುದನ್ನು ಬಿಡಲಾಗಿದೆಯೆಂಬ ಎಂಬ ಪ್ರಶ್ನೆಗಿಂತ ಯಾವುದನ್ನು ಸೇರಿಸಿಲ್ಲವೆಂಬ ಪ್ರಶ್ನೆಯು ಹೆಚ್ಚು ಸೂಕ್ತವೆಂದು ಭಾವಿಸಬಹುದಾಗಿದೆ. ಇಷ್ಟಾದರೂ ವರದಿಯ ಮೂಲದಲ್ಲಿ ಕೆಲಸಮಾಡಿರುವ ಸೈದ್ಧಾಂತಿಕ ಪ್ರಣಾಳಿಕೆ ಯಾವುದೆಂಬುದು ತಿಳಿಯುವುದಿಲ್ಲ.

ಬಹಳ ಸ್ಪಷ್ಟವಾಗಿ ಹೇಳಬಹುದಾದ ಮಾತೆಂದರೆ ಈ ವರದಿಯ ಮೂಲದಲ್ಲಿ ಚಾಲಕ ಶಕ್ತಿಯಾಗಿ ಕೆಲಸ ಮಾಡಿರುವ ಸಂಗತಿಗಳೆಂದರೆ ಒಂದು 'ಕಾರ್ಪೋರೇಟ್ ಸಂಸ್ಕೃತಿ' ಮತ್ತು ಎರಡನೆಯದು 'ಮೇನೇಜ್‌ಮೆಂಟ್ ದೃಷ್ಟಿಕೋನ'. ಪ್ರಸ್ತುತ ಕರ್ನಾಟಕದಲ್ಲಿ ಸ್ವಾತಂತ್ರದ ಬಗ್ಗೆ ದಿವ್ಯ ಅಸೂಯೆ ಮತ್ತು ಅಪಾರ ಅಪನಂಬಿಕೆ ಎಲ್ಲೆಲ್ಲೂ ವಿರಾಜಿಸುತ್ತಿರುವಾಗ ಮತ್ತು ಅವು ಕಣ್ಣಿಗೆ ರಾಚುವಂತೆ ಗೋಚರವಾಗುತ್ತಿರುವಾಗ ವರದಿಯಲ್ಲಿ ಅದರ ಬಗ್ಗೆ ಉಲ್ಲೇಖಿಸುವುದು ವಿಚಿತ್ರವಾಗಿ ಕಾಣುತ್ತದೆ. ಇದರಿಂದಾಗಿಯೇ ಅದರ ನಿಜ ನಂಬಿಕೆ ಬಗ್ಗೆ ಪ್ರಶ್ನೆಗಳು ನಮ್ಮಲ್ಲಿ ಸಹಜವಾಗಿ ಮೂಡುತ್ತವೆ.

ವರದಿಯ ಒಂದು ಭಾಗದಲ್ಲಿ ವರಮಾನದ ಏರಿಕೆಯಿಂದ ಮತ್ತು ಅದರ ತೀವ್ರ ಗತಿ ಬೆಳವಣಿಗೆಯಿಂದ ಬಡತನವನ್ನು ಮತ್ತು ಅಸಮಾನತೆಯನ್ನು ನಿವಾರಿಸಬಹುದೆಂದು ಹೇಳಲಾಗಿದೆ. ಇದು ವರದಿಯಲ್ಲಿ ಮತ್ತೆ ಮತ್ತೆ ಉಲ್ಲೇಖಿಸುತ್ತಿರುವ ಅಮರ್ತ್ಯಸೇನ್‌ನ ಸೈದ್ಧಾಂತಿಕ ನಂಬಿಕೆಗೆ ವಿರುದ್ಧವಾದುದಾಗಿದೆ. ಅಮರ್ತ್ಯಸೇನ್, ಮೆಹಬೂಬ್ ಉಲ್ ಹಕ್, ಮಾರ್ಥ ನುಸುಬೌಮ್, ಜೊಸೆಫ್ ಸ್ಟಿಗ್‌ಲಿಟ್ಜ್, ಪಾಲ್ ಕೃಗ್‌ಮನ್ ಮುಂತಾದವರು ವರಮಾನದ ಏರಿಕೆಯಿಂದ ಬಡತನ ನಿವಾರಣೆಯಾಗುತ್ತದೆಯೆಂಬ ನಂಬಿಕೆ ಬಗ್ಗೆ ತಮ್ಮ ಅನುಮಾನಗಳನ್ನು ಸಂಶೋಧನೆ ಮತ್ತು ಅಧ್ಯಯನಗಳ ಆಧಾರಗಳ ಮೇಲೆ ಮಂಡಿಸುತ್ತಿದ್ದಾರೆ. ಸೈದ್ಧಾಂತಿಕವಾಗಿ ವರದಿಯು ಬಹಿರಂಗವಾಗಿ ಹೇಳುತ್ತಿರುವುದು ಒಂದಾದರೆ ಅದು ಪ್ರಚ್ಛನ್ನವಾಗಿ ಪ್ರತಿಪಾದಿಸುತ್ತಿರುವುದು ಬೇರೊಂದಾಗಿದೆ. ಈ ವರದಿಯ ಪರಿಭಾಷೆಯು ಸ್ವಾತಂತ್ರ್ಯ ಮತ್ತು ಸಹಭಾಗಿತ್ವವಾದಿಯಾದುದಲ್ಲ. ಈ ವರದಿಯಲ್ಲಿ ಜನರು ಅಭಿವೃದ್ಧಿಯ ಧಾತುಗಳೆಂದು ಹೇಳಲಾಗಿದೆ. ಆದರೆ ಈ ವರದಿಯನ್ನು ರೂಪಿಸಿರುವ ಸಿದ್ಧಾಂತವು 'ಸರಕು-ಸಾಮಗ್ರಿ-ಬಂಡವಾಳ' ಕೇಂದ್ರಿತವಾದುದಾಗಿದೆ. ಇಲ್ಲಿ ಜನರ ಪರಿಭಾಷೆ ಮೂಲೆಗುಂಪಾಗಿ ಉದ್ಯಮಿಗಳ, ಮೇನೇಜ್‌ಮೆಂಟ್ ತಜ್ಞರ, ಕೋರ್ಪೊರೇಟ್ ಸಂಸ್ಕೃತಿಯ ಪರಿಭಾಷೆ ವಿಜೃಂಭಿಸುತ್ತಿದೆ. ವರಮಾನದ, ಉತ್ಪನ್ನದ ಮತ್ತು ಉದ್ಯೋಗಗಳ ಏರಿಕೆಯೇ ಅಭಿವೃದ್ಧಿಯೆಂಬ ಪ್ರಣಾಳಿಕೆಯ ಚೌಕಟ್ಟಿನಲ್ಲಿ ಪ್ರಸ್ತುತ ವರದಿ ಸಿದ್ಧವಾಗಿರುವಂತೆ ಕಾಣುತ್ತದೆ. ಇಷ್ಟಾಗಿ ಬಿಟ್ಟರೆ ಅಂದರೆ ವರಮಾನ, ಉತ್ಪನ್ನ, ಉದ್ಯೋಗ ಮುಂತಾದವುಗಳಲ್ಲಿ ಏರಿಕೆಯಾಗಿ ಬಿಟ್ಟರೆ ಉಳಿದ ಸಂಗತಿಗಳಾದ ಬಡತನ, ಹಸಿವು, ಅನಕ್ಷರತೆ, ಅಸ್ವಸ್ಥತೆ ಮು. ತಮ್ಮಷ್ಟಕ್ಕೆ ತಾವು ಪರಿಹಾರವಾಗಿಬಿಡುತ್ತವೆಯೆಂದು ಇಲ್ಲಿ ನಂಬಲಾಗಿದೆ.

ಪ್ರಾದೇಶಿಕ ಅಸಮಾನತೆ

ಕರ್ನಾಟಕದ ಅಭಿವೃದ್ಧಿಯ ಪ್ರಾಥಮಿಕ ವಿದ್ಯಾರ್ಥಿಗೂ ತಿಳಿದಿರುವ ಮುಖ್ಯ ಸಂಗತಿಯೆಂದರೆ ರಾಜ್ಯದಲ್ಲಿ ತುಂಬಾ ಗಂಭೀರವಾಗಿ ಅಭಿವೃದ್ಧಿಯನ್ನು ಕಳೆದ ಹತ್ತು-ಹದಿನೈದು ವರ್ಷಗಳಿಂದ ಕಾಡುತ್ತಿರುವ ಸಮಸ್ಯೆಯೆಂದರೆ ಪ್ರಾದೇಶಿಕ ಅಸಮಾನತೆ. ಆದರೆ ವರದಿಯಲ್ಲಿ ಡಾ.ಡಿ.ಎಮ್.ನಂಜುಂಡಪ್ಪ ಸಮಿತಿ ವರದಿಯನ್ನು ಅದರಲ್ಲಿನ ಸಿಸಿಡಿಐಯನ್ನು ಉಲ್ಲೇಖಿಸಿರುವುದನ್ನು ಬಿಟ್ಟರೆ ಅಲ್ಲಿ ಏನನ್ನು ಹೇಳಿಲ್ಲ. ಈ ವರದಿಯು ಸಲ್ಲಿಕೆಯಾಗಿ(2002) ಸುಮಾರು ಎಂಟು ವರ್ಷಗಳಾದ ಮೇಲೆ ಪ್ರಾದೇಶಿಕ ಅಸಮಾನತೆಯ ಸ್ಥಿತಿಗತಿ ಏನಾಗಿದೆಯೆಂಬುದರ ಬಗ್ಗೆ ವರದಿ ಬೆಳಕು ಚೆಲ್ಲಬೇಕಾಗಿತ್ತು. ಡಾ.ಡಿ.ಎಮ್. ನಂಜುಂಡಪ್ಪ ಸಮಿತಿ ವರದಿ ಸಲ್ಲಿಕೆಯಾದ ಮೇಲೆ ಸರ್ಕಾರದ ಅಭಿವೃದ್ಧಿ ನೀತಿಗಳಲ್ಲಿ ಏನಾದರೂ ಪ್ರಾದೇಶಿಕತೆ ಅನ್ನುವುದು ಅಭಿವ್ಯಕ್ತವಾಗುತ್ತಿದೆಯೇ? ಈ ಸಮಿತಿಯು ತಾನು ಕಂಡು ಹಿಡಿದಿದ್ದ 114 ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ಶಿಫಾರಸ್ಸು ಮಾಡಿದ್ದ ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಯನ್ನು 2007-08ರಲ್ಲಿ ಸರ್ಕಾರವು ಅನುಷ್ಠಾನಗೊಳಿಸುವಾಗ ಅನುದಾನ ಹಂಚಿಕೆಗೆ ಸಂಬಂಧಿಸಿದಂತೆ ಸಮಿತಿಯ ಸೂತ್ರವನ್ನು ಸರ್ಕಾರವು ಯಾಕೆ ಬದಲಾಯಿಸಿತು ಎಂಬುದರ ಬಗ್ಗೆ ಇಲ್ಲಿ ಚಕಾರವೆತ್ತಿಲ್ಲ. ಇದರಿಂದ ರಾಜ್ಯದ ಅತ್ಯಂತ ಹಿಂದುಳಿದ ಗುಲ್ಬರ್ಗಾ ವಿಭಾಗಕ್ಕೆ ಹೆಚ್ಚು ಹಾನಿಯಾಗುತ್ತದೆಯೆಂಬುದನ್ನು ವರದಿಯು ಗುರುತಿಸಿಲ್ಲ. ಎಂಟು ವರ್ಷದ ವಿಶೇಷ ಅಭಿವೃದ್ಧಿ ಯೋಜನೆ ಅಂಗವಾಗಿ ಅನುಷ್ಠಾನಗೊಳಿಸಿರುವ ಅನುದಾನ ಹಂಚಿಕೆಯ ಸರ್ಕಾರಿ ಸೂತ್ರ ಮತ್ತು ಅದನ್ನು ಆಧರಿಸಿದ ಅಭಿವೃದ್ಧಿ ನೀತಿಯು ಪ್ರಾದೇಶಿಕ ಅಸಮಾನತೆಯನ್ನು ಪರಿಹರಿಸುವುದಕ್ಕೆ ಪ್ರತಿಯಾಗಿ ಅದನ್ನು ಉಲ್ಬಣಗೊಳಿಸುತ್ತಿದೆ. ಇದನ್ನು ವರದಿಯು ಚರ್ಚೆ ಮಾಡಬೇಕಾಗಿತ್ತು. ಡಾ.ಡಿ.ಎಮ್. ನಂಜುಂಡಪ್ಪ ವರದಿಯ ಮೊದಲ ಶಿಫಾರಸ್ಸೆಂದರೆ ಸರ್ಕಾರವು ತಕ್ಷಣ ತನ್ನ ಪ್ರಾದೇಶಿಕ ಅಭಿವೃದ್ಧಿ ನೀತಿಯನ್ನು ರೂಪಿಸಬೇಕು ಎಂಬುದಾಗಿದೆ. ಆದರೆ ಅದನ್ನು ವರದಿ ಸಲ್ಲಿಕೆಯಾಗಿ ಎಂಟು ವರ್ಷಗಳಾದ ಮೇಲೂ ಸರ್ಕಾರ ಯಾಕೆ ಮಾಡಿಲ್ಲವೆಂಬುದನ್ನು ವರದಿಯು ತಿಳಿಸಬೇಕಾಗಿತ್ತು. ಪ್ರಾದೇಶಿಕ ಅಸಮಾನತೆಯೆಂಬುದು ಕೇವಲ ರಾಜಕೀಯ [illegible] ಉಪಯುಕ್ತವಾಗಿದೆಯೇ ವಿನಾ ಅದರಿಂದ ರಾಜ್ಯದ ಹಿಂದುಳಿದ ಪ್ರದೇಶಗಳಿಗೆ ಉಪಯೋಗವಾಗಿಲ್ಲ. ಇಂತಹ ಒಂದು ಗಂಭೀರ ಸಮಸ್ಯೆ ಬಗ್ಗೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಮುನ್ನೋಟವನ್ನು ನಿರ್ಧರಿಸುವ ಬಗ್ಗೆ ವರದಿಯು ಎಲ್ಲೂ ಮಾತನಾಡುತ್ತಿಲ್ಲ. ಈ ವರದಿಯ ಬಹುಮುಖ್ಯ ಮಿತಿಯೆಂದರೆ ಸಮಸ್ಯೆಯ ಸೂಕ್ಷ್ಮಗಳನ್ನು ಹಿಡಿಯುವುದರಲ್ಲಿ ವಿಫಲವಾಗಿರುವುದಾಗಿದೆ. ರಾಜ್ಯದಲ್ಲಿ 2020ರಲ್ಲಿ ಪ್ರಾದೇಶಿಕ ಅಸಮಾನತೆಯು ಪೂರ್ಣವಾಗಿ ನಿವಾರಣೆಯಾಗಬೇಕೆಂಬುದು ಮುನ್ನೋಟದ ಮೊದಲ ಗುರಿಯಾಗಬೇಕು. ಈ ವರದಿಯಲ್ಲಿ ಅದರ ಅನುಸಂಧಾನ ಸೂಕ್ತವಾಗಿ ನಡೆದಿಲ್ಲ. ಅನೇಕ ಸೂಚಿಗಳನ್ನು ಆಯ್ಕೆ ಮಾಡಿಕೊಂಡು ಅವುಗಳಿಗೆ ಸಂಬಂಧಿಸಿದಂತೆ ಮುನ್ನೋಟ ಗುರಿಗಳನ್ನು ನಿಗದಿಪಡಿಸಲಾಗಿದೆ. ಆದರೆ ಪ್ರಾದೇಶಿಕ ಅಸಮಾನತೆ ಕುರಿತಂತೆ ಒಂದೇ ಒಂದು ಮುನ್ನೋಟ ಗುರಿಯನ್ನು ವರದಿಯಲ್ಲಿ ಗುರುತಿಸಿಲ್ಲವೆಂಬುದು ಆಶ್ಚರ್ಯವುಂಟು ಮಾಡುತ್ತದೆ. ಡಾ.ಡಿ.ಎಮ್.ನಂಜುಂಡಪ್ಪ ಸಮಿತಿ ವರದಿಯ ಮುಖ್ಯ ಅಂಶವೆಂದರೆ ರಾಜ್ಯದ 114 ತಾಲ್ಲೂಕುಗಳ ಅಭಿವೃದ್ಧಿ ಸ್ಥಿತಿಯು ಕನಿಷ್ಟ ಎಂಟು ವರ್ಷಗಳಲ್ಲಿ ರಾಜ್ಯ ಮಟ್ಟದ ಅಭಿವೃದ್ಧಿಗೆ ಸಮನಾಗುವಂತಾಗಬೇಕು ಎಂಬುದಾಗಿದೆ. ಈ ಕಾರಣಕ್ಕೆ ಅದು ತಾಲ್ಲೂಕುಗಳ ಅಭಿವೃದ್ಧಿ ಮಟ್ಟವನ್ನು ಅಳತೆ ಮಾಡುವಾಗ ರಾಜ್ಯ ಮಟ್ಟದ ಅಭಿವೃದ್ಧಿಯನ್ನು 'ಒಂದು' ಎಂದಿಟ್ಟುಕೊಂಡು ತಾಲ್ಲೂಕುಗಳ ಸಿಸಿಡಿಐಯನ್ನು ಮಾಪನ ಮಾಡಿದೆ.

> **ಕರ್ನಾಟಕದ ಅಭಿವೃದ್ಧಿಯ ಪ್ರಾಥಮಿಕ ವಿದ್ಯಾರ್ಥಿಗೂ ತಿಳಿದಿರುವ ಮುಖ್ಯ ಸಂಗತಿಯೆಂದರೆ ರಾಜ್ಯದಲ್ಲಿ ತುಂಬಾ ಗಂಭೀರವಾಗಿ ಅಭಿವೃದ್ಧಿಯನ್ನು ಕಳೆದ ಹತ್ತು-ಹದಿನೈದು ವರ್ಷಗಳಿಂದ ಕಾಡುತ್ತಿರುವ ಸಮಸ್ಯೆಯೆಂದರೆ ಪ್ರಾದೇಶಿಕ ಅಸಮಾನತೆ. ಆದರೆ ವರದಿಯಲ್ಲಿ ಡಾ.ಡಿ.ಎಮ್.ನಂಜುಂಡಪ್ಪ ಸಮಿತಿ ವರದಿಯನ್ನು ಅದರಲ್ಲಿನ ಸಿಸಿಡಿಐಯನ್ನು ಉಲ್ಲೇಖಿಸಿರುವುದನ್ನು ಬಿಟ್ಟರೆ ಅಲ್ಲಿ ಏನನ್ನು ಹೇಳಿಲ್ಲ. ಈ ವರದಿಯು ಸಲ್ಲಿಕೆಯಾಗಿ(2002) ಸುಮಾರು ಎಂಟು ವರ್ಷಗಳಾದ ಮೇಲೆ ಪ್ರಾದೇಶಿಕ ಅಸಮಾನತೆಯ ಸ್ಥಿತಿಗತಿ ಏನಾಗಿದೆಯೆಂಬುದರ ಬಗ್ಗೆ ವರದಿ ಬೆಳಕು ಚೆಲ್ಲಬೇಕಾಗಿತ್ತು. ಈ ಸಮಿತಿಯು ತಾನು ಕಂಡು ಹಿಡಿದಿದ್ದ 114 ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ಶಿಫಾರಸ್ಸು ಮಾಡಿದ್ದ ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಯನ್ನು 2007-08ರಲ್ಲಿ ಸರ್ಕಾರವು ಅನುಷ್ಠಾನಗೊಳಿಸುವಾಗ ಅನುದಾನ ಹಂಚಿಕೆಗೆ ಸಂಬಂಧಿಸಿದಂತೆ ಸಮಿತಿಯ ಸೂತ್ರವನ್ನು ಸರ್ಕಾರವು ಯಾಕೆ ಬದಲಾಯಿಸಿತು ಎಂಬುದರ ಬಗ್ಗೆ ಇಲ್ಲಿ ಚಕಾರವೆತ್ತಿಲ್ಲ.**

ಪ್ರದೇಶ ನಿರ್ದಿಷ್ಟ ಅಭಿವೃದ್ಧಿ ನೀತಿ

ಈ ವರದಿಯಲ್ಲಿ ಮುನ್ನೋಟವನ್ನು ಅಖಂಡವಾಗಿ ನಿಗದಿಪಡಿಸಲಾಗಿದೆಯೆ ವಿನಾ ಪ್ರದೇಶ ನಿರ್ದಿಷ್ಟವಾಗಿಲ್ಲ. ಈ ರೀತಿಯ ಪ್ರದೇಶ ನಿರ್ದಿಷ್ಟ ದೃಷ್ಟಿಕೋನದ ಅಗತ್ಯವಿದೆ. ಮುನ್ನೋಟವನ್ನು ನಿಗದಿಪಡಿಸುವಾಗ ನಾವು ರಾಜ್ಯದ ಎಲ್ಲ ಜಿಲ್ಲೆ-ತಾಲ್ಲೂಕುಗಳನ್ನು ಒಂದೇ ತಕ್ಕಡಿಯಲ್ಲಿ ತೂಗುವುದು ಸರಿಯಾಗುವುದಿಲ್ಲ. ಡಾ.ಡಿ.ಎಮ್.ನಂಜುಂಡಪ್ಪ ಸಮಿತಿ ವರದಿಯ ಪ್ರಕಾರ ರಾಜ್ಯದಲ್ಲಿ ಮೂರು ಜಿಲ್ಲೆಗಳಲ್ಲಿ ಮಾತ್ರ ಅವುಗಳ ಎಲ್ಲ ತಾಲ್ಲೂಕುಗಳು ಹಿಂದುಳಿದಿರುವ ಸ್ಥಿತಿಯಲ್ಲಿವೆ. ರಾಯಚೂರು ಜಿಲ್ಲೆಯ ಎಲ್ಲ ಐದು ತಾಲ್ಲೂಕುಗಳು, ಗುಲಬರ್ಗಾ ಜಿಲ್ಲೆಯ ಎಲ್ಲ ಹತ್ತು ತಾಲ್ಲೂಕುಗಳು ಮತ್ತು ಕೊಪ್ಪಳ ಜಿಲ್ಲೆಯ ಎಲ್ಲ ನಾಲ್ಕು ತಾಲ್ಲೂಕುಗಳು ಹಿಂದುಳಿದಿರುವ ಸ್ಥಿತಿಯಲ್ಲಿವೆ. ಆದರೆ

ದಕ್ಷಿಣ ಕನ್ನಡ, ಉಡುಪಿ ಮತ್ತು ಕೊಡಗು ಜಿಲ್ಲೆಗಳ ಎಲ್ಲ [illegible] ಮಾನದಂಡದ ಸ್ಥಿತಿಯಲ್ಲಿದೆ. ಇವೆರಡೂ ಗುಂಪಿನ ಜಿಲ್ಲೆಗಳನ್ನು ಸಮಾನವಾಗಿ ಪರಿಗಣಿಸಲು ಬರುವುದಿಲ್ಲ. ಅದರಂತೆ ಮುನ್ನೋಟವು ಎಲ್ಲ ಜಿಲ್ಲೆಗಳಿಗೆ ಸಮಾನವಾಗಿರಲು ಸಾಧ್ಯವಿಲ್ಲ. ರಾಜ್ಯ ಮಟ್ಟದಲ್ಲಿ ಮುನ್ನೋಟ ನಿರ್ಧರಿಸುವಾಗ ಪ್ರಾದೇಶಿಕ ಭಿನ್ನತೆಗಳನ್ನು ಪರಿಗಣಿಸಬೇಕಾಗುತ್ತದೆ. ಈ ಬಗೆಯ ಪ್ರಾದೇಶಿಕ ಭಿನ್ನತೆಗಳಿಗೆ ವರದಿಯು ಸಹಸ್ಪಂದಿಯಾಗಿಲ್ಲ. ಅಥವಾ ಇದನ್ನು ಹೀಗೆ ಹೇಳಬಹುದು. ಈ ವರದಿಯು ಪ್ರಜ್ಞಾಪೂರ್ವಕವಾಗಿ ಪ್ರಾದೇಶಿಕತೆಯನ್ನು ಮುನ್ನೋಟ ನಿರ್ಧರಿಸುವಾಗ ಪರಿಗಣಿಸಿಲ್ಲ.

ಐದು ಪ್ರಮುಖ ಅಂಶಗಳು ಮತ್ತು ಹನ್ನೆರಡು ಕಾರ್ಯತಂತ್ರಗಳು

ಈ ವರದಿಯ ಕಂಡಿಕೆ 61 ಮತ್ತು 62 ರಲ್ಲಿ ಕ್ರಮವಾಗಿ ಅಭಿವೃದ್ಧಿ ಮುನ್ನೋಟಕ್ಕೆ ಸಂಬಂಧಿಸಿದಂತೆ ಐದು ಪ್ರಮುಖ ಅಂಶಗಳನ್ನು ಮತ್ತು ಹನ್ನೆರಡು ಕಾರ್ಯತಂತ್ರಗಳನ್ನು ಗುರುತಿಸಲಾಗಿದೆ. ಆದರೆ ಅಲ್ಲಿ ಒಂದಾದರೂ ಕೂಡ ಪ್ರಾದೇಶಿಕ ಅಸಮಾನತೆ ಬಗ್ಗೆ ಇಲ್ಲ. ಅಲ್ಲಿ ಲಿಂಗ ಸಮಾನತೆಯ ಬಗ್ಗೆ ಯಾವುದೆ ಉಲ್ಲೇಖವಿಲ್ಲ. ಪ.ಜಾ., ಪ.ಪಂ., ಹಿಂದುಳಿದವರು, ಮಹಿಳೆಯರು ಮತ್ತು ಹಿಂದುಳಿದ ಪ್ರದೇಶದ ಹಿಂದುಳಿದ ವರ್ಗಗಳ ಹಿತಾಸಕ್ತಿಗಳು ಕಾರ್ಯತಂತ್ರದಲ್ಲಿ ಪ್ರಜ್ಞಾಪೂರ್ವಕ ಅಂಗವಾಗಿ ಸೇರಿಲ್ಲ. ಯಾಂತ್ರಿಕವಾಗಿ ಸೇರಿಸಬೇಕು ಎಂಬ ಕಾರಣಕ್ಕೆ ಸೇರಿಸಿರುವಂತೆ ಕಾಣುತ್ತದೆ. ಆದರೆ ಬೆಂಗಳೂರಿನ ಬಗ್ಗೆ ಮಾತ್ರ ವಿಶೇಷವಾಗಿ ಉಲ್ಲೇಖಿಸಲಾಗಿದೆ. ಜಾಗತಿಕತೆ ಬಗ್ಗೆ ಮತ್ತು ಸಹಸ್ರಮಾನ ಅಭಿವೃದ್ಧಿ ಗುರಿಗಳ ಬಗ್ಗೆ ಇಲ್ಲಿ ಚರ್ಚೆ ಮಾಡಲಾಗಿದೆ. ಅದರೆ ನಮ್ಮನ್ನು ಕಿತ್ತು ತಿನ್ನುತ್ತಿರುವ ಪ್ರಾದೇಶಿಕ ಅಸಮಾನತೆ ಬಗ್ಗೆ,ಲಿಂಗ ಅಸಮಾನತೆ ಬಗ್ಗೆ ಮಾತ್ರ ಯಾವುದೆ ಸೂಚನೆಯಿಲ್ಲ!. ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸದೆ ವರದಿಯನ್ನು ಸಿದ್ಧಪಡಿಸಿದ ತಜ್ಞರು ಹೇಗೆ ನಮ್ಮ ಅಭಿವೃದ್ಧಿ ಸಾಧ್ಯವೆಂಬುದನ್ನು ಊಹಿಸಿಕೊಂಡರೆಂಬುದು ಒಗಟಿನಂತೆ ಕಾಣುತ್ತದೆ. ನಮ್ಮ ಹಿಂದುಳಿದ ಪ್ರದೇಶದಲ್ಲಿನ ಜನಸಂಖ್ಯೆಯು ಸರಿಸುಮಾರು ಒಂದು ಕೋಟಿಗೂ ಮಿರುತ್ತದೆ.

ನಮ್ಮ ಕನಸಿನ ಕರ್ನಾಟಕ

ಮುಂದಿನ 2020ರಲ್ಲಿ ಕರ್ನಾಟಕವು ಹೇಗಿರುತ್ತದೆ–ಹೇಗಿರಬೇಕು ಎಂದು ಕಲ್ಪಿಸಿಕೊಳ್ಳುವುದು ಒಂದು ಆದರ್ಶ. ಅದೊಂದು ಸುಂದರ ಕನಸು. ಅಂತಹ ಕನಸನ್ನು, ಕಲ್ಪನೆಯನ್ನು, ಆದರ್ಶವನ್ನು ಪ್ರಸ್ತುತ ವರದಿಯನ್ನು ಸಿದ್ಧಪಡಿಸಿದ ತಜ್ಞರು ಪರಿಭಾವಿಸಿಕೊಳ್ಳುವುದರಲ್ಲಿ ವಿಫಲರಾಗಿದ್ದಾರೆ. ನಿಜ, ಮುನ್ನೋಟವೆಂಬುದು ಅವಾಸ್ತವಿಕವಾಗಿರಬಾರದು. ಅವು ಸಾಧಿಸಿಕೊಳ್ಳಲು ಅಸಾಧ್ಯವಾಗುವಂತಹ ಮಹತ್ವಾಕಾಂಕ್ಷೆಯ ಗುರಿಗಳಾಗಿರಬಾರದು. ನಮಗೆ ಕನಸುಗಳಿರಬೇಕು, ಆದರ್ಶಗಳಿರಬೇಕು, ಕಲ್ಪನೆಗಳಿರಬೇಕು.ಆದರೆ ನಮ್ಮ ಕಾಲುಗಳು ಮಾತ್ರ ನೆಲದಲ್ಲಿ ಗಟ್ಟಿಯಾಗಿ ನೆಲೆಗೊಂಡಿರಬೇಕು.

ಬಡತನ, ಹಸಿವು, ಅನಕ್ಷರತೆ, ಅಸ್ವಸ್ಥತೆ, ಮತಾಂಧತೆ, ಲಿಂಗ ತಾರತಮ್ಯ, ಪರಮತಗಳ ಬಗ್ಗೆ ಅಸಹಿಷ್ಣುತೆಗಳಿಲ್ಲದ ಸುಂದರ ಕರ್ನಾಟಕವನ್ನು ಕಟ್ಟುವುದು ಹೇಗೆ? ಅಂತಹ ಕರ್ನಾಟಕವನ್ನು ಪರಿಭಾವಿಸಿಕೊಳ್ಳುವುದು ಹೇಗೆ?

ಈ ಆದರ್ಶದ, ಈ ಕನಸಿನ, ಈ ಕಲ್ಪನೆಯ ಕರ್ನಾಟಕವು ಬಂಡವಾಳ ಹೂಡಿಕೆಯಿಂದ, ಉತ್ಪಾದನೆಯನ್ನು ಆ ಸ್ಫೋಟಕಾರಿಯಾಗಿ ಏರಿಸುವುದರಿಂದ, ಎಂ.ಎನ್.ಸಿ.ಗಳಿಗೆ ನಮ್ಮ ಉದ್ದಿಮೆರಂಗವನ್ನು ಗುತ್ತಿಗೆ ನೀಡುವುದರಿಂದ, ಕಾರ್ಪೊರೇಟ್ ಸಂಸ್ಕೃತಿಗೆ ಮಣೆ ಹಾಕುವುದರಿಂದ, ಪರಮಾಣು ಶಕ್ತಿ ಸ್ಥಾವರಗಳನ್ನು ಕಣ್ಣು ಮುಚ್ಚಿಕೊಂಡು ನಿರ್ಮಿಸುವುದರಿಂದ, ಖನಿಜ ನಿಕ್ಷೇಪವನ್ನು ಮತಿಭ್ರಮಣೆಗೊಳಗಾದವರಂತೆ ಮುಂದಿನ ತಲೆಮಾರಿನ ಹಕ್ಕುಗಳ ಬಗ್ಗೆ ರವಷ್ಟೂ ಯೋಚನೆ ಮಾಡದೆ ದರೋಡೆ ಮಾಡುವುದರಿಂದ ಸಾಧ್ಯವಾಗುವುದಿಲ್ಲ.

ದ್ವೇಷ, ತಾರತಮ್ಯ, ಗುಂಡಾಗಿರಿ, ವೈಚಾರಿಕ ಸ್ವಾತಂತ್ರ್ಯದ ಬಗ್ಗೆ ಅಸೂಯೆ, ಲಿಂಗ ಸಮಾನತೆ ಬಗ್ಗೆ ಕೂಪಮಂಡೂಕತನಗಳಿಂದ ಆದರ್ಶ ಕರ್ನಾಟಕವನ್ನು ಕಟ್ಟುವುದು ಸಾಧ್ಯವಾಗುವುದಿಲ್ಲ.

'ದಯವಿಲ್ಲದ ಧರ್ಮವದೇವುದಯ್ಯ'ಎಂಬ ಪ್ರಣಾಳಿಕೆಯನ್ನು ನೀಡಿದ ನಾಡಿನಲ್ಲಿ ಇಂದು ದಯೆಯೆಂಬುದನ್ನು ಅಟ್ಟಾಡಿಸಿಕೊಂಡು ಚಂಡಾಡುತ್ತ ನಿರ್ನಾಮ ಮಾಡುತ್ತಿರುವ ಸಂದರ್ಭದಲ್ಲಿ ನಾವು ನಮ್ಮ ಆದರ್ಶದ, ಕನಸಿನ ಕರ್ನಾಟಕದ ಬಗ್ಗೆ ಮಾತನಾಡಬೇಕಾಗಿದೆ.

> **ಮುಂದಿನ 2020ರಲ್ಲಿ ಕರ್ನಾಟಕವು ಹೇಗಿರುತ್ತದೆ–ಹೇಗಿರಬೇಕು ಎಂದು ಕಲ್ಪಿಸಿಕೊಳ್ಳುವುದು ಒಂದು ಆದರ್ಶ. ಅದೊಂದು ಸುಂದರ ಕನಸು. ಅಂತಹ ಕನಸನ್ನು, ಕಲ್ಪನೆಯನ್ನು, ಆದರ್ಶವನ್ನು ಪ್ರಸ್ತುತ ವರದಿಯನ್ನು ಸಿದ್ಧಪಡಿಸಿದ ತಜ್ಞರು ಪರಿಭಾವಿಸಿಕೊಳ್ಳುವುದರಲ್ಲಿ ವಿಫಲರಾಗಿದ್ದಾರೆ. ನಿಜ, ಮುನ್ನೋಟವೆಂಬುದು ಅವಾಸ್ತವಿಕವಾಗಿರಬಾರದು. ಅವು ಸಾಧಿಸಿಕೊಳ್ಳಲು ಅಸಾಧ್ಯವಾಗುವಂತಹ ಮಹತ್ವಾಕಾಂಕ್ಷೆಯ ಗುರಿಗಳಾಗಿರಬಾರದು. ನಮಗೆ ಕನಸುಗಳಿರಬೇಕು, ಆದರೆ ನಮ್ಮ ಕಾಲುಗಳು ಮಾತ್ರ ನೆಲದಲ್ಲಿ ಗಟ್ಟಿಯಾಗಿ ನೆಲೆಗೊಂಡಿರಬೇಕು. ಬಡತನ, ಹಸಿವು, ಅನಕ್ಷರತೆ, ಅಸ್ವಸ್ಥತೆ, ಮತಾಂಧತೆ, ಲಿಂಗ ತಾರತಮ್ಯ, ಬಗ್ಗೆ ಅಸಹಿಷ್ಣುತೆಗಳಿಲ್ಲದ ಸುಂದರ ಕರ್ನಾಟಕವನ್ನು ಕಟ್ಟುವುದು ಹೇಗೆ? ಈ ಆದರ್ಶದ, ಈ ಕಲ್ಪನೆಯ ಕರ್ನಾಟಕವು ಬಂಡವಾಳ ಹೂಡಿಕೆಯಿಂದ, ಪರಮಾಣು ಶಕ್ತಿ ಸ್ಥಾವರಗಳನ್ನು ಕಣ್ಣು ಮುಚ್ಚಿ ಕೊಂಡು ನಿರ್ಮಿಸುವುದರಿಂದ, ಖನಿಜ ನಿಕ್ಷೇಪವನ್ನು ಮತಿಭ್ರಮಣೆಗೊಳಗಾದವರಂತೆ ಮುಂದಿನ ತಲೆಮಾರಿನ ಹಕ್ಕುಗಳ ಬಗ್ಗೆ ರವಷ್ಟೂ ಯೋಚನೆ ಮಾಡದೆ ದರೋಡೆ ಮಾಡುವುದರಿಂದ ಸಾಧ್ಯವಾಗುವುದಿಲ್ಲ.**

ಬಡತನ ಮತ್ತು ಅಸಮಾನತೆ

ಅಭಿವೃದ್ಧಿ ಮುನ್ನೋಟದಲ್ಲಿ ಬಡತನದ ಬಗ್ಗೆ ಮಾತನಾಡದಿದ್ದರೆ ಹೇಗೆ ಎಂಬ ಕಾರಣಕ್ಕೆ ಇಲ್ಲಿ ಅದನ್ನು ಕುರಿತಂತೆ ಚರ್ಚೆ ಮಾಡಿದಂತಿದೆ. ಅಲ್ಲದಿದ್ದರೆ ಬಡತನ ಕುರಿತಂತೆ ಅಂಕಿ-ಅಂಶಗಳನ್ನು ದಾಖಲಿಸುವ ವರದಿಯು ಅದು ಮಡುಗಟ್ಟಿಕೊಂಡಿರುವ ಪ.ಜಾ. ಮತ್ತು ಪ.ಪಂ. ಜನಸಮೂಹವನ್ನು ಕುರಿತಂತೆ ಪ್ರಜ್ಞಾಪೂರ್ವಕವಾಗಿ ಮಾತನಾಡುತ್ತಿತ್ತು. ಈ ಜನವರ್ಗದ ಸಾಕ್ಷರತೆ ಯಾಕೆ ಉಳಿದ ಜನವರ್ಗದ ಸಾಕ್ಷರತಾ ಪ್ರಮಾಣಕ್ಕಿಂತ ಕಡಿಮೆಯಿದೆ? ಯಾಕೆ ಅವರಲ್ಲಿ ಮಾತ್ರ ಭೂರಹಿತ ಕೂಲಿಕಾರರ ಪ್ರಮಾಣವು ಅಧಿಕವಾಗಿದೆ? ಯಾಕೆ ಈ ಸಮುದಾಯದಲ್ಲಿನ ಕುಟುಂಬಗಳು ಹೆಚ್ಚಾಗಿ ಗುಡಿಸಲುಗಳಲ್ಲಿ ವಾಸಿಸುತ್ತಿವೆ?. ಇಂತಹ ಸಂಗತಿಗಳ ಬಗ್ಗೆ ವರದಿಯಲ್ಲಿ ಪ್ರಶ್ನೆಗಳನ್ನು ಕೇಳಿಕೊಳ್ಳಲಾಗಿಲ್ಲ. ಇಲ್ಲಿ ಇಂತಹ ಪ್ರಶ್ನೆಗಳನ್ನು ಕೇಳಿ ಕೊಂಡಿಲ್ಲವೆಂಬುದು ಸಮಸ್ಯೆಯಲ್ಲ. ಇಲ್ಲಿನ ಸಮಸ್ಯೆಯೆಂದರೆ ಅದು ವರದಿಯ ಮೂಲದಲ್ಲಿ ಕೆಲಸ ಮಾಡಿರುವ 'ದೃಷ್ಟಿಕೋನ' ಮತ್ತು ಅದರ ಹಿಂದೆ ಚಾಲಕ ಶಕ್ತಿಯಾಗಿ ಕೆಲಸ ಮಾಡಿರುವ 'ಸೈದ್ಧಾಂತಿಕ' ನೆಲೆಗಟ್ಟು.

ಟ್ರಿಕಲ್ ಡೌನ್ ಥಿಯರಿಯನ್ನು ಚರಿತ್ರೆಯ ಕಸದ ಬುಟ್ಟಿಗೆ ಎಸೆದು ಬಹಳ ಕಾಲವಾಗಿದೆ. ಆದರೆ ಇಲ್ಲಿ ಅಂತಹ ಸಿದ್ಧಾಂತದ ಹಿನ್ನೆಲೆಯಲ್ಲಿ ಸಿದ್ಧ ಮಾಡಿರುವ ವರದಿ ನಮ್ಮ ಮುಂದಿದೆ. ಬಡತನದ ನಿವಾರಣೆಯು ಕೇವಲ ವರಮಾನವನ್ನು ಹೆಚ್ಚಿಸುವ ಸಂಗತಿಯಲ್ಲ. ಅದು ಬೇಕು. ಈ ವರದಿಯಲ್ಲಿ ಬಡತನ ನಿವಾರಣೆಯ ಸಂಗತಿಯನ್ನು ಚರ್ಚೆ ಮಾಡುತ್ತಾ ವರಮಾನದಲ್ಲಿನ ವರ್ಧನೆ ಮತ್ತು ವರಮಾನದ ಸಮಾನ ವಿತರಣೆ ಬಗ್ಗೆ ಹೆಚ್ಚಿನ ಒತ್ತು ನೀಡಲಾಗಿದೆ. ಜನರ ಧಾರಣಾ ಸಾಮರ್ಥ್ಯದ ವರ್ಧನೆ ಬಗ್ಗೆ ಒತ್ತು ನೀಡಿದಂತೆ ಕಾಣುತ್ತಿಲ್ಲ. ಈ ಧಾರಣಾ ಸಾಮರ್ಥ್ಯವು ಜನರ ಸಾಕ್ಷರತೆ, ಶಿಕ್ಷಣ, ಆರೋಗ್ಯ, ಆಹಾರ ಭದ್ರತೆ, ಲಿಂಗ ಸಮಾನತೆ ಮುಂತಾದ ಸಂಗತಿಗಳಿಂದ ಪ್ರಾಪ್ತವಾಗುತ್ತದೆ. ಅಂದರೆ ಇಲ್ಲಿ ಮಾನವ ಅಭಿವೃದ್ಧಿಯು ಸರ್ಕಾರದ ಆದ್ಯತೆಯ ಸಂಗತಿಯಾಗಬೇಕು. ಆದರೆ ವರದಿಯಲ್ಲಿ ಪರಿಶಿಷ್ಟರ(ಪ.ಜಾ.+ಪ.ಪಂ.) ಅಭಿವೃದ್ಧಿಯನ್ನು ಒಟ್ಟಾರೆ ರಾಜ್ಯದ ಅಭಿವೃದ್ಧಿಯಲ್ಲಿ ಸಮ್ಮಿಲನಗೊಳಿಸಿದಂತೆ ಕಂಡು ಬರುತ್ತದೆ. ಆರ್ಥಿಕತೆಯ ವರಮಾನದ ಮಟ್ಟವು ಉತ್ತಮವಾಗಿ ಬಿಟ್ಟರೆ ಅದು ತನ್ನಷ್ಟಕ್ಕೆ ತಾನು ಪರಿಶಿಷ್ಟರ, ಮಹಿಳೆಯರ, ವಂಚಿತರ, ಅಂಚಿನಲ್ಲಿರುವವರ ಹಿಂದುಳಿದ ಪ್ರದೇಶಗಳ ದುರ್ಬಲರ ಬಡತನವನ್ನು, ಅವರ ಧಾರಣಾ ಸಾಮರ್ಥ್ಯದಲ್ಲಿನ ಕೊರತೆಯನ್ನು ಪರಿಹರಿಸಿಬಿಡುತ್ತದೆ ಎಂದು ಇಲ್ಲಿ ನಂಬಲಾಗಿದೆ. ಇದು ಸಮಸ್ಯೆ. ಅವರ ಅಭಿವೃದ್ಧಿಯು ಒಟ್ಟಾರೆ ಅಭಿವೃದ್ಧಿಯ ಅಂತರ್ಗತ ಭಾಗವಾಗಬೇಕು, ನಿಜ. ಆದರೆ ಅವರ ಅಭಿವೃದ್ಧಿಗಾಗಿ ರೂಪಿಸಿರುವ ತಂತ್ರವೂ ಕೂಡ ಒಟ್ಟಾರೆ ಪ್ರಣಾಳಿಕೆಯಲ್ಲಿ ಮುಳುಗಿ ಹೋಗಬಾರದು. ಅದರಿಂದ ಸಮಸ್ಯೆಯನ್ನು ನಿವಾರಿಸುವುದು ಸಾಧ್ಯವಿಲ್ಲ. ಇದು ಈ ವರದಿಯಲ್ಲಿನ ಬಹು ಮುಖ್ಯ ಸಮಸ್ಯೆಯಾಗಿದೆ. ಸಾಮಾಜಿಕ ಅಸಮಾನತೆ ಬಗ್ಗೆ ವರದಿಯಲ್ಲಿ ಮಾತನಾಡಲಾಗಿದೆ. ಆದರೆ ಅದನ್ನು ವರಮಾನದ ಚೌಕಟ್ಟಿನಲ್ಲಿ ಪರಿಹರಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ವರದಿಯಲ್ಲಿ ಪ.ಜಾ. ಮತ್ತು ಪ.ಪಂ. ಕುರಿತಂತೆ ಪುರವಣಿ ರೂಪದಲ್ಲಿ ಚರ್ಚೆ ಮಾಡಲಾಗಿದೆಯೆ ವಿನಾ ಅದನ್ನು ಪ್ರಧಾನ ಪ್ರಣಾಳಿಕೆಯನ್ನಾಗಿ ಪರಿಭಾವಿಸಿ

ಕೊಂಡಿಲ್ಲ. ಈ ಬಗೆಯ ಅಖಂಡವಾದಿ ದೃಷ್ಟಿಕೋನ ದಿಂದ ನಮ್ಮ ಸಮಸ್ಯೆಯು ಬಗೆಹರಿಯುವುದಿಲ್ಲ.

ಸಾಕ್ಷರತೆ ಮತ್ತು ಶಿಕ್ಷಣ

ಇಂದು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಬಗ್ಗೆ ಮಾತನಾಡುವಾಗ ಇದುವರೆವಿಗೂ ಅಲ್ಲಿ ನಡೆದಿರುವ ಸಂಗತಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕಾಗುತ್ತದೆ. ನಮ್ಮ ಸಂದರ್ಭದಲ್ಲಿ 1 ರಿಂದ 7 ನೆಯ ತರಗತಿವರೆಗೆ ಸರಿ ಸುಮಾರು ಸಾರ್ವತ್ರೀಕರಣವನ್ನು ಸಾಧಿಸಿಕೊಂಡಿದ್ದೇವೆ. ಅದರ ಬಗ್ಗೆ ಅರೆಕೊರೆಗಳಿವೆ. ಅದು ಬೇರೆ ಸಂಗತಿ. ಈಗ ನಿಜವಾದ ಸಮಸ್ಯೆಯಿರುವುದು ಪ್ರಾಥಮಿಕ ದಿಂದ ಪ್ರೌಢಶಾಲಾ ಹಂತಕ್ಕೆ ನಡೆಯುವ ಪರಿವರ್ತನೆ. ಅಲ್ಲಿ ಶಾಲೆಯನ್ನು ಮಕ್ಕಳು ಮಧ್ಯದಲ್ಲಿ ಬಿಡುವ ಪ್ರಮಾಣವು ಅಧಿಕವಾಗಿದೆ. ಉದಾಹರಣೆಗೆ 2005-06ರಲ್ಲಿ ರಾಜ್ಯದಲ್ಲಿ ಏಳನೆಯ ತರಗತಿಗೆ ದಾಖಲಾದ ಮಕ್ಕಳ ಸಂಖ್ಯೆ 9.96 ಲಕ್ಷ. ಆದರೆ ಮರುವರ್ಷ ಅಂದರೆ 2006-07 ರಲ್ಲಿ ಎಂಟನೆಯ ತರಗತಿಗೆ ಹರಿದು ಬಂದ ಮಕ್ಕಳ ಸಂಖ್ಯೆ ಕೇವಲ 8.95 ಲಕ್ಷ. ಇಲ್ಲಿನ ಸೋರಿಕೆ 1.01ಲಕ್ಷ. ಈ ಹಂತದಲ್ಲಿ ಶಾಲೆಯನ್ನು ಮಧ್ಯದಲ್ಲಿ ಮಕ್ಕಳು ಬಿಡುವುದು ಹೆಚ್ಚಾಗಿ ಕಂಡುಬರುತ್ತದೆ. ಈ ಸಂಗತಿಯು ವರದಿಯ ಮುನ್ನೋಟ ನಿರ್ಧರಿಸುವ ಕ್ರಮಕ್ಕೆ ಆಧಾರವಾಗಬೇಕಾಗಿತ್ತು. ಆದರೆ ಅಂತಹ ಸಂಗತಿ ಇಲ್ಲಿ ಕಾಣುತ್ತಿಲ್ಲ.

ಜನಸಂಖ್ಯೆಯ ವಯೋಮಾನ ಸಂರಚನೆಯಲ್ಲಿ ಉಂಟಾಗುತ್ತಿರುವ ಬದಲಾವಣೆಯನ್ನು ಗುರುತಿಸಿರುವ ವರದಿಯು ಈಗ ಶಿಕ್ಷಣದಲ್ಲಿ ಮುಖ್ಯ ಗುರಿ ಅದರ ಗುಣಮಟ್ಟವನ್ನು ಉತ್ತಮಪಡಿಸುದರ ಬಗ್ಗೆ ಕೇಂದ್ರೀಕೃತವಾಗಿರಬೇಕು ಎಂಬುದೇನೋ ಸರಿ. ಇನ್ನು ಮುಂದೆ ಕರ್ನಾಟಕದಲ್ಲಿ ಒಮದನೆಯ ತರಗತಿಗೆ ಸೇರುವ ಮಕ್ಕಳ ಸಂಖ್ಯೆ ಹೆಚ್ಚಾಗುವುದಿಲ್ಲ. ಅದು ಕಡಿಮೆಯಾಗಬಹುದು. ಸಹಜವಾಗಿ ಇಲ್ಲಿ ಒತ್ತು ಗುಣಮಟ್ಟವನ್ನು ಉತ್ತಮಪಡಿಸುವುದರ ಬಗ್ಗೆ ಇರಬೇಕಾಗುತ್ತದೆ. ಆದರೆ ನಮ್ಮ ಪ್ರಾಥಮಿಕ ಶಾಲೆಗಳ ಸ್ಥಿತಿ ಹೇಗಿದೆಯೆಂಬುದನ್ನು ವರದಿಯು ಗ್ರಹಿಸಿದಂತೆ ಕಾಣಲಿಲ್ಲ. ಗ್ರಾಮೀಣ ಪ್ರದೇಶದಲ್ಲೂ ಇಂದು ಖಾಸಗಿ ಶಾಲೆಗಳ ಹಾವಳಿ ಅಧಿಕವಾಗುತ್ತಿದೆ. ಈ ಹಿನ್ನೆಲೆಯಲ್ಲಿ ನಮ್ಮ ಶಾಲೆಗಳ ಮತ್ತು ಶಿಕ್ಷಣದ ಗುಣಮಟ್ಟದ ಸುಧಾರಣೆ ಬಗ್ಗೆ ಮಾತನಾಡಬೇಕಾಗುತ್ತದೆ.

ಈ ಅಂಕಣದಲ್ಲಿ ಹಿಂದೆ(ನವೆಂಬರ್,ಸಂವಾದ 2008)ಬರೆದಿರುವಂತೆ ನಮಗೆ ಇಂದು ಶಾಲಾ ಕಟ್ಟಡಗಳನ್ನು ಒಂದು ಆಕರ್ಷಣೀಯ ಶೈಲಿಯಲ್ಲಿ ಕಟ್ಟುವುದು ಸಾಧ್ಯವಾಗಿಲ್ಲ. ಒಂದು ಕಾಲಕ್ಕೆ ಶಾಲಾ ಕಟ್ಟಡಕ್ಕೆ ಒಂದು ವಿನ್ಯಾಸವಿರುತ್ತಿತ್ತು. ಸಾಮಾನ್ಯವಾಗಿ ಇಡೀ ಊರಿನಲ್ಲಿ ಉನ್ನತವಾದ ಕಟ್ಟಡವೆಂದರೆ ಶಾಲಾ ಕಟ್ಟಡವಾಗಿರುತ್ತಿತ್ತು. ಈಗ ಅಂತಹ ಪರಿಸ್ಥಿತಿ ಇಲ್ಲ. ಯಾತಕ್ಕೂ ಬಾರದ ರೀತಿಯಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಲಾಗುತ್ತಿದೆ. ಹಣವನ್ನೇನೊ ಸಕಾರವು ಸರ್ವ ಶಿಕ್ಷಣ ಅಭಿಯಾನದಲ್ಲಿ ಸುರಿಯುತ್ತದೆ. ಆದರೆ ಶಾಲೆಗಳು ನಗುನಗುತ್ತ ಕಳಕಳಿಯಿಂದಿರುವಂತೆ ಕಾಣುತ್ತಿಲ್ಲ. ಅವುಗಳನ್ನು ನೋಡಿದರೆ ಅವುಗಳನ್ನು ಪ್ರವೇಶಿಸಬೇಕೆಂದು ಮನಸ್ಸು ಬರುವುದಿಲ್ಲ. ಬಡವರ ಶಾಲೆಗಳೆಂದರೆ ಹೇಗೆ ಕಟ್ಟಿದರೂ ನಡೆಯುತ್ತದೆಯೆಂಬ ಧೋರಣೆ ಅಲ್ಲಿ ಕೆಲಸ ಮಾಡುತ್ತಿರುವಂತೆ ಕಾಣುತ್ತದೆ. ಹಿಂದೆ ಶಾಲೆಯನ್ನು ಊರಿನ ಜನರು 'ತಮ್ಮ' ಶಾಲೆಯೆಂದು ಭಾವಿಸಿ ಹೆಮ್ಮೆ ಪಡುತ್ತಿದ್ದರು. ಅದನ್ನು ನಮ್ಮ ಊರಿನ ಅವಿಭಾಜ್ಯ ಅಂಗವೆಂದು ಭಾವಿಸುತ್ತಿದ್ದರು. ಸಮುದಾಯ ಮತ್ತು ಶಾಲೆಯ ನಡುವೆ ಕಂದರವಿರುತ್ತಿರಲಿಲ್ಲ. ಆದರೆ ಇಂದು ಅಂತಹ ಸ್ಥಿತಿ ಉಳಿದಿಲ್ಲ. ಗ್ರಾಮದ ಜನರು ಶಾಲೆಯನ್ನು 'ತಮ್ಮದೆಂದು'ಹೇಳಿಕೊಳ್ಳುವ ಸ್ಥಿತಿಯಲ್ಲಿಲ್ಲ. ಅದು ಈಗ 'ಸರ್ಕಾರ'ದ್ದಾಗಿದೆ. ಮೇಲಿನಿಂದ ಹೇರಿದ್ದಾಗಿದೆ. ಯಾರೋ ಬಂದು ಪಾಠ ಹೇಳಿಕೊಡುತ್ತಾರೆ. ಮತ್ತಾರೋ ಕಟ್ಟಡ ಕಟ್ಟಿ ಹೋಗುತ್ತಾರೆ. ಅಲ್ಲಿ ಕಾಂಟ್ರಕ್ಟ್ ದಾರರ ಪಾತ್ರವು ಮುಖ್ಯವಾಗುತ್ತದೆ. ಶಾಲೆಯು ಗ್ರಾಮಸ್ಥರ ಆಸ್ತಿಯಾಗಿ ಉಳಿದಿಲ್ಲ.

ಇಂದು ಅತ್ಯಂತ ದುಸ್ಥಿತಿ ಅನುಭವಿಸುತ್ತಿರುವ ಕೃಷಿರಂಗಕ್ಕೆ ಚೈತನ್ಯ ತುಂಬುವ ಬಗ್ಗೆ ನಾವು ಗಂಭೀರವಾಗಿ ಯೋಚಿಸಬೇಕಾಗಿದೆ. ಸರಿಸುಮಾರು 131 (2001) ಲಕ್ಷ ದುಡಿಮೆಗಾರರು ರಾಜ್ಯದಲ್ಲಿ ಅದನ್ನು ಜೀವನಾಧಾರಕ್ಕೆ ಅವಲಂಬಿಸಿಕೊಂಡಿದ್ದಾರೆ. ಆದರೆ ನಮ್ಮ ಕೃಷಿಯಲ್ಲಿ ಉತ್ಪಾದನೆಗೂ ಮತ್ತು ಅಲ್ಲಿನ ಉದ್ಯೋಗಕ್ಕೂ ನಡುವೆ ಅಸಂಗತತೆ ಉಂಟಾಗಿಬಿಟ್ಟಿದೆ. ಈ ಅಸಂಗತತೆಯನ್ನು ವರದಿಯು ಸರಿಯಾಗಿ ಗುರುತಿಸಿದೆ. ಇವೆರಡರ ನಡುವಿನ ಸಂಬಂಧದಲ್ಲಿ ಉಂಟಾಗಿರುವ ವಿಕೃತಿಯನ್ನು ವರದಿಯು ಕಂಡುಹಿಡಿದಿದೆ. ಆದರೆ ಅದಕ್ಕೆ ಅದು ಸೂಚಿಸಿರುವ ಪರಿಹಾರವು ಮಾತ್ರ ಪ್ರಶ್ನಾರ್ಹವಾಗಿದೆ. ಏಕೆಂದರೆ ಪ್ರಸ್ತುತ ಕೃಷಿಯನ್ನು ಅವಲಂಬಿಸಿಕೊಂಡಿರುವ ಶೇ55ರಷ್ಟು ದುಡಿಮೆಗಾರರನ್ನು 2020ರಷ್ಟೊತ್ತಿಗೆ ಶೇ35 ರಿಂದ 40 ಕ್ಕೆ ಇಳಿಸುವ ಮುನ್ನೋಟದ ಬಗ್ಗೆ ವರದಿಯು ಮಾತನಾಡುತ್ತಿದೆ. ಇದು ಪಶ್ಚಿಮದ ಅಭಿವೃದ್ಧಿ ಮಾದರಿಯ ಅನುಕರಣೆಯಿಂದ ಉಂಟಾಗಿರುವ ಪರಿಹಾರ. ಇಷ್ಟೊಂದು ಕೃಷಿ ದುಡಿಮೆಗಾರರನ್ನು ಎಲ್ಲಿಗೆ ಕಳುಹಿಸಬೇಕು?

ಹೀಗೆ ನಮ್ಮ ಶಾಲೆಗಳು ಒಂದು ರೀತಿಯಲ್ಲಿ ಅನಾಥವಾಗಿ ಬಿಟ್ಟಿವೆ. ಈ ಅನಾಥತೆಯನ್ನು ನಿವಾರಿಸಬೇಕಾಗಿದೆ. ಈ ವಿಕೃತಿಯಿಂದ ಉಂಟಾಗಿರುವ ಸಮಸ್ಯೆಯನ್ನು ವರದಿಯು ಹಿಡಿದಿಡಬೇಕಾಗಿತ್ತು. ಅದನ್ನು ನಿವಾರಿಸುವ ದಿಶೆಯಲ್ಲಿ ಮುನ್ನೋಟವನ್ನು ನಿರ್ಧರಿಸಬೇಕಾಗಿತ್ತು. ಇಲ್ಲಿ ಎಲ್ಲವೂ ಯಾಂತಿಕವಾಗಿ ನಡೆದಂತೆ ಭಾಸವಾಗುತ್ತಿದೆ. ಇದು ಬದಲಾಗಬೇಕು. ಮುನ್ನೋಟ ವರದಿಗಳು ಅಂತಹ ಆದರ್ಶದ ಬಗ್ಗೆ ಮಾತನಾಡಬೇಕು. ಒಂದು ಅರ್ಥದಲ್ಲಿ ಮುನ್ನೋಟವೆಂಬುದು ಒಂದು ಆದರ್ಶ. ಈ ಆದರ್ಶದ ಸೂಚನೆ ವರದಿಯ ಯಾವ ಭಾಗದಲ್ಲೂ ಗೋಚರಿ ಸುವುದಿಲ್ಲ.

ಕುಸಿತದ ಕೂಪದಲ್ಲಿ ನಮ್ಮ ಕೃಷಿ

ಇಂದು ಅತ್ಯಂತ ದುಸ್ಥಿತಿ ಅನುಭವಿಸುತ್ತಿರುವ ಕೃಷಿರಂಗಕ್ಕೆ ಚೈತನ್ಯ ತುಂಬುವ ಬಗ್ಗೆ ನಾವು ಗಂಭೀರವಾಗಿ ಯೋಚಿಸಬೇಕಾಗಿದೆ. ಸರಿಸುಮಾರು 131 (2001) ಲಕ್ಷ ದುಡಿಮೆಗಾರರು ರಾಜ್ಯದಲ್ಲಿ ಅದನ್ನು ಜೀವನಾಧಾರಕ್ಕೆ ಅವಲಂಬಿಸಿಕೊಂಡಿದ್ದಾರೆ. ಆದರೆ ನಮ್ಮ ಕ್ರಷಿಯಲ್ಲಿ ಉತ್ಪಾದನೆಗೂ ಮತ್ತು ಅಲ್ಲಿನ ಉದ್ಯೋಗಕ್ಕೂ ನಡುವೆ ಅಸಂಗತತೆ ಉಂಟಾಗಿಬಿಟ್ಟಿದೆ. ಈ ಅಸಂಗತತೆಯನ್ನು ವರದಿಯು ಸರಿಯಾಗಿ ಗುರುತಿಸಿದೆ. ಇವೆರಡರ ನಡುವಿನ ಸಂಬಂಧದಲ್ಲಿ ಉಂಟಾಗಿರುವ ವಿಕೃತಿಯನ್ನು ವರದಿಯು ಕಂಡುಹಿಡಿದಿದೆ. ಆದರೆ ಅದಕ್ಕೆ ಅದು ಸೂಚಿಸಿರುವ ಪರಿಹಾರವು ಮಾತ್ರ ಪ್ರಶ್ನಾರ್ಹವಾಗಿದೆ. ಏಕೆಂದರೆ ಪ್ರಸ್ತುತ ಕೃಷಿಯನ್ನು ಅವಲಂಬಿಸಿಕೊಂಡಿರುವ ಶೇ55ರಷ್ಟು ದುಡಿಮೆಗಾರರನ್ನು 2020ರಷ್ಟೊತ್ತಿಗೆ ಶೇ35 ರಿಂದ 40 ಕ್ಕೆ ಇಳಿಸುವ ಮುನ್ನೋಟದ ಬಗ್ಗೆ ವರದಿಯು ಮಾತನಾಡುತ್ತಿದೆ. ಇದು ಪಶ್ಚಿಮದ ಅಭಿವೃದ್ಧಿ ಮಾದರಿಯ ಅನುಕರಣೆಯಿಂದ ಉಂಟಾಗಿರುವ ಪರಿಹಾರ. ಇಷ್ಟೊಂದು ಕೃಷಿ ದುಡಿಮೆಗಾರರನ್ನು ಅಲ್ಲಿಂದ ಎತ್ತಂಗಡಿ ಮಾಡಿ ಎಲ್ಲಿಗೆ ಕಳುಹಿಸಬೇಕು? ಅಲ್ಲಿಂದ ಅವರನ್ನು ಪಲ್ಲಟಗೊಳಿಸಬೇಕೇಕೆ? ವಾಸ್ತವವಾಗಿ ರಾಜ್ಯದ ವಿಜಾಪುರ, ಗುಲಬರ್ಗಾ,ಕೊಪ್ಪಳ ಮುಂತಾದ ಹಿಂದುಳಿದಿರುವ ಜಿಲ್ಲೆಗಳಲ್ಲಿ ಕೃಷಿಯನ್ನು ಅವಲಂಬಿಸಿಕೊಂಡಿರುವವರ ಪ್ರಮಾಣ ಶೇ75 ದಾಟುತ್ತದೆ. ಕೃಷಿಕರಲ್ಲಿ ಕೂಲಿಕಾರರಾಗಿ ಅದನ್ನು ಅವಲಂಬಿಸಿಕೊಂಡಿರುವವರ ಸಂಖ್ಯೆಯೇ 60 ರಿಂದ 65 ಲಕ್ಷವಿದೆ. ಅವರಲ್ಲಿ 30 ರಿಂದ 35 ಲಕ್ಷದಷ್ಟು ಮಹಿಳಾ ದುಡಿಮೆಗಾರರಿದ್ದಾರೆ. ಇಷ್ಟೊಂದು ಜನರನ್ನು ಗುಳೆಯೆಬ್ಬಿಸಿ ಮಾಡುವುದೇನು? ಇದು ಪರಿಹಾರವಲ್ಲ. ಅದೇ ಪ್ರಸ್ತುತ ವರದಿಯ ಸಮಸ್ಯೆಯಾಗಿದೆ. ಹೀಗೆ ಅವರನ್ನು ಗುಳೆಯೆಬ್ಬಿಸುವುದಕ್ಕೆ ಪ್ರತಿಯಾಗಿ ಅಷ್ಟೂ ಜನಕ್ಕೆ ಕೃಷಿಯಲ್ಲೇ ದುಡಿಮೆ ನೀಡಲು ಸಾಧ್ಯವಿಲ್ಲವೆ? ಗ್ರಾಮಾಂತರ ಪ್ರದೇಶದಲ್ಲಿ ನಾವು ಅನೇಕ ಕೃಷಿಯೇತರ ಉದ್ಯೋಗಗಳನ್ನು ನಿರ್ಮಿಸಬಹುದು. ಗ್ರಾಮಾಂತರ ಪ್ರದೇಶದಲ್ಲೇ ಅವರಿಗೆ ಹೊಟ್ಟೆ ತುಂಬಾ ಕೂಳು, ಮೈತುಂಬಾ ಬಟ್ಟೆ, ಅಕ್ಷರ, ಆರೋಗ್ಯ, ಆಹಾರ ಭದ್ರತೆ, ಲಿಂಗ ಸಮಾನತೆ, ನೆಮ್ಮದಿ ನೀಡಲು ಸಾಧ್ಯವಿಲ್ಲವೆ? ನಮ್ಮ ಕನಸಿನ ಕರ್ನಾಟಕವು ಜನರನ್ನು ಒಳಗೊಳ್ಳುವಂತಿರಬೇಕೇ ವಿನಾ ಅವರನ್ನು ಗುಳೆಯೆಬ್ಬಿಸುವಂತಿರಬಾರದು.

ಕೊನೆಯ ಗುಟುಕು!

ಕುತೂಹಲದ ಸಂಗತಿಯೆಂದರೆ ವರದಿಯ ಇಂಗ್ಲೀಷ್ ಆವೃತ್ತಿಯಲ್ಲಿನ ಭಾಗ-3ರ ಶೀರ್ಷಿಕೆ ಪುಟದಲ್ಲಿ 'ಸರ್ವೇ ಭವಂತುಃ ಸುಖಿನಾಃ ಸರ್ವೇ ಸಂತು ನಿರಾಮಯಃ -ಎಂಬ ಸಂಸ್ಕೃತದ ಶ್ಲೋಕವನ್ನು ಉಲ್ಲೇಖಿಸಲಾಗಿದೆ. ಆದರೆ ಸದರಿ ಶ್ಲೋಕವನ್ನು ವರದಿಯ ಕನ್ನಡ ಆವೃತ್ತಿಯಲ್ಲಿ ನೀಡಿಲ್ಲ. ಯಾಕೆ ನೀಡಿಲ್ಲವೆಂಬುದು ಅರ್ಥವಾಗುತ್ತಿಲ್ಲ. ಅದು ಉದ್ದೇಶ ಪೂರ್ವಕವಾಗಿ ಮಾಡಲಾಗಿದೆಯೋ? ಅಥವಾ ಅದು ಕೇವಲ ಅಕಸ್ಮಾತ್ ಹಾಗೆ ನಡೆದು ಬಿಟ್ಟಿದೆಯೋ? ಕನ್ನಡದ ಪಾಮರರಿಗೆ ಸಂಸ್ಕೃತದ ಸ್ಪರ್ಶವೇಕೆಂದು ಅಥವಾ ಅವರಿಗೆ ಅದರ ಹಂಗೇಕೆಂದು ಹೀಗೆ ಮಾಡಲಾಗಿದೆಯೋ?. ಅಥವಾ ಕರ್ನಾಟಕಸ್ಥರ ಪ್ರತಿಕ್ರಿಯೆಯನ್ನು ಅಳೆದು ನೋಡಲು ನಡೆಸಿರುವ ಪರೀಕ್ಷಾ ಗುಟುಕೋ?. ಈ ಸರ್ಕಾರದ ಕನ್ನಡ ಅಭಿಮಾನದ ಬಗ್ಗೆ ಅನುಮಾನ ಉಂಟಾಗುವಂತೆ ಇದು ಕಾಣುತ್ತದೆ. □

ತಮ್ಮ 'ಇಮ್ಯಾಜಿನಿಂಗ್ ಇಂಡಿಯಾ' ಪುಸ್ತಕದಲ್ಲಿ ನಂದನ್ ನಿಲೇಕಣಿ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿ, ಉದಾರೀಕರಣ ಪೂರ್ವ ಬಂಡವಾಳಶಾಹಿಗಳಿಗೆ ತಲ್ಲಣ ಉಂಟುಮಾಡಿದ್ದಾರೆ. ಭಾರತೀಯ ಬಂಡವಾಳಶಾಹಿ ವ್ಯವಸ್ಥೆಯ ಸಾಮಾಜಿಕ ಲಕ್ಷಣದ ಬಗ್ಗೆ ಮುಖ್ಯವಾಹಿನಿಯ ಯಾವುದೇ ಬುದ್ಧಿಜೀವಿಗಳು ಅಥವಾ ಉದ್ಯಮಿಗಳು ಇದುವರೆವಿಗೂ ಮಾತನಾಡಿರಲಿಲ್ಲ. ಭೂಮಿ ಸಮತಟ್ಟಾಗಿಲ್ಲ ಎಂದು ಗುರುತಿಸಲು ನಂದನ್ ಬರುವವರೆಗೂ ಕಾಯಬೇಕಾಯಿತು. ನಂದನ್ ಕೂಡ ಮೊದಲ ಪೀಳಿಗೆಯ ಉದ್ಯಮಿಯಾಗಿದ್ದು, 'ಇಮ್ಯಾಜಿನಿಂಗ್ ಇಂಡಿಯಾ' ಕೃತಿಯಲ್ಲಿ ಹಲವಾರು ಸತ್ಯಗಳನ್ನು ಬಿಚ್ಚಿಟ್ಟಿದ್ದಾರೆ. ನಿಲೇಕಣಿ ಮತ್ತು ನಾರಾಯಣ ಮೂರ್ತಿ ಒಂದು ಸಂಸ್ಥೆಯನ್ನು ಆರಂಭಿಸಿ, ಜಾಗತಿಕ ಮಟ್ಟಕ್ಕೆ ಬೆಳೆಸಿದ್ದಷ್ಟೇ ಅಲ್ಲದೆ, ಭಾರತೀಯ ಬಂಡವಾಳಶಾಹಿ ವ್ಯವಸ್ಥೆಯಲ್ಲಿರುವ ಜಾತಿ ಏಕಸ್ವಾಮ್ಯತೆಯನ್ನು ಎದುರಿಸಿದ್ದಾರೆ.

ಕನ್ನಡಕ್ಕೆ:
ಸತ್ಯಪ್ರಕಾಶ್ ಎಂ ಆರ್

ಬಂಡವಾಳಶಾಹಿಯಲ್ಲಿ ಬದಲಾವಣೆ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ನನ್ನ ಮಾರ್ಕ್ಸಿಸ್ಟ್ ಸ್ನೇಹಿತರಿಗೆ ನೋವುಂಟು ಮಾಡುವ ಉದ್ದೇಶ ನನಗಿರಲಿಲ್ಲ. ಆದರೆ ಬಂಡವಾಳಶಾಹಿ ವ್ಯವಸ್ಥೆಯ ಉತ್ತಮ ಗುಣಗಳ ಬಗ್ಗೆ ಪ್ರಶಂಸೆಯ ಮಾತುಗಳನ್ನಾಡಲು ಆರಂಭಿಸಿದಾಗ ನನ್ನ ಬಹುತೇಕ ಮಾರ್ಕ್ಸಿಸ್ಟ್ ಸ್ನೇಹಿತರು ಮುಖಗಳ ವಕ್ರ ಮಾಡಿದರು. ರತನ್ ಟಾಟಾ ಕೈಕೆಳಗೆ ಕೆಲಸ ಮಾಡುವುದು ರಾಜಾ ಭಯ್ಯಾನಂತಹ ಭೂಮಾಲೀಕರ ಅಡಿಯಾಳಾಗಿರುವುದಕ್ಕಿಂತ ಉತ್ತಮ ಎಂದು ನನಗೆ ಮನವರಿಕೆಯಾಗಿದೆ. ದಲಿತ ಬಂಡವಾಳಶಾಹಿ ವ್ಯವಸ್ಥೆಯ ಬಗ್ಗೆ ಪ್ರಚಾರ ಮಾಡಲಾರಂಭಿಸಿದಾಗ ನನ್ನ ಮಾರ್ಕ್ಸಿಸ್ಟ್ ಸ್ನೇಹಿತರಿಗೆ ಅಸಾಧ್ಯವಾದ ಸಿಟ್ಟು ಬಂತು. ಆದರೆ, ಉದ್ಯಮಕ್ಕೆ ಮೊಟ್ಟ ಮೊದಲಿಗೆ ಕಾಲಿರಿಸಿರುವ ದಲಿತ ಉದ್ಯಮಿಗಳು– ಮುಂದಿನ ಬಂಡವಾಳಶಾಹಿಗಳು– ಉದ್ಯಮದ ಒತ್ತಡಗಳಿಗಿಂತ ಹೆಚ್ಚಾಗಿ, ಉದ್ಯಮದ ಮೇಲೆ ಹಿಡಿತ ಸಾಧಿಸಿರುವ ಜಾತಿಗಳ ವಿರುದ್ಧ ಹೋರಾಟ ಮಾಡಬೇಕಾಗಿರುವ ಬಗ್ಗೆ ನನ್ನ ಆತಂಕವಿದೆ.

ತಮ್ಮ 'ಇಮ್ಯಾಜಿನಿಂಗ್ ಇಂಡಿಯಾ' ಪುಸ್ತಕದಲ್ಲಿ ನಂದನ್ ನಿಲೇಕಣಿ ಹಲವಾರು ಇರಿಸು ಮುರಿಸಾಗುವಂತಹ ವಿಚಾರಗಳನ್ನು ಪ್ರಸ್ತಾಪ ಮಾಡಿ, ಉದಾರೀಕರಣ ಪೂರ್ವ ಬಂಡವಾಳಶಾಹಿಗಳಿಗೆ ತಲ್ಲಣ ಉಂಟುಮಾಡಿದ್ದಾರೆ. ಭಾರತೀಯ ಬಂಡವಾಳಶಾಹಿವ್ಯವಸ್ಥೆಯ ಸಾಮಾಜಿಕ ಲಕ್ಷಣದ ಬಗ್ಗೆ ಮುಖ್ಯವಾಹಿನಿಯ ಯಾವುದೇ ಬುದ್ಧಿಜೀವಿಗಳು ಅಥವಾ ಉದ್ಯಮಿಗಳು (ಉದಾರವಾದಿಗಳಾದ ಟಾಟಾದವರು ಸೇರಿದಂತೆ) ಇದುವರೆವಿಗೂ ಮಾತನಾಡಿರಲಿಲ್ಲ. ಭೂಮಿ ಸಮತಟ್ಟಾಗಿಲ್ಲ ಎಂದು ಗುರುತಿಸಲು ನಂದನ್ ಬರುವವರೆಗೂ ಕಾಯಬೇಕಾಯಿತು. ನಂದನ್ ಕೂಡ ಮೊದಲ ಪೀಳಿಗೆಯ ಉದ್ಯಮಿಯಾಗಿದ್ದು, 'ಇಮ್ಯಾಜಿನಿಂಗ್ ಇಂಡಿಯಾ' ಕೃತಿಯಲ್ಲಿ ಹಲವಾರು ಕಟು ಸತ್ಯಗಳನ್ನು ಬಿಚ್ಚಿಟ್ಟಿದ್ದಾರೆ. ನಿಲೇಕಣಿ ಮತ್ತು ನಾರಾಯಣ ಮೂರ್ತಿ ಒಂದು ಸಂಸ್ಥೆಯನ್ನು ಆರಂಭಿಸಿ, ಜಾಗತಿಕ ಮಟ್ಟಕ್ಕೆ ಬೆಳೆಸಿದ್ದಷ್ಟೇ ಅಲ್ಲದೆ, ಭಾರತೀಯ ಬಂಡವಾಳಶಾಹಿ ವ್ಯವಸ್ಥೆಯಲ್ಲಿರುವ ಜಾತಿ ಏಕಸ್ವಾಮ್ಯತೆಯನ್ನು ಯಶಸ್ವಿಯಾಗಿ ಎದುರಿಸಿದ್ದಾರೆ.

'ತೆಹಬಜ್ಹಾರಿ' ಪರವಾನಗಿ ಪದ್ಧತಿ ಮೊದಲ ಪೀಳಿಗೆಯ ಉದ್ಯಮಿಗಳಿಗೆ ಯಾವ ರೀತಿಯ ಅನುಕೂಲ ಅಥವಾ ಅನಾನುಕೂಲ ಮಾಡಿದೆ ಎಂಬ ಬಗ್ಗೆ ಮೊಟ್ಟ ಮೊದಲಿಗೆ ವಿವರಣೆ ನೀಡಿದವರು ಯಾರು? ರವೀಂದ್ರನಾಥ ಠ್ಯಾಗೋರ್ ಅಥವಾ ಅಮರ್ತ್ಯ ಸೇನ್ ಅಲ್ಲ. ಪ್ರಕಾಶ್ ಕಾರಟ್ ಅಥವಾ ಕೆ ಸುದರ್ಶನ್ ಕೂಡ ಅಲ್ಲ. ಭಾರತೀಯ ನಗರಗಳಲ್ಲಿ ಮೊದಲ ಪೀಳಿಗೆಯ ವ್ಯಾಪಾರಿಗಳು ಎದುರಿಸಬೇಕಾಗುವ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವವರು ನಂದನ್ ನಿಲೇಕಣಿ.

'ತೆಹಬಜ್ಹಾರಿ'ಯನ್ನು ಅರ್ಥೈಸಿಕೊಳ್ಳುವುದು ಕಷ್ಟದ ಕೆಲಸವೇನಲ್ಲ. ಯಾವುದಾದರೂ ವ್ಯಕ್ತಿ ನಗರಕ್ಕೆ ಬಂದು ಸ್ವಲ್ಪ ಬಂಡವಾಳ ಹೂಡಿ ಸಣ್ಣ ವ್ಯಾಪಾರವನ್ನು ಆರಂಭಿಸಬೇಕೆಂದರೆ ನಗರಸಭೆಯಿಂದ ಪರವಾನಗಿ ಪಡೆಯಬೇಕು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಪರವಾನಗಿ ಪಡೆಯುವುದು, ರಾಜ್ಯಸಭೆಗೆ ನಾಮಕರಣ ಪಡೆಯುವುದು ಎರಡೂ ಒಂದೇ ಎಂಬುದು ಬಹುತೇಕ ಮಂದಿಗೆ ಗೊತ್ತಿಲ್ಲ. ಪರವಾನಗಿ ಇಲ್ಲದೆ ವ್ಯಾಪಾರ ಮಾಡುವುದು ಕಾನೂನುಬಾಹಿರ ಚಟುವಟಿಕೆ ಯಾಗಿರುವುದರಿಂದ ಆ ವ್ಯಾಪಾರಿಗಳಿಗೆ ಹಿಂಸೆ ಕಟ್ಟಿಟ್ಟ ಬುತ್ತಿ.

2007ರಲ್ಲಿ ದೆಹಲಿ ಮಹಾನಗರಪಾಲಿಕೆಗೆ ತೆಹಬಜ್ಹಾರಿ ಪರವಾನಗಿ ಕೋರಿ ಸುಮಾರು 1,31,807 ಅರ್ಜಿಗಳು ಬಂದಿದ್ದು, ಇದರಲ್ಲಿ 10,000 ಮಂದಿಗೆ ಮಾತ್ರ ಪರವಾನಗಿಯನ್ನು ನೀಡಲಾಗಿದೆ. ಪರವಾನಗಿಯನ್ನು ಪಡೆಯದ ಉಳಿದ ಅರ್ಜಿದಾರರು ಕೂಡ ವ್ಯಾಪಾರ ಮಾಡುತ್ತಾ ಪಾಲಿಕೆಯ ಅಧಿಕಾರಿಗಳು, ಪೊಲೀಸರು ಮತ್ತು ಇತರ ವ್ಯಾಪಾರಿಗಳಿಂದ ಕಿರುಕುಳ ಅನುಭವಿಸುತ್ತಿರುವುದಂತೂ ಗ್ಯಾರಂಟಿ.

ಈಗಾಗಲೇ ಅಸ್ತಿತ್ವ ಕಂಡುಕೊಂಡಿರುವ ಉದ್ಯಮಿಗಳು ಮತ್ತು ಮೊದಲ ಪೀಳಿಗೆಯ ಉದ್ಯಮಿಗಳ ನಡುವಿನ ಕಲಹಗಳನ್ನು ವಿವರಿಸಲು ನಂದನ್ ತೆಹಬಜ್ಹಾರಿಯನ್ನು ರೂಪಕವಾಗಿ ಬಳಸಿಕೊಳ್ಳುತ್ತಾರೆ. "ಮೊದಲ ಪೀಳಿಗೆಯ ಯುವ ಉದ್ಯಮಿ ಮತ್ತು ಅನುಭವಿ ಉದ್ಯಮಿಗಳ ನಡುವೆ ಆಯ್ಕೆ ಬಂದರೆ, ಅನುಭವಕ್ಕೆ ಮನ್ನಣೆ ನೀಡಿ ಈಗಾಗಲೇ ಅಸ್ತಿತ್ವದಲ್ಲಿರುವ ಉದ್ಯಮಿಗಳಿಗೆ ಮತ್ತೆ ಪರವಾನಗಿ ನೀಡಲಾಗುವುದು" ಎಂದು ಸರ್ಕಾರಿ ಪರವಾನಗಿ ಅಧಿಕಾರಿಗಳ ಕಾರ್ಯವೈಖರಿಯ ಬಗ್ಗೆ ನಂದನ್ ಪರಿಚಯ ನೀಡುತ್ತಾರೆ.

ಉದಾರೀಕರಣ ಪೂರ್ವ ಭಾರತದಲ್ಲಿ ಜಾತಿಯ ಬಿಗಿಹಿಡಿತದಿಂದಾಗಿ ಕೆಲವೇ ಬ್ರ್ಯಾಂಡ್‌ಗಳು ಮಾತ್ರ ಇದಾಗಲೇ ಗಟ್ಟಿಯಾಗಿ ಬೇರೂರಿರುವ ಬ್ರ್ಯಾಂಡ್‌ಗಳಿಗೆ ಪ್ರತಿರೋಧ ಒಡ್ಡುತ್ತಿದ್ದವು. "1964ರ ವೇಳೆಗೆ ಭಾರತದಲ್ಲಿ ಬಿಕರಿಯಾಗುತ್ತಿದ್ದ ಸುಮಾರು ಅರ್ಧದಷ್ಟು ಉತ್ಪನ್ನಗಳು ಒಂದು ಅಥವಾ ಎರಡು ಸಂಸ್ಥೆಗಳಿಗೆ ಸೇರಿದ್ದವು." ತಮ್ಮ ಕೃತಿಯಲ್ಲಿ ಹಿಂದಿನ ದಿನಗಳಿಗೆ ಮರಳುವ ನಂದನ್ "ಬಾಂಬೆ ಕ್ಲಬ್"ನ ಬಗ್ಗೆ ಪ್ರಸ್ತಾಪಿಸುತ್ತಾರೆ. 1944ರಲ್ಲಿ ಜಿ ಡಿ ಬಿರ್ಲಾ ಅವರ ನೇತೃತ್ವದಲ್ಲಿ ಮಂಚೂಣಿಯ ಆರು ಉದ್ಯಮ ಸಂಸ್ಥೆಗಳ ನಿಯೋಗವೊಂದು ಅಂದಿನ ಪ್ರಧಾನಿ ನೆಹರು ಅವರನ್ನು ಭೇಟಿ ಮಾಡಿ ಕೇಂದ್ರೀಕೃತ ಯೋಜನೆಯನ್ನು ಪ್ರತಿಪಾದಿಸಿದರಲ್ಲದೆ, ಆರೂ ಸಂಸ್ಥೆಗಳಿಗೆ ಸರ್ಕಾರದ ರಕ್ಷಣೆ ಕೋರಿದ್ದರು.

ಬಾಂಬೆ ಕ್ಲಬ್‌ನ ಉದ್ಯಮ ಸಂಸ್ಥೆಗಳನ್ನು ವಿಶ್ಲೇಷಿಸುತ್ತಾ ನಂದನ್, "ಉದ್ಯಮಸ್ನೇಹಿ ನೀತಿಗಳನ್ನು ನಿಯೋಗ ಅಪೇಕ್ಷಿಸಲಿಲ್ಲ, ಬದಲಿಗೆ ಸರ್ಕಾರದ ನೀತಿಗಳೇ ಭಾರತೀಯ ಉದ್ಯಮಗಳಿಗೆ ಸಹಕಾರ ನೀಡುವಂತಾಗಬೇಕು ಎಂದು ಅಪೇಕ್ಷಿಸಿತ್ತು" ಎಂದು ತಮ್ಮ ವಾದ ಮಂಡಿಸಿದ್ದಾರೆ. ಖಚಿತವಾಗಿ ಇದು ಜಾತಿ ಬಂಡವಾಳಶಾಹಿ ವ್ಯವಸ್ಥೆಯ ಕಟು ವಿಮರ್ಶೆಯೇ ಸರಿ. ಅಂದರೆ, ಜಾತಿಯಾಧಾರಿತ ಬಂಡವಾಳಶಾಹಿಗಳಿಗೆ ಗ್ರಾಹಕರು ಮತ್ತು ದೇಶದ ಹಿತಕ್ಕಿಂತ ತಮ್ಮ ಹಿತ ಕಾಯ್ದುಕೊಳ್ಳುವುದೇ ಮುಖ್ಯವಾಗಿತ್ತು.

ಇನ್ನೊಂದು ಸಂದರ್ಭದಲ್ಲಿ ನಂದನ್ ಜಾತಿ ಬಂಡವಾಳಶಾಹಿಗಳನ್ನು ಈ ರೀತಿ ಛೇಡಿಸುತ್ತಾರೆ: "ಉದ್ಯಮ ಪರವಾನಗಿ ಪದ್ಧತಿ ಮತ್ತು ಆಮದು ಕೋಟಾ ವ್ಯವಸ್ಥೆ ಹದ್ದು ಮೀರಿ ಬೆಳೆದ ದಢೂತಿ, ಮೃದು ಉದ್ಯಮಗಳನ್ನು ಸೃಷ್ಟಿಸಿತಲ್ಲದೆ, ಇದು ಸಂಕುಚಿತ ಆರ್ಥಿಕ ವ್ಯವಸ್ಥೆಯ ಸೃಷ್ಟಿಗೆ ಕೂಡ ಕಾರಣವಾಯಿತು." ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗದ ಭಾರತೀಯ ಬಂಡವಾಳಶಾಹಿಗಳನ್ನು ಕೂಡ ನಂದನ್ ಪ್ರಶ್ನಿಸುತ್ತಾರೆ.

ಒಟ್ಟಾರೆ ತಮ್ಮ ಪುಸ್ತಕದಲ್ಲಿ ನಂದನ್, ಗಟ್ಟಿಯಾಗಿ ಬೇರೂರುವ ಮೂಲಕ ಭಾರತದ ಕೈಗಾರಿಕೀಕರಣ ಮತ್ತು ಆರ್ಥಿಕ ವೃದ್ಧಿಗೆ ಮಾರಕವಾ

ಗಿರುವ ಹಾಗೂ ಯುವ ಉದ್ಯಮಿಗಳ ವಿರೋಧಿಗಳಾದ, ಉದಾರೀಕರಣ ಪೂರ್ವ ಉದ್ಯಮಿಗಳ ಹಿಡಿತದಿಂದ ಭಾರತ ಮುಕ್ತವಾಗಬೇಕೆಂದು ವಿಚಾರ ಮಂಡಿಸುತ್ತಾರೆ.

ನಂದನ್ ಅವರ ಕಾಳಜಿ ಹೀಗಿದೆ ಎಂಬುದು ನನ್ನ ಅನಿಸಿಕೆ. ಉದಾರೀಕರಣ ಪೂರ್ವ ಭಾರತದಲ್ಲಿ:

- ಜಾತಿಯಾಧಾರಿತ ಬಂಡವಾಳಶಾಹಿ ವ್ಯವಸ್ಥೆ ಇತ್ತು. ಉದ್ಯಮದ ಚಟುವಟಿಕೆಗಳನ್ನು ಯಾವುದೋ ಒಂದು ಜಾತಿ ನಿಯಂತ್ರಿಸುತ್ತಿತ್ತು.
- ಸ್ಪರ್ಧೆಗೆ ಹೆದರುತ್ತಿದ್ದ ಜಾತಿಯಾಧಾರಿತ ಬಂಡವಾಳಶಾಹಿ ವ್ಯವಸ್ಥೆ ಹೊಸ ಪೀಳಿಗೆಯ ಉದ್ಯಮಿಗಳಿಗೆ ಪ್ರವೇಶ ನಿರಾಕರಿಸಿತ್ತು.
- ಸರ್ಕಾರದ ರಕ್ಷಣೆ ಕೋರುವ ಮೂಲಕ ಜಾತಿಯಾಧಾರಿತ ಬಂಡವಾಳಶಾಹಿ ವ್ಯವಸ್ಥೆ ಭಾರತದ ಕೈಗಾರೀಕರಣಕ್ಕೆ ಮಾರಕವಾಯಿತು.
- ಜಾತಿಯಾಧಾರಿತ ಬಂಡವಾಳಶಾಹಿ ವ್ಯವಸ್ಥೆ ಕೀಳು ಮಟ್ಟದ ವಸ್ತುಗಳನ್ನು ಉತ್ಪಾದಿಸುತ್ತಿದ್ದುದಷ್ಟೇ ಅಲ್ಲದೆ, ಗ್ರಾಹಕರ ಮೇಲೆ ಕೂಡ ಹಿಡಿತ ಸಾಧಿಸಿತ್ತು.
- ಆದರೆ ಜಾಗತೀಕರಣ ಬಂದ ನಂತರ ಎಲ್ಲ ಬದಲಾಯಿತು. ಉದ್ಯಮ ಕೇಂದ್ರಿತ ಜಾತಿಗಳಲ್ಲದೆ ಇತರೆ ಜಾತಿಗಳಿಗೂ ಕೂಡ ಉದ್ಯಮಗಳನ್ನು ಆರಂಭಿಸಲು ಜಾಗತೀಕರಣ ಮುಕ್ತ ಅವಕಾಶ ಒದಗಿಸಿತು.

ಜಾಗತೀಕರಣ ಮತ್ತು ಉದಾರೀಕರಣ ಹೊಸ ಉದ್ಯಮಿಗಳಿಗೆ ಅವಕಾಶಗಳ ಬಾಗಿಲು ತೆರೆದಿದೆ. ಹೀಗಾಗಿ ಹೊಸ ವ್ಯವಸ್ಥೆಯಲ್ಲಿ ದಲಿತರಿಗೂ ಕೂಡ ಜಾಗತಿಕ ಮಟ್ಟದ ಅವಕಾಶಗಳು ಲಭ್ಯವಾಗಿವೆ. ಯಾರೇ ಆಗಲಿ ಸ್ಪರ್ಧೆಯವಾಗಿ ಯಾಕೆ ಚಿಂತಿಸಬೇಕು? ಸಂಕುಚಿತ ಆರ್ಥಿಕ ವ್ಯವಸ್ಥೆಯನ್ನು ಬೆಂಬಲಿಸುವುದರಿಂದ ಭಾರತವನ್ನು ಯಾವುದೇ ರೀತಿಯಲ್ಲಿ ಮುಂಚೂಣಿಗೆ ತರಲು ಸಾಧ್ಯವಿಲ್ಲ ಎಂಬುದನ್ನು ಎಲ್ಲ ಉದ್ಯಮಿಗಳು ಮನಗಾಣಬೇಕಿದೆ.

ಸ್ವದೇಶಿ ಮಂತ್ರ ಮತ್ತು ಜಾಗತೀಕರಣ

1990ರ ನನ್ನ ದಿನಚರಿಯನ್ನೇನಾದರೂ ನಾನು ಸುರಕ್ಷಿತವಾಗಿರಿಸಿಕೊಂಡಿದ್ದರೆ, ಜಾಗತೀಕರಣ ಹೇಗೆ ಭೌತಿಕ ವಸ್ತುಗಳನ್ನು ಖರೀದಿಸುವ ಸಾಮರ್ಥ್ಯವನ್ನು ಸಮಾನಗೊಳಿಸಿದೆ ಎಂಬುದರ ಬಗ್ಗೆ ಅನುಭವಾತ್ಮಕ ಪುರಾವೆಗಳನ್ನು ಒದಗಿಸಬಹುದಿತ್ತು. 1990ರಲ್ಲಿ ನನ್ನ ಕುಟುಂಬದ ಯಾರೊಬ್ಬರ ಬಳಿಯೂ ಫೋನ್ ಸಂಪರ್ಕ ಇರಲಿಲ್ಲ. ನಾವು ಅಷ್ಟು ಬಡವರೇನು ಆಗಿರಲಿಲ್ಲ. ನನ್ನ ಸಹೋದರ ಪೊಲೀಸ್ ಅಧಿಕಾರಿ ಹುದ್ದೆಯಲ್ಲಿದ್ದು, ನನ್ನ ಬಹಳಷ್ಟು ಸಂಬಂಧಿಕರು ಸರ್ಕಾರಿ ಹುದ್ದೆಗಳಲ್ಲಿದ್ದರು. ಆದರೆ ಹೊಸದಾಗಿ ಸಶಕ್ತರಾದವರಿಗೆ ಫೋನ್ ಸಂಪರ್ಕ ಲಭ್ಯವಿರಲಿಲ್ಲ. ಟೆಲಿಫೋನ್ ಸಂಸ್ಥೆಯಲ್ಲಿ ಕಾಯ್ದಿರಿಸಿದವರ ಪಟ್ಟಿ ದಶಕಗಳನ್ನು ಮುಟ್ಟಿತ್ತು.

ಆದರೆ ಇಂದು ನನ್ನ ಕುಟುಂಬದ ಸದಸ್ಯರು ಮತ್ತು ನನ್ನೆಲ್ಲ ಸಂಬಂಧಿಕರ ಮೊಬೈಲ್ ಸಂಖ್ಯೆಗಳನ್ನು ನನ್ನ ಮೊಬೈಲ್‌ನಲ್ಲಿ ದಾಖಲಿಸಿಕೊಳ್ಳಲು ಸ್ಥಳಾವಕಾಶ ಕೂಡ ಇಲ್ಲದಂತಾಗಿದೆ! 1990ರಿಂದಾಚೆಗೆ ನಾವು ಒಮ್ಮಿದೊಮ್ಮೆಲೇ ಆಗರ್ಭ ಶ್ರೀಮಂತರಾಗಲಿಲ್ಲ. ಈಗ ಸುಲಭವಾಗಿ ಟೆಲಿಫೋನ್ ಸಂಪರ್ಕ ಲಭ್ಯವಿದೆ ಅಷ್ಟೆ. ಈಗ ಕೇವಲ ಎರಡು ದಿನಗಳಲ್ಲಿ ಕಡಿಮೆ ದರದಲ್ಲಿ ಫೋನ್ ಸಂಪರ್ಕ ಸಿಗುತ್ತದೆ. 1990ರಲ್ಲಿ ಕೂಡ ಲಕ್ಷಾಂತರ ಮಂದಿ ಫೋನ್ ಸಂಪರ್ಕ ಹೊಂದಿದ್ದರು. ಇವರೆಲ್ಲರೂ ಯಾವ "ಸಾಮಾಜಿಕ ಸಮೂಹ"ಕ್ಕೆ ಸೇರಿದ್ದರೆಂದು ಊಹಿಸಿ.

ಉದಾರೀಕರಣ ಪೂರ್ವ ಭಾರತದಲ್ಲಿ, ಮೇಲ್ಜಾತಿಯ "ಸಾಮಾಜಿಕ ಸಮೂಹ" ಒಂದು ಉತ್ತಮ ಜೀವನ ಶೈಲಿಯ ಸೂಚಕಗಳಾದ ಉತ್ಪನ್ನಗಳು ಮತ್ತು ಸೇವೆಗಳ ಒಡೆತನದಲ್ಲಿ ಪ್ರಾಬಲ್ಯ ಸಾಧಿಸಿತ್ತು. ಇವರನ್ನು ನಾವು ಮಧ್ಯಮವರ್ಗ ಎಂದು ಗುರುತಿಸುತ್ತೇವೆ.

ದಲಿತರೂ ಸೇರಿದಂತೆ ಲಕ್ಷಾಂತರ ಭಾರತೀಯರು ಇಂತಹ ವಸ್ತುಗಳನ್ನು ಕೊಳ್ಳುವ ಕನಸು ಮಾತ್ರ ಕಾಣಬೇಕಿತ್ತು. ಆದರೆ ಜಾಗತೀಕರಣ ಈ ಎಕ್ಸ್‌ಕ್ಲೂಸಿವ್ ಸಾಮಾಜಿಕ ಸಮೂಹವನ್ನು ಚಿಂದಿ ಮಾಡಿ ಬಿಸಾಡಿತು. ಟೆಲಿಕಾಂ ಕ್ಷೇತ್ರದಲ್ಲಿನ ಕ್ರಾಂತಿಕಾರಿ ಬದಲಾವಣೆಯನ್ನು ಸಾಕಾರಗೊಳಿಸಿದವರು ದೈತ್ಯ ಪ್ರತಿಭೆ ಸ್ಯಾಂ ಪಿಟ್ರೋಡಾ. ಆದರೆ ಇಂತಹ ಅಭೂತಪೂರ್ವ ಕ್ರಾಂತಿಗೆ ಕಾರಣಕರ್ತರಾದ ಸ್ಯಾಂ ಪಿಟ್ರೋಡಾ ಅವರನ್ನು ದೇಶದ ಕೆಲವು ವರ್ಗಗಳು ಯಾವ ರೀತಿ ನಡೆಸಿಕೊಂಡವು? "ಇಮ್ಯಾಜಿನಿಂಗ್ ಇಂಡಿಯಾ"ದಲ್ಲಿ ನಂದನ್ ಈ ಕುರಿತು ವಿವರಣೆ ನೀಡುತ್ತಾರೆ.

"ಕೆಲವು ಎಡಪಂಥೀಯ ನಾಯಕರು ಸ್ಯಾಂ ಅವರು ಸಿಐಎ ಏಜೆಂಟರು ಎಂದು ಆರೋಪ ಮಾಡಿದ್ದಷ್ಟೇ ಅಲ್ಲದೆ, ಇದರಿಂದಾಗಿ 1984ರ ಮಾಹಿತಿ ತಂತ್ರಜ್ಞಾನ ಕಾಯ್ದೆ ಸಮಸ್ಯೆಗಳನ್ನು ಎದುರಿಸಬೇಕಾಯಿತು." ಕಂಪ್ಯೂಟರ್‌ಗಳ ಗರ್ಭದಲ್ಲಿ ಟೆಲಿಕಾಂ ಕ್ರಾಂತಿಯ ಕೂಸು ಜನ್ಮ ತಳೆಯಿತು. ಆದರೆ "ಬಿಜೆಪಿಯ ಭಾರತೀಯ ಮಜ್ದೂರ್ ಸಂಘ 1984ರ ಕಾರ್ಮಿಕರ ದಿನವನ್ನು 'ಕಂಪ್ಯೂಟರ್ ವಿರೋಧಿ ದಿನ'ವನ್ನಾಗಿ ಆಚರಿಸಿತು" ಎಂದು ನಂದನ್ ದಾಖಲಿಸಿದ್ದಾರೆ. ಸರ್ಕಾರಿ ಇಲಾಖೆಗಳು ಕೂಡ ಕಂಪ್ಯೂಟರೀಕರಣದ ವಿರುದ್ಧ ತಳೆದ ನಿಲುವುಗಳ ಬಗ್ಗೆ ನಂದನ್ ಹಲವಾರು ತುಣುಕುಗಳನ್ನು ನೀಡುತ್ತಾರೆ.

ಇಂದು ನನ್ನ ಕುಟುಂಬದ ಸದಸ್ಯರು ಮತ್ತು ನನ್ನೆಲ್ಲ ಸಂಬಂಧಿಕರ ಮೊಬೈಲ್ ಸಂಖ್ಯೆಗಳನ್ನು ನನ್ನ ಮೊಬೈಲ್‌ನಲ್ಲಿ ದಾಖಲಿಸಿಕೊಳ್ಳಲು ಸ್ಥಳಾವಕಾಶ ಕೂಡ ಇಲ್ಲದಂತಾಗಿದೆ! 1990ರಿಂದಾಚೆಗೆ ನಾವು ಒಮ್ಮಿದೊಮ್ಮೆಲೇ ಆಗರ್ಭ ಶ್ರೀಮಂತರಾಗಲಿಲ್ಲ. ಈಗ ಸುಲಭವಾಗಿ ಟೆಲಿಫೋನ್ ಸಂಪರ್ಕ ಲಭ್ಯವಿದೆ ಅಷ್ಟೆ. ಈಗ ಕೇವಲ ಎರಡು ದಿನಗಳಲ್ಲಿ ಕಡಿಮೆ ದರದಲ್ಲಿ ಫೋನ್ ಸಂಪರ್ಕ ಸಿಗುತ್ತದೆ. 1990ರಲ್ಲಿ ಕೂಡ ಲಕ್ಷಾಂತರ ಮಂದಿ ಫೋನ್ ಸಂಪರ್ಕ ಹೊಂದಿದ್ದರು. ಇವರೆಲ್ಲರೂ ಯಾವ "ಸಾಮಾಜಿಕ ಸಮೂಹ"ಕ್ಕೆ ಸೇರಿದ್ದರೆಂದು ಊಹಿಸಿ. ಉದಾರೀಕರಣ ಪೂರ್ವ ಭಾರತದಲ್ಲಿ, ಮೇಲ್ಜಾತಿಯ "ಸಾಮಾಜಿಕ ಸಮೂಹ" ಒಂದು ಉತ್ತಮ ಜೀವನಶೈಲಿಯ ಸೂಚಕಗಳಾದ ಉತ್ಪನ್ನಗಳು ಮತ್ತು ಸೇವೆಗಳ ಒಡೆತನದಲ್ಲಿ ಪ್ರಾಬಲ್ಯ ಸಾಧಿಸಿತ್ತು. ಇವರನ್ನು ನಾವು ಮಧ್ಯಮವರ್ಗ ಎಂದು ಗುರುತಿಸುತ್ತೇವೆ.

ಆರ್ಥಿಕ ಸುಧಾರಣೆಯನ್ನು ರಾಜಕೀಯ ಪಕ್ಷಗಳು ಹಾಗೂ ಸಾಂಪ್ರದಾಯಿಕ ಉದ್ಯಮ ಸಂಸ್ಥೆಗಳು ವಿರೋಧಿಸುತ್ತಿದ್ದವು. "ಬಾಂಬೆ ಕ್ಲಬ್ ಎಂದು ಕರೆಯಿಸಿಕೊಳ್ಳುವ ಉದ್ಯಮ ಸಂಸ್ಥೆಗಳ ಸಮೂಹ, ವಿದೇಶಿ ಸಂಸ್ಥೆಗಳ ಪ್ರತಿಸ್ಪರ್ಧೆಗೆ ಎಡೆಮಾಡಿಕೊಡುವ ಆರ್ಥಿಕ ನೀತಿಯ ಸಡಿಲೀಕರಣವನ್ನು ಪ್ರಬಲವಾಗಿ ವಿರೋಧಿಸಿದವು" ಎಂದು ನಂದನ್ ಸ್ಮರಿಸಿಕೊಳ್ಳುತ್ತಾರೆ. "ಈ ಸಮೂಹದ ಬಾತ್ಮೀದಾರರಂತಿರುವ ಉದ್ಯಮಿ ರಾಹುಲ್ ಬಜಾಜ್, 'ಭಾರತ ಸರ್ಕಾರ ದೇಶದ ಹಿತಾಸಕ್ತಿ ಕಾಯಬೇಕು, ದೇಶದ ಹಿರಿಮೆಯನ್ನು ಕಾಪಾಡಬೇಕು, ಸ್ಪರ್ಧೆಯಲ್ಲಿ ಸಮಾನತೆ ಬರುವವರೆಗೆ ಭಾರತೀಯ ಉದ್ಯಮಿಗಳಿಗೆ ಸರ್ಕಾರ ರಕ್ಷಣೆ ನೀಡಬೇಕು" ಎಂದು ಮಾತನಾಡಿರುವುದನ್ನು ನಂದನ್ ದಾಖಲಿಸುತ್ತಾರೆ.

ಮತ್ತೆ 1990ರ ಆರಂಭಕ್ಕೆ ಹೋಗುವುದಾದರೆ, ಆಗ ನನ್ನ ಕುಟುಂಬದ ಕೆಲವೇ ಮಂದಿಯ ಬಳಿ ಕಲರ್ ಟಿ.ವಿಗಳಿದ್ದವು. ಇನ್ನು ಕೆಲವರ ಬಳಿ ತೀರ ಕೆಳದರ್ಜೆಯ 165 ಲೀಟರ್‌ನ ರೆಫ್ರಿಜರೇಟರ್‌ಗಳಿದ್ದವು. ಯಾರ ಬಳಿಯೂ ಏರ್ ಕಂಡಿಷನರ್‌ಗಳು ಮತ್ತು ಪರ್ಸನಲ್ ಕಂಪ್ಯೂಟರ್‌ಗಳು ಇರಲಿಲ್ಲ. ಆದರೆ ಈಗ ಎಲ್ಲರ ಬಳಿ ದೊಡ್ಡ ರೆಫ್ರಿಜರೇಟರ್‌ಗಳು ಮತ್ತು ಉತ್ತಮವಾದ ಕಲರ್ ಟಿ.ವಿ.ಗಳಿವೆ. ಕೆಲವರ ಮನೆಗಳಲ್ಲಿ ಏರ್ ಕಂಡಿಷನರ್‌ಗಳು ಮತ್ತು ಕಂಪ್ಯೂಟರ್‌ಗಳು ಕೂಡ ಇವೆ. ಓಕ್ಸ್‌ಫಾಮ್‌ನ ಅನುದಾನದ ಮೂಲಕ ನಾನು ನನ್ನ ಮೊಟ್ಟ ಮೊದಲ ಕಂಪ್ಯೂಟರನ್ನು 73,000 ರೂ.ಗೆ ಖರೀದಿಸಿದೆ. ಆದರೆ ಈಗ ಅದೇ ಕಂಪ್ಯೂಟರ್ 20,000 ರೂ.ಗಳಿಗೆ ಸಿಗುತ್ತದೆ.

ಪ್ರಸ್ತುತ ಮಹಾನಗರದಲ್ಲಿನ ಯಾವುದೇ ಮನೆಕೆಲಸದಾಕೆ ಹೊಂದಿರುವ ಟಿ.ವಿ. ರೆಫ್ರಿಜರೇಟರ್, ಫೋನ್ ಸಂಪರ್ಕ 1990ರಲ್ಲಿ ನನ್ನ ಬಳಿ ಇತ್ತು. ವಿದೇಶಿ ಸಂಸ್ಥೆಗಳು ಭಾರತದ ಮಾರುಕಟ್ಟೆಯನ್ನು ಪ್ರವೇಶಿಸಿದ ಮೇಲೆ ಪ್ರತಿಸ್ಪರ್ಧೆ ಏರ್ಪಟ್ಟು ಉತ್ಪನ್ನಗಳ ಬೆಲೆ ಕಡಿಮೆಯಾಯಿತು. ಒಂದೆಡೆ ಉತ್ಪನ್ನಗಳ ದರ ಕಡಿಮೆಯಾದರೆ, ಇನ್ನೊಂದೆಡೆ ಅವುಗಳ ಗುಣಮಟ್ಟ ಕೂಡ ಉತ್ತಮಗೊಂಡಿತು. ಹೀಗೆ ಜಾಗತೀಕರಣ "ಸ್ವದೇಶಿ"ಯನ್ನು ಬಗ್ಗು ಬಡಿಯಿತಷ್ಟೇ ಅಲ್ಲದೆ ಜಾತಿಯಾಧಾರಿತ ಬಂಡವಾಳಶಾಹಿಗಳ "ಸಾಮಾಜಿಕ ಸಮೂಹ" ಭೋಗ ವಸ್ತುಗಳ ಮೇಲೆ ಹೊಂದಿದ್ದ ಪಾರಮ್ಯವನ್ನು ಕೊನೆಗೊಳಿಸಿತು.

ಬಾಂಬೆ ಕ್ಲಬ್, ಎಡರಂಗ, ಮತ್ತು ಆರ್‌ಎಸ್‌ಎಸ್ ಒಂದೇ ರೀತಿ ಚಿಂತಿಸಲು ಹೇಗೆ ಮಾಡಲು ಸಾಧ್ಯವಾಯಿತು? "ದೇಶದ ಹಿತಾಸಕ್ತಿ"ಯ ನೆಪವೊಡ್ಡಿ ಬಾಂಬೆ ಕ್ಲಬ್, ಎಡರಂಗ ಮತ್ತು ಆರ್‌ಎಸ್‌ಎಸ್ ಪರಿವಾರ ಜಾಗತೀಕರಣವನ್ನು ವಿರೋಧಿಸಿದವು. ಆದರೆ ಭೋಗವಸ್ತುಗಳ ಮಾಲಿಕತ್ವ ಮತ್ತು ವಿವಿಧ ಸೌಕರ್ಯಗಳಿಂದ ವಂಚಿತರಾದ ಸಾಮಾನ್ಯ ಜನರಿಗೆ ರಾಷ್ಟ್ರೀಯತೆ ಯಾವ ಅರ್ಥ ಹೊಂದಿದೆ? "ದೇಶದ ಹಿತಾಸಕ್ತಿ" ಎಂದರೆ ಕೇವಲ ಕೆಲವೇ ವರ್ಗಗಳನ್ನೊಳಗೊಂಡ "ಸಾಮಾಜಿಕ ಸಮೂಹದ ಹಿತಾಸಕ್ತಿ"ಯೆಂದಾದರೆ, ಅಂತಹ ರಾಷ್ಟ್ರೀಯತೆಗೆ ಧಿಕ್ಕಾರವಿರಲಿ.

[illegible]
ತರಾಟೆಗೆ ತೆಗೆದುಕೊಳ್ಳುತ್ತಾರೆ. "ಆದರೂ ಕೂಡ ಆರ್ಥಿಕ ಸುಧಾರಣಾ ನೀತಿಗಳು ಅನುಷ್ಠಾನಗೊಂಡವು, ಹೀಗಾಗಿ ಸ್ವಾತಂತ್ರ್ಯಾನಂತರ ಮೊಟ್ಟ ಮೊದಲಬಾರಿಗೆ ಭಾರತೀಯ ಉದ್ಯಮ ಸಂಸ್ಥೆಗಳು ತಮ್ಮ ಖಾಯಂ ಗ್ರಾಹಕರನ್ನು ಕಳೆದುಕೊಂಡರು." ಇದರರ್ಥ ಏನು? ನೆಹರು ಅವರ ಸಮಾಜವಾದ ತನಗರಿವಿಲ್ಲದಂತೆಯೇ ಸ್ವದೇಶಿ– ಹಳೆಯ ಉದ್ಯಮ ಸಂಸ್ಥೆಗಳು ಮತ್ತು ಮೇಲ್ಜಾತಿಗಳಿಗೆ ಸೇರಿದ ಉನ್ನತ ವರ್ಗಗಳು– ಧೋರಣೆಗೆ ಪೂರಕವಾಗಿತ್ತು.

"ಆದರೆ ಆರ್ಥಿಕ ಸುಧಾರಣೆ ಅವರೆಲ್ಲರಿಗೂ (ಸಾಂಪ್ರದಾಯಿಕ ಉದ್ಯಮಿಗಳು) ಮೊಟ್ಟ ಮೊದಲ ಬಾರಿಗೆ ಇನ್ನೂ ಹೆಚ್ಚಿನದನ್ನು ಸಾಧಿಸಲು ಅವಕಾಶ ಕಲ್ಪಿಸಿತು" ಎನ್ನುತ್ತಾರೆ ನಂದನ್. ಸ್ವದೇಶಿ ವ್ಯವಸ್ಥೆಗಿಂತ ಜಾಗತೀಕರಣ ವ್ಯವಸ್ಥೆಯಡಿ ಸಾಂಪ್ರದಾಯಿಕ ಉದ್ಯಮ ಸಂಸ್ಥೆಗಳು ಬೆಳೆಯಲು ಹೆಚ್ಚಿನ ಅವಕಾಶವಿದೆ ಎಂದು ನಂದನ್ ಪ್ರತಿಪಾದಿಸುತ್ತಾರೆ. ಆದರೆ ದಲಿತರು ಮತ್ತು ಬಂಡವಾಳಶಾಹಿ ವ್ಯವಸ್ಥೆಯನ್ನು ನಂದನ್ ನಪಾಸು ಮಾಡುತ್ತಾರೆ.

ತೊಡಕುಗಳ ಕಲ್ಪನೆಯಿಲ್ಲ

"ಇಮ್ಯಾಜಿನಿಂಗ್ ಇಂಡಿಯಾ" ಎಂಬ ಚಿಂತನೆಗೆ ಹಚ್ಚುವ ಕೃತಿಯಲ್ಲಿ ನಂದನ್ ನಿಲೇಕಣಿ ಮೊದಲ ಪೀಳಿಗೆಯ ಉದ್ಯಮಿಗಳಿಗೆ ಹಾಗೂ ಹೊಸ ವೃತ್ತಿಗಳಿಗೆ ನೆಹರು ಅವರ ಸಮಾಜವಾದ ಯಾವ ರೀತಿ ತೊಡಕುಗಳನ್ನು ಸೃಷ್ಟಿಸಿತ್ತು ಎಂಬ ಬಗ್ಗೆ ಮಾತನಾಡುತ್ತಾರೆ. ಅವರದೇ ಪದಗಳನ್ನು ಉಲ್ಲೇಖಿಸುವುದಾದರೆ: "1984ರಲ್ಲಿ ಮಾಹಿತಿ ತಂತ್ರಜ್ಞಾನ ಕಾಯ್ದೆ ಬರುವವರೆಗೆ ನಾವು ಸರ್ಕಾರದ ಪ್ರಕಾರ ಉದ್ಯಮಿಗಳೇ ಆಗಿರಲಿಲ್ಲ. ಸಾಫ್ಟ್‌ವೇರ್ ಕ್ಷೇತ್ರ ಉದ್ಯಮದ ಮಾನದಂಡ ಪಡೆದುಕೊಂಡಿರಲಿಲ್ಲ. ಹೀಗಾಗಿ ನಾವು ಬ್ಯಾಂಕ್ ಸಾಲ ಪಡೆಯಲು ಅರ್ಹರಾಗಿರಲಿಲ್ಲ." ಆದರೆ ಇಂದು, ಇನ್ಫೋಸಿಸ್ ಬಹು ಕೋಟಿ ಡಾಲರ್ ಆದಾಯ ಗಳಿಸುವ ಸಂಸ್ಥೆಯಾಗಿ ಬೆಳೆದಿದೆ. ಮತ್ತು ಸಾಫ್ಟ್‌ವೇರ್ ಉದ್ಯಮ ಭಾರತದ ಆರ್ಥಿಕ ವೃದ್ಧಿಯಲ್ಲಿ ಬಹು ದೊಡ್ಡ ಪಾತ್ರ ವಹಿಸುತ್ತಿದೆ.

ನಿಜ, ಜಾಗತೀಕರಣ ಪೂರ್ವ ಭಾರತದಲ್ಲಿ ಬಂಡವಾಳಶಾಹಿ ವ್ಯವಸ್ಥೆ ಸಂಕುಚಿತವಾಗಿತ್ತು. ಮೊದಲ ಪೀಳಿಗೆಯ ಉದ್ಯಮಿಗಳಿಗೆ ಪ್ರವೇಶ ಅಷ್ಟೇನೂ ಸುಲಭವಾಗಿರಲಿಲ್ಲ. ಆದರೆ ಉದಾರೀಕರಣದ ನಂತರದ ದಿನಗಳಲ್ಲಿ ಹೊಸ ಉದ್ಯಮಿಗಳು, ಇವರಲ್ಲಿ ಬಹುತೇಕ ಮಂದಿ ವ್ಯಾಪಾರ ಕೇಂದ್ರಿತವಲ್ಲದ ಜಾತಿಗಳಿಗೆ ಸೇರಿದವರು, ಉದ್ಯಮ ಕ್ಷೇತ್ರಕ್ಕೆ ಕಾಲಿರಿಸಿದರು. ಇತರೆ ಜಾತಿಗಳ ಮೊದಲ ಪೀಳಿಗೆಯ ಉದ್ಯಮಿಗಳು ಯಶಸ್ವಿಯೆನಿಸಿಕೊಳ್ಳಲು ಗುಡ್ಡಗಳನ್ನು ದಾಟಬೇಕಾಯಿತು, ಇನ್ನು ದಲಿತರು ಯಶಸ್ವಿ ಉದ್ಯಮಿಗಳೆನಿಸಿಕೊಳ್ಳಲು ಗುಡ್ಡಗಳನ್ನು ದಾಟುವ ಜೊತೆಗೆ ಸಾಗರೋಲ್ಲಂಘನ ಕೂಡ ಮಾಡಬೇಕಾಗುವುದೇನೋ. ತಮಿಳುನಾಡಿನಲ್ಲಿ ದ್ರಾವಿಡ ಚಳವಳಿಯ ಮೂಲಕ ಒಟ್ಟಾರೆ ಜಾತಿವ್ಯವಸ್ಥೆಯನ್ನು ವಿರೋಧಿಸದೆ, ಬ್ರಾಹ್ಮಣರ ಪ್ರಾಬಲ್ಯವನ್ನು ಮಾತ್ರ ಪ್ರಶ್ನಿಸಿದ ಹಾಗೆ, ಇಲ್ಲಿಯೂ ಕೂಡ ಆರ್ಥಿಕ ಸುಧಾರಣೆ ಎಲ್ಲ ಜಾತಿಗಳಿಗೂ ಅವಕಾಶಗಳ ಬಾಗಿಲುಗಳನ್ನು ತೆರೆದರೂ, ಪಂಚಮರನ್ನು ಮಾತ್ರ ಹೊರಗಿರಿಸಿತು.

> **ಆರ್ಥಿಕ ಸುಧಾರಣೆಯ ಯಶಸ್ಸಿನ ಬಗ್ಗೆ ಮಾತನಾಡುತ್ತಾ ನಂದನ್, ಬಾಂಬೆ ಕ್ಲಬ್ ಉದ್ಯಮ ಸಂಸ್ಥೆಗಳನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. "ಆದರೂ ಕೂಡ ಆರ್ಥಿಕ ಸುಧಾರಣಾ ನೀತಿಗಳು ಅನುಷ್ಠಾನಗೊಂಡವು, ಹೀಗಾಗಿ ಸ್ವಾತಂತ್ರ್ಯಾನಂತರ ಮೊಟ್ಟ ಮೊದಲಬಾರಿಗೆ ಭಾರತೀಯ ಉದ್ಯಮ ಸಂಸ್ಥೆಗಳು ತಮ್ಮ ಖಾಯಂ ಗ್ರಾಹಕರನ್ನು ಕಳೆದುಕೊಂಡರು." ಇದರರ್ಥ ಏನು? ನೆಹರು ಅವರ ಸಮಾಜವಾದ ತನಗರಿವಿಲ್ಲದಂತೆಯೇ ಸ್ವದೇಶಿ– ಹಳೆಯ ಉದ್ಯಮ ಸಂಸ್ಥೆಗಳು ಮತ್ತು ಮೇಲ್ಜಾತಿಗಳಿಗೆ ಸೇರಿದ ಉನ್ನತ ವರ್ಗಗಳು– ಧೋರಣೆಗೆ ಪೂರಕವಾಗಿತ್ತು.**

ದಲಾಲ್ ಸ್ಟ್ರೀಟ್‌ನಲ್ಲಿ ದಲಿತರು ಓಡಾಡುವುದನ್ನಾಗಲೀ, ಎಫ್‌ಐಸಿಸಿಐ/ ಸಿಐಐ ಸಭೆಗಳಲ್ಲಿ ದಲಿತರು ಭಾಗವಹಿಸುವುದನ್ನಾಗಲೀ ನಾವು ಯಾಕೆ ನೋಡಲು ಸಾಧ್ಯವಿಲ್ಲ? ನಂದನ್ ಕೂಡ ನೆಹುರು ಸಮಾಜವಾದದ ಕಲ್ಪನೆಗಳನ್ನು ಹೊಂದಿದ್ದಾರೆ ಎನಿಸುತ್ತದೆ. ದಲಿತರ ಉದ್ಧಾರಕ್ಕಾಗಿ ನಂದನ್ ನೀಡುವ ಸಲಹೆಗಳು ನೆಹುರು ಸಮಾಜವಾದದ ಪಡಿಯಚ್ಚೇ ಆಗಿದೆ. ಎಲ್ಲ ದಲಿತರು ಕೂಡ ಬಂಡವಾಳಶಾಹಿಗಳಾಗಲು ಸಾಧ್ಯವಿಲ್ಲ ಸರಿ. ಹೇಗೆ ಎಲ್ಲ ವೈಶ್ಯರು ವ್ಯಾಪಾರಿಗಳಾಗಲು ಸಾಧ್ಯವಿಲ್ಲವೋ ಅದೇ ರೀತಿ ಎಲ್ಲ ದಲಿತರೂ ಬಂಡವಾಳಶಾಹಿಗಳಾಗಲು ಸಾಧ್ಯವಿಲ್ಲ. ಆದರೂ ಕೂಡ ದಲಿತರು ಗಣನೀಯ ಪ್ರಮಾಣದಲ್ಲಿ ಬಂಡವಾಳಶಾಹಿಗಳಾಗಬೇಕಿದೆ.

ಕೇವಲ ತಮ್ಮ ಏಳ್ಗೆಗಾಗಿ ಮಾತ್ರ ದಲಿತರು ಬಂಡವಾಳಶಾಹಿಗಳಾಗಬೇಕೆಂದು ನಾನು ಪ್ರತಿಪಾದಿಸುತ್ತಿಲ್ಲ. ದಲಿತ ಬಂಡವಾಳಶಾಹಿಗಳನ್ನು ಸೃಷ್ಟಿಸದೆ ಆಧುನಿಕ ಬಂಡವಾಳಶಾಹಿ ವ್ಯವಸ್ಥೆ ನೈತಿಕವಾಗಿ ಸೋಲುತ್ತದೆ. ಇದಕ್ಕೆ ಪೂರಕವಾಗಿ ಅಂತರಾಷ್ಟ್ರೀಯ ನಿದರ್ಶನಗಳಿವೆ.

ಆಧುನಿಕ ಬಂಡವಾಳಶಾಹಿ ವ್ಯವಸ್ಥೆಯ ನೆಲೆಬೀಡಾಗಿರುವ ಅಮೆರಿಕಾದಲ್ಲಿ ಕಪ್ಪು ಜನರ ಬಂಡವಾಳಶಾಹಿ ವ್ಯವಸ್ಥೆಯ ಬಗ್ಗೆ ಬಹಳ ವರ್ಷಗಳವರೆಗೆ ತಾತ್ಸಾರವಿತ್ತು. ಆದರೆ, ಅಂತಿಮವಾಗಿ ಅಮೆರಿಕಾ ಕಪ್ಪು ಜನರಿಗೂ ಮುಕ್ತ ಅವಕಾಶ ಕಲ್ಪಿಸಿತು. ಕನಿಷ್ಠ ಅಮೆರಿಕಾದ ಇಬ್ಬರು ಅಧ್ಯಕ್ಷರು ಕಪ್ಪು ಜನರ ಬಂಡವಾಳಶಾಹಿ ವ್ಯವಸ್ಥೆಯ ಪರವಾಗಿ ಕ್ರಮಗಳನ್ನು ಕೈಗೊಂಡರು.

> **ಆಧುನಿಕ ಬಂಡವಾಳಶಾಹಿ ವ್ಯವಸ್ಥೆಯ ನೆಲೆಬೀಡಾಗಿರುವ ಅಮೆರಿಕಾದಲ್ಲಿ ಕಪ್ಪು ಜನರ ಬಂಡವಾಳಶಾಹಿ ವ್ಯವಸ್ಥೆಯ ಬಗ್ಗೆ ಬಹಳ ವರ್ಷಗಳವರೆಗೆ ತಾತ್ಸಾರವಿತ್ತು. ಆದರೆ, ಅಂತಿಮವಾಗಿ ಅಮೆರಿಕಾ ಕಪ್ಪು ಜನರಿಗೂ ಮುಕ್ತ ಅವಕಾಶ ಕಲ್ಪಿಸಿತು. ಕನಿಷ್ಠ ಅಮೆರಿಕಾದ ಇಬ್ಬರು ಅಧ್ಯಕ್ಷರು ಕಪ್ಪು ಜನರ ಬಂಡವಾಳಶಾಹಿ ವ್ಯವಸ್ಥೆಯ ಪರವಾಗಿ ಕ್ರಮಗಳನ್ನು ಕೈಗೊಂಡರು.**

ಅಮೆರಿಕಾದ ಪೂರ್ವ ಅಧ್ಯಕ್ಷ ಲಿಂಡನ್ ಜಾನ್ಸನ್ ರಾಷ್ಟ್ರೀಯ ಉದ್ಯಮಿಗಳ ಸಂಘವನ್ನು ಸ್ಥಾಪಿಸಿ ಎರಡನೆಯ ಹೆನ್ರಿ ಫೋರ್ಡ್ ಅವರನ್ನು ಮುಖ್ಯಸ್ಥರನ್ನಾಗಿ ನೇಮಿಸಿದರು. ಬಿಳಿಯ ಉದ್ಯಮಿಗಳು ಮತ್ತು ಉದ್ಯಮಕ್ಕೆ ಪ್ರವೇಶ ಬಯಸುವ ಕರಿಯ ಉದ್ಯಮಿಗಳ ನಡುವೆ ಸಂಪರ್ಕ ಕಲ್ಪಿಸುವುದು ಫೋರ್ಡ್ ಅವರ ಕೆಲಸವಾಗಿತ್ತು. ಇನ್ನು ಅಧ್ಯಕ್ಷ ರಿಚರ್ಡ್ ನಿಕ್ಸನ್ ಕಪ್ಪು ಜನರ ಬಂಡವಾಳಶಾಹಿ ವ್ಯವಸ್ಥೆ ಅಮೆರಿಕಾದ ಅಗತ್ಯ ಎಂಬ ಘೋಷವಾಕ್ಯವನ್ನು ಪ್ರತಿಪಾದಿಸಿದರು. "ಕಪ್ಪು ಜನರ ಬಂಡವಾಳಶಾಹಿ ವ್ಯವಸ್ಥೆ ಎಷ್ಟರಮಟ್ಟಿಗೆ ಯಶಸ್ವಿಯೆನಿಸಿಕೊಳ್ಳುವುದೋ, ಅಷ್ಟರಮಟ್ಟಿಗೆ ಕಪ್ಪು ಜನರ ವಠಾರಗಳು ಕಣ್ಮರೆಯಾಗುತ್ತವೆ" ಎಂದು ನಿಕ್ಸನ್ ನುಡಿದಿದ್ದರು.

ಕಪ್ಪು ಜನರ ಬಂಡವಾಳಶಾಹಿ ವ್ಯವಸ್ಥೆಯ ಘೋಷಣೆ ಅಸ್ತಿತ್ವಕ್ಕೆ ಬಂದ ಮೂರು ವರ್ಷಗಳಲ್ಲಿಯೇ ಅಂದರೆ 1972ರಲ್ಲಿ ರಾಷ್ಟ್ರೀಯ ಅಲ್ಪಸಂಖ್ಯಾತರ ವಿತರಣಾ ಅಭಿವೃದ್ಧಿ ಪರಿಷತ್ತು ಆರಂಭವಾಯಿತು. ನ್ಯೂಯಾರ್ಕ್‌ನಲ್ಲಿ ಕೇಂದ್ರ ಕಚೇರಿಯನ್ನು ಹೊಂದಿರುವ ಪರಿಷತ್ತು ಅಮೆರಿಕದಾದ್ಯಂತ 39 ಪ್ರಾಂತೀಯ ಕಚೇರಿಗಳನ್ನು ಹೊಂದಿದೆ. ಬಹುತೇಕ ಎಲ್ಲ ಫ್ಲರ್ಚೂನ್ 500 ಸಂಸ್ಥೆಗಳು ಸೇರಿದಂತೆ ಸುಮಾರು 3,500 ಅಮೆರಿಕಾದ ಸಂಸ್ಥೆಗಳ ಸದಸ್ಯತ್ವವನ್ನು ಹೊಂದಿರುವ ಪರಿಷತ್ತು ಕಪ್ಪು ಉದ್ಯಮಿಗಳಿಗೆ ಈ ಸಂಸ್ಥೆಗಳ ಸಂಪರ್ಕ ಕಲ್ಪಿಸುತ್ತದೆ. ವಿತರಣೆಯ ಯೋಜನೆಯ ಮೂಲಕ ಬಿಳಿಯರ ಮಾಲಿಕತ್ವದ ಸಂಸ್ಥೆಗಳು ತಮ್ಮ ವ್ಯವಹಾರಗಳನ್ನು ಕರಿಯ ಉದ್ಯಮಿಗಳಿಗೆ ಒಪ್ಪಿಸುತ್ತವೆ. ಇದರಿಂದಾಗಿ ಇಂದು ಅಮೆರಿಕಾದಲ್ಲಿ ಕಪ್ಪು ಜನರ ಬಂಡವಾಳಶಾಹಿ ವ್ಯವಸ್ಥೆ ಅಸ್ತಿತ್ವದಲ್ಲಿದೆ.

ಸ್ವಚ್ಛ ಮನಸ್ಸು, ಹಾಗೂ ಸದುದ್ದೇಶಗಳನ್ನು ಹೊಂದಿರುವ ನಂದನ್, ದಲಿತ ಬಂಡವಾಳಶಾಹಿ ವ್ಯವಸ್ಥೆಯನ್ನು ಕಲ್ಪಿಸಿಕೊಳ್ಳಲು ವಿಫಲರಾಗಿದ್ದಾರೆ. ಬಂಡವಾಳಶಾಹಿ ವ್ಯವಸ್ಥೆ ಒಂದು ಸಾಮಾಜಿಕ ವ್ಯವಸ್ಥೆ ಕೂಡ ಆಗಿರುವುದನ್ನು ಅರಿತುಕೊಳ್ಳುವಲ್ಲಿ ನಂದನ್ ಸೋತಿರುವುದರಿಂದ ದಲಿತ ಬಂಡವಾಳಶಾಹಿ ವ್ಯವಸ್ಥೆಯನ್ನು ಊಹಿಸಿಕೊಳ್ಳಲು ಅವರಿಂದ ಸಾಧ್ಯವಾಗಿಲ್ಲ.

ದಲಿತರ ಪಾಲಿಗೆ ಬಂಡವಾಳಶಾಹಿ ವ್ಯವಸ್ಥೆ, ಜಮೀನ್ದಾರಿ ಪದ್ಧತಿಯಿಂದ ಮುಕ್ತಿ ಪಡೆಯಲು ಇರುವ ಒಂದು ಸಾಮಾಜಿಕ ವ್ಯವಸ್ಥೆ. ಜಮೀನ್ದಾರಿ ಪದ್ಧತಿಯಿಂದ ಒದಗುವ ಆರ್ಥಿಕ ತೊಡಕುಗಳಿಗಿಂತ, ಅದು ಸೃಷ್ಟಿಸಿ ಬೆಳೆಸಿರುವ ಸಾಮಾಜಿಕ ವ್ಯವಸ್ಥೆ ಮಾರಕವಾದುದು. ಜಮೀನ್ದಾರಿ ಪದ್ಧತಿ ಅಸ್ತಿತ್ವದಲ್ಲಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಬಂಡವಾಳಶಾಹಿ ವ್ಯವಸ್ಥೆ ಯಶಸ್ವಿಯಾಗಲು ಸಾಧ್ಯವಿಲ್ಲ. ಹೀಗಾಗಿ, ಬಂಡವಾಳಶಾಹಿ ವ್ಯವಸ್ಥೆ ಒಟ್ಟಾರೆ ಜಮೀನ್ದಾರಿ ಪದ್ಧತಿಯ ರೂಪು ರೇಷೆಯನ್ನೇ ನಾಶ ಮಾಡುವುದಷ್ಟೇ ಅಲ್ಲದೆ, ಅದು ಸೃಷ್ಟಿಸಿರುವ ಸಾಮಾಜಿಕ ವ್ಯವಸ್ಥೆಯನ್ನು ಕೂಡ ನಾಶಪಡಿಸುತ್ತದೆ.

ಭಾರತದಲ್ಲಿರುವುದು ಜಾತಿಯಾಧಾರಿತ ಜಮೀನ್ದಾರಿ ಪದ್ಧತಿಯಾಗಿರುವುದರಿಂದ ಇದು ಇನ್ನೂ ಆತಂಕ

ಕಾರಿಯಾದುದು. ಭಾರತದ ಯಾವುದೇ ಭಾಗದಲ್ಲಿ ಓರ್ವ ದಲಿತ ಜಮೀನ್ದಾರನಾಗಿದ್ದು, ದಲಿತೇತರರು ಅವನ ಕೈ ಕೆಳಗೆ ಜೀತ ಮಾಡುವ ನಿದರ್ಶನಗಳು ನನಗಂತೂ ಕಂಡುಬಂದಿಲ್ಲ.

ಜಮೀನ್ದಾರಿ ಪದ್ಧತಿ ಮತ್ತು ಬಂಡವಾಳಶಾಹಿ ವ್ಯವಸ್ಥೆ ಸೃಷ್ಟಿಸುವ ಸಾಮಾಜಿಕ ವ್ಯವಸ್ಥೆಗೆ ಸ್ವಲ್ಪ ವಿವರಣೆಯ ಅವಶ್ಯಕತೆಯಿದೆ. ಜಮೀನ್ದಾರಿ ಪದ್ಧತಿಯಡಿ, ಭೂಮಾಲೀಕರು ತಮ್ಮ ಜೀತದಾಳುಗಳ ಹಣಕಾಸು ಮತ್ತು ಜೀವನಶೈಲಿಯನ್ನು ನಿಯಂತ್ರಿಸುತ್ತಾರೆ. ತಮ್ಮ ಭೂಮಾಲೀಕರ ಎದುರು ಎಷ್ಟು ಮಂದಿ ದಲಿತರು ಕೊಡೆ ಹಿಡಿದು ಬೂಟು ತೊಟ್ಟು ನಿಂತಿರುವ ಉದಾಹರಣೆಗಳಿವೆ? ಆದರೆ, ಬಂಡವಾಳಶಾಹಿಗಳು ತಮ್ಮ ಉದ್ಯೋಗಿಗಳ ಆರ್ಥಿಕ ಜೀವನವನ್ನು ಮಾತ್ರ ನಿಯಂತ್ರಿಸುತ್ತಾರೆಯೇ ಹೊರತು ಅವರ ಜೀವನಶೈಲಿಯ ಬಗ್ಗೆ ಮೂಗು ತೂರಿಸಲು ಹೋಗುವುದಿಲ್ಲ. ಜಮೀನ್ದಾರಿ ಪದ್ಧತಿಯಲ್ಲಿ ಭೂಮಾಲೀಕ ತನ್ನ ಜೀತದಾಳಿನ ಶ್ರಮದ ಜೊತೆಗೆ, ಆತನ ಕುಟುಂಬದ ಸದಸ್ಯರೆಲ್ಲರ (ಮಕ್ಕಳೂ ಕೂಡ) ಶ್ರಮದ ಮೇಲೆ ನಿಯಂತ್ರಣ ಹೊಂದಿರುತ್ತಾನೆ.

ಹೀಗಾಗಿ ಬಂಡವಾಳಶಾಹಿ ವ್ಯವಸ್ಥೆ ತನ್ನದೇ ಆದ ಸಾಮಾಜಿಕ ವ್ಯವಸ್ಥೆಯನ್ನು ಹೊತ್ತು ತರುತ್ತದೆ. ರಾಜಾ ಭಯ್ಯಾ ಅಥವಾ ರತನ್ ಟಾಟಾ ಇವರಿಬ್ಬರಲ್ಲಿ ಯಾರ ಬಳಿ ಕೆಲಸ ಮಾಡಲು ಬಯಸುತ್ತೀರಾ ಎಂದು ದಲಿತರಿಗೇನಾದರೂ ಆಯ್ಕೆ ನೀಡಿದರೆ, ನಿಸ್ಸಂಶಯವಾಗಿ ರತನ್ ಟಾಟಾ ಎಂಬ ಉತ್ತರ ಬರುತ್ತದೆ. ನಂದನ್ ಅವರ "ಇಮ್ಯಾಜಿನಿಂಗ್ ಇಂಡಿಯಾ" ಕೃತಿಯನ್ನು ಓದುತ್ತಾ ಅವರಲ್ಲಿ ಹೆನ್ರಿ ಫೋರ್ಡ್ ಅವರನ್ನು ಕಾಣಲು ಬಯಸಿ ನಿರಾಶನಾದೆ. ಅವರ ಮುಂದಿನ ಕೃತಿ ದಲಿತ ಬಂಡವಾಳಶಾಹಿಗಳ ಬಗ್ಗೆ ಇರುತ್ತದೆ ಎಂಬ ನಿರೀಕ್ಷೆ ನನ್ನದು. ನಂದನ್ ನಿಲೇಕಣಿ, ದಲಿತ-ನಂದನ್‌ಗಳ ಜೊತೆಗೆ ಫೋಟೋದಲ್ಲಿ ಕಾಣಿಸಿಕೊಳ್ಳುವುದು ಮತ್ತೊಂದು ಒಬಾಮಾ ಘಳಿಗೆಯಾಗುತ್ತದೆಯಲ್ಲವೆ?

ದಲಿತ ಕಮ್ಮಟ

ಗಾಂಧೀಜಿ ಮತ್ತು ಜವಹರಲಾಲ್ ನೆಹರು ದಲಿತೋದ್ಧಾರಕರೇನಲ್ಲ. ಆದರೂ ಕೂಡ ಲಕ್ಷಾಂತರ ದಲಿತರ ಮನೆಗಳಲ್ಲಿ ಈ ಇಬ್ಬರು ರಾಷ್ಟ್ರೀಯ ನಾಯಕರು ಚಿತ್ರಪಟಗಳನ್ನು ನಾವು ಕಾಣಬಹುದು. ಇದು ದಲಿತರ ವಿಶಾಲ ಮನೋಭಾವದ ಸಂಕೇತ. ಆದರೆ ಅದೇ ರೀತಿ ದಲಿತ ನಾಯಕರು ಒಟ್ಟಾರೆ ಸಮಾಜದ ನಾಯಕರೆನಿಸಿಕೊಳ್ಳುವುದು ತೀರ ವಿರಳ. ಅಮೆರಿಕಾದಲ್ಲಿ ವಿದ್ಯಾರ್ಥಿಗಳಿಗೆ ವರ್ಣವ್ಯವಸ್ಥೆ, ಅಬ್ರಹಾಂ ಲಿಂಕನ್ ಮತ್ತು ಮಾರ್ಟಿನ ಲೂಥರ್ ಕಿಂಗ್ ಜೂನಿಯರ್ ಅವರ ಬಗ್ಗೆ ಪಠ್ಯಗಳಿದ್ದರೆ, ಭಾರತದಲ್ಲಿ ಅಸ್ಪೃಶ್ಯತೆ ಮತ್ತು ಅಂಬೇಡ್ಕರ್ ಅವರ ಬಗ್ಗೆ ಶಾಲಾ ಮಕ್ಕಳಿಗೆ ಸರಿಯಾದ ಮಾಹಿತಿಯನ್ನೇ ನಾವು ನೀಡುವುದಿಲ್ಲ.

ಆದರೆ ಈಗ ಜಾತಿಯಿಂದ ರೋಸಿಹೋಗಿರುವ ಭಾರತದಲ್ಲಿಯೂ ಕೂಡ ಬದಲಾವಣೆಗಳನ್ನು ನಿರೀಕ್ಷಿಸುವಂತಹ ವಾತಾವರಣ ನಿರ್ಮಾಣವಾಗಿದೆ. ಕಳೆದ ಜನವರಿ 21ರಂದು ನನ್ನ ಮಗಳು ಶಾಲೆಯಿಂದ ಹಿಂದಿರುಗಿ ಬಂದ ವಳೇ ಕೂಡಲೇ ಮಾರ್ಕೆಟ್‌ಗೆ ಕರೆದೊಯ್ದು ಡಾ. ಅಂಬೇಡ್ಕರ್ ಭಾವಚಿತ್ರ ಖರೀದಿಸಬೇಕೆಂದು ಹಠ ಹಿಡಿದಳು. ನಾನು ಆಕೆಯ ಡೈರಿಯನ್ನು ಪರಿಶೀಲಿಸಿ ನೋಡಿದಾಗ ಅದರಲ್ಲಿ ಅಂಬೇಡ್ಕರ್ ಅವರ ಭಾವಚಿತ್ರದ ಬಗ್ಗೆ ನಿಯೋಜಿತ ಕಾರ್ಯ ಬರೆಯಲಾಗಿತ್ತು. ಈ ವಿದ್ಯಾರ್ಥಿನಿ ಕ್ಯಾಲೆಂಡರ್ ಸೃಷ್ಟಿನ ಅಂಬೇಡ್ಕರ್ ಅವರ ಭಾವಚಿತ್ರವನ್ನು ತರಬೇಕೆಂದು ಶಿಕ್ಷಕರು ಬರೆದಿದ್ದರು.

ನನಗೆ ಒಮ್ಮೆಲೆ ಆಶ್ಚರ್ಯ ಮತ್ತು ರೋಮಾಂಚನವಾಯಿತು. ಅಂಬೇಡ್ಕರ್ ಭಾವಚಿತ್ರವನ್ನು ನಿಮ್ಮ ಶಿಕ್ಷಕಿ ಏನು ಮಾಡುತ್ತಾರೆ ಎಂಬ ನನ್ನ ಪ್ರಶ್ನೆಗೆ ಕೆ.ಜಿ ಕಲಿಯುತ್ತಿರುವ ನನ್ನ ಪುಟ್ಟ ಮಗಳಿಗೆ ಸರಿಯಾಗಿ ಉತ್ತರ ನೀಡಲಾಗಲಿಲ್ಲ. ಆದರೆ, ಅದು ಜನವರಿ 26ರ ದಿನಕ್ಕೆ ಸಂಬಂಧಿಸಿದ್ದೆಂದು ಆಕೆಯ ಉತ್ತರದಿಂದ ನನಗೆ ತಿಳಿಯಿತು. ಮರುದಿನ ಬೆಳಿಗ್ಗೆ ಆಕೆಯನ್ನು ಬಸ್‌ಗೆ ಹತ್ತಿಸಲು ಹೋದ ಸಂದರ್ಭದಲ್ಲಿ, ಅವಳ ಸಹಪಾಠಿಗಳ ಡೈರಿ ತೆಗೆದು ನೋಡಿದಾಗ, ಇತರ ರಾಷ್ಟ್ರೀಯ ನಾಯಕರ ಭಾವಚಿತ್ರಗಳನ್ನು ತರಲು ಬರೆಯಲಾಗಿತ್ತು. ಬಹುಶಃ ನಾನು ಟಿ.ವಿ.ಯಲ್ಲಿ ಕಾಣಿಸಿಕೊಳ್ಳುವುದರಿಂದ, ನನ್ನ ಮಗಳಿಗೆ ಅಂಬೇಡ್ಕರ್ ಅವರ ಭಾವಚಿತ್ರ ತರಲು ಆ ಶಿಕ್ಷಕಿ ಹೇಳಿರಬಹುದು.

ಅಂಬೇಡ್ಕರ್ ಬಗ್ಗೆ ನಿಮ್ಮ ಶಿಕ್ಷಕಿ ಮಾತನಾಡುವಾಗ ಮನಸ್ಸಿಟ್ಟು ಕೇಳು ಎಂದು ನನ್ನ ಮಗಳಿಗೆ ಹೇಳಿ ಕಳುಹಿಸಿದೆ. ಮನೆಗೆ ಹಿಂದಿರುಗಿದಾಗ ಮಗಳು, ಶಾಲೆಯಲ್ಲಿ ಶಿಕ್ಷಕಿ ಅಂಬೇಡ್ಕರ್ ಬಗ್ಗೆ ಕಥೆ ಹೇಳಿದರೆಂದು ತಿಳಿಸಿದಳು. ನಾನು ವಾಸ ಮಾಡುವ ಗೃಹ ಕಾಲೋನಿಯಲ್ಲಿ ಹಲವಾರು ಮಕ್ಕಳು ಇತರ ಪಬ್ಲಿಕ್ ಶಾಲೆಗಳಿಗೆ ವಿದ್ಯಾಭ್ಯಾಸ ಮಾಡಲು ಹೋಗುತ್ತಾರೆ. ಅಂಬೇಡ್ಕರ್ ಅವರ ಭಾವಚಿತ್ರ ಸಂಗ್ರಹಿಸಬೇಕೆಂದು ಸರ್ಕಾರಿ ನಿರ್ದೇಶನವೇನಾದರೂ ಇದೆಯಾ ಎಂದು ಕೆಲವು ಪೋಷಕರನ್ನು ನನ್ನ ಕುತೂಹಲ ತಣಿಸಿಕೊಳ್ಳಲು ಕೇಳಿದೆ. ಆದರೆ ಅಂತಹ ನಿರ್ದೇಶನಗಳೇನೂ ಇರಲಿಲ್ಲ.

ನಿಜ, ಜಾಗತೀಕರಣ ಪೂರ್ವ ಭಾರತದಲ್ಲಿ ಬಂಡವಾಳಶಾಹಿ ವ್ಯವಸ್ಥೆ ಸಂಕುಚಿತವಾಗಿತ್ತು. ಮೊದಲ ಪೀಳಿಗೆಯ ಉದ್ಯಮಿಗಳಿಗೆ ಪ್ರವೇಶ ಅಷ್ಟೇನೂ ಸುಲಭವಾಗಿರಲಿಲ್ಲ. ಆದರೆ ಉದಾರೀಕರಣದ ನಂತರದ ದಿನಗಳಲ್ಲಿ ಹೊಸ ಉದ್ಯಮಿಗಳು, ಇವರಲ್ಲಿ ಬಹುತೇಕ ಮಂದಿ ವ್ಯಾಪಾರ ಕೇಂದ್ರಿತವಲ್ಲದ ಜಾತಿಗಳಿಗೆ ಸೇರಿದವರು, ಉದ್ಯಮ ಕ್ಷೇತ್ರಕ್ಕೆ ಕಾಲಿರಿಸಿದರು. ಇತರೆ ಜಾತಿಗಳ ಮೊದಲ ಪೀಳಿಗೆಯ ಉದ್ಯಮಿಗಳು ಯಶಸ್ವಿಯೆನಿಸಿಕೊಳ್ಳಲು ಗುಡ್ಡಗಳನ್ನು ದಾಟಬೇಕಾಯಿತು, ಇನ್ನು ದಲಿತರು ಯಶಸ್ವಿ ಉದ್ಯಮಿಗಳೆನಿಸಿಕೊಳ್ಳಲು ಗುಡ್ಡಗಳನ್ನು ದಾಟುವ ಜೊತೆಗೆ ಸಾಗರೋಲ್ಲಂಘನ ಕೂಡ ಮಾಡಬೇಕಾಗುವುದೇನೋ. ತಮಿಳುನಾಡಿನಲ್ಲಿ ದ್ರಾವಿಡ ಚಳವಳಿಯ ಮೂಲಕ ಒಟ್ಟಾರೆ ಜಾತಿ ವ್ಯವಸ್ಥೆಯನ್ನು ವಿರೋಧಿಸದೆ, ಬ್ರಾಹ್ಮಣರ ಪ್ರಾಬಲ್ಯವನ್ನು ಮಾತ್ರ ಪ್ರಶ್ನಿಸಿದ ಹಾಗೆ, ಇಲ್ಲಿಯೂ ಕೂಡ ಆರ್ಥಿಕ ಸುಧಾರಣೆ ಎಲ್ಲ ಜಾತಿಗಳಿಗೂ ಅವಕಾಶಗಳ ಬಾಗಿಲುಗಳನ್ನು ತೆರೆದರೂ, ಪಂಚಮರನ್ನು ಮಾತ್ರ ಹೊರಗಿರಿಸಿತು.

ನನ್ನ ಮಗಳು ಅಮಿಟಿ ಇಂಟರ್‌ನ್ಯಾಷನಲ್ ಶಾಲೆಯ ವಿದ್ಯಾರ್ಥಿನಿ. ಅಮಿಟಿ ಇಂಟರ್‌ನ್ಯಾಷನಲ್ ಯಾವುದೇ ರೀತಿಯಲ್ಲಿ ನೋಡಿದರೂ ಎಲೀಟ್ ಶಾಲೆಯೇ. ಈ ಶಾಲೆ ನನ್ನ ದೃಷ್ಟಿಯಲ್ಲಿ ಒಂದು ಮಹತ್ತರವಾದ ಸ್ಥಾನ ಪಡೆದಿದೆ. 2009ರ ಜನವರಿ 21ರ ವರೆಗೆ ಅಮಿಟಿ ಇಂಟರ್‌ನ್ಯಾಷನಲ್‌ನಂತಹ ಎಲೀಟ್ ಶಾಲೆಗಳಲ್ಲಿ ಮೇಲ್ಜಾತಿಯ ವಿದ್ಯಾರ್ಥಿಗಳಿಗೆ ಭಾರತಕ್ಕೆ ಅಂಬೇಡ್ಕರ್ ಅವರು ನೀಡಿದ ಕೊಡುಗೆಗಳ ಬಗ್ಗೆ ಹೇಳುತ್ತಾರೆ ಎಂದು ನಾನು ಯೋಚಿಸಿಯೂ ಇರಲಿಲ್ಲ. ಆದರೆ, ಅಮಿಟಿ ಇಂಟರ್‌ನ್ಯಾಷನಲ್‌ನಂತಹ ಶಾಲೆಗಳು ಆಶಾವಾದದ ಸಂಕೇತಗಳಾಗುತ್ತವೆ.

ಅಮಿಟಿಯ ಸಾಧನೆಯ ಬಗ್ಗೆ ಯೋಚಿಸುವಾಗ, ಕೆಲವು ವರ್ಷಗಳ ಹಿಂದೆ ನಡೆದ ಒಂದು ಸಮಾರಂಭ ನನಗೆ ನೆನಪಿಗೆ ಬರುತ್ತದೆ. ಅಂದು ಅಮಿಟಿ ಶಿಕ್ಷಣ ಸಮೂಹಗಳ ಸಂಸ್ಥಾಪಕರಾದ ಡಾ. ಅಶೋಕ್ ಚೌಹಾಣ್ ಅವರ ಮನೆಯಲ್ಲಿ ದಲಿತ ಲೇಖಕ-ರಾಜಕಾರಣಿ ಡಾ. ಸಂಜಯ್ ಪಾಸ್ವಾನ್ ದಲಿತ ಬುದ್ಧಿಜೀವಿಗಳ ಸಭೆಯನ್ನು ಆಯೋಜಿಸಿದ್ದರು. ನಾನೂ ಕೂಡ ಸಮಾರಂಭದಲ್ಲಿದ್ದೆ. ಸ್ವತಃ ಚೌಹಾಣ್ ಅವರೇ ಸಭೆಯ ಅಧ್ಯಕ್ಷತೆ ವಹಿಸಿದ್ದರು. "ದಲಿತ ಕಮ್ಮಟ"ವನ್ನು ಆರಂಭಿಸುವ ಬಗ್ಗೆ ಅಂದು ಚೌಹಾಣ್ ಅವರು ಮಾತನಾಡಿದ್ದರು. ಅಂದು ಚೌಹಾಣ್ ಅವರಾಡಿದ ಮಾತುಗಳನ್ನು ಈಗ ಸ್ಮರಿಸಿಕೊಳ್ಳಬೇಕಿದೆ. ದಲಿತರು ಪ್ರತಿಭೆ ಮತ್ತು ಶಕ್ತಿಯ ಅಗಾಧ ಖನಿಗಳು, ರಾಷ್ಟ್ರವನ್ನು ಮುನ್ನಡೆಸುವ ಸಾಮರ್ಥ್ಯ ಹೊಂದಿರುವ ದಲಿತರನ್ನು ಪೋಷಿಸಿ ಬೆಳೆಸಬೇಕಿದೆ ಎಂದು ಚೌಹಾಣ್ ನುಡಿದಿದ್ದರು. ನಂತರದ ಸಭೆಗಳಲ್ಲಿ ನಾನು ಸಕ್ರಿಯವಾಗಿ ಭಾಗವಹಿಸಲಾಗಲಿಲ್ಲ.

ಇನ್ನು ಅಮಿಟಿ ಇಂಟರ್‌ನ್ಯಾಷನಲ್ ಶಾಲೆಯ ವಿಷಯಕ್ಕೆ ಬರುವುದಾದರೆ, ಡಾ. ಅಶೋಕ್ ಚೌಹಾಣ್ ಅವರ ಪತ್ನಿ ಡಾ. ಅಮಿತಾ ಚೌಹಾಣ್ ಶಾಲೆಯ ವ್ಯವಸ್ಥಾಪನೆ ನೋಡಿಕೊಳ್ಳುತ್ತಿದ್ದಾರೆ. ನನ್ನ ಮಗಳ ದಾಖಲಾತಿ ಸಂದರ್ಭದಲ್ಲಿ ಒಮ್ಮೆ ನಾನು ಅವರನ್ನು ಭೇಟಿಯಾಗಿದ್ದೆ. ಆದರೆ, ಅಂಬೇಡ್ಕರ್ ಅವರ ಬಗ್ಗೆ ಅಮಿಟಿ ಇಂಟರ್‌ನ್ಯಾಷನಲ್ ಕೈಗೊಂಡಿರುವ ಚಟುವಟಿಕೆಗಳು ನನಗೆ ತಿಳಿದ ಬಳಿಕ ಡಾ. ಅಮಿತಾ ಚೌಹಾಣ್ ಅವರ ಬಗ್ಗೆ ಮಾಹಿತಿ ಸಂಗ್ರಹಿಸಿದೆ. ಅಲ್ಲಿನ ಹಳೆಯ ಶಿಕ್ಷಕರೊಬ್ಬರಂತೂ ಅಮಿತಾ ಅವರನ್ನು ಮುಕ್ತ ಕಂಠದಿಂದ ಪ್ರಶಂಸಿಸುತ್ತಾರೆ. ಅಮಿಟಿ ಶಾಲೆಯ ದಾಖಲಾತಿ ಅರ್ಜಿಯಲ್ಲಿ "ಎಸ್‌ಸಿ/ಎಸ್‌ಟಿ" ಎಂಬ ಕಾಲಂ ಇದೆ ಎಂಬ ಅಂಶ ಕೂಡ ನನಗೆ ತಿಳಿದು ಬಂತು. ದಲಿತರ ದಾಖಲಾತಿ ಬಗ್ಗೆ ಶಾಲೆ ಸ್ವಲ್ಪ ಸಡಿಲವಾಗಿದೆ ಎಂದು ಆ ಶಿಕ್ಷಕರು ತಿಳಿಸಿದರು.

ನಿಜ ಹೇಳಬೇಕೆಂದರೆ, ಚೌಹಾಣ್ ಅವರದು ಯಶಸ್ವಿ ಕುಟುಂಬ. ಅವರು ಇನ್ನೂ ಹೆಚ್ಚಿನ ಸಾಧನೆ ಮಾಡಲು ದಲಿತರ ಬೆಂಬಲವೇನು ಬೇಕಾಗಿಲ್ಲ. ಡಾ. ಚೌಹಾಣ್ ಮತ್ತು ಅವರ ಪತ್ನಿಯಂತಹ ಶಿಕ್ಷಣ ಹರಿಕಾರರನ್ನು ಪದ್ಮ ಪ್ರಶಸ್ತಿಗೆ ಯಾಕೆ ಪರಿಗಣಿಸಬಾರದು? ☐

ಬುದ್ಧಾಯಣ

೪೨

ಆತ ಧರ್ಮದಿಂದ ದಡ ಸೇರಿದ !

ಹಿಮಾಲಯದ ತಪ್ಪಲಿನಲ್ಲಿ ಸೇರಿವ ಎಂಬ ದೇಶವಿತ್ತು. ಅಲ್ಲಿ ಬೋದಿಸತ್ವ ಮತ್ತು ದೇವದತ್ತನೆಂಬ ಗೆಳೆಯರಿದ್ದರು. ಅವರು ಮುತ್ತು ರತ್ನಗಳನ್ನು ಮಾರುವ ವ್ಯಾಪಾರಿಗಳಾಗಿದ್ದರು. ದೇವದತ್ತನು ವ್ಯಾಪಾರವೆಂದರೆ ಸುಳ್ಳು, ಮೋಸಗಾಗೆ ಅಂಟಿಕೊಂಡಿದ್ದ. ಬೋಧಿಸತ್ವರು ವ್ಯಾಪಾರವೆಂದರೆ ಧರ್ಮವೆಂಬ ಪರಿಪಾಠಕ್ಕೆ ಬದ್ಧರಾಗಿದ್ದರು. ಅವರಿಬ್ಬರೂ ಸಾಮಾನ್ಯವಾಗಿ ಒಟ್ಟಿಗೆ ಗ್ರಾಮಗಳಲ್ಲಿ ಸಂಚರಿಸುತ್ತಿದ್ದರು. ಆದರೆ ಅವರಲ್ಲಿ ಒಂದು ಷರತ್ತು ಜಾರಿಯಲ್ಲಿತ್ತು. ಇಬ್ಬರೂ ಒಟ್ಟಿಗೆ ಒಂದೇ ಬೀದಿಯಲ್ಲಿ ವ್ಯಾಪಾರ ಮಾಡುವಂತಿರಲ್ಲ. ಒಬ್ಬರು ಒಂದು ಬೀದಿಯನ್ನು ಮುಗಿಸಿದ ಮೇಲೆ ಮತ್ತೊಬ್ಬ ಆ ಬೀದಿಯನ್ನು ಪ್ರವೇಶಿಸುವುದೆ ಆಗಿತ್ತು.

ಸಿ.ಎಚ್. ರಾಜಶೇಖರ್

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಸಾವತ್ಥಿಯ ಜೇತವನದಲ್ಲಿ ಬೀಡು ಬಿಟ್ಟಿದ್ದರು. ಅಂತಹ ಸಮಯದಲ್ಲಿ ತನ್ನ ಭಿಕ್ಷುಗಳನ್ನು ಉದ್ದೇಶಿಸಿ ಈ ಕರೆಯನ್ನು ಹೇಳ ತೊಡಗಿದರು.

ಹಿಮಾಲಯದ ತಪ್ಪಲಿನಲ್ಲಿ ಸೇರಿವ ಎಂಬ ದೇಶವಿತ್ತು. ಅಲ್ಲಿ ಬೋದಿಸತ್ವ ಮತ್ತು ದೇವದತ್ತನೆಂಬ ಗೆಳೆಯರಿದ್ದರು. ಆ ಇಬ್ಬರೂ ಮುತ್ತು ರತ್ನಗಳನ್ನು ಮಾರುವ ಸಂಚಾರಿ ವ್ಯಾಪಾರಿಗಳಾಗಿದ್ದರು. ದೇವದತ್ತನು ವ್ಯಾಪಾರವೆಂದರೆ ಸುಳ್ಳು ಮತ್ತು ಮೋಸವೆಂಬ ತತ್ವಕ್ಕೆ ಅಂಟಿಕೊಂಡಿದ್ದ. ಬೋಧಿಸತ್ವರು ವ್ಯಾಪಾರವೆಂದರೆ ಸತ್ಯ ಮತ್ತು ಧರ್ಮ ಎಂಬ ಪರಿಪಾಠಕ್ಕೆ ಬದ್ಧರಾಗಿದ್ದರು.

ಆ ಇಬ್ಬರೂ ಸಾಮಾನ್ಯವಾಗಿ ಜೊತೆಯಲ್ಲಿ ಗ್ರಾಮ ಮತ್ತು ನಗರಗಳಲ್ಲಿ ಸಂಚರಿಸುತ್ತಿದ್ದರು. ಆದರೆ ಅವರಲ್ಲಿ ಒಂದು ಷರತ್ತು ಜಾರಿಯಲ್ಲಿತ್ತು. ಅದೇಂದರೆ ಇಬ್ಬರೂ ಒಟ್ಟಿಗೆ ಒಂದೇ ಬೀದಿಯಲ್ಲಿ ವ್ಯಾಪಾರ ಮಾಡುವಂತಿರಲಿಲ್ಲ. ಒಬ್ಬರು ಒಂದು ಬೀದಿಯನ್ನು ಮುಗಿಸಿದ ನಂತರ ಮತ್ತೊಬ್ಬ ಆ ಬೀದಿಯನ್ನು ಪ್ರವೇಶಿಸುವುದೆ ಆಗಿತ್ತು.

ಅಂತಹ ಸಂದರ್ಭದಲ್ಲಿ ಆ ಇಬ್ಬರು ಒಟ್ಟಿಗೆ ವಿಶಾಲವಾಗಿ ಹರಿಯುತ್ತಿದ್ದ ನೀಲವಾಹಿನಿ ಎಂಬ ನದಿಯನ್ನು ದಾಟಿ ಅಂಧಪುರ ಎಂಬ ನಗರವನ್ನು ತಲುಪಿದರು. ಅಲ್ಲಿನ ಪ್ರಮುಖ ಬೀದಿಯನ್ನು ಮೊದಲಿಗೆ ಆಯ್ದುಕೊಂಡ ದೇವದತ್ತನು: "ಮಿತ್ರ, ಮೊದಲಿಗೆ ನಾನು ಈ ಬೀದಿಯಲ್ಲಿ ಸಂಚರಿಸಿ ವ್ಯಾಪಾರ ಮಾಡುತ್ತೇನೆ. ನನ್ನ ಸರದಿಯು ಮುಗಿದ ನಂತರ ನೀನು ಪ್ರವೇಶಿಸು" ಎನ್ನಲು ಬೋಧಿಸತ್ವರು ಆ ಮಾತಿಗೆ ಅನುಮತಿ ಸೂಚಿಸಿ ನಗರದ ಚಿಕ್ಕ ಬೀದಿಯನ್ನು ಪ್ರವೇಶಿಸಿದರು.

ದೇವದತ್ತನು ಮುತ್ತು ರತ್ನಗಳಿಂದ ಸುಂದ ರವಾಗಿ ಮಾಡಲ್ಪಟ್ಟ ಕಂಠಿಹಾರಗಳನ್ನು ಬಿದಿರಿನ ಕುಕ್ಕೆಯಲ್ಲಿ ಇರಿ ಸಿಕೊಂಡು ತಲೆಯ ಮೇಲೆ ಹೊತ್ತು:

"ಪುರಜನರೇ, ಹಾರಬೇಕೇ, ಹಾರ... ಮುತ್ತು ರತ್ನಗಳ ಕಂಠಿಹಾರ...!" ಎಂದು ಎಂದಿನಂತೆ ಕೂಗುತ್ತಾ ಸಾಗಿದ. ಅದೇ ಬೀದಿಯಲ್ಲಿ ಹಿಂದೊಮ್ಮೆ ಬಹಳ ಸಂಪತ್ತು ಮತ್ತು ವೈಭವದಿಂದ ಬದುಕಿ ಬಾಳಿದ ಶ್ರೇಷ್ಠಿಯ ಮನೆತನವೊಂದಿತ್ತು. ಆದರೆ ಇಂದು ಆ ಕುಟುಂಬದಲ್ಲಿ ಇದ್ದ ದುಡಿಯುವ ಗಂಡಸರೆಲ್ಲ ಅಸುನೀಗಿ ಕೊನೆಗೆ ಅಜ್ಜಿ ಮತ್ತು ಮೊಮ್ಮಗಳು ಮಾತ್ರ ಜೀವಿಸುತ್ತಿದ್ದರು. ಅಳಿದುಳಿದ ಸಂಪತ್ತು ದಿನದಿಂದ ದಿನಕ್ಕೆ ಕ್ಷೀಣಿಸುತ್ತಾ ಇಂದು ದುರ್ಗತಿಯಲ್ಲಿ ತಮ್ಮ ಬದುಕನ್ನು ಸಾಗಿಸುತ್ತಿದ್ದರು.

ಆ ಹಳೆಯ ಮನೆಯಲ್ಲಿ ಹಿಂದಿನ ತಲೆಮಾರಿನ ಹಿರಿಯ ಶ್ರೇಷ್ಠಿಗಳು ಊಟ ಮಾಡಲು ಚಿನ್ನದ ತಟ್ಟೆಗಳನ್ನು ಬಳಸುತ್ತಿದ್ದರು. ಅಂತಹ ತಟ್ಟೆಗಳಲ್ಲಿ ಒಂದು ತಟ್ಟೆಯು ನಿರ್ಲಕ್ಷಕ್ಕೆ ತುತ್ತಾಗಿ ಮಣ್ಣು ಧೂಳು ಮತ್ತು ಕೊಳೆಯಿಂದಾಗಿ ತನ್ನ ನಿಜ ಬಣ್ಣವನ್ನು ಕಳೆದುಕೊಂಡಿತ್ತು. ಅಂತಹ ಸಂದರ್ಭದಲ್ಲಿ ಯೌವನಾವಸ್ಥೆಗೆ ಬಂದ ಮೊಮ್ಮಗಳಿಗೆ ಮುತ್ತಿನ ಕಂಠಿಹಾರವನ್ನು ಧರಿಸುವ ಬಲುದಿನಗಳ ಅಪೇಕ್ಷೆ ಇರುತ್ತದೆ. ಅದೇ ಸಮಯಕ್ಕೆ ದೇವದತ್ತನು.

"ಪುರಜನರೇ, ಹಾರಬೇಕೆ, ಹಾರ... ಮುತ್ತು ರತ್ನಗಳ ಕಂಠಿಹಾರ...!".ಎಂದು ಕೂಗಿದ ಸದ್ದು ಆ ಹುಡುಗಿಯ ಕಿವಿಗೆ ಬೀಳುತ್ತದೆ. ತಕ್ಷಣ ಆಕೆ ತನ್ನ ಅಜ್ಜಿಯ ಬಳಿ ಬಂದು:

"ಅಜ್ಜಿ, ನನಗಿಂದು ಮುತ್ತಿನ ಹಾರಬೇಕು. ಇಲ್ಲ ಎನ್ನದೆ ಕೊಡಿಸಬೇಕು!" ಎಂದು ದುಂಬಾಲು ಬೀಳಲು ಆಕೆ:

"ಮಗು, ನಾವು ಬದುಕುತ್ತಿರುವ ಇಂತಹ ದುಸ್ಥಿತಿಯಲ್ಲಿ ನಾನು ಏನನ್ನು ಕೊಟ್ಟು ಮುತ್ತಿನ ಹಾರವನ್ನು ಕೊಂಡುಕೊಳ್ಳಲಿ" ಎಂದಳು. ತಕ್ಷಣ ಆಕೆಗೆ ಮಹಡಿಯಲ್ಲಿ ಹಳೆಯ ವಸ್ತುಗಳನ್ನು ತುಂಬಿಟ್ಟಿದ್ದ ಅಗಲವಾದ ತಟ್ಟೆಯೊಂದರ ನೆನಪು ಮೂಡಿತು. ಆಕೆ ಉತ್ತರಕ್ಕಾಗಿ ಕಾಯದೆ ಮಹಡಿ ಹತ್ತಿ ಆ ತಟ್ಟೆಯನ್ನು ಕೈಯಲ್ಲಿ ಹಿಡಿದು ಅಜ್ಜಿಯ ಎದುರು ಅದನ್ನು ಪ್ರದರ್ಶಿಸುತ್ತಾ:-

"ಈ ತಟ್ಟೆಯು ಬಲು ತೂಕದಿಂದ ಕೂಡಿದೆ. ಇದನ್ನು ಕೊಟ್ಟರೆ ವ್ಯಾಪರಿಯು ಮುತ್ತಿನ ಹಾರ ಕೊಡಬಹುದು."

"ಮಗು, ನಿನ್ನ ಅದೃಷ್ಟ ಹೇಗಿದೆಯೋ ಪರೀಕ್ಷಿಸಿ ಬಿಡೋಣ ಆ ವ್ಯಾಪಾರಿಯನ್ನು ಒಳ ಕರೆ" ಎನ್ನಲು ಅವಳು ಹಾಗೆಯೆ ಮಾಡಿದಳು. ಒಳಬಂದ ದೇವದತ್ತನು ತಲೆಯ ಮೇಲಿದ್ದ ಕುಕ್ಕೆಯನ್ನು ಕೆಳಗಿಳಿಸಿ ಕುಳಿತುಕೊಂಡ. ಆತನ ಎದುರು ಆ ತಟ್ಟೆಯನ್ನು ನೀಡಿ:

"ಅಯ್ಯಾ, ಈ ತಟ್ಟೆಯನ್ನು ಕೊಂಡು ಇದಕ್ಕೆ ಬದಲಾಗಿ ನನ್ನ ಮೊಮ್ಮಗಳಿಗೆ ಒಂದು ಮುತ್ತಿನ ಹಾರವನ್ನು ಕೊಡಬಲ್ಲೆಯಾ?" ಎಂದಳು. ಆತ ಆ ತಟ್ಟೆಯನ್ನು ಕಂಡು ತಾತ್ಸಾರ ಮನೋಭಾವವನ್ನು ಪ್ರದರ್ಶಿಸುತ್ತಾ ಸೂಜಿಯನ್ನು ತೆಗೆದುಕೊಂಡು ಅದರ ತಳಭಾಗಕ್ಕೆ ಗೀಜಿದ. ಅದು ಧೂಳು ಮೆತ್ತಿದ ಚಿನ್ನದ ತಟ್ಟೆ ಎಂಬುದು ದೃಢವಾಗುತ್ತಿದ್ದಂತೆ ಅದರ ಮೇಲೆ ಇನ್ನಿಲ್ಲದಂತೆ ಮೋಹ ಮೂಡಿತು. ಅದರ ಬೆಲೆ ಏನಿಲ್ಲವೆಂದರೂ ಒಂದು ಲಕ್ಷ ಎಂದು ನಿರ್ಧರಿಸಿದ.

ತಕ್ಷಣ ಆತನಲ್ಲಿ ದುರಾಸೆಯು ಮೂಡಲು ಈ ಅಜ್ಜಿ ಮೊಮ್ಮೊಗಳಿಗೆ ಹೇಗಾದರೂ ಮೋಸ ಮಾಡಿ ಚಿನ್ನದ ತಟ್ಟೆಯನ್ನು ಕಬಳಿಸಬೇಕೆಂದು ನಿರ್ಧರಿಸಿ. ಮೊದಲಿಗಿಂತ ಹೆಚ್ಚು ತಾತ್ಸಾರ ನಟಿಸುತ್ತಾ ಆ ತಟ್ಟೆಯನ್ನು ಅವರ ಎದುರಿಗೆ ಬಿಸಾಡುತ್ತಾ:

"ತುಕ್ಕೊ ಹಿಡಿದ ಈ ತಗಡಿನ ತಟ್ಟೆಗೆ ಒಂದು ಗುಲಗಂಜಿಯೂ ದೊರೆಯುವುದಿಲ್ಲ. ಹಾಗಿರುವಾಗ ಕಂಠೀಹಾರ ಬೇಕಂತೆ, ಕಂಠೀಹಾರ....!"ಎಂದು ಕೋಪ ಪ್ರದರ್ಶಿಸಿ ಹೊರ ನಡೆದ.

ಹೀಗೆ ಷರತ್ತಿನ ಪ್ರಕಾರ ದೇವದತ್ತನು ಆ ಬೀದಿಯ ವ್ಯಾಪಾರವನ್ನು ಮುಗಿಸಿದ, ಬಳಿಕ ಅದೇ ಬೀದಿಯನ್ನು ಬೋಧಿಸತ್ವರು ಪ್ರವೇಶಿಸಿದರು ಎಂದಿನಂತೆ ಅವರೂ ಕೂಡ:

"ಪುರಜನರೇ, ಹಾರಬೇಕೇ,. ಹಾರ.... ಮುತ್ತು ರತ್ನದ ಹಾರ...!" ಎಂದು ಸಾರಿದರು. ಅವಮಾನ ಮತ್ತು ಬೇಸರದಿಂದ ಮುದುಡಿ ಕುಳಿತ ಆ ಹುಡುಗಿಗೆ ಮತ್ತೆ ಕಂಠೀಹಾರದ ಮೇಲಿನ ಆಸೆ ಮೂಡಿತು. ತಕ್ಷಣ ಎದ್ದು ಹೊರ ಬಂದಳು. ಬೀದಿಯಲ್ಲಿ ನಿಧಾನವಾಗಿ ನೆಡೆದು ಬರುತ್ತಿದ್ದ ಬೋಧಿಸತ್ವರ ವ್ಯಕ್ತಿತ್ವದಲ್ಲಿ ಸೌಮ್ಯತೆಯನ್ನು ಗುರುತಿಸಿದಳು ಒಳ ಬಂದ ಆಕೆ ಅಜ್ಜಿಯನ್ನು ಉದ್ದೇಶಿಸಿ:

"ಅಜ್ಜಿ... ಈಗ ಹೊಸ ವ್ಯಾಪಾರಿ ಬರುತ್ತಿದ್ದಾನೆ. ಆತ ಒಳ್ಳೆಯವನಂತೆ ತೋರುತ್ತಿದ್ದಾನೆ. ಆತನನ್ನು ಕರೆದು ಕೊನೆಯದಾಗಿ ನಮ್ಮ ಅದೃಷ್ಟವನ್ನು ಏಕೆ ಮತ್ತೆ ಪರೀಕ್ಷಿಸಬಾರದು?"

"ಮಗು, ನಮ್ಮಂತಹ ಬಡವರ ಪಾಲಿಗೆ ಅದೃಷ್ಟವೆಂಬುದು ಕನಸಿನ ಮಾತೇ ಸರಿ. ನಮಗೇನಿದ್ದರೂ ಅವಮಾನ ಮಾತ್ರ ಕಟ್ಟಿಟ್ಟ ಬುತ್ತಿ!"

"ಅಜ್ಜಿ... ಹಾಗೆನ್ನ ಬೇಡ ಇದು ಕೊನೆಯ ಪ್ರಯತ್ನ"

"ಆಯ್ತು ಮಗು, ಆತನನ್ನು ಕರೆ. ನಿನ್ನ ಆಸೆಗೆ ನಾನೇಕೆ ತಣ್ಣೀರೆರಚಲಿ ಎನ್ನಲು ಆ ಹುಡುಗಿ ಬೋಧಿಸತ್ವರನ್ನು ಒಳಕರೆದು ಮೊದಲು ಕುಳಿತ ವ್ಯಾಪಾರಿಯ ಸ್ಥಾನದಲ್ಲಿಯೇ ಕೂರಿಸಿದಳು. ಮತ್ತೆ ಹಿಂದಿನಂತೆಯೆ ಆ ತಟ್ಟೆಯನ್ನು ವ್ಯಾಪಾರಿಯ ಕೈಗಿತ್ತ ಅಜ್ಜಿಯು:

"ಅಯ್ಯಾ, ನನ್ನ ಮೊಮ್ಮಗಳು ಬಹು ದಿನಗಳಿಂದಲೂ ಕಂಠೀಹಾರವನ್ನು ಧರಿಸುವ ಕನಸು ಕಾಣುತ್ತಿದ್ದಾಳೆ. ನಮ್ಮಗಳ ಬಳಿ ಗತವೈಭವದ ಪಳೆಯುಳಿಕೆಯ ಈ ತಟ್ಟೆಯೊಂದು ಉಳಿದಿದೆ. ಇದನ್ನು ಕೊಂಡು ಮುತ್ತಿನ ಹಾರವನ್ನು ಕೊಡಬಲ್ಲೆಯಾ?" ಎನ್ನಲು ಆತ ಆ ತಟ್ಟೆಯನ್ನು ಕೈಗೆತ್ತಿಕೊಂಡು ಹಿಂದಿನವನಂತೆಯೆ ಸೂಜಿಯ ಮೊನೆಯಿಂದ ತಟ್ಟೆಯ ಮೇಲೆ ಗೆರೆ ಎಳೆದ ಅದು ಚಿನ್ನದ ತಟ್ಟೆ ಎಂಬುದನ್ನು ಖಚಿತ ಪಡಿಸಿಕೊಂಡ ಮೇಲೆ:

"ಅಜ್ಜಿ, ನನ್ನನ್ನು ಕ್ಷಮಿಸು ! ಈ ತಟ್ಟೆಯನ್ನು ಕೊಳ್ಳುವಂತಹ ಭಾಗ್ಯ ನನಗಿಲ್ಲ!"

"ಅಯ್ಯಾ, ಏಕೆ?"

"ಅಜ್ಜಿ, ಇದು ಚಿನ್ನದ ತಟ್ಟೆ ಇದು ಲಕ್ಷಕ್ಕೆ ಬೆಲೆ ಬಾಳುತ್ತದೆ. ನನ್ನ ಬಳಿ ಐನೂರು ಚಿನ್ನದ ನಾಣ್ಯಗಳು, ಐನೂರು ಮೌಲ್ಯಕ್ಕೆ ಬೆಲೆಬಾಳುವ ಮುತ್ತುರತ್ನಗಳ ಹಾರಗಳು. ಒಂದು ತಕ್ಕಡಿ ಮತ್ತು ಒಂದು ಚೀಲವಷ್ಟೇ ಇದೆ. ಹಾಗಿರುವಲ್ಲಿ ಮಿಕ್ಕ ಹಣವನ್ನು ನಾನು ತರಲಾರೆ!"ಎನ್ನಲು, ಆ ಅಜ್ಜಿ ಮತ್ತು ಮೊಮ್ಮಗಳು ಬೋಧಿಸತ್ವರು ಸತ್ಯ ಹಾಗೂ ಪ್ರಾಮಾಣಿಕತೆಗೆ ಮೆಚ್ಚಿ ಒಬ್ಬರ ಮುಖವನ್ನು ಆಶ್ಚರ್ಯಚಕಿತರಾಗಿ ನೋಡಿ ಕೊಂಡರು. ಬಳಿಕ ಅಜ್ಜಿಯು:

"ಅಯ್ಯಾ, ಚಿಂತೆ ಇಲ್ಲ. ನಿನ್ನ ಬಳಿ ಎಷ್ಟಿದೆಯೋ ಅಷ್ಟನ್ನೆ ಕೊಟ್ಟು ಹೋಗು!" ಅಜ್ಜಿ, ನನ್ನ ಜೀವನಾಧಾರವಾದ ತಕ್ಕಡಿ, ಚೀಲ ಮತ್ತು ನದಿ ದಾಟಲು ಶುಲ್ಕವಾಗಿ ಅಂಬಿಗನಿಗೆ ನಾನು ತೆರಬೇಕಾದ ಎಂಟು ಚಿನ್ನದ ನಾಣ್ಯಗಳನ್ನು ನೀನು ನನಗೆ ಹಿಂದಿರುಗಿ ಕೊಡುವ ಷರತ್ತಿನ ಒಪ್ಪುವುದಾದರೆ. ಒಂದು ಸಾವಿರ ಬೆಲೆಯ ಮೌಲ್ಯವನ್ನು ನಿನಗೆ ಕೊಟ್ಟು ನಾನು ಈ ಚಿನ್ನದ ತಟ್ಟೆಯನ್ನು ಪಡೆಯ ಬಲ್ಲೆ!" ಎಂಬ ಷರತ್ತನ್ನು ವಿಧಿಸಿದ.

ಆತನ ಷರತ್ತನ್ನು ಆ ಇಬ್ಬರೂ ಮರು ಮಾತಿಲ್ಲದೆ ಒಪ್ಪಿಕೊಂಡರು. ನಂತರ ಆತನ ಬಳಿ ಇದ್ದ ಐನೂರು ನಾಣ್ಯ, ಐನೂರು ಬೆಲೆ ಬಾಳುವ ಮತ್ತು ರತ್ನಗಳ ಕಂಠೀಹಾರಗಳನ್ನೆಲ್ಲ ಆ ಅಜ್ಜಿ ಮೊಮ್ಮೊಗಳಿಗೆ ಅರ್ಪಿಸಿದರು. ಅವರಿಂದ ಉಡುಗೊರೆಯಾಗಿ ತಕ್ಕಡಿ, ಚೀಲ ಮತ್ತು ನದಿ ದಾಟಲು ಬೇಕಾದ ಎಂಟು ನಾಣ್ಯಗಳನ್ನು ಅವರಿಂದ ಪಡೆದು ಅವರಿಗೆ ಮಂಗಳವಾಗಲೆಂದು ಹಾರೈಸಿ ಅಲ್ಲಿಂದ ಮುನ್ನೆಡದರು.

ವ್ಯಾಪಾರಕ್ಕಾಗಿ ಬೇರೆ ಬೀದಿಗೆ ಹೋಗಿದ್ದ ದೇವದತ್ತನ ಮನಸ್ಸೆಲ್ಲ ಅಜ್ಜಿ ಮನೆಯ ಚಿನ್ನದ ತಟ್ಟೆಯ ಮೇಲೇ ನೆಟ್ಟಿತ್ತು. ಈಗ ನಾನು ಹೋದರೆ ನಾನು ಕೇಳಿದ ಬೆಲೆಗೆ ಚಿನ್ನದ ತಟ್ಟೆಯನ್ನು ಕೈಮುಗಿದು ಕೊಡುತ್ತಾರೆ ಎಂದು ಕಲ್ಪಿಸಿಕೊಂಡು ಮತ್ತೆ ಅಜ್ಜಿಯ ಮನೆಗೆ ಬಂದು:

"ಅಜ್ಜಿ, ಆ ತಗಡಿನ ತಟ್ಟೆಯನ್ನು ತಾ. ನಿನಗೆ ಏನಾದರೂ ಕೊಟ್ಟು ಹೋಗುತ್ತೇನೆ!" ಎನ್ನಲು ಒಳಗಿನಿಂದ ಆಕೆಯ ಮೊಮ್ಮಗಳು ಕೊರಳಿನ ತುಂಬ ಹತ್ತಾರು ಮುತ್ತು ರತ್ನಗಳಿಂದ ಕೂಡಿದ ಕಂಠೀಹಾರವನ್ನು ಧರಿಸಿಕೊಂಡು ನಲುಯುತ್ತಾ ಕುಣಿಯುತ್ತಾ ಹೊರ ಬಂದಳು. ಆಕೆಯನ್ನು ಕಂಡ ಹುಚ್ಚನಂತಾದ ದೇವದತ್ತನು:

"ಎಲೈ ಹುಡುಗಿ. ಈ ಕಂಠೀಹಾರಗಳನ್ನು ನಿನಗ್ಯಾರು ಕೊಟ್ಟರು?" ಎನ್ನಲು ಆಕೆ ಮೌನ ನಟಿಸಿ ಬಿಂಕ ತೋರಿಸಿ ನಿಂತಳು. ಅವನು ಮತ್ತೆ ಅದೇ ಪ್ರಶ್ನೆಯನ್ನು ಕೇಳಲು ವ್ಯಾಪಾರಿಯ ಎದುರು ನಿಂತ ಅಜ್ಜಿ, ತನ್ನ ಸೀರೆಯ ಸೆರಗಿನಲ್ಲಿ ತುಂಬಿಕೊಂಡಿದ್ದ ಚಿನ್ನದ ನಾಣ್ಯಗಳನ್ನು ಆತನೆದುರು ಪ್ರದರ್ಶಿಸುತ್ತಾ:

"ಅಯ್ಯಾ, ಇಲ್ಲಿ ನೋಡು, ಆ ಕಂಠೀಹಾರಗಳಷ್ಟೇ ಅಲ್ಲ. ಈ ಐನೂರು ಚಿನ್ನದ ನಾಣ್ಯಗಳನ್ನೂ ಕೊಟ್ಟು ಆ ತಗಡಿನ ತಟ್ಟೆಯನ್ನು ನಿನ್ನ ಮಿತ್ರ ಖರೀದಿಸಿದ."

"ಹ್ಹೇ, ಹುಚ್ಚು ಮುದುಕಿ ಅದು ತಗಡಿನ ತಟ್ಟೆಯಲ್ಲ. ಲಕ್ಷ ಬೆಲೆಬಾಳುವ ಚಿನ್ನದ ತಟ್ಟೆ!"

"ಹಾಗಾದರೆ ನೀನು ಹೇಳಿದ್ದು ಸುಳ್ಳೇ...!?' ಎನ್ನಲು ಆತ ಈಗ ನಿಜಕ್ಕೂ ಹುಚ್ಚನಾದ.

"ಅಜ್ಜಿ, ಇದು ಚಿನ್ನದ ತಟ್ಟೆ ಇದು ಲಕ್ಷಕ್ಕೆ ಬೆಲೆ ಬಾಳುತ್ತದೆ. ನನ್ನ ಬಳಿ ಐನೂರು ಚಿನ್ನದ ನಾಣ್ಯಗಳು, ಐನೂರು ಮೌಲ್ಯಕ್ಕೆ ಬೆಲೆಬಾಳುವ ಮುತ್ತುರತ್ನಗಳ ಹಾರಗಳು. ಒಂದು ತಕ್ಕಡಿ ಮತ್ತು ಒಂದು ಚೀಲವಷ್ಟೇ ಇದೆ. ಹಾಗಿರುವಲ್ಲಿ ಮಿಕ್ಕ ಹಣವನ್ನು ನಾನು ತರಲಾರೆ!"ಎನ್ನಲು, ಆ ಅಜ್ಜಿ ಮತ್ತು ಮೊಮ್ಮಗಳು ಬೋಧಿಸತ್ವರು ಸತ್ಯ ಹಾಗೂ ಪ್ರಾಮಾಣಿಕತೆಗೆ ಮೆಚ್ಚಿ ಒಬ್ಬರ ಮುಖವನ್ನು ಆಶ್ಚರ್ಯಚಕಿತರಾಗಿ ನೋಡಿ ಕೊಂಡರು. ಬಳಿಕ ಅಜ್ಜಿಯು: "ಅಯ್ಯಾ, ಚಿಂತೆ ಇಲ್ಲ. ನಿನ್ನ ಬಳಿ ಎಷ್ಟಿದೆಯೋ ಅಷ್ಟನ್ನೆ ಕೊಟ್ಟು ಹೋಗು!" ಅಜ್ಜಿ, ನನ್ನ ಜೀವನಾಧಾರವಾದ ತಕ್ಕಡಿ, ಚೀಲ ಮತ್ತು ನದಿ ದಾಟಲು ಶುಲ್ಕವಾಗಿ ಅಂಬಿಗನಿಗೆ ನಾನು ತೆರಬೇಕಾದ ಎಂಟು ಚಿನ್ನದ ನಾಣ್ಯಗಳನ್ನು ನೀನು ನನಗೆ ಹಿಂದಿರುಗಿ ಕೊಡುವ ಷರತ್ತಿನ ಒಪ್ಪುವುದಾದರೆ. ಒಂದು ಸಾವಿರ ಬೆಲೆಯ ಮೌಲ್ಯವನ್ನು ನಿನಗೆ ಕೊಟ್ಟು ನಾನು ಈ ಚಿನ್ನದ ತಟ್ಟೆಯನ್ನು ಪಡೆಯ ಬಲ್ಲೆ!" ಎಂಬ ಷರತ್ತನ್ನು ವಿಧಿಸಿದ. ಆತನ ಷರತ್ತನ್ನು ಆ ಇಬ್ಬರೂ ಮರು ಮಾತಿಲ್ಲದೆ ಒಪ್ಪಿಕೊಂಡರು. ನಂತರ ಆತನ ಬಳಿ ಇದ್ದ ಐನೂರು ನಾಣ್ಯ, ಐನೂರು ಬೆಲೆ ಬಾಳುವ ಮತ್ತು ರತ್ನಗಳ ಕಂಠೀಹಾರಗಳನ್ನೆಲ್ಲ ಆ ಅಜ್ಜಿ ಮೊಮ್ಮೊಗಳಿಗೆ ಅರ್ಪಿಸಿದರು. ಅವರಿಂದ ಉಡುಗೊರೆಯಾಗಿ ತಕ್ಕಡಿ, ಚೀಲ ಮತ್ತು ನದಿ ದಾಟಲು ಬೇಕಾದ ಎಂಟು ನಾಣ್ಯಗಳನ್ನು ಅವರಿಂದ ಪಡೆದು ಅವರಿಗೆ ಮಂಗಳವಾಗಲೆಂದು ಹಾರೈಸಿ ಅಲ್ಲಿಂದ ಮುನ್ನೆಡದರು.

'SAMVADA' Kannada Monthly, Mar. 2009 RNI-KAR KAN/2002/9246 CPMG/KA/BGW-706/2009-11
Office of Posting: RAJAJINAGAR HO, Date of Posting: 27-28 of Every Month

ಭಾಷೆ ನೂರಾರು, ವೇಷ ಹಲವಾರು, ಭಾವ ಮಾತ್ರ ಒಂದೇ - ಭಾರತೀಯತೆ

60ನೇ ಗಣರಾಜ್ಯೋತ್ಸವ

ಜನವರಿ 26, 2009

" ನನ್ನ ಮಟ್ಟಿಗೆ ಆದರ್ಶ ಸಮಾಜವೆಂಬುದು ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರತೆಯನ್ನು ಆಧರಿಸಿರುತ್ತದೆ
- ಡಾ. ಬಿ.ಆರ್. ಅಂಬೇಡ್ಕರ್

ವಿವಿಧತೆಯಲ್ಲಿ ಏಕತೆಯೆ ನಮ್ಮ ಬಲ. ಆ ಭಾವೈಕ್ಯತೆಯ ಬಲದೊಂದಿಗೆ ಭಾರತದ ಗಣರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿಸಲು ಮುನ್ನಡೆಯೋಣ.

ಕರ್ನಾಟಕ ಸರ್ಕಾರವು ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ರೈತರಿಗೆ ಅತಿ ಕಡಿಮೆ ಬಡ್ಡಿ ದರದಲ್ಲಿ **"ಕೃಷಿ ಸಾಲ ಸೌಲಭ್ಯ"**, ಹೆಣ್ಣು ಮಕ್ಕಳಿಗಾಗಿ **"ಭಾಗ್ಯಲಕ್ಷ್ಮಿ"**, ಗ್ರಾಮೀಣ ಜನತೆಗಾಗಿ **"ಆರೋಗ್ಯ ಕವಚ"**, ಹಿರಿಯ ನಾಗರಿಕರಿಗಾಗಿ **"ಸಂಧ್ಯಾಸುರಕ್ಷಾ"**, ತಾಯಿಮಗುವಿನ ಸುರಕ್ಷತೆಗಾಗಿ **"ತಾಯಿಭಾಗ್ಯ"** ಜನತೆಯ ಕುಂದುಕೊರತೆಗಳ ನಿವಾರಣೆಗಾಗಿ **"ಜನಸ್ಪಂದನ"**ದಂತಹ ವಿನೂತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ.

ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸಿ ಅಭಿವೃದ್ಧಿಯ ಫಲ ಎಲ್ಲರಿಗೂ ಸಮನಾಗಿ ಸಿಗುವಂತಾಗಲು ಸರ್ಕಾರವು ಪ್ರಸ್ತುತ ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿಗತಿಗೆ ಹೆಚ್ಚಿನ ಒತ್ತು ಕೊಟ್ಟಿದೆ. 60ನೇ ಗಣರಾಜ್ಯೋತ್ಸವದ ಈ ಸುಸಂದರ್ಭದಲ್ಲಿ ಆ ಪ್ರದೇಶದ ಪ್ರಗತಿಗೆ ವಿಶೇಷ ನೆರವು ಯೋಜನೆಯನ್ನು ರೂಪಿಸಿದೆ.

ಪ್ರಮುಖ ಯೋಜನೆಗಳು

- ಗದಗ್‌ನಲ್ಲಿ ರೂ. 50 ಕೋಟಿ ವೆಚ್ಚದ ಪಶುವೈದ್ಯಕೀಯ ಕಾಲೇಜು ಸ್ಥಾಪನೆ
- ಉತ್ತರ ಕರ್ನಾಟಕದ ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ಅನುಕೂಲವಾಗಲು 1000 ಹಾಲು ಉತ್ಪಾದಕರ ಸಂಘ ಸ್ಥಾಪನೆಗೆ ನಿರ್ಧಾರ
- ಬೆಳಗಾವಿ ನಗರದ ಸಮೀಪ ಮತ್ತು ರಬಕವಿ - ಬನಹಟ್ಟಿಯಲ್ಲಿ ನೇಕಾರರಿಗಾಗಿ ಸೈಜಿಂಗ್ ಘಟಕ ಸ್ಥಾಪನೆ
- ಕರ್ನಾಟಕದ ಎಲ್ಲಾ ಗಡಿಭಾಗಗಳ ಸಮಗ್ರ ಅಭಿವೃದ್ಧಿಗೆ "ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ"
- ಪಿ.ಪಿ.ಪಿ. ಮಾದರಿಯಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ 5500 ಕಿ.ಮೀ. ರಸ್ತೆ ಅಭಿವೃದ್ಧಿ
- ದೇವದಾಸಿಯರ ಪುನರ್ವಸತಿ ಯೋಜನೆಗಾಗಿ ರೂ. 10 ಕೋಟಿ ಅನುದಾನ
- ಕಿತ್ತೂರು ಮತ್ತು ಕಾಕತಿ ಗ್ರಾಮಗಳ ಸಮಗ್ರ ಅಭಿವೃದ್ಧಿಗಾಗಿ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ರೂ. 5 ಕೋಟಿ ಅನುದಾನ
- ಬೆಳಗಾವಿಯಲ್ಲಿ ಕರ್ನಾಟಕ ವಿಧಾನ ಮಂಡಲದ ಅಧಿವೇಶನಕ್ಕಾಗಿ ನಗರದ ಹಲಗಾ-ಬಸ್ತವಾಡಿ ಗ್ರಾಮದ ಹತ್ತಿರ 112 ಎಕರೆ ಪ್ರದೇಶದಲ್ಲಿ "ಸುವರ್ಣ ಸೌಧ" ನಿರ್ಮಾಣಕ್ಕಾಗಿ ಅನುಮೋದನೆ
- ಹಿಪ್ಪರಗಿ ನೀರಾವರಿ ಯೋಜನೆಯಡಿ ಅಥಣಿ ತಾಲ್ಲೂಕಿನಲ್ಲಿ 229 ಹೆಕ್ಟೇರ್ ಜಮೀನಿಗೆ ಹಾಗೂ ಕರಿಮಸೂತಿ ಪೂರ್ವನಾಲೆಯ ಎರಡನೇ ಹಂತದ ಮುಖಾಂತರ ತಾಲ್ಲೂಕಿನ 7 ಬರಪೀಡಿತ ಗ್ರಾಮಗಳಿಗೆ ನೀರಾವರಿ ಸೌಲಭ್ಯ
- ಧಾರವಾಡದಲ್ಲಿರುವ ಮಾನಸಿಕ ಆಸ್ಪತ್ರೆಯನ್ನು ಬೆಂಗಳೂರಿನ ನಿಮ್ಹಾನ್ಸ್ ಮಾದರಿಯಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಅಭಿವೃದ್ಧಿ
- ರೂ. 50 ಕೋಟಿ ವೆಚ್ಚದಲ್ಲಿ ಸವದತ್ತಿ ಯಲ್ಲಮ್ಮ ದೇವಾಲಯದ ಸಮಗ್ರ ಅಭಿವೃದ್ಧಿಗೆ "ಶ್ರೀ ರೇಣುಕಾ ಯಲ್ಲಮ್ಮ ಅಭಿವೃದ್ಧಿ ಪ್ರಾಧಿಕಾರ" ರಚನೆ

ನಾಡಿನ ಸಮಸ್ತ ಜನತೆಗೆ
ಗಣರಾಜ್ಯೋತ್ಸವ
ಶುಭಾಶಯಗಳು

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿ

"ಸರ್ವಸ್ವತಂತ್ರ ಸಾರ್ವಭೌಮ ಜಾತ್ಯತೀತ ಪ್ರಜಾ ಗಣರಾಜ್ಯ ಭಾರತ"ವನ್ನು ನಮಗೆ ನೀಡಿರುವ ಅಸಂಖ್ಯಾತ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಬಲಿದಾನಗಳನ್ನು ಗೌರವದಿಂದ ಸ್ಮರಿಸುತ್ತ ರಾಜ್ಯ ಸರ್ಕಾರವು ಜನಪರ ಕಾರ್ಯಕ್ರಮಗಳ ಮೂಲಕ ಸಂವಿಧಾನ ಶಿಲ್ಪಿಗಳ ಆಶಯಗಳನ್ನು ಸಾಕಾರಗೊಳಿಸಲು ಶ್ರಮಿಸುತ್ತಿದೆ.

ಅಭಿವೃದ್ಧಿಯೇ ಆಡಳಿತ ಮಂತ್ರ

ಕರ್ನಾಟಕ ವಾರ್ತೆ